ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ನವೆಂಬರ್ 14, 2012 ಪುಟ 20 ರೂ. 14/-


ಮಲೆನಾಡನ್ನು ಸೆರೆಹಿಡಿಯುವ **ಮಂಗನ ಬ್ಯಾಟೆ**

ಸೂಪರ್ ಸಂಗೊಳ್ಳಿ ರಾಯಣ್ಣ!






ಹುಬ್ಬಳ್ಳಿ ಜಿ.ಪಂ
ಶೆಟ್ಟರ್ ಗುಂಪಿಗೆ ಯಡ್ಡಿ ಟಾಂಗ್



ಬಿಜೆಪಿಯಲ್ಲಿದ್ದರೆ **ಹುಲಿ** ಹೊರಬಿದ್ದರೆ **ಇಲಿ**




ಬಯಲಾದ **ಖದೀಮ ಖೇಣಿ ಮುಖ**



ಸಾಗರ
ಚಿಕ್ಕಟ್ಟಿನಲ್ಲಿ ಗಲೀಜು ಗೋಪಾಲ

ಆಪರೇಷನ್ ಕಮಲ ರಾಜಕಾರಣಕ್ಕೆ ಮಾತ್ರ ಸೀಮಿತವೇ

ಅಂಚಿನಿಂದ



'ಬಿಜೆಪಿಗೆ ಓಟು ಹಾಕಬಾರದೆನ್ನುವುದಕ್ಕೆ ನೂರು ಕಾರಣಗಳಿವೆ, ಆದರೆ ಇತರ ಪಕ್ಷಗಳಿಗೆ ಯಾಕೆ ಓಟು ಹಾಕಬೇಕೆನ್ನುವುದಕ್ಕೆ ಒಂದೂ ಕಾರಣವಿಲ್ಲ'... ಚಳವಳಿನಿರತ ಸಂಘಟನೆಗಳ ಐಕ್ಯ ವೇದಿಕೆಯೊಂದರಲ್ಲಿ ಹಿರಿಯರೊಬ್ಬರು ಹೇಳಿದ ಮಾತು ಇದು. ಬಿಜೆಪಿಗೆ ಓಟು ಹಾಕಬಾರದು ಎಂದು ಕಳೆದ ಚುನಾವಣೆಗೆ ಮುಂಚೆ ಹೇಳಿದ್ದವರ ನಿರೀಕ್ಷೆಗೂ ಮೀರಿ ಆ ಪಕ್ಷವು ಈ ನಾಲ್ಕೂವರೆ ವರ್ಷಗಳಲ್ಲಿ ಸಾಧನೆ ಮಾಡಿದೆ. ಏಕೆಂದರೆ ಆಪರೇಷನ್ ಕಮಲ, ವಿಧಾನಸಭೆಯ ಅಧಿವೇಶನದಲ್ಲೇ ಬ್ಲೂಫಿಲಂ ವೀಕ್ಷಣೆ ಇಂತಹ ವಿಶೇಷಗಳನ್ನು ಯಾರೂ ನಿರೀಕ್ಷಿಸಿರಲಿಲ್ಲ. ಸಕಲ ಪ್ರತಿಗಾಮೀ ಗುಣಗಳನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಒಳಗೊಂಡಿರುವ ಪಕ್ಷವಾಗಿ ಬಿಜೆಪಿ ಇಂದು ಈ ರಾಜ್ಯದ ಜನರೆದುರು ನಿಂತಿದೆ. ಅದರ ಕಡುನಿಷ್ಠರೂ ಸಹ ಹೆಚ್ಚೆಂದರೆ ಇತರ ಪಕ್ಷಗಳಂತೆಯೇ ಅದೂ ಇನ್ನೊಂದು ರಾಜಕೀಯ ಪಕ್ಷ ಎಂದು ಮಾತ್ರ ಹೇಳಬಲ್ಲಷ್ಟು ಸಾಧನೆ ಅದರದ್ದು.

ಅದರಲ್ಲಿ ಆಪರೇಷನ್ ಕಮಲವೆಂಬ, ಪಕ್ಷಾಂತರ ನಿಷೇಧ ಕಾಯ್ದೆಯನ್ನೇ ಅಪ್ರಸ್ತುತಗೊಳಿಸಿದ ಅಸ್ತ್ರವಂತೂ ಸಂಸದೀಯ ರಾಜಕಾರಣದ ಕೊಳಕಿನ ಅಪರಾವತಾರದಂತೆ ಬಳಕೆಯಾಯಿತು. ಅದನ್ನು ಹುಟ್ಟುಹಾಕಿ, ಯಶಸ್ವಿಯಾಗಿ ಜಾರಿಗೆ ತಂದ ಕೀರ್ತಿ ಜೈಲು ರೆಡ್ಡಿ ಜನಾರ್ದನ ಮತ್ತು ಶ್ರೀರಾಮುಲು ಗ್ಯಾಂಗ್‌ದೇ ಆಗಿದೆ. ಯಡಿಯೂರಪ್ಪ ಸಹ ಬಹಳ ಬೇಗನೆ ಈ ಕಲೆಯನ್ನು ಕರಗತ ಮಾಡಿಕೊಂಡರು. ಅವರುಗಳು ಈಗ ಪಕ್ಷ ಬಿಟ್ಟರೂ ತಮ್ಮ ಶಸ್ತ್ರಚಿಕಿತ್ಸಕ ಪರಿಣತಿಯನ್ನೇನೂ ಮರೆತಿಲ್ಲ. ಅದಕ್ಕೆ ಸಾಕ್ಷಿ ಬಿಎಸ್‌ಆರ್ ಕಾಂಗ್ರೆಸ್ ಎಂಬ ಮೂರು ತಿಂಗಳಿಗೆ ಹುಟ್ಟಿದ ಕೂಸಿಗೆ ಬೌದ್ಧಿಕ ಪೋಷಕರಾಗಿರುವ ಕರ್ನಾಟಕದ ಇಬ್ಬರು ಮಾಜಿ ಪತ್ರಕರ್ತರಿಗೆ ಶ್ರೀರಾಮುಲು ಮಾಡಿರುವ ಸರ್ಜರಿ.

ಎಂದರೆ ನಾವು ಸಮ್ಮೇಳನವೊಂದರಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಕೆಲವು ತತ್ವಬದ್ಧ ಸಾಹಿತಿಗಳು ಗುಡುಗಿದ್ದರು. ಆದರೆ ಬಿಜೆಪಿ ಸರ್ಕಾರದ ಅವಧಿಯ ಕೊನೆಯ ಈ ಭಾಗದಲ್ಲಿ ಸಿದ್ದಲಿಂಗಯ್ಯನವರು ಮತ್ತೆ ಸರ್ವಮಾನ್ಯರಾಗಿ ಬೇರೆ ಬೇರೆ ಪ್ರಗತಿಪರರ ಕಾರ್ಯಕ್ರಮಗಳಲ್ಲಿ ಮಿಂಚುತ್ತಿದ್ದಾರೆ.

ಸಕ್ರಿಯವಾಗಿ ಕೋಮುವಾದಿಗಳ ಸಖ್ಯ ಬೆಳೆಸಿದ ಉದಾಹರಣೆಗಳು ಅಷ್ಟೊಂದಿಲ್ಲ ಎಂದುಕೊಂಡರೂ, ಅತ್ಯಂತ ದೊಡ್ಡ ಪ್ರಮಾಣದಲ್ಲಿ ಕಂಡ ವಿದ್ಯಮಾನವೆಂದರೆ ಪರಿಣಾಮಕಾರಿ ವಿರೋಧದ ಗೈರುಹಾಜರಿ. ಬಿಜೆಪಿ ಸರ್ಕಾರ ಕೈಗೊಂಡ ಹಲವು ಕೋಮುವಾದಿ ಕಾರ್ಯಾಚರಣೆಗಳ ವಿರುದ್ಧ ಅಲ್ಲಲ್ಲಿ ಪ್ರತಿಭಟನೆಗಳೇನೋ ನಡೆದವು. ಆಪರೇಷನ್ ಕಮಲ, ಚರ್ಚ್ ಮೇಲಿನ ದಾಳಿಗಳು, ಪಬ್ ಮೇಲಿನ ದಾಳಿ, ಮೈಸೂರು ಕೋಮುಗಲಭೆ, ಗೋಹತ್ಯೆ ನಿಷೇಧ ಕಾಯ್ದೆ, ವಿವಿಧ ಭ್ರಷ್ಟಾಚಾರದ ಹಗರಣಗಳು, ವಿವೇಕಾನಂದರ ಜನ್ಮದಿನಕ್ಕೂ ಭಯೋತ್ಪಾದನೆ ವಿರೋಧಕ್ಕೂ ಗಂಟು ಹಾಕಿದ್ದು, ಶಾಲಾ ಕಾಲೇಜುಗಳಲ್ಲಿ ಭಗವದ್ಗೀತೆ ಬೋಧನೆ, ಶಿಕ್ಷಣದ ಕೇಸರೀಕರಣದ ಪ್ರಯತ್ನಗಳು ಇವೆಲ್ಲದರ ವಿರುದ್ಧ ಅಲ್ಲಲ್ಲಿ ಒಂದು ಪ್ರಮಾಣದ ವಿರೋಧ ಕಂಡುಬಂದಿತು. ಆದರೆ ಹೆಚ್ಚುಕಡಿಮೆ ಯಾವುದರಲ್ಲೂ, ಕೋಮುವಾದಿಗಳು ತಮ್ಮ ವ್ಯವಸ್ಥಿತ ಯೋಜನೆಯಿಂದಲೇ ಹಿಂದೆ ಸರಿಯುವ ಮಟ್ಟಕ್ಕೆ ಸಂಘಟಿತ, ನಿರಂತರ ಪ್ರಯತ್ನ ಇರಲಿಲ್ಲ. ಕೋಮು ಸೌಹಾರ್ದದ ಪ್ರಯತ್ನಗಳನ್ನು ನಿರಂತರವಾಗಿ ಮುಂದುವರೆಸಿಕೊಂಡು ಬಂದ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಮತ್ತು ಇನ್ನೂ ಹಲವು ದಲಿತ ಹಾಗೂ ಪ್ರಗತಿಪರ ಸಂಘಟನೆಗಳು ಎಲ್ಲಾ ಸಂದರ್ಭದಲ್ಲೂ ಪ್ರತಿಭಟನೆಗಳನ್ನು ಆಯೋಜಿಸಿದ್ದವು. ಅವುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸಿದ್ದು ನೇರವಾಗಿ ಗುರಿಯಾಗಿದ್ದ ಸಮುದಾಯಗಳೇ ಹೊರತು ಈ ನಾಡಿನ ಪ್ರಜ್ಞಾವಂತ, ಜಾತ್ಯತೀತ ವ್ಯಕ್ತಿಗಳಲ್ಲ. ಅದರಲ್ಲೂ ಇಂತಹ ಕಾರ್ಯಕ್ರಮಗಳಲ್ಲಿ ಕಾಲೇಜು-ವಿಶ್ವವಿದ್ಯಾಲಯಗಳಲ್ಲಿ ಬೋಧಿಸುತ್ತಿರುವ ಚಿಂತನಶೀಲ ವ್ಯಕ್ತಿಗಳ ಗೈರುಹಾಜರಿ ಎದ್ದು ಕಾಣುತ್ತಿತ್ತು. ಇದನ್ನು ಈ ಹಿಂದೆ ಕಾಂಗ್ರೆಸ್ ಅಥವಾ ಜೆಡಿಎಸ್‌ನ ಸಮ್ಮಿಶ್ರ ಸರ್ಕಾರ ಇದ್ದಾಗಿನ ಕಾರ್ಯಕ್ರಮಗಳಿಗೆ ಹೋಲಿಸಿ ನೋಡಬೇಕು. ಎಸ್.ಎಂ.ಕೃಷ್ಣರ ಸರ್ಕಾರವಿದ್ದಾಗ ಬಾಬಾಬುಡನ್‌ಗಿರಿಯನ್ನು ಸೌಹಾರ್ದ ತಾಣವನ್ನಾಗಿ ಉಳಿಸಿಕೊಳ್ಳಲು ನಡೆದ ಪ್ರಯತ್ನಗಳಲ್ಲಿ ಜೈಲು ಸೇರಲೂ ಸಹ ಈ ಬಿಡಿಬಿಡಿ ವ್ಯಕ್ತಿಗಳ ಸಮುದಾಯ ಹಿಂಜರಿದಿರಲಿಲ್ಲ.

ಮಾದಿಗ ಸಂಘಟನೆಗಳ ಸಭೆ ಮಂತ್ರಿಯ ಮನೆಯಲ್ಲಿ

ಈ ಸಮಾಜದ ಅತ್ಯಂತ ಶೋಷಿತ ಸಮುದಾಯಗಳಲ್ಲೊಂದಾದ ಮಾದಿಗ ಜನಾಂಗವು ತನ್ನ ಹಕ್ಕಿನ ಪಾಲನ್ನು ಪ್ರತಿಪಾದಿಸಿದಾಗ ದಲಿತ, ಪ್ರಗತಿಪರ ಸಂಘಟನೆಗಳು ಮತ್ತು 'ಜಾತ್ಯತೀತ' ಪಕ್ಷಗಳು ಅಷ್ಟು ಹೃತ್ಪೂರ್ವಕವಾಗಿ ಬೆಂಬಲಿಸಲಿಲ್ಲ. ಇದನ್ನೇ ಮುಂದಿಟ್ಟುಕೊಂಡು, ಒಳಮೀಸಲಾತಿಯನ್ನು ಕೇಳುತ್ತಿದ್ದ ಆ ಸಮುದಾಯದ ಕೆಲವು ನಾಯಕರುಗಳು ಬಿಜೆಪಿಯ ಹತ್ತಿರಕ್ಕೆ ಸರಿದರು. ಬ್ರಾಹ್ಮಣಶಾಹಿ ಹಿಂದೂತ್ವದ ತೆಕ್ಕೆಯಲ್ಲಿ ಸಾಧ್ಯವಿರುವ ಎಲ್ಲರನ್ನೂ ಒಳಗೊಳ್ಳಲು ಕಾತರಿಸುತ್ತಿದ್ದ ಸಂಘಪರಿವಾರದ ನಾಯಕರು ಇದನ್ನು ಉಪಯೋಗಿಸಿಕೊಂಡರು. ಅದು ಇಂದು ಎಲ್ಲಿಗೆ ಬಂದು ನಿಂತಿದೆಯೆಂದರೆ, ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸಲು ನಡೆಯುತ್ತಿರುವ ಸಭೆಗಳಲ್ಲಿ ಬಿಜೆಪಿ ಮಂತ್ರಿಗಳ ಹಾಜರಿ ಕಡ್ಡಾಯವಾಗಿದೆ. ಕಳೆದ ಎರಡು ಸಭೆಗಳು ನಡೆದದ್ದು ಬಿಜೆಪಿ ಮಂತ್ರಿಗಳ ಮನೆಯಲ್ಲೇ. ಇದು ಹಿಂದೂತ್ವದ ಯಶಸ್ಸಾ ಅಥವಾ ಶೋಷಿತ ಸಮುದಾಯದ ಹಕ್ಕಿನ ಪ್ರತಿಪಾದನೆಯನ್ನು ಬೆಂಬಲಿಸದ ನಮ್ಮೆಲ್ಲರ ವೈಫಲ್ಯವಾ ಎಂದು ಚರ್ಚಿಸುವ ಅಗತ್ಯವಿದೆ. ಆದರೆ ಹೀಗೊಂದು ಆಪರೇಷನ್ ನಡೆದಿರುವುದಂತೂ ಸತ್ಯ.

ರಾಮುಲುಗೇ ಸರ್ಜರಿ ಮಾಡಬೇಕೆಂದು ನಾವು ಈ ಪಾತ್ರಕ್ಕೆ ವೇಷ ಕಟ್ಟಿಕೊಂಡಿದ್ದೇವೆಂಬ ಭ್ರಮೆಯನ್ನು ಅವರಿವರಿಗೆ ಮೂಡಿಸುವ ವಿಫಲ ಯತ್ನವೇನೋ ಅವರುಗಳಿಂದ ನಡೆಯುತ್ತಿದೆ. ಆದರೆ ಕೇಳುವ ಜನರ ಕಿವಿಗಳು ಹೂದೋಟವನ್ನು ಇಟ್ಟುಕೊಳ್ಳುವಷ್ಟು ದೊಡ್ಡದಾಗಿಲ್ಲವಾದ್ದರಿಂದ ಸರ್ಜರಿ ಆಗಿರುವುದು ಯಾರಿಗೆ ಎಂಬುದು ಎಲ್ಲರಿಗೂ ಗೊತ್ತಾಗಿದೆ. ಅಂದರೆ ಈ ಆಪರೇಷನ್ ಕೇವಲ ಎಂಎಲ್‌ಎಗಳನ್ನು ಕೊಳ್ಳಲಷ್ಟೇ ಸೀಮಿತವಲ್ಲ ಎಂಬುದು ಸುಸ್ಪಷ್ಟ.

ಆದರೆ ಕರ್ನಾಟಕದ ಬೌದ್ಧಿಕ ಕ್ಷೇತ್ರದ ಮಟ್ಟಿಗೆ ಈ ಆಪರೇಷನ್ ಹಲವು ರೀತಿಯಲ್ಲಿ ಕೆಲಸ ಮಾಡಿದೆ. ಅದು ಬಿಜೆಪಿ-ಆರೆಸ್ಸೆಸ್ಸಿನ ನೀತಿ, ನಿಲುವು, ಕಾರ್ಯಕ್ರಮಗಳನ್ನು ನೇರವಾಗಿ ಬೆಂಬಲಿಸುವ ರೀತಿಯಲ್ಲಿ ದೊಡ್ಡ ಮಟ್ಟದಲ್ಲಿ ವ್ಯಕ್ತವಾಗಿಲ್ಲ ಎಂಬುದೇನೋ ನಿಜ. ಅಂದರೆ ಇದುವರೆಗೆ ಕೋಮುವಾದವನ್ನು ವಿರೋಧಿಸುತ್ತಿದ್ದ ಕರ್ನಾಟಕದ ವಿವಿಧ ಬ್ರ್ಯಾಂಡ್‌ಗಳ ಪ್ರಗತಿಪರರು, ಬುದ್ಧಿಜೀವಿಗಳು, ಸಾಹಿತಿ-ಕಲಾವಿದರುಗಳು ನೇರವಾಗಿ ಬಿಜೆಪಿ-ಆರೆಸ್ಸೆಸ್ಸಿನ ನೀತಿ ನಿರೂಪಕರಾಗಿ, ಕಾರ್ಯಕ್ರಮಗಳಲ್ಲಿ ಅತಿಥಿಗಳಾಗಿ ಪಾಲ್ಗೊಳ್ಳಲಿಲ್ಲ, ಇದಕ್ಕೆ ಅಪವಾದವಿಲ್ಲ ಎಂದೇನಲ್ಲ. ಸಿದ್ದಲಿಂಗಯ್ಯನವರು ಒಂದು ಪದವಿಯಿಂದ ಇನ್ನೊಂದು ಪದವಿಗೆ ಈ ಸರ್ಕಾರದಲ್ಲೂ ಮುಂದುವರೆದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ವಿಶೇಷ ಬೆಳವಣಿಗೆಯೊಂದು ಸಂಭವಿಸಿತು. ಸಿದ್ದಲಿಂಗಯ್ಯನವರು ಆರೆಸ್ಸೆಸ್ಸನ್ನು ಮೆಚ್ಚಿಕೊಳ್ಳಲು ಆರಂಭಿಸಿದ ಮೇಲೆ, ದಲಿತ ಸಂಘಟನೆಗಳೂ ಸೇರಿದಂತೆ ಬಹುತೇಕ ಪ್ರಗತಿಪರರು ಅವರನ್ನು ತಮ್ಮ ಕಾರ್ಯಕ್ರಮಗಳಿಗೆ ಅತಿಥಿಗಳಾಗಿ ಕರೆಯುವುದನ್ನು ನಿಲ್ಲಿಸಿದರು. ಇದು ಯಾವ ಪ್ರಮಾಣಕ್ಕೆ ಇತ್ತೆಂದರೆ, ಅವರ ಆತ್ಮಕಥನವನ್ನು ಆಧರಿಸಿದ್ದ ನಾಟಕವನ್ನು ಆಡಿಸಲಾಗುತ್ತದೆ

ಫ್ಯಾಸಿಸ್ಟ್ ಸರ್ಕಾರವೊಂದು ಆಳುತ್ತಿರುವಾಗ ಸುಶಿಕ್ಷಿತ ಸಮುದಾಯದ ಮೌನವು ಏನನ್ನು ತೋರಿಸುತ್ತದೆ? ಆ ಸಮಾಜದಲ್ಲಿ ಗಾಢವಾಗಿ ತಲೆಯೆತ್ತಿರುವ ಅವಕಾಶವಾದವು ಸುಶಿಕ್ಷಿತ ಸಮುದಾಯವನ್ನೂ ಬಿಟ್ಟಿಲ್ಲ ಎಂಬುದು ಅದರಿಂದ ಅರಿವಾಗುತ್ತದೆ. ಕರ್ನಾಟಕದ ಇಬ್ಬರು ದೊಡ್ಡ ರೈತನಾಯಕರಲ್ಲಿ ಒಬ್ಬರು ಜೈಲಿಗೆ ಸೇರಿದ ರೆಡ್ಡಿಯನ್ನು ಭೇಟಿಯಾದ ಬಗ್ಗೆ ಪತ್ರಿಕಾಗೋಷ್ಠಿಯಲ್ಲೇ ಸಮರ್ಥಿಸಿಕೊಳ್ಳಲು ಹೇಗೆ ಸಾಧ್ಯವಾಯಿತು? ಇನ್ನೊಬ್ಬರು ಯಡ್ಡಿ ಜೈಲು ಸೇರುವ ಮುನ್ನ, ಮುಂಜಾನೆಯ ಹೊತ್ತೇ ಮುಖ್ಯಮಂತ್ರಿಗಳ ಅಧಿಕೃತ ನಿವಾಸದಲ್ಲಿ ಖಾಸಗಿ ಕೆಲಸಗಳಿಗಾಗಿ ಕಾಯುತ್ತಾ ನಿಂತಿರುತ್ತಿದ್ದರು ಎಂಬ ಮಾಹಿತಿ ಅವರಿಗೆ ಇದ್ದುದರಿಂದ ಸಾಧ್ಯವಾಯಿತು.

ಈ ರೀತಿಯಲ್ಲಿ ಕರ್ನಾಟಕದ ಬೌದ್ಧಿಕ ಸಮುದಾಯ ಹಾಗೂ ಹೋರಾಟಗಾರರು ವಿವಿಧ ಬಗೆಯ ಆಪರೇಷನ್‌ಗಳಿಗೆ ಒಳಗಾಗಿದ್ದಕ್ಕೆ ನಾವೆಲ್ಲಾ ಸಾಕ್ಷಿಗಳಾಗಿದ್ದೇವೆ.

ಹಾಗಿದ್ದ ಮೇಲೆ ಯಥಾಸ್ಥಿತಿಯನ್ನು ಕಾಪಾಡಲೆಂದೇ ಸಾಂಸ್ಥೀಕರಣಗೊಂಡಿರುವ ಮಠಮಾನ್ಯಗಳ ಬಗ್ಗೆ ಆಶಾವಾದ ಇಟ್ಟುಕೊಳ್ಳಲು ಸಾಧ್ಯವೇ ಇಲ್ಲ. ಆದರಲ್ಲೂ ಬಿಜೆಪಿ ಸರ್ಕಾರವು ಈ ರಾಜ್ಯದ ಹೆಚ್ಚಿನ ಮಠಾಧೀಶರನ್ನು ಸಾಕಿಕೊಂಡು ಬಂದ ರೀತಿಯಲ್ಲಂತೂ ಅದು ದುಸ್ಸಾಧ್ಯವೇ ಸರಿ. ಆದರೆ 'ಕ್ರಾಂತಿಕಾರಿ' ನಿಲುವುಗಳನ್ನು ಇಟ್ಟುಕೊಂಡವರೆಂದು ಬಿಂಬಿಸಲ್ಪಟ್ಟ ಚಿತ್ರದುರ್ಗದ ಮುರುಘಾಮಠದ ಶಿವಮೂರ್ತಿ ಶಿವಾಚಾರ್ಯರು ಸಾಗಿದ ಇಳಿಜಾರು ಈ ಅವಧಿಯ ಮುಖ್ಯ ಸಂಗತಿಗಳಲ್ಲೊಂದಾಗಿದೆ.

ಕರ್ನಾಟಕದ ಯಾವುದೇ ಬ್ರಾಹ್ಮಣ ಮಠಗಳಿಂದ ಮತ್ತು



ಮಠಾಧಿಪತಿಗಳಿಂದ ಈ ನಾಡಿನ ಜನತೆ ಎಂದೂ ಸಮಾಜವನ್ನು ಮುಂದಕ್ಕೆ ಒಯ್ಯುವ ನಡೆಗಳನ್ನು ನಿರೀಕ್ಷಿಸಲು ಸಾಧ್ಯವೇ ಇಲ್ಲ. ಆದರೆ ಬಸವ ಚಳವಳಿಯ ಅಪೂರ್ವ ಇತಿಹಾಸ ಹೊಂದಿರುವ ಈ ನೆಲದಲ್ಲಿ ವಿರಕ್ತ ಪರಂಪರೆಯ ಮಠಗಳನ್ನು ಸಾರಾಸಗಟಾಗಿ ತಳ್ಳಿ ಹಾಕುವಂತಿರಲಿಲ್ಲ. ಅದಕ್ಕೆ ತಕ್ಕನಾಗಿ, ಮುರುಘಾ ಮಠಾಧೀಶರು ಕೆಲವು ಅಪರೂಪದ ಚಿಂತನೆ ಹಾಗೂ ನಡೆಗಳಿಂದ ಬಸವ ಚಳವಳಿಯ ವಕ್ತಾರನಂತೆ ಕಾಣುತ್ತಿದ್ದರು. ವಿವಿಧ ಜಾತಿಗಳಿಗೆ ಸ್ವಾಮಿಗಳನ್ನು ಮಾಡಿ (ಜಾತಿ ವ್ಯವಸ್ಥೆಯಷ್ಟೇ ಶ್ರೇಣೀಕೃತವಾಗಿದ್ದ ಈ ಸ್ವಾಮಿಗಳಲ್ಲಿ ಹಲವರು ಈಗ ಸ್ವಾಯತ್ತತೆಯನ್ನು ಘೋಷಿಸಿಕೊಂಡು ವಿವಿಧ ಜಾತಿಗಳ ಮೇಲ್ವರ್ಗಗಳಿಗೆ ಸೇವೆ ಸಲ್ಲಿಸುತ್ತಿದ್ದಾರೆಂಬ ಸತ್ಯ ನಮ್ಮ ಕಣ್ಣೆದುರಿಗಿದ್ದರೂ) ಇನ್ನಿತರ ಮಠಗಳಿಗಿಂತ ಭಿನ್ನವಾಗಿ ನಿಂತರು. ಮಾಂಸಾಹಾರಿಗಳಿಗೂ ಲಿಂಗದೀಕ್ಷೆ ನೀಡಬಹುದೆಂಬ ಅವರ ನುಡಿ, ಕೋಮುವಾದದ ವಿರುದ್ಧದ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಸ್ಪಷ್ಟ ನಿಲುವನ್ನು ಪ್ರಕಟಿಸುತ್ತಿದ್ದದ್ದು, ವೀರಶೈವ ಸಮುದಾಯದಿಂದ ಪ್ರತಿಭಟನೆ, ಪ್ರತಿಕೃತ ದಹನಗಳಂತಹವು ನಡೆದಾಗಲೂ ಹಿಂದೆಗೆಯದಿದ್ದದ್ದು ಇವೆಲ್ಲವೂ ಪ್ರಗತಿಪರ ಸಂಘಟನೆಗಳನ್ನು ಅವರ ಹತ್ತಿರಕ್ಕೆ ತಂದಿದ್ದವು.

ಹಿಂಜರಿಕೆಯೇ ಇಲ್ಲದೇ ಇಂತಹ ಸ್ವಾಮಿಗಳನ್ನು ಕಾರ್ಯಕ್ರಮದ ವೇದಿಕೆಗಳಲ್ಲಿ ಪ್ರಮುಖ ಸ್ಥಾನಗಳಲ್ಲಿ ಕುಳ್ಳಿರಿಸಲಾಗುತ್ತಿತ್ತು. ಅಂತಹ ಒಂದು ಸಂದರ್ಭದಲ್ಲಿ ಹಿರಿಯ ಚಿಂತಕರಾದ ಡಾ.ರಹಮತ್ ತರೀಕೆರೆಯವರು 'ಇದು ಸ್ವಾಮಿಗಳ ಹಿರಿಮೆಯೋ ಅಥವಾ ತಮ್ಮ ರಾಜಕೀಯ ನಿಲುವನ್ನು ತಾವೇ ನೇರವಾಗಿ ಜನಸಾಮಾನ್ಯರಿಗೆ ತಲುಪಿಸಲಾಗದ ಚಳವಳಿಯ ಅಸಾಮರ್ಥ್ಯವೋ' ಎಂಬ ಪ್ರಶ್ನೆಯನ್ನೂ ಎತ್ತಿದ್ದರು. ಕೋಮುವಾದವನ್ನು ವಿರೋಧಿಸಲು ಇಂತಹ ಸ್ವಾಮಿಗಳನ್ನೇ ಮುಂದೆ ಮಾಡಿಕೊಂಡು ಹೋರಾಟ ನಡೆಸಬೇಕೆಂದು ಕೆಲವರು ಬಲವಾಗಿ ಪ್ರತಿಪಾದಿಸುತ್ತಿದ್ದರು. ಅದಕ್ಕೆ ಸರಿಯಾಗಿ ಮುರುಘಾಮಠದ ಸ್ವಾಮಿಗಳು ಆಂಧ್ರದ ನಕ್ಸಲೈಟ್ ಚಳವಳಿಯ ಐಕಾನ್ ಗದ್ದರ್ ಅವರಿಗೆ ಮತ್ತು ಮೇಧಾ ಪಾಟ್ಕರ್ ಅವರಂತಹವರಿಗೆ ಬಸವಶ್ರೀ ಪ್ರಶಸ್ತಿಯನ್ನೂ ನೀಡಿದ್ದರು.

ಅಂತಹ ಮಠದಲ್ಲೇ ಈ ವರ್ಷ ಶಂಕರ್ ಬಿದರಿಗೆ ಬಸವಶ್ರೀ ಪ್ರಶಸ್ತಿಯನ್ನು ನೀಡಲಾಗಿದೆ. ಕರ್ನಾಟಕದ ಲಿಂಗಾಯತ ಮೇಲ್ವರ್ಗದ ಅಧಿಕಾರಶಾಹಿ ಬಳಗದ ಪ್ರತಿನಿಧಿಯಾಗಿ ಹೊರಹೊಮ್ಮಿರುವ ವ್ಯಕ್ತಿ ಶಂಕರ್ ಬಿ ಅವರ ಮೇಲಿರುವ ಆರೋಪಗಳು ಕೇವಲ ವೀರ ಕಾರ್ಯಾಚರಣೆಯ ಸಂದರ್ಭದ ಅತಿರೇಕಗಳಲ್ಲ, ಹ ಬಗೆಯ. ಅತಿಗಳ ಪ್ರತೀಕವಾಗಿ ಶಂಕರ್ ಬಿದರಿ ಇ ನಾಡಿನ ಜನರ ಮುಂದೆ ಅನಾವರಣಗೊಂಡಿದ್ದಾರೆ. ಗ ಮತ್ತು ಮೇಧಾ ಪಾಟ್ಕರ್ ಯಾವುದನ್ನು ಪ್ರತಿನಿಧಿಸುತ್ತಾರೆ ಅದಕ್ಕೆ ತದ್ವಿರುದ್ಧವಾದುದನ್ನು ಪ್ರತಿನಿಧಿಸುವ ಬಿ ಅವರಿಬ್ಬರು ಯಾವ ಪ್ರಶಸ್ತಿಗೆ ಮಾನ್ಯರಾಗಿದ್ದರೋ ಅ ಪ್ರಶಸ್ತಿಗೆ ಮಾನ್ಯರು. ಗದ್ದರ್‌ಗೆ ಪ್ರಶಸ್ತಿ ನೀಡಿದ ಮುರುಘಾಮಠದ ಸ್ವಾಮಿಗಳು ಆಡಿದ ಮಾತಿಗೂ, ಶಂಕರ್ ಬಿದರಿಯವರಿಗೆ ಪ್ರಶಸ್ತಿ ನೀಡಲು ಕಾರಣವೇ ಎಂದು ಹೇಳಿರುವ ಮಾತುಗಳಿಗೂ ಇರುವ ವ್ಯತ್ಯಾಸ ಗಮನಾರ್ಹ. ಇದು ಕರ್ನಾಟಕದ 'ಕ್ರಾಂತಿಕಾ ಸ್ವಾಮೀಜಿಯೊಬ್ಬರು ಎಷ್ಟರಮಟ್ಟಿಗೆ ಜಾರಿದ್ದಾರೆ ಎಂಬು ನಿದರ್ಶನವಾಗಿದೆ.

ಇದೂ ಆಪರೇಷನ್ ಕಮಲದ ಭಾಗವೇ ಆ 'ತನ್ನ ಮಠವು ಅತ್ಯಂತ ಕಷ್ಟದಲ್ಲಿದ್ದಾಗ 50 ಕೋ ಸಾಲವನ್ನು ಒದಗಿಸಿಕೊಟ್ಟಿದ್ದಕ್ಕಾಗಿ ಕೃತಜ್ಞತೆ'ಯನ್ನು ಸ್ವಾಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ತಿಳಿಸಿದ ಯಡಿಯೂರಪ್ಪರನ್ನು ಇಡೀ ನಾಡಿನ ಪ್ರಜ್ಞಾವಂತ ಜ ಅಸಹ್ಯವಾಗಿ ಕಾಣುತ್ತಿದ್ದ ಸಂದರ್ಭದಲ್ಲಿ, ಇದೇ ಸ್ವಾಮಿ ಅವರಿಗೆ ಬಹಿರಂಗವಾಗಿ, ಮಾಧ್ಯಮಗಳ ಮುಂದೆ ಮಾರ್ಗದರ್ಶನ ಮಾಡಿದ್ದರು. ವಚನವೊಂದನ್ನು ಉದಾಹ 'ಅವರಿವರ ನಿಂದೆಗಳಿಗೆ ಅಂಜದೇ, ನಿ ಮುನ್ನಾಗಬೇಕೆಂದು' ಹಿತವಚನ ಹೇಳಿದ್ದರು! ಇದ ಸಾಕಷ್ಟು ಮುಂಚೆಯೇ ಕೋಮುವಾದ ವಿರೋ ಕಾರ್ಯಕ್ರಮಗಳಿಗೆ ಹೋಗುವುದನ್ನು ಅವ ನಿಲ್ಲಿಸಿಯಾಗಿತ್ತು. ಕೋಮು ಸೌಹಾರ್ದದ ಮಾತುಗ ಕಡಿಮೆಯಾಗಿದ್ದವು. ಬಿಜೆಪಿ ಸರ್ಕಾರ ನಡೆಸಿದ ಹಗರಣಗ ಯಾವುದನ್ನೂ ಖಂಡಿಸಿರಲಿಲ್ಲ. ದಾವಣಗೆರೆಯ ಚರ್ಚ್‌ಗಳ ಮೇಲೆ ಪದೇ ಪದೇ ನಡೆದ ದಾಳಿಗಳ ವಿರು ಕಾರ್ಯಕ್ರಮಕ್ಕೂ ತಾವು ಬರುವುದಿಲ್ಲವೆಂದು ಹೇಳಿದ ಸ್ವಾಮೀಜಿಯವರಿಗೆ ಹಂತಹಂತವಾಗಿ ಆಪರೇ ಮಾಡಲಾಗಿತ್ತು. ಆಪರೇಷನ್ ಸಕ್ಸಸ್ ಆದಮೇಲೆ ಅ ಹಿಂಜರಿಕೆಗಳನ್ನೆಲ್ಲಾ ತೊಡೆದು, ಗೊಂದಲಕ್ಕೆಡೆಯಿಲ್ಲದ ಅಪ್ಪಟ ಲಿಂಗಾಯತ ಸ್ವಾಮಿಯ ರೀತಿಯಲ್ಲಿ ಮಾರ್ಗದ ಹಾಗೂ ಪ್ರಶಸ್ತಿಪ್ರದಾನಗಳಿಗೆ ಮುಂದಾದ ಅವಕಾಶವಾದವು ಪ್ರಚ್ಛನ್ನ ಜಾತಿವಾದ ಹಾ ಕೋಮುವಾದವಾಗಿ ಬದಲಾಗುವ ಒಂ ನಿದರ್ಶನವಾಗಿಯಷ್ಟೇ ನಾವು ಶಿವಮೂರ್ತಿ ಶಿವಾಚಾ ಪ್ರಕರಣವನ್ನು ಪರಿಗಣಿಸಬಹುದು.

ಬಿಜೆಪಿ ಮಾತ್ರ ಫ್ಯಾಸಿಸ್ಟ್ ಎಂದೋ, ಬಿಜೆಪಿಯ ವಿರೋಧಿಸಿಬಿಟ್ಟರೆ ಅದು ಪ್ರಗತಿಪರತೆಗೆ ಲಿಟ್ಮಸ್ ಪ ಎಂದೋ ಭಾವಿಸಲಾಗದು. ಬಹುಸಂಖ್ಯಾತ ಜನ ಪ್ರಜಾಪ್ರಭುತ್ವವು ಇನ್ನೂ ದಕ್ಕಿಲ್ಲದಿರುವಾಗ ಎಲ್ಲಾ ಬಗ ಅಧಿಕಾರಸ್ಥ ಪೀಠಗಳಿಗೆ ದೂರವಿದ್ದು, ಜನರ ಪರ ನಿಲ್ಲಬೇಕೆಂಬ ತಾತ್ವಿಕ ನಿಲುವು ಕರ್ನಾಟಕ ಮುಂಚಿನಿಂದಲೂ ದುರ್ಬಲವೇ ಇದೆ. ಹಾಗಿರು ಕನಿಷ್ಠ ಪಕ್ಷ ಕನ್ನಡ ಬೌದ್ಧಿಕ ಪರಂಪರೆಯ ಪ್ರಧಾನ ಲಾಗಾಯ್ತಿನಿಂದಲೂ ವಿರೋಧಿಸುತ್ತಾ ಬಂದ ವೈದಿಕ ಕೋಮುವಾದಿಗಳ ವಿರುದ್ಧವಾದರೂ ಸ್ಪಷ್ಟ ನಿಲ ತೆಗೆದುಕೊಂಡು ಗಟ್ಟಿದನಿಯಲ್ಲಿ ಅದನ್ನು ಹೇಳಬೇಕೆ ನಾವು ನಿರೀಕ್ಷಿಸಲೇಬೇಕಲ್ಲವೇ? ಇನ್ನೊಂದು ವಿಧಾನ ಚುನಾವಣೆ ಹತ್ತಿರವಿರುವಾಗ, ಪ್ರಗತಿಪರರ ನಡ ಬಿಜೆಪಿಯನ್ನು ವಿರೋಧಿಸಲು ಯಾವ ಕಾಂಬಿನೇ ಆದರೂ ಆದೀತು ಎಂಬ ಚರ್ಚೆ ನಡೆಯುತ್ತಿರು ಕೋಮುವಾದ ಮತ್ತು ಅವಕಾಶವಾದಗಳೆರಡರ ಅಪಾಯ ಬಗ್ಗೆಯೂ ಎಚ್ಚರ ವಹಿಸಬೇಕಲ್ಲವೇ?

ಮೊದಲ ಆಪರೇಷನ್ ಆದದ್ದು ಪತ್ರಕರ್ತರಿಗೆ

ತಮ್ಮ ವೃತ್ತಿಯುದ್ದಕ್ಕೂ ಚಿಡ್ಡಿಯೇ ತೊಟ್ಟಿದ್ದ ಪತ್ರಕರ್ತರು ಬಿಜೆಪಿ ಆಡಳಿತದಲ್ಲಿ ಸಂಭ್ರಮದಲ್ಲೇ ತೇಲಿದರು. ಆದರೆ ಬಿಜೆಪಿಯಿಂದ ದೂರವಿದ್ದಿದ್ದ, ಆರೆಸ್ಸೆಸ್‌ನ ನಿಲುವುಗಳನ್ನು ಕಠಿಣವಾಗಿ ವಿರೋಧಿಸುತ್ತಿದ್ದ ಗಣನೀಯ ಸಂಖ್ಯೆಯ ಪತ್ರಕರ್ತರು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಮೃದುವಾದರು. ಯಡಿಯೂರಪ್ಪನವರ ಪತ್ರಿಕಾ ಕಾರ್ಯದರ್ಶಿಯ ನೇಮಕಾತಿಯಾಗುವುದಕ್ಕೆ ಮುಂಚೆಯೇ ಈ ಪ್ರಕ್ರಿಯೆ ಆರಂಭವಾಯಿತು. ಕಳೆದ ಚುನಾವಣೆಯ ಸಂದರ್ಭದಲ್ಲೇ ಪತ್ರಕರ್ತರನ್ನು ಮ್ಯಾನೇಜ್ ಮಾಡುವ ಕಲೆಯನ್ನು ಯಡ್ಡಿ ಗ್ಯಾಂಗ್ ರೂಢಿಸಿಕೊಂಡಿತ್ತು. ಇಂದಿಗೂ ಬಿಜೆಪಿಯ ವತಿಯಿಂದ 'ತಿಂಗಳ ಕಾಣಿಕೆ' ನಿಯಮಿತವಾಗಿ ಪಡೆಯುವವರ ಪಟ್ಟಿ ಸಾಕಷ್ಟು ದೊಡ್ಡದಾಗಿಯೇ ಇದೆ. ರೆಡ್ಡಿ-ರಾಮುಲು ಗ್ಯಾಂಗ್‌ನಿಂದ ಹಣ ಪಡೆಯುತ್ತಿದ್ದವರ ಪಟ್ಟಿ, ಸಿಬಿಐನವರು ರೈಡ್ ಮಾಡಿದಾಗ ಲಭ್ಯವಾದ ಹಾರ್ಡ್ ಡಿಸ್ಕೊಂದರಲ್ಲಿ ಸಿಕ್ಕಿದ್ದೂ ಒಂದು ದಿನದ ಸುದ್ದಿಯಾಗಿ ಪತ್ರಿಕೆಗಳಲ್ಲಿ ಬಂದಿತ್ತು. ಹಲವು ಮಾಜಿ ಕಮ್ಯುನಿಸ್ಟ್ ಪತ್ರಕರ್ತರುಗಳು ವಿವಿಧ ರೀತಿಯಲ್ಲಿ ಯಡ್ಡಿ, ಈಶ್ವರಪ್ಪ ನಿರಾಣಿಯಾದಿಯಾಗಿ ಬಿಜೆಪಿ ಧುರೀಣರಿಂದ ಉಪಕೃತರಾಗಿರುವುದು ಪತ್ರಿಕಾವಲಯಗಳಲ್ಲಿ ಬ್ರೇಕಿಂಗ್ ನ್ಯೂಸ್‌ನಷ್ಟು ಮಹತ್ವವನ್ನೂ ಪಡೆದುಕೊಳ್ಳದಷ್ಟು ಮಟ್ಟಿಗೆ ಮಾಮೂಲಾಗಿದೆ.

ರಜತ್ ಗುಪ್ತಾನಿಗೆ ಆದ ಶಿಕ್ಷೆ ಅಂಬಾನಿಗೆ ಆಗುವುದೆಂದು?

ಭಾರತದಲ್ಲಿ ಮಲ್ಟಿಬಿಲಿಯಾಧೀಶ ಮುಖೇಶ್ ...ಬಾನಿಯ ಪರವಾಗಿ ಕಾನೂನನ್ನು ಬಗ್ಗಿಸಲಿಲ್ಲ ಎಂಬ ...ಣಕ್ಕೆ ಜೈಪಾಲ್ ರೆಡ್ಡಿಯನ್ನು ಇಂಧನ ಖಾತೆಯಿಂದ ...ಾನಿ ಮನಮೋಹನ್ ಸಿಂಗ್ ಒದ್ದೋಡಿಸಿದ ...ದಲ್ಲೇ ಅಮೆರಿಕದಲ್ಲಿ ಕಾನೂನನ್ನು ಉಲ್ಲಂಘಿಸಿದ್ದಕ್ಕೆ ...ರ್ಪೊರೇಟ್‌ಗಳ ಆಪ್ತಮಿತ್ರ ರಜತ್ ಗುಪ್ತಾ ...ಬಾತನಿಗೆ ನ್ಯೂಯಾರ್ಕ್‌ನ ನ್ಯಾಯಾಲಯ ಎರಡು ... ಜೈಲು ಶಿಕ್ಷೆ ಮತ್ತು ಐದು ಮಿಲಿಯನ್ ...ಲರ್ ದಂಡವನ್ನು ವಿಧಿಸಿದೆ.


ಈ ರಜತ್ ಗುಪ್ತಾನಿಗೆ ಎಲ್ಲವೂ ಇತ್ತು. ...ಮೆರಿಕಾದಂತಹ ದೇಶದಲ್ಲೇ ನಾಲ್ಕಾರು ಕಡೆ ದೊಡ್ಡ ...ಮನೆಗಳಿದ್ದವು. ಈತನ ವೈಯಕ್ತಿಕ ಆಸ್ತಿಪಾಸ್ತಿಗಳ ...ಟ್ಟು ಮೊತ್ತ ಸುಮಾರು ನೂರು ಮಿಲಿಯನ್ ...ಲರ್‌ಗಳು ಎಂದು ಅಂದಾಜಿಸಲಾಗಿತ್ತು. ಅಮೆರಿಕದ ...ಕ್ಷನಾಗಿದ್ದ ಬಿಲ್ ಕ್ಲಿಂಟನ್‌ನಿಂದ ಹಿಡಿದು ...ಲವಾರು ದೇಶಗಳ ನಾಯಕರು, ಬಿಲ್ ...ಟ್ಸ್‌ನಂತಹ ಉದ್ಯಮಿಯಿಂದ ಹಿಡಿದು ಭಾರತದ ...ಹುಲ್ ಬಜಾಜ್ ಎಂಬಾತನ ತನಕ ಮಿತ್ರರಿದ್ದರು. ...ರ್ಪೊರೇಟ್ ವಲಯದಲ್ಲಿ ಈತನಿಗೆ ಅಪಾರ ಗೌರವ ...ತ್ತು ಮಾನ್ಯತೆ ಇತ್ತು.


ಆದರೂ ದರಿದ್ರ ದುರಾಶೆ ಎಂಬುದು ...ತಹದ್ದೆಂದರೆ ಈತ ಗೋಲ್ಡ್‌ಮ್ಯಾನ್ ಸ್ಯಾಕ್ಸ್ ಎಂಬ ...ಪನಿಯ ನಿರ್ದೇಶಕನಾಗಿದ್ದಾಗ ಕಂಪನಿಯ ...ಮಾಹಿತಿಯನ್ನು ತನ್ನ ಲಾಭಕೋರ ಮಿತ್ರ ರಾಜ್ ...ಜರತ್ನಂ ಎಂಬಾತನಿಗೆ ಅಕ್ರಮವಾಗಿ ನೀಡಿದ್ದ. ಗುಪ್ತಾ ...ನೀಡಿದ್ದ ಮಾಹಿತಿಯನ್ನಾಧರಿಸಿ ರಾಜ್ ರಾಜರತ್ನಂ ...ರ್ ಮಾರುಕಟ್ಟೆಯಲ್ಲಿ ಕೃತಕವಾಗಿ ದರವನ್ನು ಏರಿಸಿ ...0,000 ಡಾಲರ್‌ಗಳಷ್ಟು ದುಡ್ಡನ್ನು ...ಟಾಯಿಸಿದ್ದ. ಈಗ ಈ ರಾಜ್ ರಾಜರತ್ನಂ ಕೂಡ ...ಯಾಲಯವೊಂದು ನೀಡಿದ ಶಿಕ್ಷೆಗೆ ...ಯಾಗಿದ್ದಾನೆ. ಆತನಿಗೆ ಹನ್ನೊಂದು ವರ್ಷ ಜೈಲು ... ನೀಡಲಾಗಿದೆಯಲ್ಲದೆ, 10 ಮಿಲಿಯನ್ ಡಾಲರ್ ...ಡವನ್ನೂ ವಿಧಿಸಲಾಗಿದೆ.

ರಜತ್ ಗುಪ್ತಾನ ಹೆಸರೇ ಸೂಚಿಸುವಂತೆ ಈತ ...ರತ ಮೂಲದವನು. ಕೊಲ್ಕತ್ತಾದಲ್ಲಿ ಹುಟ್ಟಿದ ...ಜತ್ ಗುಪ್ತಾನ ತಂದೆ ದೇಶದ ಸ್ವಾತಂತ್ರ್ಯ ...ಗ್ರಾಮದಲ್ಲಿ ಭಾಗವಹಿಸಿದ್ದಕ್ಕೆ ಜೈಲು ಶಿಕ್ಷೆಯನ್ನು ...ನುಭವಿಸಿದ್ದರು. (ಅಂತಹ ದೇಶಭಕ್ತನ ಮಗ ಇವತ್ತು ...ದೇಶದಲ್ಲಿ ಮೋಸ ಮಾಡಿದ್ದಕ್ಕೆ ಜೈಲು ಶಿಕ್ಷೆಗೆ ...ಗುರಿಯಾಗಿರುವುದು ಎಂತಹ ವಿಪರ್ಯಾಸವಲ್ಲವೇ?) ...ದುರದೃಷ್ಟವಶಾತ್ ರಜತ್ ಇನ್ನೂ ...ಸ್ಕೂಲಿನಲ್ಲಿದ್ದಾಗಲೇ ಆತನ ತಂದೆ ಮತ್ತು ತಾಯಿ ...ತೀರಿಕೊಂಡರು. ಆದರೆ ಓದಿನಲ್ಲಿ ಚುರುಕಾಗಿದ್ದ ...ರಜತ್ ಪ್ರತಿಷ್ಠಿತ ಐಐಟಿ ಸಂಸ್ಥೆಗೆ ಪ್ರವೇಶ ಪಡೆದ. ...ನಂತರ ಅಮೆರಿಕಕ್ಕೆ ಹೋಗಿ ಹಾರ್ವರ್ಡ್ ಬಿಸಿನೆಸ್ ...ಸ್ಕೂಲ್‌ನಲ್ಲೂ ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸಿದ. ...ಕಾರ್ಪೊರೇಟ್ ಜಗತ್ತನ್ನು ಪ್ರವೇಶಿಸಿದ ಅಲ್ಪಕಾಲದಲ್ಲೇ ...ಹಿರಿಯರ ಮೆಚ್ಚುಗೆ ಪಡೆದು ಉನ್ನತ ಹುದ್ದೆಗಳಿಗೆ ಏರಿದ. ...ತ ಗೋಲ್ಡ್‌ಮ್ಯಾನ್ ಸ್ಯಾಕ್ಸ್ ಕಂಪನಿಯ ...ನಿರ್ದೇಶಕನಾದಾಗ ಆ ಹುದ್ದೆಯನ್ನು ಅಲಂಕರಿಸಿ ...ಪ್ರಥಮ ಭಾರತೀಯ ಸಂಜಾತ ಎಂಬ ಹೆಗ್ಗಳಿಕೆಗೆ ...ಪಾತ್ರನಾದ. ಇದೆಲ್ಲದರ ನಡುವೆ ಓರ್ವ ಪತ್ನಿ ಮತ್ತು ...ಇಬ್ಬರು ಪುತ್ರಿಯರ ತಂದೆಯೂ ಆದ.

ಹಣ, ಅಂತಸ್ತು, ಜನಪ್ರಿಯತೆ, ಆರ್ಥಿಕ ಮತ್ತು ರಾಜಕೀಯ ಪ್ರಭಾವ, ಸಾಮಾಜಿಕ ಮನ್ನಣೆ ಎಲ್ಲವೂ ರಜತ್ ಗುಪ್ತಾನ ಪಾಲಾಗಿದ್ದವು. ಆದರೂ ಆತ ತನ್ನ ಸ್ನೇಹಿತನಿಗೆ ಗೌಪ್ಯ ಮಾಹಿತಿಯನ್ನು ಕಾನೂನುಬಾಹಿರವಾಗಿ ನೀಡಿ ಈಗ ಜೈಲು ಪಾಲಾಗುವ ಹಂತಕ್ಕೆ ಬಂದಿದ್ದಾನೆ.

ಸೋಜಿಗದ ಸಂಗತಿಯಾವುದೆಂದರೆ ಈತನ ವಿಚಾರಣೆ ನಡೆಯುತ್ತಿದ್ದಾಗ ನ್ಯಾಯಾಲಯದಲ್ಲಿ ಜಡ್ಜ್ ಆಗಿರುವ ಜೆಡ್ ರಾಖಾಫ್ ಎಂಬುವವರಿಗೆ ಜಗತ್ತಿನ ಹತ್ತಾರು ಪ್ರಮುಖರು ಪತ್ರಗಳನ್ನು ಬರೆದು ರಜತ್ ಗುಪ್ತಾನಿಗೆ ಕಠಿಣವಾದ ಶಿಕ್ಷೆಯನ್ನು ನೀಡಬಾರದೆಂದು ಮನವಿ ಮಾಡಿದ್ದು. ರಜತ್ ಗುಪ್ತಾ ಒಂದು ಎನ್‌ಜಿಓ ಸ್ಥಾಪಿಸಿ ತನ್ನ ಅಪಾರ ಸಂಪತ್ತಿನಲ್ಲಿ ಒಂದಿಷ್ಟು ಭಾಗವನ್ನು ಜಗತ್ತಿನ ವಿವಿಧ ಕಡೆ ಏಡ್ಸ್ ತರಹದ ರೋಗವನ್ನು ನಿಯಂತ್ರಿಸಲು ವ್ಯಯಮಾಡಿದ್ದ. ಇದನ್ನೇ ಆಧಾರವಾಗಿಟ್ಟುಕೊಂಡು ವಿಶ್ವಸಂಸ್ಥೆಯ ಮಾಜಿ ಮುಖ್ಯಸ್ಥ ಕೋಫಿ ಅನ್ನಾನ್ ಅವರು ಜಡ್ಜ್ ರಾಖಾಫ್ ಅವರಿಗೆ ಪತ್ರ ಬರೆದು ಅದರಲ್ಲಿ "ರಜತ್ ಗುಪ್ತಾ ಒಳ್ಳೆಯ ಮನುಷ್ಯ. ಜಗತ್ತಿನಾದ್ಯಂತ ಸಾವಿರಾರು ಜನರಿಗೆ ಅವರು ಸಹಾಯ ಮಾಡಿದ್ದಾರೆ. ಇವರ ಇಂತಹ ಸಮಾಜ ಸೇವೆಯನ್ನು ಪರಿಗಣನೆಗೆ ತೆಗೆದುಕೊಂಡು ಅವರಿಗೆ ಉದಾರತೆಯನ್ನು ತೋರಬೇಕು" ಎಂದು ಹೇಳಿಕೊಂಡಿದ್ದರು ಎಂದರೆ ಈ ರಜತ್ ಗುಪ್ತಾನ ಗೆಳೆಯರು ಎಂತೆಂತಹ ಪ್ರಭಾವಿ





ಹುದ್ದೆಯಲ್ಲಿದ್ದಾರೆಂದು ಅರ್ಥವಾಗುತ್ತದೆ.

ಇಂತಹದ್ದೇ ಪತ್ರಗಳನ್ನು ಜಡ್ಜ್ ರಾಖಾಫ್ ಅವರಿಗೆ ಬರೆದವರಲ್ಲಿ ಬಿಲ್ ಗೇಟ್ಸ್, ಬಿಲ್ ಕ್ಲಿಂಟನ್, ಭಾರತದ ರಾಹುಲ್ ಬಜಾಜ್ ಮತ್ತು ಆದಿ ಗೋದ್ರೇಜ್ ಕೂಡ ಇದ್ದರು. ಇವರೆಲ್ಲರ ವಾದ ಹೇಗಿತ್ತೆಂದರೆ ರಜತ್ ಗುಪ್ತಾ ತಪ್ಪು ಮಾಡಿದ್ದರೇನಂತೆ, ಆತ ಇತರರಿಗೆ ಸಹಾಯ ಮಾಡಿರುವುದರಿಂದ ಆತನಿಗೆ ಶಿಕ್ಷೆ ನೀಡಕೂಡದು ಎಂಬುದಾಗಿತ್ತು. ಆದರೆ ಕಳ್ಳನೊಬ್ಬ ಇವರಿಂದ ಅಪಾರ ಹಣವನ್ನು ಕದ್ದು ಅದರಲ್ಲಿ ಅರ್ಧಭಾಗವನ್ನು ಒಂದು ಒಳ್ಳೆಯ ಉದ್ದೇಶಕ್ಕೆ ದಾನ ಮಾಡಿದ್ದರೆ ಇವರೆಲ್ಲರೂ ಸುಮ್ಮನಿರುತ್ತಿದ್ದರೆ? ಖಂಡಿತಾ ಇಲ್ಲ. ಆದರೂ ಅವರು ರಜತ್ ಗುಪ್ತಾನ ನೆರವಿಗೆ ಧಾವಿಸಿದ್ದಕ್ಕೆ ಕಾರಣ ಆತ ತಮ್ಮಂತಹ ಬಿಲಿಯಾಧೀಶರಿಂದ ಕದಿಯದೆ ಬ್ಯಾಂಕುಗಳಲ್ಲಿ, ಶೇರು ಮಾರುಕಟ್ಟೆಯಲ್ಲಿ ಹಣ ಹೂಡಿದ್ದ ಅಮಾಯಕರಿಂದ ಕದ್ದಿದ್ದೇ ಅವರ ಕಣ್ಣಿನಲ್ಲಿ ರಜತ್ ಗುಪ್ತಾ ನಿರಪರಾಧಿಯಂತೆ ಕಂಗೊಳಿಸಿದ್ದ.

ಅದೃಷ್ಟವಶಾತ್ ಇಂತಹ ಮನವಿಗಳಿಗೆ ಮಣಿಯದೇ ಜಡ್ಜ್ ರಾಖಾಫ್ ಅವರು ಕಾನೂನಿನಪ್ರಕಾರ ಗುಪ್ತಾನಿಗೆ ಶಿಕ್ಷೆಯನ್ನು ವಿಧಿಸಿದ್ದಾರೆ. ಆದರೂ ಕಾರ್ಪೊರೇಟ್ ವಲಯಗಳಲ್ಲಿ ಗುಪ್ತಾನಿಗಾದ 'ಅನ್ಯಾಯ'ವನ್ನು ಖಂಡಿಸುತ್ತಿರುವ ಪ್ರಭಾವಿಗಳ ಪಟ್ಟಿ ದೊಡ್ಡದೇ ಇದೆ. ರಜತ್ ಗುಪ್ತಾನ ಆಪ್ತ ಮಿತ್ರರಲ್ಲಿ ಒಬ್ಬನಾದ ಮುಖೇಶ್ ಅಂಬಾನಿ "ನಾನು ರಜತ್‌ನ ನಿಸ್ವಾರ್ಥ ಸೇವೆಯನ್ನು ಗೌರವಿಸುತ್ತೇನೆ. ಆ ಕಾರಣಕ್ಕಾಗಿ ಆತ ನನ್ನ ಸ್ನೇಹಿತನಾಗಿರುತ್ತಾನೆ" ಎಂದಿದ್ದಾನೆ.

ಇದೇ ಮುಖೇಶ್ ಅಂಬಾನಿ ತನ್ನ ಆದೇಶಗಳಿಗೆ ಮಣಿಯದ ಜೈಪಾಲ್ ರೆಡ್ಡಿ ಎಂಬ ಪ್ರಾಮಾಣಿಕ ನಾಯಕ ಇಂಧನ ಇಲಾಖೆಯನ್ನು ಕಳೆದುಕೊಳ್ಳುವಂತೆ ನೋಡಿಕೊಂಡಿದ್ದಾನೆ. ಅಂದಹಾಗೆ ಎರಡು ವರ್ಷಗಳ ಹಿಂದೆ ಬಹಿರಂಗಗೊಂಡಿದ್ದ 2ಜಿ ಹಗರಣದಲ್ಲಿ ಈ ಮುಖೇಶ್ ಅಂಬಾನಿಯ ಪಾತ್ರವೂ ಇತ್ತು. ಆದರೆ ಎ. ರಾಜಾ ಮತ್ತು ಕನ್ನಿಮೋಳಿ ಎಂಬ ರಾಜಕಾರಣಿಗಳು ಕೆಲವು ತಿಂಗಳ ಮಟ್ಟಿಗೆ ಜೈಲುಪಾಲಾದರೇ ಹೊರತು ಈ ಮುಖೇಶ್ ಮಾತ್ರ ಯಾವ ಬಂದೀಖಾನೆಯ ಹತ್ತಿರವೂ ಸುಳಿಯದಂತೆ ನಮ್ಮ ಘನ ಸರ್ಕಾರವೇ ನೋಡಿಕೊಂಡಿತ್ತು. ಅಂದಹಾಗೆ 2ಜಿ ಹಗರಣದ ಕೇಂದ್ರಬಿಂದುವಾಗಿದ್ದ ನೀರಾ ರಾಡಿಯಾ ಎಂಬ ಸುಂದರಿ ಇವತ್ತು ಎಲ್ಲೂ ಕಾಣಿಸುತ್ತಿಲ್ಲ ಯಾಕೆ ಗೊತ್ತಾ? ಆಕೆ ಭಾರತದಲ್ಲಿ ಹುಟ್ಟು ಹಾಕಿದ್ದ ಹಲವಾರು ಕಂಪನಿಗಳನ್ನು ಇದ್ದಕ್ಕಿದ್ದಂತೆ ಮುಚ್ಚಿ ದೇಶದಿಂದಲೇ ಹೊರಟುಹೋಗುವಂತೆ ಅಂಬಾನಿ, ಟಾಟಾ, ಮನಮೋಹನ್ ಸಿಂಗ್ ಇತ್ಯಾದಿಗಳು ನೋಡಿಕೊಂಡಿದ್ದಾರೆ. ಅಂದರೆ ನೀರಾ ರಾಡಿಯಾ ಇಲ್ಲದೆ 2ಜಿ ಹಗರಣ ದಿಕ್ಕುದೆಸೆ ಇಲ್ಲದೆ ಹಲವಾರು ವರ್ಷಗಳ ಕಾಲ ನ್ಯಾಯಾಲಯಗಳ ಮುಂದೆ ತೆವಳಿಕೊಂಡು ಸಾಗಿ ಕೊನೆಗೆ ಯಾವುದೇ ಅಂತ್ಯ ಕಾಣದೆ ಮೂಲೆ ಗುಂಪಾಗುತ್ತದೆ. ಇದು ನಮ್ಮ ಸರ್ಕಾರ ರಜತ್ ಗುಪ್ತಾನಿಗೆ ಸಮಾನವಾಗಿರುವ ಮುಖೇಶ್ ಅಂಬಾನಿ ತರಹವರಿಗೆ ಶಿಕ್ಷೆ ನೀಡುವ ಬದಲಾಗಿ ತೋರುವ ನೆರವು!

ಈ ಮುಖೇಶ್ ಅಂಬಾನಿ ಅದೆಷ್ಟು ಪ್ರಭಾವಿ ಎಂದರೆ ಎಲ್ಲಾ ರಾಜಕೀಯ ಪಕ್ಷಗಳೂ ಈತನ ಕಿಸೆಯಲ್ಲಿವೆ. ಆದ್ದರಿಂದಲೇ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಮುಖೇಶ್ ಅಂಬಾನಿ ಪರವಾದ ಇಂಧನ ನೀತಿಯನ್ನೇ ಅನುಸರಿಸುತ್ತಾ ಬಂದಿವೆ.

ಜೈಪಾಲ್ ರೆಡ್ಡಿ ಇಂಧನ ಇಲಾಖೆಯನ್ನು

ಕಂಡಹಾಗೆ



editorlankesh@gmail.com • ಗೌರಿ ಲಂಕೇಶ್

ಕಳೆದುಕೊಂಡಿದ್ದಕ್ಕೆ ಪ್ರಮುಖ ಕಾರಣ ಕೃಷ್ಣಾ-ಗೋದಾವರಿ ಬೇಸಿನ್‌ನಲ್ಲಿ ತೈಲ ನಿಕ್ಷೇಪದ ಹಗರಣ. ಈ ಹಗರಣವೊಂದರಲ್ಲೇ ಅಂಬಾನಿಗೆ 40,000 ಕೋಟಿ ರೂಪಾಯಿಗಳ ಲಾಭ ಆಗಿದೆ. ಗ್ಯಾಸ್ ದರವನ್ನು 2.5 ಡಾಲರ್‌ಗಳಿಂದ ಆರು ಡಾಲರ್‌ಗಳಿಗೆ ಏರಿಸಲು ಕೇಂದ್ರ ಸರ್ಕಾರ ಅನುಮತಿ ಕೊಟ್ಟಿದ್ದರಿಂದಲೇ ಅಂಬಾನಿಗೆ 30,000 ಕೋಟಿ ರೂಪಾಯಿ ಲಾಭವಾಗಿದೆ. ಅಷ್ಟೇ ಅಲ್ಲ, ಇಂಧನ ಕ್ಷೇತ್ರದಲ್ಲಿ ಮುಖೇಶ್ ಅಂಬಾನಿ ವಿರುದ್ಧ ಯಾವುದೇ ತರಹದ ಆರೋಗ್ಯಕರ ಸ್ಪರ್ಧೆಯೂ ಸಾಧ್ಯವಾಗದೆ ಜನರ ಸಂಪತ್ತು ಹಾಡುಹಗಲೇ ಅಂಬಾನಿಯ ತಿಜೋರಿ ಸೇರಲು ಸರ್ಕಾರ ನೆರವು ನೀಡುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ಹಲವಾರು ಹಗರಣಗಳು ಬಯಲುಗೊಂಡಿವೆ. ಭೂದರೋಡೆ, ಗಣಿ ಹಗರಣ, ಕಾರ್ಪೊರೇಟ್ ಅವ್ಯವಹಾರ, ಸತ್ಯಂ ಕಂಪನಿಯ ಮೋಸ, ಕಾಮನ್‌ವೆಲ್ತ್ ಗೇಮ್ಸ್ ವಂಚನೆ, 2ಜಿ, ಕೋಲ್‌ಗೇಟ್... ಪ್ರತಿಯೊಂದು ಹಗರಣ ಬಯಲುಗೊಂಡಾಗ ರಾಜಕಾರಣಿಗಳು ಮತ್ತು ಕಾರ್ಪೊರೇಟ್ ಕಂಪನಿಗಳು ಲೂಟಿ ಮಾಡಿದ ಸಾರ್ವಜನಿಕ ಸಂಪತ್ತಿನ ಅಂದಾಜು ಏರುತ್ತಾ ಹೋಗಿದೆಯೇ ಹೊರತು ಯಾವ ಒಂದು ಹಗಣರದಲ್ಲೂ ತೀರ್ಪು ಹೊರಬಿದ್ದಿಲ್ಲ ಮತ್ತು ಯಾರಿಗೂ ಶಿಕ್ಷೆ ಆಗಿಲ್ಲ.


ಕಾನೂನನ್ನು ಬಡ ಬೋರೇಗೌಡನಾಗಲಿ, ಬಿಲಿಯಾಧೀಶ ಮುಖೇಶ್ ಅಂಬಾನಿಯಾಗಲಿ ಉಲ್ಲಂಘಿಸಿದ್ದರೆ ಅವರಿಗೆ ಶಿಕ್ಷೆ ಆಗಲೇಬೇಕು ಎಂಬುದು ನಿಯಮ. ಅಂತಹ ಒಂದು ತತ್ವವನ್ನು ಅಮೆರಿಕದ ನ್ಯಾಯಾಲಯ ಪಾಲಿಸಿದ್ದರಿಂದ ಮೊನ್ನೆಯ ತನಕ ಕಾರ್ಪೊರೇಟ್ ವಲಯದಲ್ಲಿ ಮೆರೆಯುತ್ತಿದ್ದ ರಜತ್ ಗುಪ್ತಾನಿಗೆ ಆ ದೇಶದಲ್ಲಿ ಶಿಕ್ಷೆ ನೀಡಲಾಗಿದೆ.

ನಮ್ಮ ದೇಶದಲ್ಲಿ ಮುಖೇಶ್ ಅಂಬಾನಿ ತರಹದ ವಂಚಕರಿಗೆ ಶಿಕ್ಷೆ ಆಗುವುದು ಎಂದು?

ಬಯಲಾದ ಖದೀಮ ಖೇಣಿಯ ಮುಖ

ಒಂದೇ ಯೋಜನೆಯ ಅಕ್ರಮದಲ್ಲಿ 17 ವರ್ಷಗಳ ಅವಧಿಯಲ್ಲಿ ಅಧಿಕಾರ ನಡೆಸಿದ ಮೂವರು ಮುಖ್ಯಮಂತ್ರಿಗಳು ಫಿಟ್ ಆಗಿರುವುದನ್ನು ಎಲ್ಲಾದರೂ ಕೇಳಿದ್ದೀರಾ? ಅದೂ ಸಹ ಬೇರೆಬೇರೆ ಪಕ್ಷಗಳಿಗೆ ಸೇರಿದ ಮೂವರು ಮುಖ್ಯಮಂತ್ರಿಗಳು! ಆದರೆ ಅಂತಹ 'ಅದ್ಭುತ'ವೊಂದು ಕರ್ನಾಟಕದಲ್ಲಿ ನಡೆದಿದೆ.

ಇದೇ ಅಕ್ಟೋಬರ್ 26ರಂದು ಕರ್ನಾಟಕ ಲೋಕಾಯುಕ್ತ ಸ್ಪೆಷಲ್ ಕೋರ್ಟಿನ ನ್ಯಾಯಾಧೀಶ ಎನ್.ಕೆ.ಸುಧೀಂದ್ರರಾವ್ ಅಂಥದ್ದೊಂದು ತನಿಖೆಗೆ ಆದೇಶಿಸಿದ್ದಾರೆ. ದೇಶದ ಚರಿತ್ರೆಯಲ್ಲೇ ಅಭೂತಪೂರ್ವವಾದ



ಈ ಪ್ರಕರಣ ನೈಸ್ ಕಂಪನಿ ಕೈಗೆತ್ತಿಕೊಂಡಿರುವ ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿಎಂಐಸಿ) ಎಂಬ ಯೋಜನೆಯ ಹೈಲೆವೆಲ್ ಅಕ್ರಮಗಳಿಗೆ ಸಂಬಂಧಿಸಿದ್ದು. ಇದರ ಅಧಿನೇತ ಅಶೋಕ್ ಖೇಣಿ ಎಂಬ ಭಾರೀ ಭೂಗಳ್ಳ!

ಇಂಥಾ ಅಪರೂಪದ ತೀರ್ಪಿನಿಂದಾಗಿ ನ್ಯಾಯದ ಕಣ್ಣು ತಡವಾಗಿಯಾದರೂ ಅಲ್ಪಸ್ವಲ್ಪ ತೆರೆದಂತಾಗಿದೆ. ಲೋಕಾಯುಕ್ತ ವಿಶೇಷ ನ್ಯಾಯಾಲಯ ಅಶೋಕ್ ಖೇಣಿ ಎಂಬ ಹಗಲುದರೋಡೆಕೋರನಿಗೆ ಸ್ವಲ್ಪ ಬಿಸಿ ಮುಟ್ಟಿಸಿದೆ. ನೈಸ್ ರೋಡ್ ಎಂದು ಜನಪ್ರಿಯವಾಗಿರುವ ಔಟರ್ ಪೆರಿಫೆರಲ್ ರಸ್ತೆಯಲ್ಲಿ ನೈಸ್ ಕಂಪನಿ ಕಳೆದ ಎರಡು ವರ್ಷಗಳಲ್ಲಿ ಕಾನೂನುಬಾಹಿರವಾಗಿ ಅಕ್ರಮವಾಗಿ ವಸೂಲಿ ಮಾಡಿರುವ ಸುಮಾರು 75 ಕೋಟಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂಬ ಆದೇಶ ಹೊರಬಿದ್ದಿದೆ. ಅಷ್ಟೇ ಅಲ್ಲದೆ, ಅಶೋಕ್ ಖೇಣಿ ಅಕ್ರಮವಾಗಿ ಪರಭಾರೆ ಮಾಡಿರುವ ಸುಮಾರು 350 ಎಕರೆ ಭೂಮಿಯ ವಹಿವಾಟನ್ನು ರದ್ದುಪಡಿಸಿ, ಆ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆಯಬೇಕೆಂದು ನ್ಯಾಯಾಲಯ ಆದೇಶಿಸಿದೆ.


ಈ ಐತಿಹಾಸಿಕ ತೀರ್ಪಿನಿಂದಾಗಿ ನೈಸ್ ಕಂಪನಿಯಿಂದ ಸಂಕಷ್ಟಕ್ಕೀಡಾದ ಲಕ್ಷಾಂತರ ಅಮಾಯಕರಲ್ಲಿ ಈ ನೆಲದ ನ್ಯಾಯವ್ಯವಸ್ಥೆಯ ಮೇಲೆ ಮತ್ತೆ ಭರವಸೆ ಮೂಡುವಂತಾಗಿದೆ. ಅದೇ ಸಂದರ್ಭದಲ್ಲಿ ಅಶೋಕ್ ಖೇಣಿ ಹಾಗೂ ಈತನ ಅಕ್ರಮಗಳಲ್ಲಿ ಕೈಜೋಡಿಸಿರುವ ರಾಜಕಾರಣಿಗಳು ಮತ್ತು ಭ್ರಷ್ಟ ಅಧಿಕಾರಿಗಳ ನಿದ್ದೆ ಕೆಡಿಸಿದೆ. ಈ ಕೇಸಿನಲ್ಲಿ ಸಿಕ್ಕಿಬಿದ್ದಿರುವ ಪ್ರಮುಖರಲ್ಲಿ ಮೂವರು ಮಾಜಿ ಮುಖ್ಯಮಂತ್ರಿಗಳಿದ್ದಾರೆಂಬುದೇ ಭಾರೀ ವಿಶೇಷ. 1995ರಲ್ಲಿ ಅಧಿಕಾರದಲ್ಲಿದ್ದ ಮಣ್ಣಿನಮಗ ದೇವೇಗೌಡರು, 2000ದಲ್ಲಿದ್ದ ಹೈಫೈ ಸಿಎಂ ಎಸ್‌ಎಂ ಕೃಷ್ಣ ಹಾಗೂ 2008ರಲ್ಲಿ ಗದ್ದುಗೆ ಹಿಡಿದ ಯಡಿಯೂರಪ್ಪ - ಇವರುಗಳೇ ಲಕ್ಷಾಂತರ ರೈತರ ತಲೆಯ ಮೇಲೆ ಕಲ್ಲು ಬಂಡೆ ಎಳೆದು ಅಶೋಕ್ ಖೇಣಿಗೆ ಹಲ್ವಾ ತಿನ್ನಿಸಿ ಪುಣ್ಯ ಕಟ್ಟಿಕೊಂಡ ಮಹಾನುಭಾವರು!

ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಹಾಂ ಎಂಬುವವರು ವರ್ಷಾನುಗಟ್ಟಲೆ ತಯಾರಿ ನಡೆಸಿ ಸಂಪಾದಿಸಿದ ದಾಖಲೆಗಳ ಆಧಾರದ ಮೇಲೆ ಸೆಪ್ಟೆಂಬರ್ 17ರಂದು ಲೋಕಾಯುಕ್ತ ವಿಶೇಷ ನ್ಯಾಯಾಲಯದಲ್ಲಿ ಒಂದು ಖಾಸಗಿ ದೂರು ದಾಖಲಿಸಿದ್ದರು. ಈ ಕೇಸಿನ ಅಗಾಧತೆಗೆ ಕನ್ನಡಿ ಹಿಡಿದಂತೆ ಅಬ್ರಹಾಂ ನೀಡಿದ ಕಂಪ್ಲೈಂಟ್ ಬರೋಬ್ಬರಿ 147 ಪುಟಗಳು. ಈ ಕೇಸಿಗೆ ಪೂರಕವಾಗಿ ಒದಗಿಸಿದ ಅನುಬಂಧಿತ ದಾಖಲೆಗಳು ಬರೋಬ್ಬರಿ 3,368 ಪುಟಗಳು.

ಈಗ ಸಾವಿರಾರು ಪುಟಗಳ ಕಂಪ್ಲೈಂಟ್‌ನ ಕೆಲವು ಮುಖ್ಯ ಅಂಶಗಳನ್ನು ನೋಡೋಣ.

ಎಲ್ಲಕ್ಕಿಂತ ಮುಖ್ಯವಾಗಿ ಈ ಕಾರಿಡಾರ್ ಯೋಜನೆ ಪ್ರಾರಂಭವಾಗಿದ್ದರ ಮೂಲ ಉದ್ದೇಶವೇ ಬೆಂಗಳೂರು-ಮೈಸೂರುಗಳ ನಡುವೆ ಟ್ರಾಫಿಕ್ ಸಮಸ್ಯೆ ತೀವ್ರವಾಗಿದ್ದು, ಅದಕ್ಕೆ ಪರಿಹಾರವಾಗಿ 111 ಕಿಮೀ ಉದ್ದದ ಒಂದು ಎಕ್ಸ್‌ಪ್ರೆಸ್‌ವೇ ನಿರ್ಮಿಸಬೇಕೆಂಬುದಾಗಿತ್ತು. ಆದರೆ ಯೋಜನೆಗೆ ಸಂಬಂಧಿಸಿ ಮೂಲ ಒಡಂಬಡಿಕೆಯಾಗಿ 17 ವರ್ಷ ಕಳೆದರೂ ಮೈಸೂರಿನ ದಿಕ್ಕಿಗೆ ರಸ್ತೆ ಕಾಮಗಾರಿ ಮುಂದುವರೆಯಲೇ ಇಲ್ಲವೆಂದರೆ ಏನರ್ಥ? ಹಾಗಾದರೆ ಈ ಯೋಜನೆಯ ಹಿಂದಿನ ಮರ್ಮವೇನು ಎಂಬುದೇ ಪ್ರಶ್ನಾರ್ಥಕವಾಗಿದೆ.

ಎರಡನೆಯದಾಗಿ ಬಿಎಂಐಸಿ ಯೋಜನೆಯ ಭಾಗವಾಗಿ ಬೆಂಗಳೂರಿನ ಹೊರವಲಯದಲ್ಲಿ ಹೊಸೂರು ರಸ್ತೆಯಿಂದ ಮೊದಲ್ಗೊಂಡು ತುಮಕೂರು ರಸ್ತೆಗಳನ್ನು ಕೂಡಿಸುವ 41 ಕಿಮೀ ಉದ್ದದ ಒಂದು ಪೆರಿಫೆರಲ್ ರೋಡ್ ನಿರ್ಮಾಣ ಮಾಡುವುದೂ ಇತ್ತು, ಆ ಪೆರಿಫೆರಲ್ ರಸ್ತೆ ಬಹುತೇಕ ಪೂರ್ಣಗೊಂಡಿದೆ. ಆದರೆ ಅಶೋಕ್ ಖೇಣಿಯ ನೈಸ್ ಕಂಪನಿ ತಮ್ಮ ಪ್ರಾಜೆಕ್ಟ್ ರಿಪೋರ್ಟ್‌ನಲ್ಲಿ ಕೊಟ್ಟಿದ್ದ ವಾಗ್ದಾನ ಹಾಗೂ ಸರ್ಕಾರದೊಂದಿಗೆ ನಡೆದ ಮೂಲ ಒಪ್ಪಂದದ ಪ್ರಕಾರ "60 ವರ್ಷ ಕಾಲ ಬಾಳಿಕೆ ಬರುವಂಥ ಸಿಮೆಂಟ್ ಕಾಂಕ್ರೀಟ್ ರಸ್ತೆಯಾಗಿರಬೇಕು ಮತ್ತು ಅದು ಅಮೆರಿಕನ್ ಸ್ಟ್ಯಾಂಡರ್ಡ್ಸ್‌ಗೆ ಅನುಗುಣವಾಗಿರಬೇಕಿತ್ತು". ಆದರೆ ವಾಸ್ತವವೇನು? ಅಶೋಕ್ ಖೇಣಿ ಅಂಡ್ ಕಂಪನಿ ಒಂದು ಆರ್ಡಿನರಿ ಡಾಂಬರು ರಸ್ತೆ ಮಾಡಿ ಸರ್ಕಾರಕ್ಕೂ, ನಾಡಿನ ಜನರಿಗೂ ಟೋಪಿ ಹಾಕಿದ್ದಾರೆ. ಅಂತರರಾಷ್ಟ್ರೀಯ ಗುಣಮಟ್ಟ ಹಾಳಾಗಲಿ, ಸುಮಾರು 10 ವರ್ಷಗಳ ಹಿಂದೆ ಸರ್ಕಾರವೇ ನಿರ್ಮಿಸಿರುವ ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿಯ ಗುಣಮಟ್ಟದ ಅರ್ಧ ಮಟ್ಟವನ್ನೂ ಕಾಯ್ದುಕೊಂಡಿಲ್ಲ ಎಂಬುದು ನಮ್ಮ ಕಣ್ಣೆದುರಿನಲ್ಲೇ ಇದೆ. ಇನ್ನು ಆ ರಸ್ತೆ 60 ವರ್ಷ ಬಾಳಿಕೆ ಬರುತ್ತದೆಯೆಂಬುದು ಕೇವಲ ಹುಸಿ ನಿರೀಕ್ಷೆಯಷ್ಟೆ. ಇಂಥಾ ರಸ್ತೆಗೆ ದುಬಾರಿ ಹಣ



ಸುಲಿಯುತ್ತಿರುವುದರ ಬಗ್ಗೆ ಈಗಾಗಲೇ ನಾಗರಿಕರು ಶಾಪ ಹಾಕುತ್ತಿದ್ದಾರೆ.

ಪೆರಿಫೆರಲ್ ರಸ್ತೆ ನಿರ್ಮಾಣದ ಬಗ್ಗೆ ಕಂಪನಿ ಹೆಚ್ಚಿನ ಆಸಕ್ತಿ ತೋರಿದ್ದರ ಅಸಲಿಯತ್ತೇನೆಂದರೆ, ಈ ಪೆರಿಫೆರಲ್ ರಸ್ತೆ ಬೆಂಗಳೂರು ಮಹಾನಗರಕ್ಕೆ ಅಂಟಿಕೊಂಡಿದ್ದು, ಇಲ್ಲಿ ಭೂಮಿಯ ಬೆಲೆ ಗಗನಕ್ಕೇರಿದೆ. ದೇಶೋದ್ಧಾರದ ಹೆಸರಿನಲ್ಲಿ ಪುಕ್ಕಟ್ಟೆಯಾಗಿ ಸರ್ಕಾರಿ ಭೂಮಿಯನ್ನು ಮತ್ತು ಮೂರುಕಾಸು ಬೆಲೆಗೆ ರೈತರ ಭೂಮಿಗಳನ್ನು ವಶಪಡಿಸಿಕೊಂಡು ಸಾವಿರಾರು ಕೋಟಿಗಳನ್ನು ಬಾಚುವ ಲೆಕ್ಕಾಚಾರ ಈ ಯೋಜನಾಕರ್ತೃಗಳದ್ದು. ಕೆಲವರ್ಷಗಳ ಮೊದಲು ನೈಸ್ ಕಂಪನಿ ರಿಯಲ್ ಎಸ್ಟೇಟ್ ದಂಧೆ ನಡೆಸಲಿಕ್ಕಾಗಿಯೇ ಬಂದಿದೆ ಎಂದು ಆರೋಪಿಸಿ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಮುಂತಾದವರು ಈ ಯೋಜನೆಯನ್ನು ವಿರೋಧಿಸಿ ಹೋರಾಟ ಮಾಡಿದ್ದರು. ಈಗ ಅದು ಕೇವಲ ಆರೋಪವಲ್ಲ; ರುಜುವಾತಾಗಿರುವ ಒಂದು ಅಪ್ಪಟ ಸತ್ಯ.

ರಸ್ತೆ ನಿರ್ಮಾಣಕ್ಕೆಂದು ಮಂಜೂರು ಮಾಡಿಸಿಕೊಂಡ ಭೂಮಿಯನ್ನು ಅಜ್ಮೇರಾ ಬಿಲ್ಡರ್ಸ್ ಮತ್ತು ಉಮಂಗ್ ಡೆವಲಪರ್ಸ್ ಎಂಬ ಎರಡು ಖಾಸಗಿ ಕಂಪನಿಗಳಿಗೆ ಪರಭಾರೆ ಮಾಡಿದ್ದ ಅಶೋಕ್ ಖೇಣಿ ಈಗ ರೆಡ್‌ಹ್ಯಾಂಡ್ ಆಗಿ ದಾಖಲೆ ಸಮೇತ ಸಿಕ್ಕಿಬಿದ್ದಿದ್ದಾರೆ. ಈ ಸತ್ಯವನ್ನು ಮನಗಂಡ ಲೋಕಾಯುಕ್ತ ವಿಶೇಷ ನ್ಯಾಯಾಲಯ ಹೀಗೆ ಪರಭಾರೆಯಾಗಿರುವ ಸುಮಾರು 350 ಎಕರೆ ಭೂಮಿಯನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂದು ಮತ್ತು ಹೀಗೆ ಅಕ್ರಮವಾಗಿ ವಸೂಲಿ ಮಾಡಿದ ರಸ್ತೆ ಸುಂಕವನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆಯೂ ತಪ್ಪಿದಲ್ಲಿ ನೈಸ್‌ನ ಇತರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆಯೂ ಆದೇಶಿಸಿದ್ದಾರೆ. ತನ್ನ ಅಕ್ರಮಗಳನ್ನು ಕೇಳುವವರೇ ಇಲ್ಲವೆಂದು ಮೆರೆಯುತ್ತಿದ್ದ ಅಶೋಕ್ ಖೇಣಿ ಈ ಹೊಡೆತದಿಂದ ತಪ್ಪಿಸಿಕೊಳ್ಳುವ ಮಾರ್ಗಗಳ ತಲಾಶೆಯಲ್ಲಿದ್ದಾರೆ.

ಮೂಲ ಒಪ್ಪಂದದ ಪ್ರಕಾರ ಈ ಯೋಜನೆಗೆ 18313 ಎಕರೆ ಭೂಮಿಯ ಅಗತ್ಯವಿತ್ತು, (ಸರ್ಕಾರಿ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 32 ಸಿಎಸ್‌ಆರ್ 85, ದಿನಾಂಕ 20-11-1995) ನಂತರದ ದಿನಗಳಲ್ಲಿ ಇದನ್ನು 20,19[illegible] ಎಕರೆಗೆ ಏರಿಸಲಾಯಿತು. ಇದರಲ್ಲಿ ಶೇಕಡಾ 70ರ[illegible] ಭೂಮಿ ರಸ್ತೆಗಾಗಿ ಬಳಕೆಯಾಗದೇ ಟೌನ್‌ಶಿಪ್‌ಗ[illegible] ಹೆಸರಿನಲ್ಲಿ ರಿಯಲ್ ಎಸ್ಟೇಟ್ ದಂಧೆಗೆ ಬಳಕೆಯಾಗಲಿ[illegible] ಎಂಬುದೇ ಒಂದು ದುರಂತ. ಇದೂ ಹಾಳಾಗಲಿ, ಇದಕ್ಕ[illegible] ದೊಡ್ಡ ದುರಂತವೊಂದಿದೆ. ಈ ಯೋಜನೆ[illegible] ಉಸ್ತುವಾರಿಗಾಗಿ ಈ ಹಿಂದೆ ಸರ್ಕಾರ ಬಿ.ಎಂ.ಐ.ಸಿ ಪ್ರದೇ[illegible] ಯೋಜನಾ ಪ್ರಾಧಿಕಾರ ಎಂಬ ಅಧಿಕೃತ ಸಂಸ್ಥೆಯೊಂದ[illegible] ರಚಿಸಿದೆ. ನಿಯಮಗಳನ್ನು ಉಲ್ಲಂಘಿಸಿ ಆ ಪ್ರಾಧಿಕಾರದ[illegible] ಅಶೋಕ್ ಖೇಣಿಯನ್ನು ಪ್ರತಿಷ್ಠಾಪಿಸಲಾಗಿತ್ತು. ಮಾತ್ರವಲ್ಲ[illegible] ಖೇಣಿಯ ಆಪ್ತಮಿತ್ರ ಡಿ.ಕೆ.ಶಿವಕುಮಾರ್ ಕೂಡಾ ಇದ್ದ[illegible] ಈ ಪ್ರಾಧಿಕಾರ ತಯಾರಿಸಿದ ಒಂದು ಔಟ್‌ಲೈ[illegible] ಡೆವಲಪ್‌ಮೆಂಟ್ ಪ್ಲಾನ್ (ಒಡಿಪಿ) ಪ್ರಕಾರ [illegible] ಯೋಜನೆಗಾಗಿ ಸುಮಾರು 1.67 ಲಕ್ಷ ಎಕರೆ ಭೂಮಿ[illegible] ಅಗತ್ಯವಿದೆಯೆಂದು ಗುರುತಿಸಿದ್ದಾರೆಂದು ಅಬ್ರಹಾ[illegible] ನೇರವಾಗಿ ಆರೋಪಿಸಿದ್ದಾರೆ. ಹೀಗಾದರೆ ಬೆಂಗಳೂರ[illegible] ಮೈಸೂರುಗಳ ನಡುವಿನ ಜನರನ್ನು ದೇವರೇ ಕಾಪಾಡಬೇ[illegible]

ನೈಸ್‌ನ ಇತಿಹಾಸವನ್ನು ಕೆದಕಿದಷ್ಟೂ ಉದ್ದಕ[illegible] ಅಕ್ರಮಗಳ ಸರಮಾಲೆಯೇ ಹೊರಬರುತ್ತದೆ. ದೇವೇಗೌಡರ[illegible] ಪ್ರಧಾನಿ ಚಾನ್ಸ್ ಸಿಕ್ಕನಂತರ ಸಿಎಂ ಆಗಿ ಕುಳಿತಿದ್ದ ಜೆ.ಎಚ[illegible] ಪಟೇಲ್ ಸರ್ಕಾರ 1997ರಲ್ಲಿ ನೈಸ್ ಜೊತೆ ಒಂದ[illegible] ಫ್ರೇಮ್‌ವರ್ಕ್ ಅಗ್ರಿಮೆಂಟ್ ಮಾಡಿಕೊಂಡಿತು. ಹಿಂ[illegible] ಅಗ್ರಿಮೆಂಟ್ ಆದ ವರ್ಷವೇ ಸುಮಾರು 1880 ಎ[illegible] ಭೂಮಿಯನ್ನು ಅಕ್ರಮವಾಗಿ ಸೇರ್ಪಡೆ ಮಾಡಲಾಯಿತ[illegible] ನಂತರದ ದಿನಗಳಲ್ಲಿ ಬೇರೆ ಯಾವ ಕಾರಣಗಳಿಲ್ಲದೆ ಕೇವ[illegible] ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುವ ಏಕೈಕ ಉದ್ದೇಶದಿಂ[illegible] ಪೆರಿಫೆರಲ್ ರಸ್ತೆ, ಲಿಂಕ್ ರಸ್ತೆ ಮತ್ತು ಮೊದಲ[illegible] ಟೌನ್‌ಶಿಪ್‌ನ ಅಲೈನ್‌ಮೆಂಟ್‌ಗಳನ್ನೇ ಬದಲಾಯಿಸಲಾಗಿ[illegible] ಸರ್ಕಾರಿ ಭೂಮಿಯನ್ನು ಲಪಟಾಯಿಸುವುದು ಹಾಗ[illegible] ರಿಯಲ್ ಎಸ್ಟೇಟ್ ದಂಧೆಗೆ ಸೂಕ್ತವಾದ ಜಾಗಗಳ[illegible] ಹಿಡಿಯುವುದನ್ನು ಬಿಟ್ಟರೆ ಬೇರೆ ಯಾವ ಘ[illegible] ಉದ್ದೇಶವಿತ್ತೋ ಖೇಣಿಯೇ ಹೇಳಬೇಕು.

ಇಂಥ ಎಲ್ಲಾ ವ್ಯವಹಾರಗಳನ್ನು ಅಚ್ಚುಕಟ್ಟಾ[illegible] ಮಾಡಿಮುಗಿಸಲು ಖೇಣಿ ಕೂಟ ಮತ್ತೊಂದು ಅ[illegible]

ಅಮೆರಿಕದ ಹೆಸರಲ್ಲಿ ಬೋಗಸ್

ಅಶೋಕ್ ಖೇಣಿ ಎಂಬ ಐನಾತಿ ಕಿಲಾಡಿ ಇಲ್ಲಿಗೆ ಕಾಲಿಡುವ ಮುಂಚೆಯೇ ಕರ್ನಾಟಕ ಸರ್ಕಾರವನ್ನು ಯಾಮಾರಿಸಲು ಒಂದು ಬೋಗಸ್ ಪ್ರಾಜೆಕ್ಟ್ ತಯಾರಿ ಮಾಡಿಕೊಂಡೇ ಬಂದಿದ್ದ. ಅದಕ್ಕಾಗಿ ಆತ ಬಳಸಿಕೊಂಡಿದ್ದು ಮಾತ್ರ ಸೂಪರ್ ಪವರ್ ಅಮೆರಿಕದ ಹೆಸರನ್ನು. ಮೊದಲಿಗೆ ಈ ಯೋಜನೆಯ ಅನುಷ್ಠಾನಕ್ಕಾಗಿ ಪ್ರಪ್ರಥಮ ಒಡಂಬಡಿಕೆಯಾಗಿದ್ದು 1995ರ ಫೆಬ್ರವರಿ 20ರಂದು. ಅಶೋಕ್ ಖೇಣಿ ಭಾರೀ ಷಡ್ಯಂತ್ರವೊಂದನ್ನು ಹೆಣೆದು ಈ ಯೋಜನೆಗೆ ಅಮೆರಿಕದ ಕಂಪನಿಯೇ ಕರ್ನಾಟಕಕ್ಕೆ ಬರುತ್ತಿರುವಂತೆ ಹುಯಿಲೆಬ್ಬಿಸಿದ್ದ. ಪರಿಣಾಮವಾಗಿ ಅಂದಿನ ಮುಖ್ಯಮಂತ್ರಿ ದೇವೇಗೌಡ ಹಾಗೂ ಅಮೆರಿಕದ ಮೆಸಾಚುಸೆಟ್ಸ್ ರಾಜ್ಯದ ಅಂದಿನ ಗವರ್ನರ್ ವಿಲಿಯಂ ವೆಲ್ಡ್ ಈ ಪ್ರಾಜೆಕ್ಟ್‌ನ ಮೆಮರಂಡಮ್ ಆಫ್ ಅಂಡರ್‌ಸ್ಟಾಂಡಿಂಗ್(ಎಂಒಯು) ಪತ್ರಕ್ಕೆ ಸಹಿ ಮಾಡಿದ್ದರು.

ಇದಕ್ಕೆ ಕೆಲದಿನಗಳ ಮುಂಚೆಯಷ್ಟೆ ಒಂದು ಕನ್ಸಾರ್ಷಿಯಮ್ (ಕಂಪನಿಗಳ ಕೂಟ) ರಚಿಸಿದ್ದರು. ಅಮೆರಿಕದ ವಿ.ಎಚ್.ಬಿ ಹಾಗೂ ಎಸ್.ಎ.ಬಿ ಹಾಗೂ ಭಾರತದ ಕಲ್ಯಾಣಿ ಗ್ರೂಪ್ ಆಫ್ ಕಂಪನಿಗಳು ಒಟ್ಟಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳುವುದಾಗಿ ಆ ಪತ್ರದ ಒಕ್ಕಣೆಯಾಗಿತ್ತು, ಆದರೆ ವಾಸ್ತವವೇನೆಂದರೆ ವಿಎಚ್‌ಬಿ ಎಂಬ ಕಂಪನಿಯನ್ನು ಅಮೆರಿಕದಲ್ಲೆ ವಿಚಾರಿಸುವವರು ಗತಿಯಿರಲಿಲ್ಲ, ಇನ್ನೂ ಎಸ್‌ಎಬಿ ಎಂಬ ಕಂಪನಿಯನ್ನು ಅಶೋಕ್ ಖೇಣಿಯ ಪಟಾಲಂ ಕನ್ನಡಿಗರಿಗೆ ಒಂದು ಮಕ್ಮಲ್ ಟೋಪಿಯಿಡುವ ಸಲುವಾಗಿ ಆಗತಾನೇ ರಿಜಿಸ್ಟರ್ ಮಾಡಿಸಿತ್ತು. ಇದರ ಜೊತೆಗೆ ಖೇಣಿ ಜೊತೆ ಬಾಂಧವ್ಯ ಹೊಂದಿದ್ದ ಕಲ್ಯಾಣಿ ಗ್ರೂಪ್‌ನ ಹೆಸರನ್ನು ಬಳಸಿಕೊಳ್ಳಲಾಯಿತಾದರೂ ಆ ಕಂಪನಿಗೂ ಈ ನೈಸ್ ಯೋಜನೆಗೂ ಇಂದಿಗೂ ಯಾವ ಅರ್ಥಾರ್ಥ ಸಂಬಂಧವೂ ಇಲ್ಲ ಎಂಬುದು ಒಂದು ಕಟುಸತ್ಯ. ಇನ್ನು ನೈಸ್ ಯೋಜನೆಯಲ್ಲಿ ಅಮೆರಿಕದ ಗವರ್ನರ್ ಕಡಿದು ಗುಡ್ಡೆ ಹಾಕಿದ್ದು ಏನೂ ಇಲ್ಲ ಎಂಬುದು ಈಗ ಬಟಾಬಯಲಾಗಿರುವ ಸತ್ಯ. ಅಮೆರಿಕ ಎಂದ ಕೂಡಲೆ ನಮ್ಮ ರಾಜಕಾರಣಿಗಳು ಕಣ್ಣುಮುಚ್ಚಿ ಸಹಿ ಮಾಡುತ್ತಾರೆ ಎಂಬ ರಹಸ್ಯವನ್ನು ತಿಳಿದ ಖೇಣಿ ಈ ಎಲ್ಲಾ ತಂತ್ರವನ್ನು ಹೆಣೆದಿದ್ದ. ಅಶೋಕ್ ಖೇಣಿ ಎಂಥಾ ಇಂಟರ್‌ನ್ಯಾಷನಲ್ ಫ್ರಾಡ್ ಎಂದು ಅರ್ಥಮಾಡಿಕೊಳ್ಳಲು ಈ ಒಂದು ಉದಾಹರಣೆ ಸಾಕು.

ನೈಸ್ ಕಂಪನಿಯ ಬಂಡವಾಳ

ಈ ಯೋಜನೆಯನ್ನು ಅನುಷ್ಠಾನ ಮಾಡಲು ಸರ್ಕಾರದ ಬಳಿ ಅಷ್ಟೊಂದು ಬಂಡವಾಳವಿಲ್ಲ; ಆದ್ದರಿಂದಲೇ ಈ ಯೋಜನೆಯನ್ನು ನೈಸ್ ಎಂಬ ಖಾಸಗಿ ಕಂಪನಿಗೆ ವಹಿಸುತ್ತಿರುವುದಾಗಿ ಸರ್ಕಾರದ ವಕ್ತಾರರು ಈ ರಸ್ತೆ ಖಾಸಗೀಕರಣದ ಬಗ್ಗೆ ಸಮರ್ಥನೆ ನೀಡಿದರು. ನೈಸ್ ಕಂಪನಿಯ ವಕ್ತಾರರೂ ಕೂಡ ತಾವೇನೋ ಭಾರೀ ಬಂಡವಾಳ ಹೂಡಿ ಕರ್ನಾಟಕವನ್ನು ಉದ್ಧಾರ ಮಾಡುತ್ತೇವೆಂದು ಪುಂಗಿ ಊದಿದ್ದರು. ಮೊನ್ನೆಮೊನ್ನೆ ಬೀದರ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಅಶೋಕ್ ಖೇಣಿ ಬೆಂಗಳೂರು-ಮೈಸೂರು ಪ್ರದೇಶವನ್ನು ತಾನು ಉದ್ಧಾರ ಮಾಡಿರುವುದಾಗಿ ಬೊಗಳೆ ಬಿಟ್ಟಿದ್ದೇ ಬಿಟ್ಟಿದ್ದು. ಆದರೆ ವಾಸ್ತವಾಂಶಗಳು ಅದಕ್ಕೆ ತದ್ವಿರುದ್ಧವಾಗಿವೆ.


ಸರ್ಕಾರಕ್ಕೆ ನೈಸ್ ಕಂಪನಿ ಸಲ್ಲಿಸಿದ್ದ ಮೂಲ ದಾಖಲಾತಿಗಳ ಪ್ರಕಾರ 1583.76 ಕೋಟಿಗಳ ಯೋಜನಾ ವೆಚ್ಚದ ಪೈಕಿ ಸುಮಾರು 522 ಕೋಟಿಗಳನ್ನು ನೈಸ್ ಕಂಪನಿ ತನ್ನ ಸ್ವಂತ ಮೂಲಗಳಿಂದ ಹೂಡುತ್ತದೆ. ಉಳಿದ 1063.65 ಕೋಟಿಗಳನ್ನು ಸಾಲವಾಗಿ ಪಡೆದುಕೊಂಡು ಈ ಯೋಜನೆಯನ್ನು ಮುಕ್ತಾಯ ಮಾಡುವುದಾಗಿ ಭರವಸೆ ನೀಡಿತ್ತು.

ಆದರೆ ನಂತರದ ದಿನಗಳಲ್ಲಿ ನಡೆದದ್ದೇ ಬೇರೆ. ಯೋಜನೆಗಾಗಿ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸುವ ಮುಂಚೆ ನೈಸ್ ಕಂಪನಿಯು ಕೆಐಎಡಿಬಿಗೆ ಭೂಸ್ವಾಧೀನಕ್ಕೆ ಅಗತ್ಯವಿರುವ ಮೊತ್ತವನ್ನು ಡೆಪಾಸಿಟ್ ಇಡಬೇಕಿತ್ತು. ಆದರೆ ಚಾಟಿ ಇಲ್ಲದೆ ಬುಗುರಿ ಆಡಿಸುವ ಲೆಕ್ಕಾಚಾರದಲ್ಲಿದ್ದ ಖೇಣಿ ಕಂಪನಿ ಡೆಪಾಸಿಟ್ ಇಡುವುದಿರಲಿ, ಸ್ವಾಧೀನ ಪ್ರಕ್ರಿಯೆಗೆ ಕಟ್ಟಬೇಕಾದ ಪ್ರೊಸೆಸಿಂಗ್ ಶುಲ್ಕವನ್ನೂ ಪಾವತಿಸಲಿಲ್ಲ, ಹಾಗಾದರೆ ಮಾಡಿದ್ದೇನು?

ಮಾಡಿದ್ದೇನೆಂದರೆ ಮಂತ್ರಿ ಮಾನ್ಯರನ್ನು, ಭ್ರಷ್ಟ ಅಧಿಕಾರಿಗಳನ್ನು ಬುಟ್ಟಿಗೆ ಹಾಕಿಕೊಂಡು ಸಾವಿರಾರು ಎಕರೆ ಸರ್ಕಾರಿ ಭೂಮಿಯನ್ನು ಕಂಪನಿಯ ಹೆಸರಿಗೆ ವರ್ಗಾಯಿಸಿಕೊಂಡರು. ಹೀಗೆ ಕಾನೂನನ್ನು ಗಾಳಿಗೆ ತೂರಿ ಪಡೆದುಕೊಂಡ 1931 ಎಕರೆ ಸರ್ಕಾರಿ ಭೂಮಿಯನ್ನೇ ಬ್ಯಾಂಕ್‌ಗಳಿಗೆ ಅಡಮಾನ ಇಟ್ಟು ಸಾಲ ಪಡೆದುಕೊಂಡ ನಂತರವೇ ಕಾಮಗಾರಿ ಶುರು ಮಾಡಿದ್ದು, ಇಂಥಾ ಕೆಲಸ ಮಾಡಲಿಕ್ಕೆ ಅಶೋಕ್ ಖೇಣಿಯೇ ಆಗಬೇಕಿತ್ತೇ ಎಂಬುದೇ ಅಸಲಿ ಪ್ರಶ್ನೆ.

ಅದು ಹಾಗಿರಲಿ, ಯೋಜನೆಗಾಗಿ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಖಾಸಗಿ ಕಂಪನಿಗೆ ವರ್ಗಾವಣೆ ಮಾಡಬೇಕಾದರೆ ಸರ್ಕಾರಕ್ಕೆ ಅಗತ್ಯ ಸ್ಟಾಂಪ್ ಡ್ಯೂಟಿ ಕಟ್ಟಿ ಭೂಮಿಯನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕು. ಆ ಲೆಕ್ಕಾಚಾರದ ಪ್ರಕಾರವೇ ಸರ್ಕಾರಕ್ಕೆ 56 ಕೋಟಿಯಷ್ಟು ಸ್ಟಾಂಪ್ ಡ್ಯೂಟಿ ಆದಾಯ ಬರಬೇಕಿತ್ತು, ಆದರೆ ಈ ಧರ್ಮೋದ್ಧಾರಕ ಅಶೋಕ್ ಖೇಣಿಗಾಗಿ ಸರ್ಕಾರ ನಿಯಮಾವಳಿ ಮೀರಿ 56 ಕೋಟಿಗಳನ್ನೂ ಮಾಫಿ ಮಾಡಿಬಿಟ್ಟಿತು. ಇದುವರೆಗೂ ನೈಸ್ ಕಂಪನಿಯ ವಶವಾಗಿರುವ ಸರ್ಕಾರಿ ಭೂಮಿ ಬರೋಬ್ಬರಿ 6999 ಎಕರೆ. ಇದರಲ್ಲಿ ಬಹುಪಾಲು ಭೂಮಿ ಬೆಂಗಳೂರು ನಗರದ ಸುತ್ತಮುತ್ತಲ ಭೂಮಿಯಾಗಿದ್ದು ಆ ಭೂಮಿಗೆ ಈಗ ಕೋಟಿಗಟ್ಟಲೆ ಬೆಲೆಯಿದೆ. ಇದು ಅಸಲಿ ವಿಚಾರ. ಇಂಥಾ ಸರ್ಕಾರಿ ಭೂಮಿಗಳನ್ನು ಪರಭಾರೆ ಮಾಡಿ ಅಶೋಕ್ ಖೇಣಿ ಕಬಳಿಸಿದ ಮೊತ್ತದ ಬಗ್ಗೆ ಸೂಕ್ತ ತನಿಖೆ ನಡೆಯಬೇಕಾದ ಅಗತ್ಯವಿದೆ.

ಇದು ಅಶೋಕ್ ಖೇಣಿ ಬಂಡವಾಳ ಹೂಡಿ ದೇಶೋದ್ಧಾರ ಮಾಡಿರುವುದರ ಅಸಲಿ ಚಿತ್ರಣ.




...ನಾಯನ್ನು ಸೃಷ್ಟಿ ಮಾಡಿದೆ. ಆದೇ ನಂದಿ ...ನಾಮಿಕ್ ಕಾರಿಡಾರ್ ಎಂಟರ್‌ಪ್ರೈಸಸ್ ...ಮಿಟೆಡ್(ಎನ್‌ಎಸಿಇಎಲ್). ಈ ಕಂಪನಿಯ ...ನಲ್ಲಿ ಸುಂಕ ವಸೂಲಿಯನ್ನೂ ಒಳಗೊಂಡು ...ರಿ ಭೂಮಿಯನ್ನು ಮಾರಾಟ ಮಾಡುವ ...ಗ ಎಲ್ಲಾ ದಂಧೆಗಳೂ ನಡೆಯುತ್ತಿವೆ.

...ನೈಸ್ ಕಂಪನಿಯ ದಗಲ್ಬಾಜಿತನವನ್ನು ...ರ್ಥಮಾಡಿಕೊಳ್ಳಲು ಮತ್ತೊಂದು ...ದಾಹರಣೆಯನ್ನು ನೋಡಬಹುದು. ...ಪೋರ್ರೇಟ್ ಸೆಂಟರ್ ಎಂದು ...ಮಲಾಗುವ ಮೊದಲನೇ ಟೌನ್‌ಶಿಪ್‌ಗಾಗಿ ಭೂಸ್ವಾಧೀನ ಪ್ರಕ್ರಿಯೆ ಶುರುವಾಗಿ ...ಗೆ 15 ವರ್ಷಗಳೇ ಕಳೆದಿವೆ. ಬೆಂಗಳೂರು ಹೊರವಲಯದಲ್ಲಿರುವ ...ಣಿಪುರ, ತಿಪ್ಪೂರು, ಶೀಗೆಹಳ್ಳಿ, ಲಿಂಗಾಪುರ ಮುಂತಾದ ಗ್ರಾಮಗಳ ...ಮಾರು 3500 ಎಕರೆ ಫಲವತ್ತಾದ ಭೂಮಿ ಈ ಯೋಜನೆಗೆ ...ಯಾಗಲಿದೆ. ಸರ್ಕಾರ ನೋಟಿಫಿಕೇಷನ್ ಹೊರಡಿಸಿದ ದಿನದಿಂದ ಈ ...ಗಳಲ್ಲಿ ಅಭಿವೃದ್ಧಿ ಚಟುವಟಿಕೆಗಳು ಕುಂಠಿತಗೊಂಡಿದ್ದು ರೈತರು ...ಷ್ಟಗಳಿಗೆ ಈಡಾಗಿದ್ದಾರೆ. ಕನಿಷ್ಟ ಹೊಸದಾಗಿ ಒಂದು ಬೋರ್‌ವೆಲ್ ...ದಿಸಿದರೂ ವಿದ್ಯುತ್ ಸಂಪರ್ಕ ಸಿಗುತ್ತಿಲ್ಲ, ಬ್ಯಾಂಕ್‌ಗಳಲ್ಲಿ ಸಾಲ ಸಿಗುತ್ತಿಲ್ಲ, ...ಸ ಮನೆಗಳ ನಿರ್ಮಾಣ ಮಾಡುವಂತಿಲ್ಲ, ಅಥವಾ ಇನ್ನಾವುದೇ ವಾಣಿಜ್ಯ ...ವಾ ಕೈಗಾರಿಕಾ ಚಟುವಟಿಕೆಗಳನ್ನು ನಡೆಸದಂತೆ ನಿರ್ಬಂಧಿಸಲಾಗಿದೆ. ...ದೇ ಈ ಯೋಜನೆಯಿಂದ ರೈತರಿಗೆ ಆಗುತ್ತಿರುವ ಲಾಭ.

ಈ ಗ್ರಾಮಗಳ ಭೂಮಿಗಳಿಗೆ ಬೆಲೆ ನಿಗದಿಪಡಿಸಲೆಂದು ಇಲ್ಲಿಗೆ ಎರಡು ...ರ್ಷಗಳ ಹಿಂದೆ ಬೆಂಗಳೂರು ಜಿಲ್ಲಾಧಿಕಾರಿ ನೇತೃತ್ವದಲ್ಲಿ ಒಂದು ಸಭೆ ...ಯಿತು. ಅಂತಿಮವಾಗಿ ಒಂದು ಎಕರೆ ಭೂಮಿಗೆ 41 ಲಕ್ಷ ಎಂದು ...ಯೇ ಘೋಷಿಸಿದರು. ಆದರೆ ಇದಕ್ಕೆ ರೈತರು ತೀವ್ರ ವಿರೋಧ ವ್ಯಕ್ತಪಡಿಸಿ ...ಯಿಂದ ಹೊರಬಂದರು. ಕಾರಣ ಈ ಭೂಮಿಗಳ ಮಾರುಕಟ್ಟೆ ಮೌಲ್ಯ ...ಷ್ಟು ಇದರ ಎರಡು ಪಟ್ಟಿದೆ.

ಮತ್ತೊಂದು ಕಡೆ ಖೇಣಿ ಕೂಡ ಈ ಬೆಲೆ ನಿಗದಿಯನ್ನು ಖಂಡತುಂಡವಾಗಿ ...ಡಿಸಿ ಇದನ್ನು ನಾನು ಸುತರಾಂ ಒಪ್ಪುವುದಿಲ್ಲವೆಂದು ಘೋಷಿಸಿದ. ಹೀಗೆ ...ರೆಗೆ 41 ಲಕ್ಷವೆಂದರೂ 3500 ಎಕರೆಗಳಿಗೆ 1435 ಕೋಟಿಗಳ ಪರಿಹಾರ ...ಡಬೇಕಾಗುತ್ತದೆ. ಖೇಣಿಯ ಲೆಕ್ಕಾಚಾರ ಏನಿದ್ದರೂ ಸರ್ಕಾರ 15 ವರ್ಷಗಳ ...ದೆ ತಿಳಿಸಿದ್ದಂತೆ ಎಕರೆಗೆ 90 ಸಾವಿರದಿಂದ 1.5 ಲಕ್ಷ ಫಿಕ್ಸ್ ಮಾಡಬೇಕಿತ್ತು ...ಬಹುದು. ಆದರೆ ಮಾನಗೆಟ್ಟ ಅಶೋಕ್ ಖೇಣಿ ಹೋದಕಡೆಯಲ್ಲೆಲ್ಲಾ ...ರುಕಟ್ಟೆ ಬೆಲೆಗಿಂತ ಡಬಲ್ ತ್ರಿಬಲ್ ಬೆಲೆ ಕೊಟ್ಟು ರೈತರನ್ನು ಉದ್ಧಾರ


ನೈಸ್ ರಸ್ತೆಯ ಮಗ್ಗುಲಲ್ಲೇ ಅಪಾರ್ಟ್‌ಮೆಂಟ್‌ಗಳು (ಒಳಚಿತ್ರ) ಅಬ್ರಹಾಂ

...ಮಾಡುತ್ತಿರುವುದಾಗಿ ತನ್ನ ಕೆಟ್ಟ ಕನ್ನಡದಲ್ಲಿ ಭಾಷಣ ಬಿಗಿಯುತ್ತಿದ್ದಾನೆ. ಆತನ ...ಳುಗಳು ಇಂಥಾ ಭಾಷಣಕ್ಕೆ ಚಪ್ಪಾಳೆ ತಟ್ಟಲು ಸಾವಿರಾರು ಸಂಖ್ಯೆಯಲ್ಲಿ ...ನರನ್ನು ಸೇರಿಸುತ್ತಲೇ ಇದ್ದಾರೆ.

ಆದರೆ ಈಗ ಈ ಭಾಗದ ರೈತರು ಎಚ್ಚೆತ್ತುಕೊಂಡಿದ್ದಾರೆ. ಖೇಣಿ ತಮ್ಮ ...ತಿಯವನೆಂದೋ ಅಥವಾ ನಮ್ಮ ಪಕ್ಷದ ಬೆಂಬಲಿಗನೆಂದೋ ಮರುಳಾಗಿದ್ದ ...ನರು ಇಂದು ಈತನ ನಿಜಬಣ್ಣವನ್ನು ಅರ್ಥಮಾಡಿಕೊಳ್ಳುತ್ತಿದ್ದಾರೆ. ಇಲ್ಲಿಗೆ ...ಮಾರು 12 ವರ್ಷಗಳ ಹಿಂದೆ ನಡೆದ ಸಾರ್ವಜನಿಕ ವಿಚಾರಣಾ ಸಭೆಯಲ್ಲಿ ...ಶೋಕ್ ಖೇಣಿಯ ಹಿಂಬಾಲಕರ ಮಾತುಗಳನ್ನು ಕೇಳಿ ಖೇಣಿಯ ಪರವಾಗಿ ...ಘೋಷಣೆ ಕೂಗಲೆಂದು ಇದೇ ಗ್ರಾಮದ ಜನರು ಬಂದಿದ್ದರು ಎಂಬುದನ್ನು ...ವು ಗಮನಿಸಬೇಕು.


ಹೀಗೆ ಹೇಳುತ್ತಾ ಹೋದರೆ ನೈಸ್ ಕರ್ಮಕಾಂಡ ಮುಗಿಯದ ಅಧ್ಯಾಯ. ...ಂದಲ್ಲಾ ಒಂದು ದಿನ ಜನರು ಎಚ್ಚೆತ್ತುಕೊಳ್ಳುತ್ತಾರೆ. ಕಾನೂನಿನ ಕಣ್ಣು ...ಡ ತೆರೆಯುತ್ತದೆ ಎಂಬುದಕ್ಕೆ ಇಂದಿನ ಲೋಕಾಯುಕ್ತ ಕೋರ್ಟ್ ಆದೇಶವೇ ...ಕ್ಷಿ.

ನೈಸ್‌ನ ಅಕ್ರಮಗಳಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೇ ಕಂಡು ...ಂದ ಹಿನ್ನೆಲೆಯಲ್ಲಿ ಮೂವರು ಮಾಜಿ ಮುಖ್ಯಮಂತ್ರಿಗಳು, ಹಲವಾರು ...ರಿಯ ಶ್ರೇಣಿಯ ಐಎಎಸ್ ತಿಮಿಂಗಿಲಗಳನ್ನೂ ಒಳಗೊಂಡಂತೆ ಎಲ್ಲರನ್ನೂ ...ನಿಖೆಗೆ ಒಳಪಡಿಸುವಂತೆ ಲೋಕಾಯುಕ್ತ ಎಡಿಜಿಪಿಯವರಿಗೆ ಆದೇಶಿಸಿದ್ದಾರೆ. ...ಪಿಯ ಪಟ್ಟಿಯಲ್ಲಿ ಅಶೋಕ್ ಖೇಣಿ, ಕಲ್ಯಾಣಿ ಗ್ರೂಪ್‌ನ ಬಾಬಾ ...ಲ್ಯಾಣಿ, ಮಾಜಿ ಮಂತ್ರಿ ಡಿಕೇಶಿ, ಆರ್‌ವಿ ದೇಶಪಾಂಡೆ ಮುಂತಾದವರ ...ಗ್ಗೆಯೂ ತನಿಖೆ ನಡೆಯಬೇಕಾಗಿದೆ. ಕನಿಷ್ಠ ನಾಲ್ಕು ಮಂದಿ ಡಿವೈಎಸ್‌ಪಿ ...ರ್ಜೆಯ ಅಧಿಕಾರಿಗಳ ನಾಯಕತ್ವದಲ್ಲಿ ತನಿಖಾ ತಂಡಗಳ ರಚನೆಯಾಗಬೇಕೆಂದೂ ...ಆದೇಶಿಸಲಾಗಿದೆ. ಇಂಥಾ ಚಾರಿತ್ರಿಕ ತೀರ್ಪು ಸ್ವಾಗತಾರ್ಹವಾದುದು. ಆದರೆ...?

...ಸ್ವತಂತ್ರ ಮಾಡದೆ, ಸಂಸ್ಥೆಯ ಹತ್ತಾರು ನಿಷ್ಠುರ ಲೋಕಾಯುಕ್ತ... ದಿನೇದಿನೇ ಸಂಸ್ಥೆಯನ್ನು ...ಅಧಿಕಾರಿಗಳನ್ನು ಎತ್ತಂಗಡಿ ಮಾಡು... ...ನಿರ್ವೀರ್ಯಗೊಳಿಸುವುದರಲ್ಲಿ ಸರ್ಕಾರ ಯಶಸ್ವಿಯಾಗಿದೆ. ಇತ್ತೀಚಿನ ... ...ಮುಖ್ಯದ ಕೇಸುಗಳು ದಿಕ್ಕು ತಪ್ಪುತ್ತಿವೆ ಎಂಬ ಭಾವನೆ ಸಾರ್ವಜನಿಕರಲ್ಲಿ ...ಬಲವಾಗಿ ಮೂಡುತ್ತಿದೆ. ಈ ಹಿನ್ನೆಲೆಯಲ್ಲಿ ಲೋಕಾಯುಕ್ತ ಸಂಸ್ಥೆ ಇಂಥಾ ...ತನಿಖೆಯನ್ನು ಸರಿದಿಕ್ಕಿನಲ್ಲಿ ನಡೆಸಲಾರದು ಎಂಬ ಅನುಮಾನವನ್ನು ಸಾಮಾಜಿಕ ...ಕಾರ್ಯಕರ್ತ ಅಬ್ರಹಾಂ ವ್ಯಕ್ತಪಡಿಸಿದ್ದಾರೆ. ಅವರ ಅನುಮಾನ ಸುಳ್ಳಾಗಲಿ ...ಎಂಬುದು ನಮ್ಮ ಹಾರೈಕೆ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಬಿಜೆಪಿಯಲ್ಲಿದ್ದರೆ ಹುಲಿ ಹೊರಬಿದ್ದರೆ ಇಲಿ!



ರಾಜ್ಯ ಬಿಜೆಪಿ ಪಕ್ಷದಲ್ಲಿ ಈಗ ಹೈ ಡ್ರಾಮಾ ನಡೆಯುತ್ತಿದೆ. ಅದೂ ದೆಹಲಿಯಲ್ಲಿರುವ ಹೈಕಮಾಂಡ್‌ನ ಸಮ್ಮುಖದಲ್ಲೇ!

"ಹೇಗಾದರೂ ಮಾಡಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ದಯವಿಟ್ಟು ಪಕ್ಷದಲ್ಲಿ ಉಳಿಸಿಕೊಳ್ಳಿ. ಅವರಿಗೆ ಯಾವುದಾದರೂ ಗೌರವದ ಸ್ಥಾನಮಾನ ನೀಡಿ" ಎಂದು ರಾಜ್ಯ ಬಿಜೆಪಿಯ ಕೆಲವು ಸದಸ್ಯರು ದೆಹಲಿಯಲ್ಲಿರುವ ಹೈಕಮಾಂಡ್‌ಗೆ ಮನವಿ ಸಲ್ಲಿಸಿದ್ದಾರೆ. ಈ ಕಮಿಟಿಯಲ್ಲಿರುವವರು ಸಾಮಾನ್ಯರಲ್ಲ, ಹಾಲಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಉಪಮುಖ್ಯಮಂತ್ರಿಗಳಾದ ಈಶ್ವರಪ್ಪ ಮತ್ತು ಆರ್.ಅಶೋಕ್, ಸಚಿವರಾದ ಬಸವರಾಜ ಬೊಮ್ಮಾಯಿ ಮತ್ತು ಸುರೇಶ್‌ಕುಮಾರ್. ಅಂದರೆ, ಇದನ್ನು ರಾಜ್ಯ ಬಿಜೆಪಿಯ ಹೈಕಮಿಟಿ ಎಂದು ಕರೆಯಬಹುದು.

ವಾಸ್ತವವಾಗಿ ಜಗದೀಶ್ ಶೆಟ್ಟರ್ ನೇತೃತ್ವದ ಈ ಸಮಿತಿ ಹೈಕಮಾಂಡ್‌ಗೆ ಮನವಿ ಸಲ್ಲಿಸುತ್ತಿರುವುದೇ ಯಡ್ಡಿಯ ಕಣ್ಣೊರೆಸುವ ತಂತ್ರವಷ್ಟೇ. ಬಿಜೆಪಿ ಪಕ್ಷದಲ್ಲಿ ತೆರೆಮರೆಯಲ್ಲಿ ಎಂತೆಂತಹ ರಾಜಕೀಯ ಆಟಗಳು, ಕುತಂತ್ರಗಳು ನಡೆಯುತ್ತಿವೆ ಎಂದರೆ ಅದನ್ನು ಯಾರೂ ನಂಬಲು ಸಾಧ್ಯವೇ ಇಲ್ಲ.

ಉದಾಹರಣೆಗೆ, ದೆಹಲಿಗೆ ಹೋಗುವ ಕೆಲವೇ ದಿನಗಳ ಮುನ್ನ ರಾಜ್ಯ ಬಿಜೆಪಿಯ ಅಧ್ಯಕ್ಷರೂ, ಉಪ ಮುಖ್ಯಮಂತ್ರಿಗಳೂ ಆಗಿರುವ ಈಶ್ವರಪ್ಪ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದೇನು ಗೊತ್ತೇ? "ಯಡಿಯೂರಪ್ಪನವರು ನಮ್ಮ ಪಕ್ಷದ ನಾಯಕ. ಪಕ್ಷದ ವರಿಷ್ಠರು ಅವರಿಗೆ ಮುಖ್ಯಮಂತ್ರಿ ಅಥವಾ ರಾಜ್ಯಾಧ್ಯಕ್ಷ ಸ್ಥಾನ ಹೀಗೆ ಯಾವುದೇ ಸ್ಥಾನಮಾನ ನೀಡಿದರೂ ನಮ್ಮದ್ಯಾರದೂ ಅಭ್ಯಂತರವಿಲ್ಲ. ದೆಹಲಿ ವರಿಷ್ಠರ ನಿರ್ಧಾರವನ್ನು ಪಕ್ಷದ ಎಲ್ಲ ನಾಯಕರು ಸ್ವಾಗತಿಸುತ್ತಾರೆ" ಎಂದು ಹೇಳಿದ್ದರು. ಈ ಹೇಳಿಕೆಯನ್ನು ಓದಿದ ಪಕ್ಷದ ಕಾರ್ಯಕರ್ತರು ಹಿರಿಯರೆಲ್ಲ ಪಕ್ಷದಲ್ಲಿರುವ ಭಿನ್ನಮತೀಯ ಚಟುವಟಿಕೆಗಳಿಗೆಲ್ಲ ಇತಿಶ್ರೀ ಹಾಕಿರಬಹುದು ಎಂದೇ ಭಾವಿಸಿದ್ದರು. ಬಹುಶಃ ಇದಾದ ಒಂದೆರಡು ದಿನಗಳಲ್ಲಿ ಯಡ್ಡಿಗೆ ಪಕ್ಷದಲ್ಲಿ ಯಾವುದಾದರೂ ಉನ್ನತ ಹುದ್ದೆಯನ್ನು ಹೈಕಮಾಂಡ್ ನೀಡಬಹುದು ಎಂದು ಯಡ್ಡಿಯ ಹಿಂಬಾಲಕರು ಹಗಲುಗನಸು ಕಾಣಲಾರಂಭಿಸಿದ್ದರು.

ಹೀಗೆ ಯಡ್ಡಿಯ ಪರವಾಗಿ ಹೇಳಿಕೆ ಈಶ್ವರಪ್ಪ ನೀಡಿದ ನಂತರ ಜಗದೀಶ್ ಶೆಟ್ಟರ್ ನೇತೃತ್ವದಲ್ಲಿ ಚೆಡ್ಡಿಗಳ ಹೈಕಮಾಂಡಿನ ಮನವೊಲಿಸುವ ಸಲುವಾಗಿ ಒಂದು ತಂಡ ದೆಹಲಿಗೆ ಹೋದಾಗ ಮತ್ತೆ ಬಿಜೆಪಿ ಕಾರ್ಯಕರ್ತರಲ್ಲಿ, ಅದರಲ್ಲೂ ವಿಶೇಷವಾಗಿ ಯಡ್ಡಿಯ ಅನುಯಾಯಿಗಳಲ್ಲಿ, ಹೊಸ ಹುರುಪು ಮತ್ತು ಹುಮ್ಮಸ್ಸು ಹುಟ್ಟಿತ್ತು. ಆದರೆ ದೆಹಲಿಯಲ್ಲಿ ವರಿಷ್ಠರನ್ನು ಭೇಟಿಯಾದ ನಂತರ ಪತ್ರಕರ್ತರು ಈಶ್ವರಪ್ಪನವರಿಗೆ ಫೋನಾಯಿಸಿ "ದೆಹಲಿ ವರಿಷ್ಠರಿಗೆ ಏನೆಂದು ಮನವಿ ಸಲ್ಲಿಸಿದಿರಿ?" ಎಂದು ಕೇಳಿದಾಗ ಅವರು ಕೊಟ್ಟ ಉತ್ತರ ಏನು ಗೊತ್ತೇ? "ಯಡಿಯೂರಪ್ಪನವರಿಗೆ ಬೇಕಾದರೆ ಚುನಾವಣಾ ಪ್ರಚಾರ ಸಮಿತಿಯ ಅಧ್ಯಕ್ಷ ಸ್ಥಾನವನ್ನು ಕೊಟ್ಟರೆ ನಮ್ಮದೇನೂ ಅಭ್ಯಂತರವಿಲ್ಲ ಎಂದು ಹೇಳಿದ್ದೇವೆ" ಎಂದರು. "ಅಲ್ಲ ಸರ್! ಮೊನ್ನೆ ನೀವೇ ತಾನೇ ಅವರಿಗೆ ರಾಜ್ಯಾಧ್ಯಕ್ಷ ಸ್ಥಾನ ಕೊಟ್ಟರೂ ನಮ್ಮದೇನೂ ಅಭ್ಯಂತರವಿಲ್ಲ ಎಂದು ಹೇಳಿದ್ರೀ?" ಎಂದು ನೆನಪಿಸಿದರೆ ಈಶ್ವರಪ್ಪನವರು "ಛೇ.. ಛೇ ಎಲ್ಲಾದರೂ ಉಂಟೇ? ಅವರಿಗೆ ಅಧ್ಯಕ್ಷ ಸ್ಥಾನ ಕೊಡಲು ಹೇಗೆ ಸಾಧ್ಯ?" ಎಂದು ನಗುನಗುತ್ತಾ ಉತ್ತರಿಸಿದರಂತೆ.

ಅಂದರೆ, "ನಾವು ಕೊನೆಯ ಕ್ಷಣದತನಕ ಯಡಿಯೂರಪ್ಪನವರನ್ನು ಪಕ್ಷದಲ್ಲಿ ಉಳಿಸಿಕೊಳ್ಳಲು ಭಗೀರಥ ಪ್ರಯತ್ನ ಮಾಡುತ್ತಲೇ ಇದ್ದೆವು. ಆದರೆ ಅವರು ನಮ್ಮ ಮಾತನ್ನು ನಿರ್ಲಕ್ಷಿಸಿ, ಹೊಸ ಪಕ್ಷವನ್ನು ಕಟ್ಟುತ್ತಿದ್ದಾರೆ" ಎಂಬ ಸಂದೇಶವನ್ನು ಬಿಜೆಪಿ ಕಾರ್ಯಕರ್ತರಿಗೆ ಮತ್ತು ರಾಜ್ಯದ ಜನತೆಗೆ ನೀಡುವ ಸಲುವಾಗಿ ಈಶ್ವರಪ್ಪ ಮತ್ತು ಚೆಡ್ಡಿಗಳ ಗ್ಯಾಂಗ್ ಇಂತಹದ್ದೊಂದು ನಾಟಕವನ್ನು ಆಡುತ್ತಿದ್ದಾರೆ. ಸಾರ್ವಜನಿಕವಾಗಿ "ಯಡಿಯೂರಪ್ಪನವರೇ ನಮ್ಮ ಪಕ್ಷದ ನಾಯಕರು" ಎಂದು ಈಶ್ವರಪ್ಪ ಹೇಳಿಕೆಗಳನ್ನು ನೀಡುತ್ತಿದ್ದರೂ ತೆರೆಮರೆಯಲ್ಲಿ ಮಾತ್ರ ಯಾವ ಕಾರಣಕ್ಕೂ ಯಡ್ಡಿ ಪಕ್ಷದ ರಾಜ್ಯಾಧ್ಯಕ್ಷರಾಗಬಾರದು ಎಂದು ನೋಡಿಕೊಳ್ಳುತ್ತಿದ್ದಾರೆ.



ಇಂತಹ ಮುಂದೊಂದು, ಹಿಂದೊಂದು ನಾಟಕದ ಒಂದು ಉದ್ದೇಶ ಪ್ರಬಲ ಲಿಂಗಾಯತ ಸಮುದಾಯ ಬಿಜೆಪಿ ಪಕ್ಷದ ಬಗ್ಗೆ ಅಪಾರ್ಥ ಮಾಡಿಕೊಳ್ಳಬಾರದು ಎಂಬ ತಂತ್ರ. ಯಾಕೆಂದರೆ ಲಿಂಗಾಯತರು ಬಿಜೆಪಿ ವಿರುದ್ಧ ಮುನಿಸಿಕೊಂಡರೆ ಯಡ್ಡಿಗೆ ಆ ಸಮುದಾಯದಲ್ಲಿ ಸಿಕ್ಕಾಪಟ್ಟೆ ಅನುಕಂಪ ಹುಟ್ಟುತ್ತದೆ. ಒಂದು ರೀತಿಯಲ್ಲಿ ಬಿಜೆಪಿ ಥಿಂಕ್ ಟ್ಯಾಂಕ್‌ನ ಈ ಲೆಕ್ಕಾಚಾರ ಈಗಾಗಲೇ ವರ್ಕ್ ಔಟ್ ಆಗಿದೆ. ಬಿಜೆಪಿ ಎಷ್ಟೇ ಬೇಡಿಕೊಂಡರೂ ಯಡ್ಡಿ ಅದನ್ನೆಲ್ಲ ಕಾಲಕಸದಂತೆ ನೋಡಿ ಹೊಸ ಪಕ್ಷ ಕಟ್ಟುತ್ತಿರುವ ಬಗ್ಗೆ ಯಡ್ಡಿ ನಿರೀಕ್ಷಿಸಿದ್ದಷ್ಟು ಅನುಕಂಪ ಜನರಿಗೆ ವ್ಯಕ್ತವಾಗುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಯಡ್ಡಿ ಈಗ ಅತ್ಯಂತ ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾರೆ. ಅವರ ರಾಜಕೀಯ ನಡೆ ಒಂದು ರೀತಿಯಲ್ಲಿ ಹುಲಿಯ ಮೇಲಿನ ಸವಾರಿಯಂತಾಗಿದೆ. ಈಗಾಗಲೇ ಮಾನಸಿಕವಾಗಿ ಬಿಜೆಪಿಯಿಂದ ದೂರವಾಗಿರುವ ಯಡ್ಡಿ ಇತ್ತೀಚೆಗೆ ಅನೇಕ ಬಾರಿ ಕಾಂಗ್ರೆ ಅಧಿನಾಯಕಿ ಸೋನಿಯಾ ಗಾಂಧಿಯವರನ್ನು ಹೊಗಳಿದ್ದಾರೆ.

ಇದಕ್ಕೆ ಅನೇಕ ಕಾರಣಗಳೂ ಇವೆ. ಅವುಗಳಲ್ಲಿ ಮುಖ್ಯವಾದದ್ದು ಯಡ್ಡಿ ವಿರುದ್ಧ ಇರುವ ಸಿಬಿಐ ಕೇಸ್. ಒಂದು ವೇಳೆ ಬಿಜೆಪಿ ನಾಯಕರ ಒತ್ತಾಯಕ್ಕೆ ಮಣಿದು ಯಡ್ಡಿ ಬಿಜೆಪಿಯಲ್ಲೇ ಉಳಿದುಕೊಂಡರೆ ಕಾಂಗ್ರೆ ಸಿಬಿಐ ಮುಖಾಂತರ ತನ್ನನ್ನು ಎಲ್ಲಿ ಬಂಧಿಸಿಬಿಡುತ್ತದೋ ಎಂಬ ಹೆದರಿಕೆಯಲ್ಲಿ ಯಡ್ಡಿ ಕಾಲ ಕಳೆಯುತ್ತಿದ್ದಾರೆ. ತನ್ನದೇ ಸಚಿವಸಂಪುಟದ ಸದಸ್ಯನಾಗಿದ್ದ ಜನಾರ್ದನ ರೆಡ್ಡಿ, ನೆರೆಯ ಆಂಧ್ರದ ಮಾಜಿ ಮುಖ್ಯಮಂತ್ರಿಯ ಮಗ ಜಗನ್ ಹೇಗೆ ತಿಂಗಳಾನುಗಟ್ಟಲೆ ಜೈಲಿನಲ್ಲಿ ಕಂಬಿ ಎಣಿಸುತ್ತಿದ್ದಾರೋ ಹಾಗೆ ತಾನೂ ಬಂಧನದಲ್ಲಿ ಕಾಲ ಕಳೆಯಬೇಕಾಗುತ್ತದೋ ಎಂಬ ಹೆದರಿಕೆ ಯಡ್ಡಿಯನ್ನು ಕಾಡುತ್ತಿದೆ. ಇತ್ತ ಬಿಜೆಪಿ ನಾಯಕರಿಂದ ಅವಮಾನ, ಅತ್ತ ಕಾಂಗ್ರೆಸ್ ದೆಸೆಯಿಂದ ಜೈಲು ಬಂಧನದ ಭೀತಿಯ ನಡುವೆ ಯಡ್ಡಿ ತತ್ತರಿಸುತ್ತಿದ್ದಾರೆ.

ಬಿಜೆಪಿಯ ಹೈಕಮಾಂಡಿನಲ್ಲಿ ಯಡ್ಡಿಗೆ ಇರುವ ಏಕೈಕ ಸ್ನೇಹಿತನೆಂದರೆ ಪಕ್ಷದ ರಾಷ್ಟ್ರಾಧ್ಯಕ್ಷ ನಿತಿನ್ ಗಡ್ಕರಿ. ಆದರೆ ಈಗ ಸ್ವತಃ ಗಡ್ಕರಿಯೇ ಭ್ರಷ್ಟಾಚಾರದ ಆರೋಪಗಳಲ್ಲಿ ಸಿಲುಕಿಕೊಂಡು ತನ್ನ ಸ್ಥಾನವನ್ನು ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಗಡ್ಕರಿಗೆ ಯಡ್ಡಿ ಬಗ್ಗೆ ಆಲೋಚಿಸಲು ಸಮಯವಾಗಲಿ, ವ್ಯವಧಾನವಾಗಲಿ ಎಲ್ಲಿದೆ?

ಯಡ್ಡಿ ಬಿಜೆಪಿ ತೊರೆಯುವುದು ಶತಸಿದ್ಧ. ಆದರೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇರುವತನಕ ತನ್ನ ಪಕ್ಷ ಸೇರುವ ಬಗ್ಗೆ ಬಾಯಿ ಬಿಡಬೇಡಿ, ಹಾಗೆ ಮಾಡಿದರೆ ನಿಮಗೆ ಬಿಜೆಪಿಯಲ್ಲಿ ತೊಂದರೆಯಾಗಬಹುದು ಎಂದು ತನ್ನ ಹಿಂಬಾಲಕರಿಗೆ ಯಡ್ಡಿ ಹೇಳಿರುವುದು ಈಗ ಗುಟ್ಟಾಗಿ ಉಳಿದಿಲ್ಲ. ಈ ಕಾರಣಕ್ಕಾಗಿಯೇ ಯಡ್ಡಿಯ ಹಿಂಬಾಲಕರು ಶೆಟ್ಟರ್ ಅವರ ಸಂಪುಟದಲ್ಲಿದ್ದರೂ ಯಡ್ಡಿಯ ಹೊಸ ಪಕ್ಷ ಸೇರುವ ಬಗ್ಗೆ ಈತನಕ ಎಲ್ಲೂ ಏನೂ ಹೇಳುತ್ತಿಲ್ಲ. ಆದರೆ ಒಂದು ಮಾತಂತೂ ಸತ್ಯ. ಒಮ್ಮೆ ಚುನಾವಣೆ ಘೋಷಣೆಯಾದ ತಕ್ಷಣ ಇವರೆಲ್ಲ ಬಿಜೆಪಿಗೆ ಗುಡ್‌ಬೈ ಹೇಳಿ, ಯಡ್ಡಿಯ ಕೈ ಬಲಪಡಿಸುವುದು ಗ್ಯಾರಂಟಿ.

ಚೆಡ್ಡಿಗಳ ಇಂತಹ ಆಟಗಳು ಇನ್ನೆಷ್ಟು ದಿನ. . .

● ಶೇಸ್ಸ

ತೊಲಗಲಿ ಎಂದು ಕಾಯುತ್ತಿರುವ ಹೈಕಮಾಂಡ್!

ಯಡಿಯೂರಪ್ಪನವರು ಬಿಜೆಪಿಯನ್ನು ಬಿಟ್ಟು ಹೊಸ ಪಕ್ಷವನ್ನು ಕಟ್ಟುವ ಬಗ್ಗೆ ಚೆಡ್ಡಿಗಳು ವಿಶ್ಲೇಷಿಸುತ್ತಿರುವುದು ಹೀಗೆ:

"ಯಡಿಯೂರಪ್ಪ ಒಂದು ವೇಳೆ ಬಿಜೆಪಿಯಲ್ಲೇ ಇದ್ದರೆ ಅವರು ಗಾಯಗೊಂಡ ಹೆಬ್ಬುಲಿಯಂತೆ ಯಾವಾಗಲೂ ಆರ್ಭಟಿಸುತ್ತಿರುತ್ತಾರೆ. ಆದರೆ ಅವರು ನಮ್ಮ ಪಕ್ಷದಿಂದ ಹೊರಗೆ ಹೋದರೆ ಇಲಿಯಂತೆ ಆಗುತ್ತಾರೆ. ಆ ಕಾರಣಕ್ಕಾಗಿ ಯಡಿಯೂರಪ್ಪನವರು ಬಿಜೆಪಿಯಿಂದ ಹೊರನಡೆದರೆ ನಮ್ಮ ಪಕ್ಷ ಸುಸೂತ್ರವಾಗಿ ನಡೆಯುತ್ತದೆ..."

ಈ ಕಾರಣಕ್ಕಾಗಿಯೇ ಯಡ್ಡಿ ಆದಷ್ಟು ಬೇಗ ಬಿಜೆಪಿಯಿಂದ ತೊಲಗಲಿ ಎಂದು ಆ ಪಕ್ಷದ ಹೈಕಮಾಂಡ್ ಕಾಯುತ್ತಿದೆ!!

ಸದ್ಯ ಅತ್ತ ಬಿಜೆಪಿಯಲ್ಲೂ ಅಲ್ಲ, ಇತ್ತ ಹೊಸ ಪಕ್ಷವೂ ಇಲ್ಲ ಎಂಬಂತಿರುವ ಯಡ್ಡಿಯ ಜೊತೆ ಲಕ್ಷ್ಮೀನಾರಾಯಣ ಮತ್ತು ಧನಂಜಯಕುಮಾರ್ ಎಂಬ ಚಾಲ್ತಿಯಲ್ಲಿರದ ನಾಣ್ಯಗಳನ್ನು ಬಿಟ್ಟರೆ ಬೇರೆ ಯಾರೂ ಇಲ್ಲ, ಇವರಿಬ್ಬರೊಂದಿಗೆ ಹೊಸ ಪಕ್ಷವನ್ನು ಕಟ್ಟುವುದು ಯಡ್ಡಿಗೆ ಸಾಧ್ಯವಿಲ್ಲ ಎಂಬುದು ಬಿಜೆಪಿ ನಾಯಕರಿಗೆ ಗೊತ್ತು. ಇವರಿಬ್ಬರಲ್ಲದೆ ಯಡ್ಡಿಗೆ ತನ್ನ ಸಂಪೂರ್ಣ ಬೆಂಬಲವನ್ನು ಸೂಚಿಸಿರುವವರು ಸಚಿವ ಸಿ.ಎಂ.ಉದಾಸಿ ಮಾತ್ರ. ಆದರೆ 75 ರ ಆಜುಬಾಜಿನಲ್ಲಿರುವ ವಯೋವೃದ್ಧ ಉದಾಸಿಯಿಂದಲೂ ಹೊಸ ಪಕ್ಷ ಕಟ್ಟಲು ಸಾಧ್ಯವೇ ಇಲ್ಲ ಎಂಬುದು ಕೂಡ ಎಲ್ಲರಿಗೂ ಗೊತ್ತಿರುವ ವಿಷಯ.

ಪಕ್ಷಾಂತರಿ ವಿ. ಸೋಮಣ್ಣನಿಗೆ ರಾಜಕೀಯವಾಗಿ ಪುನರ್ ಜನ್ಮ ನೀಡಿದ್ದು ಯಡ್ಡಿ. ಆದರೆ ಇವತ್ತು ಅದೇ ಸೋಮಣ್ಣ ಯಡ್ಡಿಯ ಜೊತೆ ಹೋಗಲು ಮನಸ್ಸು ಮಾಡುತ್ತಿಲ್ಲ. ಅಷ್ಟೇ ಏಕೆ, ಸದಾನಂದ ಗೌಡರನ್ನು ಮುಖ್ಯಮಂತ್ರಿ ಮಾಡಿದ ಸಂದರ್ಭದಲ್ಲಿ ಯಡ್ಡಿಯ ಜೊತೆಗೆ ಒಂದಿಷ್ಟು ಮುನಿಸಿಕೊಂಡಿದ್ದ ಬಸವರಾಜ್ ಬೊಮ್ಮಾಯಿ ತನ್ನ ಸಾಂಪ್ರದಾಯಿಕ ವೈರಿ ಜಗದೀಶ್ ಶೆಟ್ಟರ್‌ನ್ನು ಮುಖ್ಯಮಂತ್ರಿ ಮಾಡಿದ ನಂತರ ಸಂಪೂರ್ಣವಾಗಿ ಯಡ್ಡಿಯಿಂದ ದೂರವಾಗಿದ್ದಾರೆ.

ಹೀಗೆ ಯಡ್ಡಿಯ ಅನೇಕ ಅನುಯಾಯಿಗಳು ಒಂದೊಂದು ಕಾರಣಕ್ಕಾಗಿ ತಮ್ಮ 'ಪ್ರಶ್ನಾತೀತ' ನಾಯಕನಿಂದ ದೂರವಾಗುತ್ತಿರುವುದು ಬಿಜೆಪಿ ಹೈಕಮಾಂಡ್‌ಗೆ ಖುಷಿ ತಂದಿದೆ. ಆದರೂ ...ವುದನ್ನೂ ಲೆಕ್ಕಿಸದ ಯಡ್ಡಿ "ಕಾಂಗ್ರೆಸ್‌ನಿಂದ 15 ಶಾಸಕರು ನನ್ನ ಪಕ್ಷಕ್ಕೆ ಬರುತ್ತಾರೆ. ... ಶಾಸಕರು ನನ್ನೊಂದಿಗೆ ಸಂಪರ್ಕದಲ್ಲಿದ್ದಾರೆ" ಎಂದು ಹೇಳಿಕೊಂಡು ಜೆಡಿಎಸ್‌ನಿಂದಲೂ ಏಳು ಜನ ಶಾಸಕರು ನನ್ನೊಂದಿಗೆ ಸಂಪರ್ಕದಲ್ಲಿದ್ದಾರೆ" ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ.

ಮೊನ್ನೆ ಮೊನ್ನೆ ತನಕ ಜನನಾಯಕ, ಬಿಜೆಪಿಯ ಪ್ರಶ್ನಾತೀತ ಲೀಡರ್, ಲಿಂಗಾಯತರ ಪ್ರತಿನಿಧಿ ಎಂದೆಲ್ಲ ಅನಿಸಿಕೊಂಡು ಮೆರೆಯುತ್ತಿದ್ದ ಯಡ್ಡಿ ಈಗ ಏಕಾಂಗಿಯಾಗಿ ಕಾಣಿಸುತ್ತಿರುವುದು ವಿಚಿತ್ರವಾದರೂ ನಿಜ. . .

ಸಾಗರ: ಗಂಡಾಂತರದಲ್ಲಿ ಗಲೀಜು ಗೋ-ಪಾಲ!

ಸಾಗರದಲ್ಲಿ ವಿಧಾನಸಭಾ ಚುನಾವಣೆಯ ತುರಿಕೆ-ತರಲೆ ತುರುಸಿಂದ ಶುರುವಿಟ್ಟುಕೊಂಡಿದೆ. ಎಡಬಿಡಂಗಿ ಎಮ್ಮೆಲ್ಲೆ ಬೇಳೂರು ಗೋಪಾಲಕೃಷ್ಣ ಅಸ್ತಿತ್ವ ಉಳಿಸಿಕೊಳ್ಳಲು ಲಗಾಟೆ ಮೇಲೆ ಲಗಾಟೆ ಹೊಡೆಯುತ್ತಿದ್ದಾನೆ. ಆತನ ಖಾಸಾ ಸೋದರ ಮಾವ-ಕಾಂಗ್ರೆಸ್‌ನ ಹಿರಿಯಾಳು ಕಾಗೋಡು ತಿಮ್ಮಪ್ಪ ಅಳಿಯನ "ಆಟ" ಮುಗಿಸಲು ಹಠದಿಂದ ಕ್ಷೇತ್ರದ ಉದ್ದಗಲಕ್ಕೆ ಓಡಾಡುತ್ತಿದ್ದಾರೆ. ಈ ಮಾವ-ಅಳಿಯರ ಜಿದ್ದಾಜಿದ್ದಿ ಮಧ್ಯೆ ತೂರಿಕೊಂಡಿರುವ ಯಡ್ಡಿ ಮಹಾತ್ಮನ "ಪಬ್ಲಿಕ್ ಲಾಯರ್" ಕೆ. ದಿವಾಕರ್ ಯಾವ ಪಕ್ಷದಿಂದಾದರೂ ಸರಿಯೇ ಶಾಸಕನಾಗಲೇಬೇಕೆಂಬ ಚಟದಿಂದ ಚಮತ್ಕಾರ ನಡೆಸಿದ್ದಾರೆ.

ಬೇಳೂರು ಭಂಡಾಟ

ಸಾಗರ ಎಂಬ ಹೋರಾಟದ ನೆಲದಿಂದ ಎರಡೆರಡು ಬಾರಿ ಗೆದ್ದು ಶಾಸಕನಾದವನು ಉಂಡಾಡಿಗುಂಡನಂಥ ಬೇಳೂರು ಗೋಪಾಲಕೃಷ್ಣ. ಯಾವುದೇ ಹೋರಾಟ, ಸೈದ್ಧಾಂತಿಕ ಬದ್ಧತೆಯಿಲ್ಲದ ಈತ ಸತತ ಎರಡು ಬಾರಿ ಆಯ್ಕೆಯಾಗಿದ್ದು ಆತನ ಯೋಗ್ಯತೆಯಿಂದಲ್ಲ; ಸಂದರ್ಭದ ಪಿತೂರಿಯಿಂದ. ತನ್ನ ಈಡಿಗ ಸಾಮ್ರಾಜ್ಯದ ಎದುರಾಳಿ ಕಾಗೋಡು ತಿಮ್ಮಪ್ಪನ ಅಕ್ಕನ ಮಗನೆಂಬ ಏಕೈಕ "ಅರ್ಹತೆ"ಯಿಂದ 'ಬಂ' ಈ ಗೋ-ಪಾಲನನ್ನು ಸಾಗರಕ್ಕೆ ತಂದು ಶಾಸಕನ ಮಾಡಿದ್ದರು. 'ಬಂ'ಗೆ ಕಾಗೋಡು ತಿಮ್ಮಪ್ಪನನ್ನು ಆತನ ಸೋದರಿಯ ಮಗನೆದುರೇ ಸೋಲಿಸುವ ಜಿದ್ದಿತ್ತು. ಇದಕ್ಕೆ ಕಾರಣ ಕಾಗೋಡು ತನ್ನ ಮಗ "ಕುಬಂ"ನನ್ನು ಬಗಲಲ್ಲಿಟ್ಟುಕೊಂಡು ರಾಜಕಾರಣ ಮಾಡುತ್ತಾರೆಂಬ ಸಿಟ್ಟು 'ಬಂ'ಗಿತ್ತು. ಕುಬಂನನ್ನು ದಾಳವಾಗಿಸಿಕೊಂಡು 'ಬಂ' ವಿರುದ್ಧ ತಂತ್ರಗಾರಿಕೆ ಹೆಣೆದಿದ್ದರು ಕಾಗೋಡು ಅಂದು.

ಮೊದಲ ಸಲ 'ಬಂ' ಬಲದಿಂದ ಎಮ್ಮೆಲ್ಲೆಯಾದ ಬೇಳೂರು ಗೋಪಾಲ ಎರಡನೇ ಬಾರಿ ಶಿವಮೊಗ್ಗ ಜಿಲ್ಲೆಯಲ್ಲಿ ಯಡ್ಡಿ ಸಿಎಂ ಆಗ್ತಾರೆಂದು ಬಿಜೆಪಿ ಪರ ಎದ್ದಿದ್ದ ಅಲೆಯಲ್ಲಿ ಗೆದ್ದಿದ್ದ. ಎರಡು ಬಾರಿ ಶಾಸಕನಾದರೂ ಈತ ಕ್ಷೇತ್ರದ ಋಣ ತೀರಿಸಲು ಮಾಡಿದ್ದೇನೂ ಇಲ್ಲ. ಒಂದಿಷ್ಟು ಪುಂಡ ಹುಡುಗರ ದಂಡು ಕಟ್ಟಿಕೊಂಡು ಥೇಟ್ 'ಬಂ' ಸ್ಟೈಲಿನ ರಾಜಕಾರಣ ಮಾಡಿದ ಗೋಪಾಲ ಕಂಡ-ಕಂಡಲ್ಲಿ ಕೈ-ಬಾಯಿ ಹಾಕಿ ಕಾಸು ಭರ್ಜರಿ ಬಾಚಿಕೊಂಡ. 'ಬಂ'ರ ಮತ್ತೊಂದು ಕೊಳಕು ಪ್ರಾಡಕ್ಟ್ ಹರತಾಳು ಹಾಲಪ್ಪನನ್ನು ಯಡ್ಡಿ ಮಂತ್ರಿ ಮಾಡಿದ್ದು ಗೋಪಾಲನಿಗೆ ಸಹಿಸಲಾಗಲಿಲ್ಲ. 'ಬಂ'-ಕಾಗೋಡುಗಳಂತೆ ಯಡ್ಡಿಯೂ ರಕ್ತ ಸಂಬಂಧಿಗಳನ್ನೇ ಎತ್ತಿಕಟ್ಟಿ ಕಂತ್ರಿ ರಾಜಕಾರಣ ಮಾಡಿದ್ದರು. 'ಬಂ' ಮಕ್ಕಳನ್ನು ಸೋಲಿಸಿ ಸೊರಬದಲ್ಲಿ ಗೆದ್ದಿದ್ದ 'ಬಂ' ಹೆಂಡತಿಯ ಸೋದರಿಯ ಮಗನಾದ ಹರತಾಳು ಹಾಲಪ್ಪನನ್ನು ಮಂತ್ರಿ ಮಾಡಿದ್ದರು. ತನ್ಮೂಲಕ 'ಬಂ' ಮೇಲಿನ ದ್ವೇಷ ಸಾಧಿಸಿದ್ದರು.

ಎರಡನೇ ಸಲ ಶಾಸಕನಾಗುತ್ತಿದ್ದಂತೆಯೇ ಪೊಕ್ಕು ಪುಢಾರಿ ಗೋಪಾಲನಿಗೆ ನೆಲ-ಮುಗಿಲು ಎರಡೂ ಕಾಣದಾಯ್ತು. ಒಂಥರಾ ಠೇಂಕಾರದಿಂದ ಹಾರಾಡತೊಡಗಿದ. ಆತನಿಗೆ ನಾಲಿಗೆ ಮೇಲೆ ಹಿಡಿತವೇ ಇರಲಿಲ್ಲ. ಹೀಗಾಗಿ ಆತನಿಗೆ ಸಾಗರದ ಜನ ಹೊಲಸು ಬಾಯಿ ಗೋ-ಪಾಲ ಎಂದು ಅಡ್ಡ ಹೆಸರಿಟ್ಟರು. ಮಂತ್ರಿಗಿರಿ ಕೊಡದ ಯಡ್ಡಿ ವಿರುದ್ಧ ಭಿನ್ನಮತ ನಡೆಸಿದ ಆತ ಶಾಸಕತ್ವ ಕಳಕೊಂಡು ಹತ್ತಾರು ತಿಂಗಳು ಅತೃಪ್ತ ಆತ್ಮದಂತಾಗಿ ಅಂಡಲೆದ. ಕೊನೆಗೆ ಯಡ್ಡಿ ಪ್ರಸಾದ ತಿಂದು ಆತನ ಪಾದಕ್ಕೇ ಶರಣಾದ. ಆಗಾತನಿಗೆ ಗಲೀಜು ಗೋ-ಪಾಲ ಎಂಬ ಕುಖ್ಯಾತಿ ಸಾಗರದಲ್ಲಿ ಬಂದುಬಿಟ್ಟಿತ್ತು.

ರದ್ದಾಗಿದ್ದ ಶಾಸಕಗಿರಿಗೆ ಸುಪ್ರೀಂಕೋರ್ಟ್‌ನಿಂದ ಜೀವದಾನ ಸಿಕ್ಕಾಗ ಈ ಗೋಪಾಲ ಹೆಲಿಕಾಪ್ಟರ್‌ನಲ್ಲಿ ಸಾಗರದ ಮೇಲೆ 3-4 ಸುತ್ತು ಹಾಕಿ ಲ್ಯಾಂಡ್ ಆಗುವ ಅಗ್ಗದ ಗಿಮಿಕ್ ನಡೆಸಿ ಹಾಸ್ಯಾಸ್ಪದನಾಗಿದ್ದ. ಜನರ ಮರುಳು ಮಾಡಲು ಮಾಡಬಾರದ್ದೆಲ್ಲ ಮಾಡುವ ಗೋಪಾಲನಿಗೆ ಕ್ಷೇತ್ರದ ಬೇಕುಬೇಡ ಮಾತ್ರ ಅಸಹ್ಯ ಮೂಡಿಸಿದರು. ಶಾಸಕನಾಗಿದ್ದೇ ಮಂತ್ರಿಯಾಗಲಿಕ್ಕೆ, ಅಡ್ಡ ಕಸುಬಿಂದ ಕಾಸು ಮಾಡಲಿಕ್ಕೆ, ದಾದಾಗಿರಿಯಿಂದ ಜನರನ್ನು ಕಾಡಲಿಕ್ಕೆ ಎಂದು ದೃಢವಾಗಿ ಭಾವಿಸಿದ್ದ ಈ ನಾಲಾಯಕ್ ಸಾಗರಕ್ಕೆ ಎಂಟು ವರ್ಷದಿಂದ ಶಾಪದಂತಾಗಿ ಹೋಗಿದ್ದಾನೆ. ಒಣಪ್ರತಿಷ್ಠೆಗಾಗಿ ಈ ಗೋಪಾಲ ಮತ್ತು ಆತನ ಪರಮಶತ್ರು ಹರತಾಳು ಹಾಲಪ್ಪ ನಡುಬೀದಿಯಲ್ಲೇ ಕಚ್ಚಾಡಿ ಸಾಗರ, ಸೊರಬದ ಜನರಲ್ಲಿ ಅಸಹ್ಯ ಮೂಡಿಸಿದ್ದರು. ಈ ದಗಲುಬಾಜಿ ಗೋಪಾಲಕೃಷ್ಣ ಈಗ ಮತ್ತೆ ಶಾಸಕನಾಗಲು ತರಹೇವಾರಿ ಕಸರತ್ತು ಮಾಡುತ್ತಿದ್ದಾನೆ. ಜನ ಈ ಸಲ ಅಷ್ಟು ಸುಲಭಕ್ಕೆ ತನಗೆ ಮತ ಹಾಕುವುದಿಲ್ಲ ಎಂಬುದು ಗೊತ್ತಾಗಿರುವ ಗೋಪಾಲನಿಗೆ ನಡುಕ ಶುರುವಾಗಿದೆ. ಒಂದು ಕಾಲು ಬಿಜೆಪಿಯಲ್ಲಿ, ಮತ್ತೊಂದು ಕಾಲು ಜೆಡಿಎಸ್‌ನಲ್ಲಿ, ಒಂದು ಕೈ ಯಡ್ಡಿ ಅಂಗಳದಲ್ಲಿ, ಇನ್ನೊಂದು ಕೈ ತನ್ನ ತಲೆ ಮೇಲೆ ಇಟ್ಟುಕೊಂಡು ಚಡಪಡಿಸುತ್ತಿರುವ ಈ ಅತಂತ್ರ ಆಸಾಮಿಗೆ ಯಾವ ಪಕ್ಷದಿಂದ ಚುನಾವಣೆಗೆ ನಿಲ್ಲಬೇಕೆಂಬುದೇ ತೋಚುತ್ತಿಲ್ಲ, ಪಾಪ.

ಯಡ್ಡಿ ಈ ಗೋಪಾಲನನ್ನು ನಂಬುವುದಿಲ್ಲ, ಈಶ್ವರಿ ಬಗ್ಗೆ ಈತನಿಗೆ ವಿಶ್ವಾಸವಿಲ್ಲ, ಬಿಜೆಪಿ ಟಿಕೆಟ್ ಸಿಗುತ್ತದೆಂಬ ನಿರೀಕ್ಷೆಯೂ ಇಲ್ಲ, ಹಾಗಾಗಿ ಆತ ಜೆಡಿಎಸ್ ಸಹವಾಸ ಒಳಗೊಳಗೇ ನಡೆಸಿದ್ದಾನೆ. 'ಬಂ' ತೀರಿಕೊಂಡಾಗ ಮಧು ಬಂಗೆ ಈತ ನೆರವಾಗಿದ್ದ. ಶಾಸಕತ್ವದಿಂದ ಉಚ್ಚಾಟಿತನಾದಾಗ ಜೆಡಿಎಸ್‌ನ ಮಣ್ಣಿನ ಮೊಮ್ಮಗ ಕುಮ್ಮಿಯ ನಿಕಟ ನಂಟು ಸಾಧಿಸಿದ್ದ. ಈಗಲೂ ಮಧು ಬಂ ಜತೆಗಾತ ಮಧುರ ಸಂಬಂಧ ಇಟ್ಟುಕೊಂಡಿದ್ದಾನೆ. ಮೊನ್ನೆ ನಡೆದ 'ಬಂ'ರ 80 ನೇ ಹುಟ್ಟುಹಬ್ಬದಲ್ಲಿ ಈತ ಮಧುನ ಪಕ್ಕದಲ್ಲೇ ಇದ್ದ. ಇದೆಲ್ಲ ಲಿಂಕು ಗಮನಿಸಿದರೆ ಗೋ-ಪಾಲ ಜೆಡಿಎಸ್‌ನಿಂದ ಸ್ಪರ್ಧಿಸುವ ಸ್ಕೆಚ್ ಹಾಕಿರುವುದು ಸ್ಪಷ್ಟವಾಗುತ್ತದೆ.

ಆದರೆ ಜೆಡಿಎಸ್‌ಗಿಂತ ಬಿಜೆಪಿ ಬೇಸೇ ಶಿವಮೊಗ್ಗ-ಸಾಗರದಲ್ಲಿ ಭದ್ರವಾಗಿದೆ ಎಂಬುದೇ ಗೋ-ಪಾಲನ ಲೆಕ್ಕಾಚಾರ; ಹಾಗಾಗಿ ಒಮ್ಮೊಮ್ಮೆ ಬಿಜೆಪಿಯೇ ಬೆಟರ್ ಅಂತನ್ನಿಸುತ್ತದೆ ಆತನಿಗೆ. ಈಶ್ವರಿಯ ಸಂಪ್ರೀತಗೊಳಿಸುವ ಯೋಚನೆಯೂ ಆಗಾಗ ಆತನ ಖಾಲಿ ತಲೆಯಲ್ಲಿ ಮೊಳೆಯುತ್ತವೆ. ಒಟ್ಟಿನಲ್ಲಿ ಗೋ-ಪಾಲನಿಗೆ ಯಾವ ಪಕ್ಷದ ಟಿಕೆಟ್ಟೂ ಖಾತ್ರಿಯಿಲ್ಲ; ಯಾವ ಪಾರ್ಟಿಯಿಂದ ನಿಂತರೂ ಸೋಲು ನಿಕ್ಕಿ. ಇದು ಆತನಿಗೂ ಅರ್ಥವಾಗಿದೆ. ಹಾಗಾಗಿ ಪಕ್ಕಾ ವ್ಯಾಪಾರಿ ರಾಜಕಾರಣಿಯಾದ ಈತ ಹಣ ಬಿಚ್ಚುತ್ತಿಲ್ಲ, ಸೋಲಿನ ಸುಳಿಯಲ್ಲಿರುವ ಈತ ಗಂಟು ಉಳಿಸಿಕೊಳ್ಳುವ ಅಂತಿಮ ತೀರ್ಮಾನಕ್ಕೆ ಬಂದಿದ್ದಾನೆ.

"ಕಾಗೋಡು" ಕಾಲ

ಸಮಾಜವಾದಿ ಹಿನ್ನೆಲೆ-ಜನಪರ ಹೋರಾಟದ ಬದ್ಧತೆಗಳಿರುವ ಕಾಗೋಡು ತಿಮ್ಮಪ್ಪ (ಕಾತಿ) ನಾಮರ್ಧ ಗೋ-ಪಾಲನಿಗಿಂತ ಸಾವಿರ ಪಾಲು ಉತ್ತಮ. ಇದ ಸಾಗರದ ಮಂದಿಗೆ ಈಗ ಮನದಟ್ಟಾಗಿದೆ. ತಾವು ಕೆಲಸಗಾರ-ನಿಷ್ಠುರ ಧ್ವನಿಯ ಕಾಗೋಡುರನ್ನು ಸೋಲಿಸಿ ತಪ್ಪು ಮಾಡಿದ್ದೇವೆಂಬ ಅರಿವು ಸಾಗರದ ಮಂದಿಗೆ ಆಗಿದೆ. ಹಾಗಾಗಿ ಮತ್ತೆ ಕಾಗೋಡು ಕಾಲ ಶುರುವಾಗುವ ಸಕಲ ಸೂಚನೆ ಸಾಗರ ಕ್ಷೇತ್ರದ ಉದ್ದಗಲಕ್ಕೆ ಗೋಚರಿಸುತ್ತಿದೆ. 80 ರ ಹರೆಯದ ಆಸುಪಾಸಿನಲ್ಲಿ ಇರುವ ಕಾಗೋಡು ಕೂಡ ನಿಜವಾದ ಜನನಾಯಕನಂತೆ ನಿಯತ್ತಿನಿಂದ-ಹುರುಪಿನಿಂದ ಕ್ಷೇತ್ರದಾದ್ಯಂತ ಪಕ್ಷ ಕಟ್ಟುತ್ತ ಓಡಾಡುತ್ತಿದ್ದಾರೆ.

ಕಾಗೋಡು ಸತತ ಎರಡು ಬಾರಿ ಅಯೋಗ್ಯ ಅಳಿಯ ಗೋ-ಪಾಲನ ಎದುರು ಸೋತರೂ ಜನರಿಗೆ ಬೆನ್ನು ತಿರುಗಿಸಿ ಹೋದವರಲ್ಲ, ಜನರ ಸಮಸ್ಯೆಗಳಾದ ಬಗರಹುಕುಂ ಸಾಗುವಳಿ ಬಗ್ಗೆ, ಸಾಗರದ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಕಳಕಳಿಯಿಂದ ಹೋರಾಡುತ್ತಲೇ ಇದ್ದರು. ಕಾಂಗ್ರೆಸ್‌ನ್ನು ಕ್ಷೇತ್ರದಲ್ಲಿ ಸಾಯಲು ಆತ ಎಂದೂ ಬಿಡಲಿಲ್ಲ, ಬಿಜೆಪಿಯ ಬಣ್ಣಗಾರ ಗೋ-ಪಾಲನ ಆಟಾಟೋಪ ಕಂಡಾಗೆಲ್ಲ ಜನರಿಗೆ ತಾವು ಸಮರ್ಥ ಶಾಸಕನಾಗಿದ್ದ ಕಾಗೋಡರನ್ನು ಮಿಸ್ ಮಾಡಿಕೊಂಡಿದ್ದು ಅರಿವಿಗೆ ಬರುತ್ತಿತ್ತು, ಕಾಗೋಡು ಮಾಡಿದ ಅಭಿವೃದ್ಧಿ ಕೆಲಸಗಳು ಕಣ್ಮುಂದೆ ಬರುತ್ತಿತ್ತು. ಕಾಗೋಡು ಮತ್ತು ಕೋತಿ (ಗೋಪಾಲ)ಗಳಲ್ಲಿ ಯಾರು ಹಿತವರು ಸಾಗರಕ್ಕೆ ಎಂಬುದು ಜನರಿಗೆ ಗೊತ್ತಾಗಿದೆ.

ಹಾಗೆ ನೋಡಿದರೆ ಸಾಗರ-ಹೊಸನಗರ ಕ್ಷೇತ್ರದಲ್ಲಿ ಕಾಗೋಡು ಅಲೆ ಈಗಲೇ ಎದ್ದಿದೆ. ಹೊಸನಗರ ಏರಿಯಾದ ಕಾಂಗ್ರೆಸ್‌ನಲ್ಲಿದ್ದ ವೈಮನಸ್ಸು- ಗುಂಪುಗಾರಿಕೆಗಳನ್ನು ಕಾಗೋಡು ಹೋಗಲಾಡಿಸಿದ್ದಾರೆ. ಮಾಜಿ ಶಾಸಕ ಸ್ವಾಮಿರಾವ್, ನಾರಾಯಣಪ್ಪರಂಥವರು ಕಾಗೋಡು ಗೆಲ್ಲಿಸುವ ತೀರ್ಮಾನಕ್ಕೆ ಬಂದಿದ್ದಾರೆ. ಕಳೆದ ಬಾರಿ ಬರೀ 1,700 ಮತದಂತರದಿಂದ ಸೋತಿದ್ದ ಕಾಗೋಡು ಅವರ ಕಾಂಗ್ರೆಸ್ ಈಗ ಬಲಾಢ್ಯವಾಗಿದೆ. ಕ್ಷೇತ್ರದ ಬಹುಸಂಖ್ಯಾತ ಈಡಿಗರಿಗೆ ಕಾಗೋಡು ತರಹದ ಹಿರಿಯರ ಅನಿವಾರ್ಯತೆಯ ಅರಿವಾಗಿದೆ. ದೀವರ ಧೀರನಾಗಿದ್ದ 'ಬಂ' ನಿರ್ಗಮನದ ನಂತರ ಆ ಸಮುದಾಯ ಅನಾಥಸ್ಥಿತಿಯಲ್ಲಿದೆ. ಕುಬಂ-ಮಧುಬಂಗಳಿನ್ನೂ ಎಳಸು. ನಾಯಕನಾಗಿ ಬೆಳೆಯಬಹುದೆಂದು ಭಾವಿಸಿದ್ದ ಹಾಲಪ್ಪ ರೇಪ್ ಕೇಸ್‌ನಲ್ಲಿ ಸಿಕ್ಕಿ ನಿರ್ನಾಮ ಆಗಿಹೋಗಿದ್ದಾನೆ; [illegible] ಗೋ-ಪಾಲನಿ[illegible] ...ಳೂರು [illegible] ಸಮುದಾಯ ಪ್ರತಿನಿಧಿಸುವ ಯೋಗ್ಯತೆಯೂ ಇಲ್ಲ, ಇಂಥ ಬಿಕ್ಕಟ್ಟಿನ ಕಾಲದಲ್ಲಿ ದೀವರಿಗೆ ಕಾಗೋಡು ಎಂಬ ಸೈದ್ಧಾಂತಿಕ ಬದ್ಧತೆಯ ಅನುಭವಿಯ ಅನಿವಾರ್ಯತೆ ಉಂಟಾಗಿದೆ; ಕಾಗೋಡು ತಮ್ಮನ್ನು ಕಾಪಾಡಬಲ್ಲ ಎಂಬ ನಂಬಿಕೆ ಮೂಡಿದೆ.

ಕ್ಷೇತ್ರದೊಳಗೆ ಜಾತಿ ಸಮೀಕರಣ, ಆ್ಯಂಟಿ ಗೋ-ಪಾಲ ಅಲೆ, ಕಾಗೋಡರ ವೈಯಕ್ತಿಕ ಚರಿಷ್ಮಾಗಳು ಕಾಂಗ್ರೆಸ್‌ಗೆ ಪ್ಲಸ್ ಆಗಿದೆ. ಗೋ-ಪಾಲನ ತೋಳ್ಬಲದ ಪುಂಡರ ಟೀಮು ಒಡೆದಿದೆ; ಯಡ್ಡಿ ಆತನ ವಿರುದ್ಧ ತಿರುಗಿಬಿದ್ದಿದ್ದಾರೆ; ತನ್ನನ್ನು ರೇಪ್ ಕೇಸ್‌ನ ಖೆಡ್ಡಾಕ್ಕೆ ಹಾಕಿದ್ದೇ ಈ ಗೋ-ಪಾಲ ಎಂಬ ಸಿಟ್ಟಿನಿಂದ ಹರತಾಳು ಹಾಲಪ್ಪ ಕೊತ-ಕೊತ ಕುದಿಯುತ್ತಿದ್ದಾನೆ. ಸ್ವ-ಜಾತಿ ದೀವರಿಗೆ ಗೋ-ಪಾಲ ದಂಡಪಿಂಡ ಎಂಬುದು ಖಾತ್ರಿಯಾಗಿದೆ. ಬಿಜೆಪಿಯಲ್ಲಿ ಕಾಗೋಡರನ್ನು ಎದುರಿಸುವ ಕ್ಯಾಂಡಿಡೇಟೇ ಇಲ್ಲ. ಇದೆಲ್ಲ ನೋಡಿದರೆ ಕಾಗೋಡು ಗೆಲ್ಲುವ ವಾತಾವರಣ ಕ್ಷೇತ್ರದಲ್ಲಿ ಹದಗೊಂಡಿದೆ ಎಂದೆನಿಸುತ್ತದೆ.

ದಿವಾಕರ ಎಂಟ್ರಿ


ಕಾಂಗ್ರೆಸ್‌ನಲ್ಲಿ ಟೀಮ್ ವರ್ಕ್ ಆಗುತ್ತಿದೆ. ಅಪರೂಪದ ಒಗ್ಗಟ್ಟು ನೆಲೆಸಿದೆ. ಇದಕ್ಕೆ ಸಮಾನಾಂತರವಾಗಿ ಬಿಜೆಪಿ ಮುರಿದ ಮನೆಯಾಗಿದೆ. ಕಮ್ಯುನಲ್ ಆಟಗಳು ಬಿಜೆಪಿಗೆ ಮುಳುವಾಗಿದೆ. ಜೆಡಿಎಸ್‌ಗೆ ನೆಲೆ-ಬೆಲೆಯೇ ಸಾಗರ ಕ್ಷೇತ್ರದಲ್ಲಿಲ್ಲ. ಈ ದೊಡ್ಡ ಪಾರ್ಟಿಗಳ ಜತೆ ಸೆಣಸಲು ರಾಮುಲುನ ಬಿಎಸ್‌ಆರ್, ಯಡ್ಡಿಯ ಕೆಜೆಪಿಗಳು ಹವಣಿಸುತ್ತಿವೆ. ಯಡ್ಡಿಯ ಪರಮಾಪ್ತ ಕೆ. ದಿವಾಕರ್ ಎಂಬ "ಹೆಸರು ವಾಸಿ" ವಕೀಲ ಕಂ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರು ಒಂದು ಕೈ ನೋಡುವ ಉಮೇದಿಯಲ್ಲಿ ಅಲ್ಲಲ್ಲಿ ಅಭಿಮಾನಿಗಳ ಸಭೆ-ಕೂಟ ನಡೆಸುತ್ತಿದ್ದಾರೆ.


ಯಡ್ಡಿಯ ಹುಚ್ಚಾಟಗಳನ್ನೆಲ್ಲ ಟಿವಿ ಚಾನೆಲ್‌ಗಳ ಚಾಟ ಶೋಗಳಲ್ಲಿ ನಿರ್ಲಜ್ಜವಾಗಿ ಸಮರ್ಥಿಸಿಕೊಳ್ಳುವ ಸ್ವಾಮಿನಿಷ್ಠೆ ಇನಾಮಾಗಿ ಆತನಿಗೆ ಸಿಎಂರ ಕಾನೂನು ಸಲಹೆಗಾರ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷತೆಯ ಕ್ಯಾಬಿನೆಟ್ ರ‍್ಯಾಂಕ್ ಸಿಕ್ಕಿತ್ತು. ಈ ದಿವಾಕರ್‌ಗೆ ಎಮ್ಮೆಲ ಆಗಲಿಕ್ಕೆ ಆಪಕ್ಷ ಈಪಕ್ಷ ಎಂದೇನಿಲ್ಲ. ಯಾವ ಪಾರ್ಟಿಯಾದರೂ ಸೈ. ಆದರೆ ಆತನ ಮೊದಲ ಆದ್ಯತ ಜನಿವಾರ ಸಿದ್ಧಾಂತದ ಬಿಜೆಪಿ. ಎರಡನೆಯದು ಯಡ ಪಡೆ; ಅವೆರಡರಲ್ಲೂ ಛಾನ್ಸ್ ಸಿಗದಿದ್ದರೆ ಶ್ರೀರಾಮುಲುನ ಗಣಿಕಳ್ಳರ ಗ್ಯಾಂಗ್ ಆದರೂ ಅಡ್ಡಿ ಇಲ್ಲ. ಯಾರು ಟಿಕೆಟ ಮತ್ತು ಒಂದಿಷ್ಟು ಕಾಸು ಕೊಡುತ್ತಾರೋ ಅತ್ತ ದಿವಾಕರ ಹೋಗುತ್ತಾರೆ. ಹಾಗಂತ ಆತ ತನ್ನ ಮೀಟಿಂಗ್‌ಗೆ ಬರುವ ಮಂದಿ ಮುಂದೆಯೇ ಘೋಷಿಸಿಕೊಂಡಿದ್ದಾರೆ. ಸಾಗರದ ಸ್ವಜಾತಿ ಬ್ರಾಹ್ಮಣರ ದೊಡ್ಡ ಮೊತ್ತದ ಮತ ಮತ್ತ ರಾಮುಲು ಅಥವಾ ಯಡ್ಡಿಯ ತಳ್ಳು ಗಂಟಿನ ಆಕರ್ಷಣ ದಿವಾಕರನ ತಲೆ ತಿರುಗಿಸುತ್ತಿದೆ.


ಬೇಳೂರು ಗೋ-ಪಾಲ ಬಿಜೆಪಿ ಬಿಟ್ಟರೆ ದಿವಾಕರ ಆ ಪಾರ್ಟಿ ಕ್ಯಾಂಡಿಡೇಟಾಗಲು ಹವಣಿಸುವುದು ಗ್ಯಾರಂಟ ಈ ಸಮಯಸಾಧಕ ಟಿಕೆಟ್ ಟ್ರ್ಯಾಕ್ಟೀಸ್ ನಡುವೆ ತಾಲ್ಲೂಕ ಬಿಜೆಪಿ ಅಧ್ಯಕ್ಷ ಜಯಂತ್ ಎಂಬ ಬ್ರಾಹ್ಮಣರ ಮಾ ತಾನೂ ಅಭ್ಯರ್ಥಿ ಎಂದು ಹೇಳುತ್ತಿದ್ದಾನೆ. ಮೇಘರಾಜ ತಾನೇಕೆ ಹುರಿಯಾಳಾಗಬಾರದು ಬಿಜೆಪಿಯಿಂದ ಎಂದ ಪ್ರಶ್ನಿಸುತ್ತಿದ್ದಾನೆ. ಅತ್ತ ಜೆಡಿಎಸ್‌ನಲ್ಲಿ ಗೋ-ಪಾಲನಿಗೆ ಟಿಕೆಟ ಇಲ್ಲ ನಾನೇ ಕ್ಯಾಂಡಿಡೇಟ್ ಎಂದು ಮಾಜಿ ಜಿಪಂ ಸದ ಅರುಣ ಪ್ರಸಾದ್ ಬಿಂಬಿಸಿಕೊಳ್ಳುತ್ತಿದ್ದಾರೆ.


ಈ ಟಿಕೆಟ್ ತರಲೆ ಏನೇ ಇರಲಿ; ಯಾ[illegible] ಯಾ ಪಕ್ಷದಿಂದ ಬೇ[illegible]ದ್ದೂ ಸ್ಪರ್ಧಿಸಲಿ. ಮುದಿಕಾಲದಲ್ಲ ಚೈತನ್ಯದಿಂದ ಜನರ ನಡುವೆ ಬೆರೆಯುತ್ತಿರುವ ಕಾಗೋಡ ತಿಮ್ಮಪ್ಪರಿಗಿದು ಕೊನೇ ಅವಕಾಶ. ಹಾಗಾಗಿ ಕ್ಷೇತ್ರ ಎಲ್ಲ ವರ್ಗದ ಜನರು ಕಾಗೋಡು ಪರ ನಿಂತಿದ್ದಾ ಇದಕ್ಕೆ ಪ್ರಮುಖ ಕಾರಣ ಗೋ-ಪಾಲನ ಗಲಾಟೆಯಿಂ ಮುಕ್ತಿ ಪಡೆಯಬೇಕೆಂಬ ಜನರ ಕಾತರ ಮತ್ತು ಕಾಗೋಡ ಬೆಟರ್ ಕ್ಯಾಂಡಿಡೇಟ್ ಎಂಬುದಾಗಿದೆ!


● ನಹು


ಬೇಳೂರು ಗೋಪಾಲಕೃಷ್ಣ


ಬಂಗಾರಪ್ಪ


ಹಾಲಪ್ಪ



ದಿವಾಕರ್



ಕಾಗೋಡು ತಿಮ್ಮಪ್ಪ


ಧಾರವಾಡ: ಯಡ್ಡಿಯ ಸೈನ್ಯ ರೆಡಿ!



ಶೆಟ್ಟರ್


ಬೊಮ್ಮಾಯಿ


ಬೆಲ್ಲದ


ಶಂಕರ್ ಪಾಟೀಲ್


ಅಶೋಕ್ ಕಾಟ್ವೆ


ಹಾಲಹರವಿ

ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ನಡೆದ ಬಿಜೆಪಿಯ ಯುವ ಮೋರ್ಚಾ ಸಮಾವೇಶಕ್ಕೆ ಆಗಮಿಸಿದ್ದ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ರಾಜ್ಯ ಬಿಜೆಪಿ ಅಧ್ಯಕ್ಷ ಕೆ.ಎಸ್.ಈಶ್ವರಪ್ಪ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಧರ್ಮೇಂದ್ರ ಪ್ರಧಾನ್, ಸಂಸದ ಪ್ರಹ್ಲಾದ್ ಜೋಶಿ ಮತ್ತು ಇತರರು ಈ ಪ್ರದೇಶದಲ್ಲಿ ಯಡಿಯೂರಪ್ಪನ ಬಲ ಕುಂದಿಸುವುದು ಹೇಗೆಂದು ಚರ್ಚಿಸಲು ಕೇಶ್ವಾಪುರದ ಖಾಸಗಿ ಹೋಟೇಲ್ ಒಂದರಲ್ಲಿ ಸಭೆ ಸೇರಿದರು. ಬರುವ ಚುನಾವಣೆಯಲ್ಲಿ ಧಾರವಾಡ, ಹಾವೇರಿ, ಗದಗ, ಬೆಳಗಾವಿ ಜಿಲ್ಲೆಗಳಲ್ಲಿ ಪ್ರಾಬಲ್ಯ ಹೊಂದಿರುವ ಯಡ್ಡಿ ಗುಂಪನ್ನು ಕೊನೆಗೊಳಿಸುವುದು ಹೇಗೆ, ತಮ್ಮ ಬಳಗದಲ್ಲಿ ಬರುವ ಚುನಾವಣೆಯಲ್ಲಿ ಗೆಲ್ಲುವ ಕುದುರೆಗಳಾವುವು ಎಂಬ ಲೆಕ್ಕಾಚಾರದಲ್ಲಿ ಅವರೆಲ್ಲ ತೊಡಗಿದ್ದರು. ಈ ಕಾರಣಕ್ಕಾಗಿಯೇ ಆ ಸಭೆಗೆ ಯಡ್ಡಿ ಬೆಂಬಲಿಗರಾದ ಮುರುಗೇಶ್ ನಿರಾಣಿ, ಎಸ್.ಐ.ಚಿಕ್ಕನಗೌಡ್ರ, ಚಂದ್ರಕಾಂತ ಬೆಲ್ಲದ ಮುಂತಾದವರನ್ನು ದೂರ ಇಡಲಾಗಿತ್ತು.

ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಉತ್ತರ ಕರ್ನಾಟಕದ ಲಿಂಗಾಯತರೇ ಕಾರಣ. ಇವರಲ್ಲಿ ಬಹುತೇಕರು ಜಾತಿಕಾರಣಕ್ಕೆ ಯಡ್ಡಿಯನ್ನು ಬೆಂಬಲಿಸುತ್ತಾರೆಯೇ ಹೊರತು ಅವರು ಕೋಮುವಾದಿ ಬಿಜೆಪಿಯ ಹಿಂಬಾಲಕರಲ್ಲ ಎಂಬುದು ಚೆಡ್ಡಿ ನಾಯಕರಿಗೆ ಗೊತ್ತಿದೆ. ಬರುವ ಚುನಾವಣೆಯಲ್ಲಿ ಈ ಸಮುದಾಯ ಬಿಜೆಪಿಗೆ ಕೈಕೊಟ್ಟರೆ ತಮ್ಮ ಕಮಲ ಕೆಸರಿನಲ್ಲಿ ಹೂತುಹೋಗುವುದು ನಿಶ್ಚಿತ ಎಂಬುದೂ ಅವರಿಗೆ ಅರಿವಾಗಿದೆ. ಆದ್ದರಿಂದ ಚೆಡ್ಡಿಗಳು ಲಿಂಗಾಯತ ಸಮುದಾಯವನ್ನು ಶೆಟ್ಟರ್ ಪರವಾಗಿ ನಿಲ್ಲಿಸುವುದು ಹೇಗೆಂದು ತಲೆ ಕೆಡಿಸಿಕೊಂಡಿದೆ. ಆದರೆ ಪಾಪ, ಶೆಟ್ಟರ್ ಮುಖ ನೋಡಿ ಲಿಂಗಾಯತರು ಬಿಜೆಪಿಯನ್ನು ಬೆಂಬಲಿಸುವುದು ಅಸಾಧ್ಯ.

ಈಗಾಗಲೇ ಮಾನಸಿಕವಾಗಿ ಬಿಜೆಪಿಯಿಂದ ದೂರ ಸರಿದು ತನ್ನದೇ ಪಕ್ಷ ಕಟ್ಟುವತ್ತ ಗಮನ ಹರಿಸಿರುವ ಯಡ್ಡಿ ಧಾರವಾಡ ಜಿಲ್ಲೆಯಲ್ಲಿ ತನ್ನದೇ ಆದ ಟೀಮ್ ಒಂದನ್ನು ರೆಡಿ ಮಾಡಿಯಾಗಿದೆ. ಹುಬ್ಬಳ್ಳಿ-ಧಾರವಾಡ ಪೂರ್ವ ಕ್ಷೇತ್ರದಿಂದ ಮಾಜಿ ಮೇಯರ್ ವೆಂಕಟೇಶ ಮೇಸ್ತ್ರಿ ಹು-ಧಾ ಪಶ್ಚಿಮದಿಂದ ಚಂದ್ರಕಾಂತ ಬೆಲ್ಲದ, ಕುಂದಗೋಳದಿಂದ ಎಸ್.ಐ.ಚಿಕ್ಕನಗೌಡ್ರ, ನವಲಗುಂದದಿಂದ ಮಾಜಿ ಶಾಸಕ ಡಾ.ಆರ್.ಬಿ.ಶಿರಿಯಣ್ಣವರ, ಧಾರವಾಡ ಗ್ರಾಮೀಣದಿಂದ ಅಶೋಕ ಕಾಟವೆ, ಕಲಘಟಗಿಯಿಂದ ಕ್ರೆಡಲ್ ಅಧ್ಯಕ್ಷ ಸಿ.ಎಂ.ನಿಂಬಣ್ಣವರ, ಸೆಂಟ್ರಲ್‌ನಿಂದ ಶಂಕ್ರಣ್ಣ ಮುನವಳ್ಳಿ - ಇವರನ್ನು ನಿಲ್ಲಿಸಿದರೆ ತನ್ನ ಪಕ್ಷಕ್ಕೆ ಗೆಲ್ಲುವು ಗ್ಯಾರಂಟಿ ಎಂಬುದು ಯಡ್ಡಿಯ ಲೆಕ್ಕಾಚಾರ.

ಆದರೆ ಯಡ್ಡಿ ತಯಾರಿಸಿರುವ ಪಟ್ಟಿಯಲ್ಲಿ ಅವರ ಹಲವಾರು ಆಪ್ತರ ಹೆಸರುಗಳು ಇನ್ನೂ ಕಾಣಿಸಿಕೊಂಡಿಲ್ಲ. ಅಂಥವರಲ್ಲಿ ಬಸು ಬೊಮ್ಮಾಯಿ ಪ್ರಮುಖ. ಈತ ಯಡ್ಡಿಯ ನೆಚ್ಚಿನ ಬಂಟನಾದರೂ ಇತ್ತೀಚೆಗೆ ಆತನ ನಿಷ್ಠೆ ಅಸ್ಪಷ್ಟವಾಗಿದೆ. ಕೆಲದಿನಗಳ ಹಿಂದೆ ಯಡ್ಡಿ ಹಾವೇರಿ ಜಿಲ್ಲೆಗೆ ಭೇಟಿ ಕೊಟ್ಟಾಗ ಬಸು ಬೊಮ್ಮಾಯಿ ನಾಪತ್ತೆ ಆಗಿದ್ದ. ಕಾವೇರಿ ವಿವಾದವನ್ನು ನೆಪವಾಗಿಟ್ಟುಕೊಂಡು ದೆಹಲಿಯಲ್ಲಿ ಠಿಕಾಣಿ ಹೂಡಿದ್ದ ಬಸು ಅಲ್ಲಿ ಯಡ್ಡಿಯ ಪರಮವೈರಿ ಅನಂತಕುಮಾರ್‌ರನ್ನು ಭೇಟಿ ಆಗಿದ್ದು ಯಡ್ಡಿಯ ತಲೆಯಲ್ಲಿ ಸಂಶಯಗಳನ್ನು ಹುಟ್ಟುಹಾಕಿದ್ದವು. ಆ ಕಾರಣಕ್ಕೇ ಹುಬ್ಬಳ್ಳಿಯ ಬಿಜೆಪಿ ಯುವ ಮೋರ್ಚಾ ಸಮಾವೇಶದಿಂದ ದೂರ ಉಳಿದ ಬಸು ತನ್ನ ನಾಯಕ ಯಡ್ಡಿಯನ್ನು ಸಮಾಧಾನಪಡಿಸುವ ಪ್ರಯತ್ನ ಮಾಡಿದ್ದು ಸುಳ್ಳೇನಲ್ಲ. ಬಸುವಿನ ಈ ಡೋಲಾಯಮಾನ ಸ್ಥಿತಿಗೆ ಕಾರಣ ಆತ ಪ್ರತಿನಿಧಿಸುತ್ತಿರುವ ಶಿಗ್ಗಾಂವಿ ಕ್ಷೇತ್ರ. ತಾನು ಮುಂದಿನ ಬಾರಿ ಬಿಜೆಪಿಯಿಂದ ನಿಂತರೆ ಸೋಲುತ್ತೇನೆ, ಯಡ್ಡಿಯ ಹೊಸ ಪಕ್ಷದಿಂದ ನಿಂತರೆ ಗೆಲ್ಲುತ್ತೇನೇನೋ ಎಂಬ ಗೊಂದಲವೇ ಬಸು ಬೊಮ್ಮಾಯಿಯ ಎಡಬಿಡಂಗಿತನಕ್ಕೆ ಕಾರಣವಾಗಿದೆ.

ಬಸು ಪರಿಸ್ಥಿತಿಯಲ್ಲೇ ನವಲಗುಂದ ಕ್ಷೇತ್ರದ ಶಾಸಕ ಶಂಕರಪಾಟೀಲ ಮುನೇನಕೊಪ್ಪ ತೊಳಲಾಡುತ್ತಿದ್ದಾರೆ. ಯಡ್ಡಿ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಈ ಮುನೇನಕೊಪ್ಪ ಸಾಕಷ್ಟು ಅನುದಾನ ಪಡೆದ ಋಣದಲ್ಲಿದ್ದಾರೆ. ಹಾಗೆಯೇ ಶೆಟ್ಟರ್ ಅವರ ಹಂಗಿನಲ್ಲೂ ಇದ್ದಾರೆ. ಸಾಮಾನ್ಯವಾಗಿ ಮೊದಲ ಬಾರಿ ಶಾಸಕರಾಗಿ ಆಯ್ಕೆಯಾದವರಿಗೆ ಗೂಟದ ಕಾರು ಸಿಗುವುದಿಲ್ಲ. ಆದರೆ ಶೆಟ್ಟರ್ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಲು ಈ ಮುನೇನಕೊಪ್ಪ ಶೆಟ್ಟರ್ ಮತ್ತು ಯಡ್ಡಿ ನಡುವೆ ರಾಯಭಾರಿಯಾಗಿ ಕೆಲಸ ಮಾಡಿದ್ದರಿಂದ ಶೆಟ್ಟರ್ ಆತನಿಗೆ ಸಂಸದೀಯ ಮಂಡಳಿಯ ಕಾರ್ಯದರ್ಶಿ ಸ್ಥಾನವನ್ನು ದಯಪಾಲಿಸಿ ಒಂದು ಗೂಟದ ಕಾರನ್ನು ನೀಡಿದ್ದರು. ಹೀಗೆ ಒಂದೆಡೆ ಯಡ್ಡಿ ಮತ್ತು ಇನ್ನೊಂದೆಡೆ ಶೆಟ್ಟರ್ ಅವರ ಋಣಭಾರದಲ್ಲಿರುವ ಮುನೇನಕೊಪ್ಪ ಕೊನೆಗೆ ಯಾರ ಕಡೆಗೆ ವಾಲುತ್ತಾನೆ ಎನ್ನುವುದು ಹಲವು ಕೋಟಿ ರೂಪಾಯಿಗಳ ಪ್ರಶ್ನೆಯಾಗಿದೆ.

ಯಡ್ಡಿ ಗುಂಪಿನೊಂದಿಗೆ ಗುರುತಿಸಿಕೊಂಡಿರುವವರಲ್ಲಿ ಎಂಎಲ್‌ಸಿ ಮೋಹನ ಲಿಂಬಿಕಾಯಿ ಕೂಡ ಒಬ್ಬ. ಈ ಕಾರಣಕ್ಕಾಗಿಯೇ 3000 ಮುಖದ ಆಸ್ತಿ ಮಾರಾಟದ ಹಗರಣದಲ್ಲಿ ಈ ಲಿಂಬಿಕಾಯಿಯನ್ನು ಸಿಲುಕಿಸುವ ಪ್ರಯತ್ನವನ್ನು ಶೆಟ್ಟರ್ ಗುಂಪು ಮಾಡಿತ್ತು. ಇನ್ನು ಪಾರ್ಟ್ ಟೈಮ್ ಎಂಎಲ್‌ಸಿ ಮತ್ತು ಫುಲ್ ಟೈಮ್ ಉದ್ಯಮಿ ಆಗಿರುವ ವಿಜಯಸಂಕೇಶ್ವರ ಇಲ್ಲಿಯತನಕ ಎರಡೂ ಗುಂಪುಗಳಿಂದ ಸಮಾನಾಂತರ ದೂರದಲ್ಲಿದ್ದು ನೋಡುತ್ತಿದ್ದಾರೆ. ಚುನಾವಣೆ ಸಮಯದಲ್ಲಿ ತಕ್ಕಡಿ ಯಾವ ಕಡೆ ಹೆಚ್ಚು ವಾಲುತ್ತದೆ ಎನ್ನುವುದರ ಮೇಲೆ ಅವರು ತಮ್ಮ ನಿರ್ಧಾರ ಪ್ರಕಟಿಸಿದರೆ ಅಚ್ಚರಿ ಇಲ್ಲ.

ಹುಬ್ಬಳ್ಳಿ-ಧಾರವಾಡ ಪೂರ್ವ (ಮೀಸಲು) ಕ್ಷೇತ್ರದ ಶಾಸಕ ವೀರಭದ್ರಪ್ಪ ಹಾಲಹರವಿಯ ಪರಿಸ್ಥಿತಿಯೂ ಡೋಲಾಯಮಾನವಾಗಿದೆ. ಶೆಟ್ಟರ್ ಜೊತೆಗೆ ಹಾಲಹರವಿ ಸದ್ಯ ಗುರುತಿಸಿಕೊಂಡಿದ್ದರೂ ತನ್ನನ್ನು ಈ ಹಿಂದೆ ತುಳಿದು ಹಾಕಲು ಯತ್ನಿಸಿದ್ದ ಪ್ರಹ್ಲಾದ್ ಜೋಶಿ ಮೇಲಿನ ಸಿಟ್ಟು ಅವರೊಳಗೆ ಇನ್ನೂ ಕೊತಕೊತ ಕುದಿಯುತ್ತಿದೆ. ಕಳೆದ ಚುನಾವಣೆ ಸಮಯದಲ್ಲಿ ಹಾಲಹರವಿಗೆ ಬೆಂಬಲ ನೀಡಿದ್ದ ಯಡ್ಡಿಯ ಬಲಗೈ ಬಂಟ ಅಶೋಕ ಕಾಟವೆ ಬಿಜೆಪಿ ತೊರೆಯುವದು ಗ್ಯಾರಂಟಿ ಆಗಿದೆ. ಕಾಟವೆ ಅತ್ತ ಹೋಗಿ? ಹಾಲಹರವಿ ಇತ್ತ ಉಳಿದರೆ ಚುನಾವಣೆ ಸಂದರ್ಭದಲ್ಲಿ ತನಗೆ ಸೋಲು ಗ್ಯಾರಂಟಿ ಎಂಬ ಭೀತಿಯಲ್ಲಿ ಹಾಲಹರವಿ ಗಡಗಡ ನಡುಗುತ್ತಿದ್ದಾರೆ.

ಇದೆಲ್ಲದರ ಮಧ್ಯೆ ಈ ಹಿಂದೆ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದ ಹು-ಧಾದ ಮಾಜಿ ಅಧ್ಯಕ್ಷ ರಾಜಾ ದೇಸಾಯಿ ಇತ್ತೀಚೆಗೆ ಚೆಡ್ಡಿಗಳಿಗೆ ಟಾಟಾ ಹೇಳಿ ಮತ್ತೆ ಕಾಂಗ್ರೆಸ್‌ಗೆ ಹಿಂದಿರುಗಿದ್ದಾರೆ. ಅಷ್ಟೇ ಅಲ್ಲದೆ, ಕೆಎಲ್‌ಇ ಸಂಸ್ಥೆಯ ನಿರ್ದೇಶಕ ಹಾಗೂ ಶೆಟ್ಟರ್ ಸಂಬಂಧಿಯಾದ ಶಂಕ್ರಣ್ಣ ಮುನವಳ್ಳಿ ಬಿಜೆಪಿ ತೊರೆದು ಯಡ್ಡಿಯ ಹೊಸ ಪಕ್ಷವನ್ನು ಅಪ್ಪಿಕೊಳ್ಳಲು ರೆಡಿಯಾಗಿ ನಿಂತಿದ್ದಾರೆ.


ಅಂದಹಾಗೆ, ಮೊನ್ನಿನ ಬಿಜೆಪಿ ಯುವ ಮೋರ್ಚಾ ಸಮಾವೇಶದಲ್ಲಿ ಎಲ್ಲೆಡೆ ಹಾಕಿದ್ದ ಫ್ಲೆಕ್ಸ್ ಮತ್ತು ಬ್ಯಾನರ್‌ಗಳಿಂದ ಯಡ್ಡಿಯ ಭಾವಚಿತ್ರ ನಾಪತ್ತೆ ಆಗಿದ್ದವು. ಇದು ಯಡ್ಡಿಯ ಬೆಂಬಲಿಗರನ್ನು ಮತ್ತಷ್ಟು ಕೆರಳಿಸಿತು. ಈ ಕಾರಣಕ್ಕೆ ಅವರು ಈ ಸಮಾವೇಶಕ್ಕೆ ಜನರನ್ನು ತರದೆ ಶೆಟ್ಟರ್ ಮುಖಕ್ಕೆ ಮಂಗಳಾರತಿ ಎತ್ತಿದರು.

ಚುನಾವಣೆ ಹತ್ತಿರವಾಗುತ್ತಿರುವ ಈ ದಿನಗಳಲ್ಲಿ ವಿಫಲಗೊಂಡ ಚೆಡ್ಡಿಗಳ ಯುವ ಮೋರ್ಚಾ ಈ ಪ್ರದೇಶದಲ್ಲಿ ಬಿಜೆಪಿಯ ಭವಿಷ್ಯ ನುಡಿಯುತ್ತಿರುವಂತಿತ್ತು...

● ಹುಬ್ಬಳ್ಳಿಯಾಂವ

ಹುಬ್ಬಳ್ಳಿ ಜಿ.ಪ.: ಶೆಟ್ಟರ್ ಗುಂಪಿಗೆ ಯಡ್ಡಿ ಟಾಂಗ್

ಹುಬ್ಬಳ್ಳಿಯಲ್ಲಿ ಇತ್ತೀಚೆಗೆ ನಡೆದ ಚೆಡ್ಡಿಗಳ 'ಯುವ ಸಮಾವೇಶ' ಮಕಾಡೆ ಮಲಗಿದ್ದು ಸುಳ್ಳಲ್ಲ. ಹಾಗೆಯೇ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರ ತವರಿನಲ್ಲಿ ನಡೆದ ಈ ಸಮಾವೇಶಕ್ಕೆ ಟಾಂಗ್ ಕೊಟ್ಟು ಮಕಾಡೆ ಮಲಗಿಸಿದ್ದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಎಂಬುದೂ ಸುಳ್ಳಲ್ಲ.


ಚಿಕ್ಕಣ ಗೌಡ್ರ

ಕಳೆದು ಹದಿನೈದು ದಿನಗಳಿಂದ "ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ ಒಂದು ಲಕ್ಷ ಮಂದಿಯನ್ನು ಸೇರಿಸುತ್ತೇವೆ" ಎಂದು ಕೊಚ್ಚಿಕೊಳ್ಳುತ್ತಿದ್ದ ಬಿಜೆಪಿ ನಾಯಕರು ಕೊನೆಗೆ ಇಪ್ಪತ್ತು ಸಾವಿರ ಮಂದಿಯನ್ನು ಸೇರಿಸಲು ತಿಣುಕಾಡಿದರು. ಯಡ್ಡಿ ಮತ್ತವರ ಗ್ಯಾಂಗ್ ಬಿಜೆಪಿಯ ಹಿರಿಕಿರಿ ತಲೆಗಳಿಗೆಲ್ಲಾ ನೀಡಿದ ಈ ತಪರಾಕಿಯಿಂದಾಗಿ ಕೇಸರಿ ಗಿರಾಕಿಗಳೆಲ್ಲಾ ಶೆಟ್ಟರ್ ಮುಂದೆ ಗೊಳೋ ಎಂದು ಅತ್ತರಂತೆ.

ಈ ಯುವ ಮೋರ್ಚಾ ಸಮಾವೇಶ ನಡೆದ ಕೆಲವೇ ದಿನಗಳ ಮುನ್ನ ಯಡ್ಡಿ ಬಳಗ ಹುಬ್ಬಳ್ಳಿಯ ಚೆಡ್ಡಿ ಪಾಳೆಯವನ್ನು ಹೆಡೆಮುರಿಗೆ ಕಟ್ಟಿ ನಿಲ್ಲಿಸಿತ್ತು. ಜಿಲ್ಲಾ ಪಂಚಾಯತಿ ಅಧ್ಯಕ್ಷ ಗಾದಿಗೆ ನಡೆದಿದ್ದ ಹಣಾಹಣಿಯಲ್ಲಿ ಯಡ್ಡಿಯ ಬೀಗ ಹಾಗೂ ಕುಂದಗೋಳದ ಶಾಸಕ ಚಿಕ್ಕನಗೌಡ್ರ ತನ್ನ ಸಂಬಂಧಿ ರತ್ನವ್ವ ಕಳ್ಳಿಮನಿ ಎಂಬಾಕೆಯನ್ನು ಅಧ್ಯಕ್ಷೆಯನ್ನಾಗಿಸುವಲ್ಲಿ ಯಶಸ್ವಿಯಾಗಿ ಶೆಟ್ಟರ್ ತವರಿನಲ್ಲೇ ಅವರಿಗೆ ಮುಖಭಂಗ ಮಾಡಿದ್ದ.

ಈ ಸೋಲಿನ ನಂತರ "ರತ್ನವ್ವ ಕಳ್ಳಿಮನಿಯವರು ಹತ್ತು ತಿಂಗಳ ಅವಧಿಗೆ ಮಾತ್ರ ಜಿಲ್ಲಾ ಪಂಚಾಯತಿಯ ಅಧ್ಯಕ್ಷೆಯಾಗಿರುತ್ತಾರೆ, ನಂತರ ನಾವು ಹೇಳಿದವರಿಗೇ ಅವರು ತಮ್ಮ ಸ್ಥಾನವನ್ನು ಬಿಟ್ಟುಕೊಡಬೇಕು ಎಂದು ತೀರ್ಮಾನ ವಾಗಿದೆ" ಎಂದು ಬಿಜೆಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಹ್ಲಾದ ಜೋಶಿ ಪತ್ರಿಕಾ ಗೋಷ್ಠಿಯಲ್ಲಿ ತಿಪ್ಪೆ ಸಾರಿಸಲು ಯತ್ನಿಸಿದರು. ಆದರೆ ಆತನ ಬಗಲಲ್ಲೇ ಕೂತಿದ್ದ ಚಿಕ್ಕನಗೌಡ್ರ "ಅಲ್ಲೀವರೆಗೂ ಸರ್ಕಾರ ಉಳಿದಿದ್ರೆ ತಾನೆ?!..." ಎಂಬಂತೆ ಕುಹಕದ ನಗೆ ಬೀರಿದ್ದು ಅಲ್ಲಿದ್ದ ಮಾಧ್ಯಮದವರಿಗೆ ಅರ್ಥವಾಗಿತ್ತು!

ಪಂಚಾಯ್ತಿ ಹಣಾಹಣಿ

ನವೆಂಬರ್ 17 ರಂದು ಧಾರವಾಡ ಜಿಲ್ಲಾ ಪಂಚಾಯತಿಯ ಅಧ್ಯಕ್ಷಗಾದಿಗೆ ಅಂತಿಮ ಹಣಾಹಣಿ ನಡೆದಿತ್ತು. ಅಧ್ಯಕ್ಷಗಾದಿಯ ಮೇಲೆ ಕಣ್ಣಿಟ್ಟಿದ್ದ ಯಡ್ಡಿ ಗ್ಯಾಂಗ್ ಅದಕ್ಕಾಗಿ ಆರಿಸಿಕೊಂಡಿದ್ದು ಚಿಕ್ಕನಗೌಡ್ರನ ಸಹೋದರ ಸಂಬಂಧಿಯ ಮಗಳಾದ ರತ್ನವ್ವ ಕಳ್ಳಿಮನಿಯನ್ನು. ಈಕೆ ಅದರಗುಂಚಿಯ ಜಿಲ್ಲಾ ಪಂಚಾಯತ್ ಸದಸ್ಯೆ. ಈ ಹಿಂದೆ ಈಕೆಯ ಗಂಡ ಗದಿಗೆಪ್ಪ ಕಳ್ಳಿಮನಿ ಇದೇ ಕ್ಷೇತ್ರದಿಂದ ಜಿ.ಪಂ.ಗೆ ಆಯ್ಕೆಗೊಂಡಿದ್ದ. ಆದರೆ ಯಾವಾಗ ಅದರಗುಂಚಿ ಮಹಿಳಾ ಮೀಸಲು ಕ್ಷೇತ್ರವಾಗಿ ಬದಲಾಯಿತೋ ಆಗ ಗದಿಗೆಪ್ಪ ತನ್ನ ಹೆಂಡತಿ ರತ್ನವ್ವಳನ್ನೇ ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿಕೊಂಡಿದ್ದ. ಆಕೆಯ ಗೆಲುವಿನಲ್ಲಿ ಚಿಕ್ಕನಗೌಡ್ರನ ಸಹಕಾರವೂ ಇತ್ತು.

ಅಂದಹಾಗೆ, ಕಳೆದ ಬಾರಿ ಕಲಘಟಗಿ ವಿಧಾನಸಭಾ ಕ್ಷೇತ್ರವನ್ನು ತೊರೆದು ಚಿಕ್ಕನಗೌಡ್ರ ಕುಂದಗೋಳದಿಂದ ಸ್ಪರ್ಧಿಸಿದಾಗ ಆತನ ಗೆಲುವಿಗಾಗಿ ಅವಿರತವಾಗಿ ಅಳಿಯ ಗದಿಗೆಪ್ಪ ದುಡಿದಿದ್ದ. ಶಾಸಕ ಚಿಕ್ಕನಗೌಡ್ರ ಹಾಗೂ ಆತನ ಅಳಿಯ ಗದಿಗೆಪ್ಪ ಕಳ್ಳಿಮನಿ ಇಬ್ಬರೂ ಅದರಗುಂಚಿ ಗ್ರಾಮದವರೇ. ಇದೆಲ್ಲವೂ ರತ್ನವ್ವ ಕಳ್ಳಿಮನಿ ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ಗೆಲ್ಲಲು ಸಹಾಯ ಮಾಡಿದ್ದವು.

ಜಿಲ್ಲಾ ಪಂಚಾಯತಿಯ ಅಧ್ಯಕ್ಷಗಿರಿಯನ್ನು ಪ್ರತಿಷ್ಠೆಯ ಪ್ರಶ್ನೆಯಾಗಿಸಿಕೊಂಡ ಜಗದೀಶ್ ಶೆಟ್ಟರ್ ತಮ್ಮ ಕಡೆಯಿಂದ ಕಲಘಟಗಿ ತಾಲ್ಲೂಕಿನ ಮಿಶ್ರಿಕೋಟಿಯ ಜಿ.ಪಂ.ಸದಸ್ಯ ಯಲ್ಲಪ್ಪ ದಾಸನಕೊಪ್ಪನನ್ನು ಅಖಾಡಕ್ಕೆ ಇಳಿಸಿದರು. ಯಲ್ಲಪ್ಪ ದಾಸನಕೊಪ್ಪ ಈ ಹಿಂದೆ ಎರಡು ಬಾರಿ ತಾಲ್ಲೂಕು ಪಂಚಾಯತಿಯ ಸದಸ್ಯರಾಗಿ ಒಂದು ಬಾರಿ ಅಧ್ಯಕ್ಷರಾಗಿದ್ದವರು. ಇವರಿಗೆ ಅನುಭವ ಇರುವುದರಿಂದ ಇವರೇ ಜಿ.ಪಂ. ಅಧ್ಯಕ್ಷಗಾದಿಗೆ ಸೂಕ್ತ ಅಭ್ಯರ್ಥಿ ಎಂಬುದು ಪ್ರಹ್ಲಾದ ಜೋಶಿಯ ನಿಲುವಾಗಿತ್ತು. ಹಾಗಾಗಿ, ಶೆಟ್ಟರ್ ಕೂಡಾ ಯಲ್ಲಪ್ಪ ದಾಸನಕೊಪ್ಪರವರ ಹೆಸರನ್ನು ಅಖೈರುಗೊಳಿಸಿದರು.


ಗದಿಗೆಪ್ಪ ಕಳ್ಳಿಮನಿ

ರತ್ನವ್ವ ಕಳ್ಳಿಮನಿ ಮತ್ತು ಯಲ್ಲಪ್ಪ ದಾಸನಕೊಪ್ಪರಲ್ಲದೆ ತಬದ ಹೊನ್ನಳ್ಳಿಯ ಬಸವರಾಜ ಕರಡಿಕೊಪ್ಪ ಕೋಳಿವಾಡದ ಮಹಾಬಳೇಶ್ವರ ಅಣ್ಣಿಗೇರಿ, ನಲವಡಿಯ ಸುರೇಶ ಗಾಣಿಗೇರ, ದೇವಿಕೊಪ್ಪದ ಶಂಕ್ರಪ್ಪ ಅಗಡಿಯಂಥ ಘಟಾನುಘಟಿಗಳು ಅಧ್ಯಕ್ಷಗಾದಿಯ ರೇಸ್‌ನಲ್ಲಿದ್ದರು.

ಚುನಾವಣೆಯ ಹಿಂದಿನ ರಾತ್ರಿ ನಡೆದ ಪಕ್ಷದ ಕೊನೇ ಸಭೆಯಲ್ಲಿ ಪಕ್ಷ ಯಲ್ಲಪ್ಪ ದಾಸನಕೊಪ್ಪ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿರುವುದಾಗಿ ಇತರರಿಗೆ ತಿಳಿಸಲಾಯಿತು. ಇದಕ್ಕೆ ತಕರಾರು ತೆಗೆದ ಚಿಕ್ಕನಗೌಡ್ರ "ರತ್ನವ್ವ ಕಳ್ಳಿಮನಿಯವರೇ ಅಧ್ಯಕ್ಷೆಯಾಗಬೇಕು, ಇಲ್ಲವಾದರೆ ನಮ್ಮ ದಾರಿ ನಮಗೆ, ನಿಮ್ಮ ದಾರಿ ನಿಮಗೆ" ಎಂದು ಹೇಳಿ ಸಭೆಯಿಂದ ಹೊರನಡೆದುಬಿಟ್ಟರು. ಯಾಕೆಂದರೆ ಯಾವುದೇ ಕಾರಣಕ್ಕೂ ಅಧ್ಯಕ್ಷ ಸ್ಥಾನವನ್ನು ಶೆಟ್ಟರ್ ಗುಂಪಿಗೆ ಬಿಟ್ಟುಕೊಡಬಾರದೆಂದು ಯಡ್ಡಿ ಗ್ಯಾಂಗ್ ನಿರ್ಧರಿಸಿತ್ತು. ಅಕಸ್ಮಾತ್ ಚುನಾವಣೆ ಸಮಯದಲ್ಲಿ ಸದಸ್ಯರ ಕೊರತೆ ಎದುರಾದರೆ ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷದ ಸದಸ್ಯರನ್ನು ಖರೀದಿಸಿದರಾಯಿತು ಎಂದೂ ಯಡ್ಡಿ ಗ್ಯಾಂಗ್ ಲೆಕ್ಕಹಾಕಿತ್ತು.

ಚಿಕ್ಕನಗೌಡ್ರ ಜೊತೆ ಮಾತುಕತೆಗೆ ಶೆಟ್ಟರ್ ಅವರ ಸಂಸದೀಯ ಕಾರ್ಯದರ್ಶಿ ಶಂಕರ ಪಾಟೀಲ ಮುನೇನಕೊಪ್ಪ ಮತ್ತು ಶಾಸಕಿ ಸೀಮಾ ಮಸೂತಿ ಮುಂದಾದರು. ಆದರೆ ಯಾರ ಮಾತಿಗೂ ಚಿಕ್ಕನಗೌಡ್ರ ಜಗ್ಗಲಿಲ್ಲ. ಗೆಲುವು ತಮ್ಮ ಕಡೆಗಿಲ್ಲ ಎಂದು ಅರ್ಥವಾದ ಮೇಲೆ ಶೆಟ್ಟರ್ ಬಣ ತನ್ನ ಮುಖ ಉಳಿಸಿಕೊಳ್ಳಲು ರತ್ನವ್ವ ಕಳ್ಳಿಮನಿಗೆ 10 ತಿಂಗಳು ಅಧ್ಯಕ್ಷಗಿರಿ, ಆನಂತರ ಇನ್ನುಳಿದ 10 ತಿಂಗಳು ಅವಧಿಗೆ ಯಲ್ಲಪ್ಪ ದಾಸನ ಕೊಪ್ಪ ಎಂಬ ರಾಜಿ ಪಂಚಾಯ್ತಿ ನಡೆಸಿದರು.



ರತ್ನವ್ವ ಕಳ್ಳಿ ಮನಿ

ಪಂಚಮಸಾಲಿ ರಾಜ್ಯ!

ರತ್ನವ್ವ ಕಳ್ಳಿಮನಿಯ ಆಯ್ಕೆಯ ಹಿಂದೆಯೂ ಜಾತಿ ರಾಜಕೀಯ ಅಡಗಿದೆ. ಈ ಹಿಂದೆ ಜಿ.ಪಂ. ಅಧ್ಯಕ್ಷನಾಗಿದ್ದ ಅಡಿವೆಪ್ಪ ಮನಮಿ ಹಾಗೂ ಈಗಿನ ಅಧ್ಯಕ್ಷೆ ರತ್ನವ್ವ ಕಳ್ಳಿಮನಿ ಇಬ್ಬರೂ ಲಿಂಗಾಯತ ಜಾತಿಯಲ್ಲಿ ಪ್ರಬಲ ಉಪಜಾತಿಯಾದ ಪಂಚಮಸಾಲಿ ಸಮುದಾಯದವರು. ಅಷ್ಟೇ ಅಲ್ಲದೆ, ಚಿಕ್ಕನಗೌಡ್ರ, ಶಂಕರಪಾಟೀಲ ಮುನೇನಕೊಪ್ಪ ಚಂದ್ರಕಾಂತ ಬೆಲ್ಲದ ಎಂಬ ಮೂವರು ಶಾಸಕರು ಹಾಗೂ ವಿಧಾನ ಪರಿಷತ್‌ನ ಸದಸ್ಯರಾಗಿರುವ ಮೋಹನ ಲಿಂಬಿಕಾಯಿ - ಇವರೆಲ್ಲರೂ ಪಂಚಮಸಾಲಿಗಳೇ. ಈ ಕಾರಣಕ್ಕೇ ಈ ಬಾರಿ ಸಾದರ ಲಿಂಗಾಯತರಾದ ಯಲ್ಲಪ್ಪ ದಾಸನಕೊಪ್ಪ ಅವರೇ ಅಧ್ಯಕ್ಷರಾಗಬೇಕೆಂಬುದು ಶೆಟ್ಟರ್ ಗುಂಪಿನ ವಾದವಾಗಿತ್ತು. ಆದರೇನಂತೆ, ಮತ್ತೊಮ್ಮೆ ಪಂಚಮಸಾಲಿಗಳೇ ಧಾರವಾಡ ಜಿ.ಪಂ. ಅಧ್ಯಕ್ಷಗಾದಿಯನ್ನು ವಶಪಡಿಸಿಕೊಂಡಿದ್ದಾರೆ.

● ವರದಿಗಾರ

ಕಾರ್ಪೊರೇಟ್ 'ಕೈ'ಯಲ್ಲಿ ಪ್ರಜೆಯ 'ಪ್ರಭು'ತ್ವ!?



ಮನಮೋಹನ್ ಸಿಂಗ್‌ರ ಕ್ಯಾಬಿನೆಟ್ ಪುನರ್ರಚನೆಯ ಹೈಡ್ರಾಮಾ ಆಮ್ ಆದ್ಮಿಗೆ ಮತ್ತೊಂದು ಸತ್ಯದರ್ಶನ ಮಾಡಿಸಿದೆ. ತೈಲ ಮತ್ತು ನೈಸರ್ಗಿಕ ಅನಿಲ ಖಾತೆಯಿಂದ ಜೈಪಾಲ್ ರೆಡ್ಡಿ ಎತ್ತಂಗಡಿಯಾಗುತ್ತಿದ್ದಂತೆಯೇ ಸರ್ಕಾರದ ಮೇಲಿನ ಕಾರ್ಪೊರೇಟ್ ಹಿಡಿತ ಮತ್ತಷ್ಟೂ ಬಿಗಿಯಾದದ್ದು ಸ್ಪಷ್ಟವಾಗಿ ತೋರಿದೆ. ಮೇಲ್ನೋಟಕ್ಕೆ ಇದು ಖಾತೆಯ ಮರುಹಂಚಿಕೆಯ ಕಾಮನ್ ಪ್ರಕ್ರಿಯೆಯಂತೆ ಕಂಡುಬಂದರೂ ಜೈಪಾಲ್ ರೆಡ್ಡಿ ಮತ್ತು ರಿಲಾಯನ್ಸ್ ಮುಖ್ಯಸ್ಥ ಮುಖೇಶ್ ಅಂಬಾನಿ ನಡುವಿನ ಇಷ್ಟು ತಿಂಗಳ ಸುದೀರ್ಘ ಕದನದ ಫಲಿತಾಂಶ ಎನ್ನುವುದು ಇಡೀ ಪ್ರಕರಣದ ಸಾರಾಂಶ. ಪ್ರಧಾನಿ ಸಿಂಗ್ ಮಗದೊಮ್ಮೆ ಮೌನಂ ಶರಣಂ ಗಚ್ಛಾಮಿ ಅಂತಲೇ ಕಾರ್ಪೊರೇಟ್ ಕಾಲಿಗೆ ಎರಗಿದ್ದಾರೆ. ಆದರೆ ಈ ಬಾರಿ ಅವರದೇ ಸಂಪುಟ ಸಹೋದ್ಯೋಗಿಯ ತಲೆದಂಡದೊಂದಿಗೆ ಎಂಬುದೇ ವಿಶೇಷ.

ರಿಲಾಯನ್ಸ್‌ಗೆ ಅನುಕೂಲವಾಗುವ ಈ ಮಾರ್ಗದಿಂದ ಮುಖೇಶ್ ಅಂಬಾನಿಯ ಸಂಪತ್ತು 40 ರಿಂದ 50 ಸಾವಿರ ಕೋಟಿ ಹೆಚ್ಚಾಗುವುದರಲ್ಲಿ ಸಂಶಯವೇ ಇಲ್ಲ. ಅನಿಲದ ಬೆಲೆ ಏರಿಕೆಯ ಮೂಲಕ ಇಂತಹದ್ದೊಂದು ಅನುಕೂಲ ಮಾಡಿಕೊಡಬೇಕೆಂದು ಮುಖೇಶ್ ಅಂಬಾನಿ ಈಗ್ಗೆ ಒಂದೂವರೆ ವರ್ಷದ ಹಿಂದೆಯೇ ಸರ್ಕಾರದ ಮೇಲೆ ಒತ್ತಡ ತಂದಿದ್ದ. ಆದರೆ ಅಂಬಾನಿಯ ಈ ಹಗಲು ದರೋಡೆಗೆ ಅಡ್ಡವಾಗಿ ನಿಂತದ್ದು ಇದೇ ಜೈಪಾಲ್ ರೆಡ್ಡಿ.

ಆಂಧ್ರದ ಕೃಷ್ಣಾ-ಗೋದಾವರಿ ಮುಖಜ ಪ್ರದೇಶದಲ್ಲಿರುವ ರಿಲಾಯನ್ಸ್‌ನ ಡಿ-6 ಘಟಕದ ಬೃಹತ್ ಅನಿಲ ನಿಕ್ಷೇಪದ ಮೂಲಕ ದೇಶವನ್ನು ಲೂಟಿ ಹೊಡೆಯಲು ಯೋಜಿಸಿದ್ದ ಮುಖೇಶ್ ಅಂಬಾನಿ ಸುಖಾಸುಮ್ಮನೆ ಘಟಕದಲ್ಲಿ ಉತ್ಪಾದನೆಯನ್ನು ಕಡಿಮೆ ಮಾಡಿ ಅದಕ್ಕೆ ದುಬಾರಿ ತಯಾರಿಕಾ ವೆಚ್ಚ ಮತ್ತು ಅಂತಾರಾಷ್ಟ್ರೀಯ ಕಚ್ಚಾ ಸಾಮಗ್ರಿಗಳ ಬೆಲೆ ಏರಿಕೆಯನ್ನು ಕಾರಣವನ್ನಾಗಿಸಿದ್ದ. 2011-12ನೇ ಸಾಲಿಗೆ ಘಟಕದ ಉದ್ದೇಶಿತ ಉತ್ಪಾದನೆ ದಿನವೊಂದಕ್ಕೆ 70 ಮಿಲಿಯನ್ ಮೆಟ್ರಿಕ್ ಇರಬೇಕಾಗಿತ್ತು. ಆದರೆ ಅಂಬಾನಿ ಟೀಮು ಉತ್ಪಾದಿಸಿದ್ದು ಕೇವಲ 42 ಮಿಲಿಯನ್ ಮೆಟ್ರಿಕ್ ಮಾತ್ರ. ಸರ್ಕಾರದ ಕಠಿಣ ನೀತಿಗಳೇ ಉತ್ಪಾದನೆಯ ಕುಸಿತಕ್ಕೆ ಕಾರಣ. ಹಾಗಾಗಿ ಉದ್ಯಮ ಉಳಿಯಬೇಕೆಂದರೆ ಕೂಡಲೇ ಅನಿಲ ಮತ್ತು ತೈಲದ ಬೆಲೆಯನ್ನು ತಾನು ಕೇಳಿದಷ್ಟು ಏರಿಸಿ ಜನತೆಯ ಸುಲಿಗೆ ಮಾಡಲು ಸಾಥ್ ನೀಡಬೇಕೆಂದು ಸರ್ಕಾರದ ಕಾಲರ್ ಹಿಡಿದಿದ್ದ.

ಆದರೆ ಅದು ಅಂದುಕೊಂಡಷ್ಟು ಸುಲಭದ ಮಾತಾಗಿರಲಿಲ್ಲ. ಯಾಕೆಂದರೆ 2010ರ ಅಧಿಕಾರಸ್ಥ ಮಂತ್ರಿಮಂಡಲ (EGoM)ದ ನಿರ್ಣಯದಂತೆ 2014ರ ಏಪ್ರಿಲ್‌ವರೆಗೆ ಗೃಹಬಳಕೆ ಅನಿಲದ ದರವನ್ನು ಯಾವುದೇ ಕಾರಣಕ್ಕೂ ಪರಿಷ್ಕರಿಸಬಾರದೆನ್ನುವ ನಿರ್ಣಯವನ್ನು ಅಂಗೀಕರಿಸಲಾಗಿತ್ತು. ಇದೇ ಕಾರಣವನ್ನಿಟ್ಟುಕೊಂಡು ಅಂಬಾನಿಗೆ ಎದುರು ನಿಂತ ಜೈಪಾಲ್ ರೆಡ್ಡಿ ದೇಶದ ಬೊಕ್ಕಸಕ್ಕೆ ಅನಾಮತ್ತು ಐವತ್ತು ಸಾವಿರ ಕೋಟಿ ಲುಕ್ಸಾನು ಮಾಡಲು ತಾನು ಸಿದ್ಧವಿಲ್ಲವೆಂದು ಸೆಡ್ಡು ಹೊಡೆದಿದ್ದರು. ಆಗಿನಿಂದ ಅಂಬಾನಿ ಅಂಡ್ ರೆಡ್ಡಿಯ ಜಟಾಪಟಿ ಪ್ರಾರಂಭವಾಗಿತ್ತು. ಇಷ್ಟಕ್ಕೇ ಸುಮ್ಮನಾಗದ ಜೈಪಾಲ್ ರೆಡ್ಡಿ ಇಡೀ ದೇಶದಲ್ಲಿ 2008ರಿಂದೀಚೆಗೆ ತೈಲ ಮತ್ತು ಅನಿಲ ಉತ್ಪಾದನೆ ತಕ್ಕಮಟ್ಟಿಗೆ ಸುಸ್ಥಿತಿಯಲ್ಲಿರುವಾಗ ಅಂಬಾನಿಯ ಘಟಕದ ಇಳುವರಿಯೇಕೆ ಕುಂಠಿತವಾಗುತ್ತೆ? ಎನ್ನುವ ಅನುಮಾನ ಮುಂದುಮಾಡಿಕೊಂಡು ಮುಖೇಶ್‌ನ ಘಟಕದ ಸಂಪೂರ್ಣ ಲೆಕ್ಕವನ್ನು ಆಡಿಟ್ ಮಾಡಿ ವರದಿ ಒಪ್ಪಿಸುವಂತೆ ಮಹಾಲೆಕ್ಕಪಾಲರಿಗೆ (ಸಿಎಜಿ) ಶಿಫಾರಸ್ಸು ಮಾಡಿ ಪತ್ರವನ್ನೂ ಬರೆದಿದ್ದರು. ಅಂಬಾನಿ ಬೇಸ್‌ಗೆ ಬಿಸಿ ಬಿದ್ದದ್ದೇ ಆಗ!

ಅನಿಲದ ಬೆಲೆ ಏರಿಸಬೇಕೆಂಬ ಒಂದೇ ಕಾರಣಕ್ಕೆ ಸಂಸ್ಥೆಯ ಉತ್ಪಾದನೆಯನ್ನೇ ಕಡಿಮೆ ಮಾಡಿ ನಾಟಕ ಆಡಿದ್ದ ರಿಲಾಯನ್ಸ್ ಗ್ರೂಪ್‌ನ ಬಂಡವಾಳ ಸಿಎಜಿ ತನಿಖೆಯಿಂದ ಹೊರಬರುವುದರಲ್ಲಿತ್ತು. ದೇಶದ ಆದಾಯದ ಮೇಲೆ ಪರಿಣಾಮ ಬೀರಬಲ್ಲ ಯಾವುದೇ ದಾಖಲೆಗಳನ್ನಾದರೂ ಪರಿಶೀಲನೆ ಮಾಡುವ ಅಧಿಕಾರ ಸಿಎಜಿಗೆ ಇದೆ ಎಂಬ ಸಣ್ಣ ಸತ್ಯವನ್ನೂ ಮರೆತವನಂತೆ ಅಂಬಾನಿ ತಮ್ಮದು ಖಾಸಗಿ ಕಂಪನಿಯಾಗಿರುವುದರಿಂದ ಸಿಎಜಿ ತನ್ನ ದಾಖಲೆಗಳನ್ನು ಪರಿಶೀಲಿಸುವಂತಿಲ್ಲ ಎಂಬ ಕ್ಯಾತೆ ತೆಗೆದಿದ್ದ. ಕೊನೆಗೆ ಪ್ರಧಾನಿ ಕಚೇರಿಯಿಂದಲೂ ಜೈಪಾಲ್ ರೆಡ್ಡಿಯ ಮೇಲೆ ಒತ್ತಡ ತಂದು ವ್ಯವಹಾರ ಕುದುರಿಸಿಕೊಳ್ಳಲು ಅಂಬಾನಿ ಮುಂದಾಗಿದ್ದ. ಈ ವಿಚಾರವಾಗಿ ಪ್ರಧಾನಿ ಕಚೇರಿ ಮತ್ತು ತೈಲ ಕಚೇರಿಯ ನಡುವೆಯೂ ಒಂದೆರಡು ಇಮೇಲ್‌ಗಳು ಹರಿದಾಡಿದ್ದವು. ಆದರೆ ರೆಡ್ಡಿ ಪಟ್ಟು ಬಲವಾಗಿತ್ತಾದ್ದರಿಂದ ಅಂಬಾನಿ ಸಿಎಜಿಗೆ ತನ್ನೆಲ್ಲ ದಾಖಲೆಗಳನ್ನು ಒದಗಿಸದೆ ಬೇರೆ ವಿಧಿಯಿಲ್ಲ ಎನ್ನುವಂತಾಗಿತ್ತು.




ಆದರೆ ಮುಖೇಶ್ ಅಂಬಾನಿ ಅಷ್ಟು ಸಡಿಲ ಬಲೆಗೆ ಸಿಲುಕುವ ತಿಮಿಂಗಿಲವಲ್ಲ. ಹಾಗಾಗಿ ಸಂಪುಟ ಪುನರಚನೆಯ ಗೇಮ್‌ನಲ್ಲಿ ಜೈಪಾಲ್ ರೆಡ್ಡಿಯ ತೈಲದ ಕುರ್ಚಿಗೇ 'ಮನಮೋಹಕ ಆಘಾತವೊಂದನ್ನು ನೀಡಿದ್ದಾನೆ. ಅಡ್ಡವಾಗಿದ್ದ ರೆಡ್ಡಿಯೇ ದೂರವಾದ ಮೇಲೆ ಅಂಬಾನಿ ಹಾದು ಈಗ ಸಲೀಸು, at the same time ಇನ್ನು ಸ್ವಲ್ಪ ದಿನದಲ್ಲಿ ಆಮ್‌ಆದ್ಮಿಯ ಜೇಬೂ ಖಲಾಸೂ!


ಅಂತೂ ಮುಖೇಶ್ ಅಂಬಾನಿಯೇ ಗೆದ್ದಿದ್ದಾನೆ. ಆ ಮೂಲಕ ಈ ದೇಶದ ಪ್ರಭುತ್ವ ಇರುವುದು ಮತದಾರನ ಕೈಲಾಗಲಿ ಸರ್ಕಾರದ ಕೈಲಾಗಲಿ ಅಲ್ಲ, ಬದಲಾಗಿ ಕಾರ್ಪೊರೇಟ್ ಕಪಿಮುಷ್ಟಿಯಲ್ಲಿ ಎನ್ನುತ್ತ ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಅಣಕಿಸುತ್ತಿದ್ದಾನೆ. ಅಂದಹಾಗೆ ನೀರಾ ರಾಡಿಯಾ ಪ್ರಕರಣದಲ್ಲೇ ಸರ್ಕಾರಗಳ ಕಾರ್ಪೊರೇಟ್ ಪ್ರಜಾತಂತ್ರದ ಪ್ರಹಸನ ಜಗಜ್ಜಾಹೀರಾಗಿತ್ತು. ಇದೇನಿದ್ದರೂ ಅದರ ಮುಂದುವರೆದ ಭಾಗವಷ್ಟೆ.

ಜನರಿಂದ, ಜನರಿಗಾಗಿ,.................. ಯಾರಿಗೋಸ್ಕರ?

ಬಿಜೆಪಿಯ ಬ್ರಾಹ್ಮಣ ಪ್ರೀತಿ

ನಿತಿನ್ ಗಡ್ಕರಿ V/s ಬಂಗಾರು ಲಕ್ಷ್ಮಣ್





ಈ ಎರಡು ಹೆಸರು ಸಾಕು ಬಿಜೆಪಿ ಕೇವಲ ಕೋಮುವಾದಿ ಮಾತ್ರವಲ್ಲ ಪಕ್ಕಾ ಬ್ರಾಹ್ಮಣ ಜಾತಿವಾದಿ ಎಂಬುದನ್ನು ಸಾಬೀತುಪಡಿಸಲು. ಈ ಇಬ್ಬರ ನಡುವೆ ಬಿಜೆಪಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಗಾದಿಯ ರುಚಿ ಕಂಡವರು ಎಂಬ ಸಾಮ್ಯತೆಯೊಂದಿಗೆ ಒಬ್ಬ ಮರಾಠಿ ಬ್ರಾಹ್ಮಣ, ಮತ್ತೊಬ್ಬ ಆಂಧ್ರದ ಅಸ್ಪೃಶ್ಯ ದಲಿತ (ಮಾದಿಗ) ಎನ್ನುವ ವೈರುಧ್ಯತೆಗಳೂ ಇವೆ.

2001ರಲ್ಲಿ ದಲಿತ ಬಂಗಾರು ಲಕ್ಷ್ಮಣ್ ಬಿಜೆಪಿಯ ರಾಷ್ಟ್ರಧ್ಯಕ್ಷನಾಗಿದ್ದ. ರಾಷ್ಟ್ರೀಯತೆ, ಹಿಂದೂತ್ವದ ಹೆಸರೇಳಿಕೊಂಡು ರಾಜಕಾರಣ ಮಾಡುವ ಅಜೆಂಡಾದ ಪಕ್ಷವಾದ್ದರಿಂದ ಈ ಬಂಗಾರು ಲಕ್ಷ್ಮಣ್ ಕೂಡಾ ಸಾಚಾ ಆಗಿರಲಿಲ್ಲ. ಆಗ ಚುಟುಕು ಕಾರ್ಯಾಚರಣೆ ನಡೆಸಿದ ತೆಹಲ್ಕಾದ ಬಲೆಗೆ ಬಿದ್ದ ಬಂಗಾರು ಹಣದ ಆಮಿಷಕ್ಕೆ ಬಲಿಯಾಗಿ ಥರ್ಡ್ ಕ್ಲಾಸ್ ಕಂಪನಿಯೊಂದರ ಶಸ್ತ್ರಾಸ್ತ್ರಗಳನ್ನು ಖರೀದಿ ಮಾಡುವಂತೆ ರಕ್ಷಣಾ ಸಚಿವರಿಗೆ ಶಿಫಾರಸ್ಸು ಮಾಡುತ್ತೇನೆ ಎಂಬುದಾಗಿ ಕ್ಯಾಮೆರಾ ಎದುರೇ ಬಾಯಿಬಿಟ್ಟಿದ್ದ. ಅಲ್ಲಿಗೆ ಬಿಜೆಪಿಯ ಪ್ರಾಮಾಣಿಕತೆಯ ಬಣ್ಣ ಬಯಲಾಗಿತ್ತು. ಆದರೂ ತಾನು ಸಾಚಾ ಎಂದು ತೋರಿಸಿಕೊಳ್ಳುವ ಸಲುವಾಗಿ ಸಂಘಪರಿವಾರದ ಆಣತಿಯಂತೆ ಬಿಜೆಪಿ ಅಧ್ಯಕ್ಷಗಾದಿಯಿಂದ ಬಂಗಾರವನ್ನು ವಜಾ ಮಾಡಿ ಆತನನ್ನು ಏಕಾಂಗಿಯಾಗಿಸಿದ್ದರು.

ಆದರೆ ಇವತ್ತು ಬಿಜೆಪಿಯ ಅಧ್ಯಕ್ಷನಾಗಿರುವ ನಿತಿನ್ ಗಡ್ಕರಿ ಮಾಡಿರುವುದೇನು? ಪೂರ್ತಿ ಗ್ರೂಪ್ ಎಂಬ ಬೋಗಸ್ ಕಂಪನಿಯ ಹೆಸರಲ್ಲಿ ಕೋಟ್ಯಂತರ ಹಣವನ್ನು, ಜಮೀನನ್ನು ವಂಚಿಸಿ ಬೆತ್ತಲಾಗಿ ನಿಂತಿದ್ದಾನೆ. ದಾಳಿ ಮಾಡಿದ ಆದಾಯ ತೆರಿಗೆ ಇಲಾಖೆಯೇ ದಂಗುಬಡಿದು ಹೋಗುವಂತಿದೆ ಗಡ್ಕರಿಯ ಅವ್ಯವಹಾರಗಳು. 22 ಬೋಗಸ್ ಸಮೂಹ ಕಂಪನಿಗಳ ಹೆಸರು ರಿಜಿಸ್ಟರ್ ಆಗಿದೆಯಾದರೂ ಯಾವ ಒಂದರ ವಿಳಾಸವೂ ನೆಟ್ಟಗಿಲ್ಲ. ಆ ಕಂಪನಿಗಳ ಮ್ಯಾನೇಜಿಂಗ್ ಡೈರೆಕ್ಟರ್‌ಗಳಿಗೆ ತಾವು ಆ ಹುದ್ದೆಯಲ್ಲಿರುವುದರ ಅರಿವೇ ಇರಲಿಲ್ಲ. ಮತ್ತೆ ಕೆಲವರಿಗೆ ತಿಂಗಳಿಗೆ ಇಂತಿಷ್ಟು ಎಂಬ ಸಂಭಾವನೆಯ ಆಸೆ ತೋರಿಸಿ ಡೈರೆಕ್ಟರನ್ನಾಗಿಸಿದ್ದ. ತಾನು ಕಾಂಟ್ರ್ಯಾಕ್ಟ್ ನೀಡಿದ್ದ ಸಂಸ್ಥೆಗೇ 164 ಕೋಟಿ ಸಾಲ ಕೊಡಿಸಿದ್ದ. ಅದೆಲ್ಲ ಇರಲಿ, ತನ್ನ ಕಾರ್ ಡ್ರೈವರ್‌ನನ್ನೇ ಕಂಪನಿಯೊಂದರ ಡೈರೆಕ್ಟರ್ ಅಂತ ನೋಂದಾಯಿಸಿದ್ದ. ಕಂಪನಿಯ ಹೆಸರಲ್ಲಿ ರೈತರ ಜಮೀನನ್ನು ಅಕ್ರಮವಾಗಿ ಮುಟ್ಟುಗೋಲು ಹಾಕಿಕೊಂಡಿದ್ದ. ಹೀಗೆ ಸಾಲುಸಾಲು ಹಗರಣಗಳನ್ನು ನಿತಿನ್ ಗಡ್ಕರಿ ನಡೆಸಿರುವುದು ಸ್ಪಷ್ಟವಾಗಿದೆ.

ಆದರೆ ಯಾವೊಬ್ಬ ಬಿಜೆಪಿ ನಾಯಕನೂ ನಿತಿನ್ ಗಡ್ಕರಿಯ ರಾಜೀನಾಮೆ ಕೇಳುತ್ತಿಲ್ಲ. ಬದಲಾಗಿ ಆತನ ಸಮರ್ಥನೆಗೆ ಸಬೂಬು ಕೊಡಲು ನಿಂತಿದ್ದಾರೆ. ಇದಕ್ಕೆಲ್ಲ ಗಡ್ಕರಿ ಬ್ರಾಹ್ಮಣ ಎಂಬ ಒಂದೇ ಕಾರಣ. ದಲಿತ ಬಂಗಾರು ಲಕ್ಷ್ಮಣ್ ಮೇಲೆ ಮುರಕೊಂಡು ಬಿದ್ದು ಪ್ರಾಮಾಣಿಕತೆಯ ಪಾಠ ಹೇಳಿದ ಬಿಜೆಪಿಗೆ ಗಡ್ಕರಿಯ ತಪ್ಪುಗಳೇ ಕಾಣದಿರುವುದು ಅಚ್ಚರಿಯೇ ಸರಿ.. ಆತನನ್ನು ವಜಾ ಮಾಡುವುದಿರಲಿ ಮತ್ತೊಂದು ಬಾರಿಗೆ ಅಧ್ಯಕ್ಷನನ್ನಾಗಿಸಲೂ ಸಜ್ಜಾಗಿದ್ದಾರೆ. ಇದಲ್ಲವೇ ಜಾತಿ ರಾಜಕಾರಣವೆಂದರೆ?

ಬಿಜೆಪಿಗೆ ಬೇಕಿರುವುದು ಬ್ರಾಹ್ಮಣಿಕೆಯ ಪಾರುಪತ್ಯ ಮಾತ್ರ. ಅದಕ್ಕೆಂದು ದಲಿತರನ್ನೋ, ಹಿಂದುಳಿದವರನ್ನೋ ಬಳಸಿಕೊಂಡು ನಂತರ ಬಿಸಾಡುವುದೇ ಅದರ ಅಸಲೀ ಅಜೆಂಡಾ. ಬಿಜೆಪಿಯಲ್ಲಿ ಕಟ್ಟಕಡೆಯಲ್ಲಿ ಉಳಿಯುವುದು ಬ್ರಾಹ್ಮಣಿಕೆಯ ಅಧಿಪತ್ಯವೇ ಹೊರತು ಮತ್ತಾರಿಗೂ ಅವಕಾಶವಿಲ್ಲ. ಇದು ಗೊತ್ತಿಲ್ಲದ ಯಡ್ಡಿ, ಶ್ರೀರಾಮುಲು, ರೆಡ್ಡಿ ವಗೈರಾಗಳು ಬ್ರಾಹ್ಮಣರ ಜನತಾ ಪಾರ್ಟಿಗೆ ಸೋಪಾನವಾಗಿ ಬೆನ್ನು ಹಾಸಿದ್ದಾರೆ. ಭ್ರಷ್ಟಾಚಾರಿಗಳ್ಯಾರಿಗೂ ಕ್ಷಮೆ ಇಲ್ಲ, ರಿಯಾಯಿತಿಯೂ ಇಲ್ಲ. ಆದರೆ ಬಿಜೆಪಿಯ ಜಾತಿ ದಿಗ್ವಿಜಯಕ್ಕೆ ವೇದಿಕೆಯಾದವರ ಸಣ್ಣ ಲಿಸ್ಟ್ ಅಷ್ಟೇ ಇದು.


ಒಟ್ಟಿನಲ್ಲಿ ಬಿಜೆಪಿಯ ಒಂದೊಂದೇ ಬಣ್ಣಗಳು ಬಯಲಾಗುತ್ತಿವೆ. ಕೀಳು ಅಧಿಕಾರಕ್ಕಾಗಿ ಉನ್ನತ, ಉದಾತ್ತ ವಿದ್ವತ್ತಿನ ಮಾತುಗಳನ್ನಾಡುವ ಪಕ್ಷದ ಬ್ರಾಹ್ಮಣ ಪ್ರೀತಿಯ ಲೇಟೆಸ್ಟ್ ಉದಾಹರಣೆಯಾಗಿ ಗಡ್ಕರಿ ಪ್ರಕರಣ ಬೆಳಕಿಗೆ ಬಂದಿದೆ. ಹೊರಬರಲು ಮತ್ತಷ್ಟೂ ಅಚ್ಚರಿಗಳು ಸಾಲುಗಟ್ಟಿ ನಿಂತಿವೆ.

ಎಸ್.ಎಂ.ಕೃಷ್ಣ ರೀಎಂಟ್ರಿ: ಕೈಗೆ ತುತ್ತಾ? ಕುತ್ತಾ?

ಕೃಷ್ಣಾರ್ಪಣಮಸ್ತು!

ಕ್ಯಾಬಿನೆಟ್ ರೀಶಫಲ್ ವೇಳೆ ಕಾಂಗ್ರೆಸ್ ಪಕ್ಷ ಎಸ್.ಎಂ. ಕೃಷ್ಣರನ್ನು ಬೀಳ್ಕೊಟ್ಟ ಪರಿ ಇದು. ಎಂಬತ್ತರ ಹಣ್ಣು ಹಣ್ಣು ಹರೆಯದಲ್ಲಿರುವ ಕೃಷ್ಣ ಕುರ್ಚಿಯಿಂದ ಇಳಿದದ್ದನ್ನು ವಿಧವಿಧವಾಗಿ ವಿಶ್ಲೇಷಿಸಲಾಗುತ್ತಿದೆ. ರಾಜ್ಯ ರಾಜಕಾರಣದ ಅಖಾಡಕ್ಕಿಳಿಸಿ ಪಕ್ಷ ಸಂಘಟನೆಗೆ ಬಳಸಿಕೊಳ್ಳಲಾಗುತ್ತದೆಂಬ ವದಂತಿಯ ನಡುವೆಯೇ ಕೃಷ್ಣರ ಘನಪಾಂಡಿತ್ಯದ ಅರಿವಾದ ಅಧಿನಾಯಕಿಯೇ ಸಾಕಾಗಿ ಗೌರವಯುತ ವಿಶ್ರಾಂತಿಗೆ ದಾರಿ ಮಾಡಿಕೊಟ್ಟಿದ್ದಾರೆ ಎನ್ನುವ ಕುಹಕಗಳೂ ಕೇಳಿಬರುತ್ತಿವೆ.

ಅದೇನೇ ಇರಲಿ, ಕೆಲ ಕಾಂಗ್ರೆಸ್ಸಿಗರು (ವಿಶೇಷವಾಗಿ ಕೃಷ್ಣಪಂಥದವರು) ಕನವರಿಸುತ್ತಿರುವಂತೆ ಎಸ್.ಎಂ.ಕೃಷ್ಣರ ಆಗಮನದಿಂದ ಪಕ್ಷಕ್ಕೆ ಹೆಚ್ಚೇನೂ ಲಾಭವಾಗುವ ಸಂಭವವಿಲ್ಲ. ಯಾಕೆಂದರೆ ಕರ್ನಾಟಕದಲ್ಲಿ ಕಾಂಗ್ರೆಸ್ ನೌಕೆಯನ್ನು ಕಟ್ಟಕಡೆಯದಾಗಿ ಮುಳುಗಿಸಿದ ಮಹಾ ನಾವಿಕರೇ ಕೃಷ್ಣ. ಖುದ್ದು ತಾವೇ ಮುಖ್ಯಮಂತ್ರಿಯಾಗಿ ಎದುರಿಸಿದ 2004ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ಬಲವನ್ನು 130 ರಿಂದ ಹಠಾತ್ತನೇ 60ಕ್ಕೆ ಇಳಿಸಿದ ಮಹಾನ್ ಸಾಮರ್ಥ್ಯವಿರುವ ಕೃಷ್ಣಾಗಮನದಿಂದ ವಿಸ್ಮಯವನ್ನು ನಿರೀಕ್ಷಿಸಲಾಗುವುದಿಲ್ಲ.



ಅಧಿಕಾರದಲ್ಲಿ ಇದ್ದಷ್ಟೂ ದಿನ ಸಿಲಿಕಾನ್ ಕಲ್ಪನೆಯಲ್ಲಿ ಬೆಂಗಳೂರು ನಗರವನ್ನಷ್ಟೇ ಕರ್ನಾಟಕವನ್ನಾಗಿಸಿದ ಅಪಖ್ಯಾತಿಯೂ ಕೃಷ್ಣರ ಬೆನ್ನಿಗಿದೆ. ಇದರ ಗಂಭೀರತೆ ಎಂತಹದ್ದಿತ್ತೆಂದರೆ 2004ರ ಚುನಾವಣೆಯಲ್ಲಿ ತನ್ನ ಸ್ವಕ್ಷೇತ್ರ ಮದ್ದೂರಿನಲ್ಲಿ ಸೋಲಿನ ಭೀತಿಗೆ ಬಿದ್ದು ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಮರ್ಯಾದೆ ಉಳಿಸಿಕೊಂಡಿದ್ದರು. ಈಗಲೂ ಗ್ರಾಮೀಣ ಭಾಗದ ಮತದಾರರಿಗೆ ಕೃಷ್ಣ ವಿದೇಶಿ ಕೂಸು. ಹಾಗಾಗಿ ಮಾಜಿ ಕೇಂದ್ರ ಮಂತ್ರಿಯೆಂಬ ಹೈಪ್ ನೀಡಲು ಹೋದರೆ ಜನರಿಂದ ಕೃಷ್ಣ ರಾಷ್ಟ್ರೀಯ ನಾಯಕನ ಗೆಟಪ್ಪಿನಲ್ಲಿ ಮತ್ತಷ್ಟೂ ದೂರವಾಗುತ್ತಾರೆಯೇ ಹೊರತು ಪ್ರಾದೇಶಿಕ ಹೋರಾಟಗಾರನಾಗಿ ಪಕ್ಷಕ್ಕೆ ಮತಗಳನ್ನಂತೂ ಗಿಟ್ಟಿಸಿ ಕೊಡಲಾರರು.

ಇನ್ನು ಕೃಷ್ಣ ಪಾಲಿಗೆ ಹಳೇ ಮೈಸೂರು ಭಾಗದ ಒಕ್ಕಲಿಗ ಫ್ಯಾಕ್ಟರ್ ಕೈ ಹಿಡಿಯುವುದೂ ಡೌಟು. 2004ರ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಅವಧಿಯಲ್ಲಿ ದೇವೇಗೌಡರ ದೂರದೃಷ್ಟಿಯ ಡೀಲ್‌ನಿಂದಾಗಿ ಕಾಂಗ್ರೆಸ್ ಕೃಷ್ಣರನ್ನು ರಾಜ್ಯ ರಾಜಕಾರಣದಿಂದ ವಿತ್‌ಡ್ರಾ ಮಾಡಿ ಮಹಾರಾಷ್ಟ್ರದ ರಾಜ್ಯಪಾಲರನ್ನಾಗಿಸಿದಾಗಲೇ ಒಕ್ಕಲಿಗರ ಲೀಡರ್‌ನ ಪಟ್ಟ ಕಳೆದುಕೊಂಡಿದ್ದರು. ಕುಮ್ಮಿ-ಯಡ್ಡಿಯ ಕಿತ್ತಾಟದಲ್ಲಿ ಲಿಂಗಾಯತ, ಒಕ್ಕಲಿಗರೆಂಬ ಜಾತಿ ಧ್ರುವೀಕರಣವಾದ ಮೇಲಂತೂ ಒಕ್ಕಲಿಗರು ಹೊರೆ ಹೊತ್ತ ಮಹಿಳೆಯತ್ತಲೇ ಒಲವು ಹೊಂದಿರುವುದು ಖಾತ್ರಿಯಾಗಿದೆ. ಚುನಾವಣೆ ಹತ್ತಿರದಲ್ಲೇ ಇರುವುದರಿಂದ ಇದನ್ನೂ ಮೀರಿ ಒಕ್ಕಲಿಗರ ಮತ ಕೀಳುವ ಉತ್ಸಾಹವನ್ನಾಗಲಿ, ಚೈತನ್ಯವನ್ನಾಗಲಿ ವಯಸ್ಸು ಅವರಲ್ಲಿ ಉಳಿಸಿಲ್ಲ.

ಹಾಗೊಮ್ಮೆ ಕೃಷ್ಣರ ಚಮತ್ಕಾರದ ಮೇಲೆ ಕಾಂಗ್ರೆಸ್‌ಗೆ ನಂಬಿಕೆ ಇದ್ದಿದ್ದರೆ 2008ರ ಚುನಾವಣೆಯಲ್ಲೇ ಅವರನ್ನು ರಾಜ್ಯ ರಾಜಕಾರಣಕ್ಕಿಳಿಸಿ ಅಧಿಕಾರದ ಗದ್ದುಗೆ ಏರುತ್ತಿತ್ತು. ಅಷ್ಟಕ್ಕೂ ಬರೋಬ್ಬರಿ ಒಂಬತ್ತು ವರ್ಷದ ನಂತರ ಅವರ ವರ್ಚಸ್ಸನ್ನು ಬಳಸಿಕೊಳ್ಳಬೇಕೆಂದು ತಡವಾಗಿ ಜ್ಞಾನೋದಯವಾಗುವಂತಹ ಎಳಸು ಪಕ್ಷ ಕಾಂಗ್ರೆಸ್ ಅಲ್ಲ. ಇದನ್ನೆಲ್ಲಾ ಗಮನಿಸಿದರೆ ಕಾಂಗ್ರೆಸ್ ಕೃಷ್ಣರನ್ನು ಗೌರವಯುತವಾಗಿ ಮನೆಗೆ ಕಳುಹಿಸಲು ರಾಜ್ಯ ರಾಜಕಾರಣದ ನೆಪ ಹೇಳುತ್ತಿರುವುದು ಸ್ಪಷ್ಟವಾಗುತ್ತದೆ.

ಹಾಗೆ ನೋಡಿದರೆ ಕೃಷ್ಣರ ಎಂಟ್ರಿಯಿಂದ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಲಾಭವಾಗುವುದಕ್ಕಿಂತ ಹೊಸ ತಲೆನೋವು ಹುಟ್ಟಿಕೊಳ್ಳುವುದೇ ಹೆಚ್ಚು. ಈಗಾಗಲೆ ಕೆಪಿಸಿಸಿ ಅಧ್ಯಕ್ಷಗಾದಿಗೆ ಶಾಮನೂರು ಶಿವಶಂಕರಪ್ಪ ನೇತೃತ್ವದಲ್ಲಿ ಗುಂಪುಗಾರಿಕೆ ಶುರುವಾಗಿ, ಕಾಂಗ್ರೆಸ್ ಒಡೆದ ಮನೆಯಂತಾಗಿದೆ. ಈ ಗುಂಪುಗಾರಿಕೆಯನ್ನು ಶಮನ ಮಾಡುವ ಜವಾಬ್ದಾರಿಯನ್ನು ಕೃಷ್ಣರಿಗೆ ನೀಡಲಾಗುತ್ತದೆಂದು ಹೈಕಮಾಂಡ್ ಪಟಾಕಿ ಸಿಡಿಸುತ್ತಿದೆಯಾದರೂ ಕೃಷ್ಣರದ್ದೇ ಮತ್ತೊಂದು ಗುಂಪು ಹುಟ್ಟಿಕೊಳ್ಳುವ ಬಗ್ಗೆ ಅದಾಗಲೆ ಚರ್ಚೆಗಳು ಶುರುವಾಗಿವೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯ ರಾಜಕಾರಣಕ್ಕೆ ಕೃಷ್ಣ ಮರಳಲು ಮುಂದಾದಾಗ ತಡೆದ ಕಾಂಗ್ರೆಸ್ಸಿಗರೇ ಈಗ ಕೃಷ್ಣರ ಪಾರುಪತ್ಯಕ್ಕೆ ಒಪ್ಪದೆ ಮುನಿದು ಕೂರಬಹುದು.

ಅಷ್ಟಕ್ಕೂ ಕೃಷ್ಣರ ಪ್ರಾಬಲ್ಯ ಅಂತ ಇದ್ದದ್ದೇ ಬೆಂಗಳೂರು ನಗರ ಜಿಲ್ಲೆಯಲ್ಲಿ. ಆದರೀಗ ಅದು ಸಂಪೂರ್ಣ ಬಿಜೆಪಿ ವಶದಲ್ಲಿದೆ. ಬೆಂಗಳೂರಿನ 28 ಕ್ಷೇತ್ರಗಳಲ್ಲಿ 17ರಲ್ಲಿ ಮತ್ತು 198 ಬಿಬಿಎಂಪಿ ವಾರ್ಡ್‌ಗಳಲ್ಲಿ 110ರಲ್ಲಿ ಬಿಜೆಪಿ ಪತಾಕೆ ಹಾರಾಡುತ್ತಿರುವುದರಿಂದ ಕೃಷ್ಣರ 'ಸೇಫ್‌ಜೋನ್ ಕೂಡಾ ಕೈಗೆ ಎಟುಕುವಂತಿಲ್ಲ. ಹಾಗಾಗಿ ಎಸ್.ಎಂ.ಕೃಷ್ಣರ ರೀಎಂಟ್ರಿ ಕಾಂಗ್ರೆಸ್‌ಗೆ ಭಯಾನಕ ಬದಲಾವಣೆ ತರುತ್ತದೆನ್ನುವ ಅವರ ಬೆಂಬಲಿಗರ ನಿರೀಕ್ಷೆಗಳು, ನಿರೀಕ್ಷೆಗಳಾಗೇ ಉಳಿಯಲಿವೆ.

ರಾಷ್ಟ್ರ ರಾಜಕಾರಣದಲ್ಲೂ ಕೃಷ್ಣ ಕಾಂಗ್ರೆಸ್‌ಗೆ ಭಾರೀ ಲಾಭವನ್ನೇನು ತಂದುಕೊಟ್ಟಿಲ್ಲ. ಪೋರ್ಚುಗಲ್ ಪ್ರತಿನಿಧಿಯ ಭಾಷಣವನ್ನೇ ಭಟ್ಟಿ ಇಳಿಸಿದ್ದ ಕೃಷ್ಣರನ್ನು ಫಾರಿನ್ ಗ್ರ್ಯಾಜುಯೇಟ್ ಎಂಬ ಕಾರಣಕ್ಕೇನೋ ವಿದೇಶಾಂಗ ಸಚಿವರನ್ನಾಗಿಸಿದ ಯುಪಿಎ ಸರ್ಕಾರಕ್ಕೆ ಸಿಕ್ಕಿದ್ದು ಹೀನಾ ರಬ್ಬಾನಿ ಖರ್ ಜೊತೆಗಿನ ಅನಗತ್ಯ ಮುದ್ದಾದ ಫೋಟೋಗಳು ಮಾತ್ರ! ಇದೆಲ್ಲವನ್ನೂ ಅಳೆದು ತೂಗಿದ ಸೋನಿಯಾ ಮೇಡಮ್ ಬಲೂನ್ ಒಡೆಯುವ ಮುನ್ನವೇ ಗೌರವಯುತವಾಗಿ ಗಾಳಿ ತೆಗೆದು ಪಕ್ಕಕ್ಕಿರಿಸಿದ್ದಾರೆ. ಇದು ಗೊತ್ತಿಲ್ಲದವರು ಕೃಷ್ಣರ ಕ್ಲೈಮ್ಯಾಕ್ಸ್ ಬಗ್ಗೆ ವಿಪರೀತ ಬಿಲ್ಡಪ್ ನೀಡಿಕೊಂಡು ಕನಸು ಕಾಣುತ್ತಿದ್ದಾರಷ್ಟೆ.

ಗೆರಿಲ್ಲಾ ಯುದ್ಧದ ಹರಿಕಾರ ಸಂಗೊಳ್ಳಿ ರಾಯಣ್ಣ

ವಾಸ್ತವದಲ್ಲಿ ಸಂಗೊಳ್ಳಿ ರಾಯಣ್ಣ ಎಂತಹ ...ನಿಕನಾಗಿದ್ದ, ಜನನಾಯಕ ...ಾಗಿದ್ದ ಎಂದು ತೋರುವ ...ಾಕೇತ್ ರಾಜನ್ ಅವರ ಲೇಖನ ಇಲ್ಲಿದೆ.

...ಕಿತ್ತೂರು ಸಂಸ್ಥಾನಕ್ಕೆ ಸೇರಿದ್ದ ಸಂಗೊಳ್ಳಿ ...ದವನಾಗಿದ್ದ ರಾಯಣ್ಣ ಕಿತ್ತೂರು ದೇಸಾಯಿಗಳ ... ಅನುಚರನಾಗಿದ್ದ ಹಾಗೂ ಸೈನ್ಯದಿಂದ ಹಲವು ... ಜಮೀನನ್ನು ಗುತ್ತಿಗೆ ಮೇಲೆ ಪಡೆದಿದ್ದ ರೈತನಾಗಿದ್ದ. ...ುಳಿದ ಕುರುಬ ಜನಾಂಗಕ್ಕೆ ಸೇರಿದ್ದ ಅವನು ತನ್ನ ...ಕಾರಣಕ್ಕಾಗಿಯೇ ಹಳ್ಳಿಯ ಕಾವಲುಗಾರ ಕೂಡ ಆಗಿದ್ದ. ...ಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಚೆನ್ನಮ್ಮ ದಂಗೆ ...ಾಗ ಅದರಲ್ಲಿ ಭಾಗವಹಿಸಿದ್ದ ಐದು ಸಾವಿರ ಸಶಸ್ತ್ರ ...ೋರಾಟಗಾರರಲ್ಲಿ ಆಗಿನ್ನೂ 28 ವರ್ಷದವನಾಗಿದ್ದ ...ೊಳ್ಳಿ ರಾಯಣ್ಣ ಕೂಡ ಒಬ್ಬನಾಗಿದ್ದ. ಕಿತ್ತೂರು ...ಾಯ ಹತ್ತಿಕ್ಕಲ್ಪಟ್ಟಾಗ ರಾಯಣ್ಣ ಬಂಧಿತನಾಗಿದ್ದ. 1826 ... ಎಲ್ಲ ಬಂಧಿತರಿಗೂ ಸಾರ್ವತ್ರಿಕ ಕ್ಷಮೆ ನೀಡಿ, ...ಕೆಯೊಂದಿಗೆ ಬಿಡುಗಡೆ ಮಾಡಿದಾಗ ರಾಯಣ್ಣ ಕೂಡ ...ರಬಂದಿದ್ದ. ಬೈಲಹೊಂಗಲದಲ್ಲಿ ಚೆನ್ನಮ್ಮರನ್ನು ...ಮಲ್ಲಿಟ್ಟಿದ್ದಾಗ ತಾನು ಆಕೆಯ ದೂರದ ಸಂಬಂಧಿ ... ನೆಪದಲ್ಲಿ ಸಂಗೊಳ್ಳಿ ಆಕೆಯನ್ನು ಜೈಲಿನಲ್ಲಿ ಭೇಟಿ ...ತ ಆಗಿದ್ದ. ಕಿತ್ತೂರನ್ನು ಮತ್ತೆ ತಮ್ಮ ವಶಕ್ಕೆ ...ಮುಕೊಳ್ಳಬೇಕೆಂಬ ಕಿಚ್ಚು ಆತನಲ್ಲಿ ಹುಟ್ಟಿದ್ದೇ ...ಮ್ಮರನ್ನು ಜೈಲಿನಲ್ಲಿ ಕಂಡಿದ್ದರಿಂದ.

...ಸಂಗೊಳ್ಳಿಗೆ ಹಿಂದಿರುಗಿದ ರಾಯಣ್ಣನಲ್ಲಿ ಜಮೀನ್ದಾರಿ-...ಮ್ರಾಜ್ಯಶಾಹಿಗಳ ಬಗೆಗಿನ ಕೋಪ ...ಣಗೊಳ್ಳಲಾರಂಭಿಸಿತು. ಬಾಂಬೆ ವಲಯದ ಆಡಳಿತಕ್ಕೆ ...ೊಳ್ಳಿ ಗ್ರಾಮ ಸೇರಿದನಂತರ ಬ್ರಿಟಿಷ್ ಕಂಪನಿಯ ...ೀಮರು ಭೂಕಂದಾಯ ಸುಲಿಯುವ ಕಾರ್ಯಕ್ಕೆ ಕೈ ...ಕಿದರು. ಜಮೀನ್ದಾರಿ ಪದ್ಧತಿಯು ಕ್ರೌರ್ಯಕ್ಕೂ-...ಮ್ರಾಜ್ಯಶಾಹಿಗಳ ಷಡ್ಯಂತ್ರಕ್ಕೂ ಅವಿನಾಭಾವ ...ಂಧವಿದ್ದುದರಿಂದ ಕರ್ನಾಟಕದ ಬಡಜನತೆಯ ಮೇಲೆ ...ಳಿಗಮಾನ್ಯ ವ್ಯವಸ್ಥೆಯ ಹಿಡಿತ ಭದ್ರಗೊಂಡಿತ್ತು. ಸ್ಥಳೀಯ ...ಕರ್ಣಿಯ ಕುತಂತ್ರದಿಂದಾಗಿ ರಾಯಣ್ಣನ ಅರ್ಧ ...ಮೀನು ಖಬ್ಜವಾದರೆ ಇನ್ನುಳಿದ ಅರ್ಧ ಜಮೀನಿನ ...ಲೆ ದೊಡ್ಡ ಮೊತ್ತದ ಕಂದಾಯವನ್ನು ವಿಧಿಸಲಾಯಿತು. ...ೊಳ್ಳಿಯ ಮುನ್ಷಗುಟ್ಟಿ ಎಂಬ ಮತ್ತೋರ್ವ ಸಶಸ್ತ್ರ ...ಚರನ ಕತೆಯೂ ಅದೇ ಆಗಿದ್ದಿರಬಹುದು. ರಾಯಣ್ಣನೇ ...ಖಲಿಸಿರುವಂತೆ "ಹಳ್ಳಿಯ ಕುಲಕರ್ಣಿಯೊಂದಿಗೆ ನಡೆದ ...ದಿಂದಾಗಿ ಬೇಸತ್ತು" ರಾಯಣ್ಣ ಮತ್ತು ಮುನ್ಷಗುಟ್ಟಿ ...ಮ್ಮ ಜಮೀನನ್ನು ಕಳೆದುಕೊಂಡರಲ್ಲದೇ, ಊರಿನಲ್ಲಿ ...ಕ್ಷಿತವಾಗಿ ಬದುಕುವುದೂ ಅಸಾಧ್ಯವಾಗಿ ಸಂಗೊಳ್ಳಿಯನ್ನೇ ...ಬ್ಬ ಹೋಗಬೇಕಾಯಿತು.


... ಕಿತ್ತೂರು ಸಂಸ್ಥಾನವನ್ನು ಚೆನ್ನಮ್ಮನ ದತ್ತು ಪುತ್ರನಿಗೆ ...ಡಬೇಕೆಂಬುದು ರಾಯಣ್ಣನ ರಾಜಕೀಯ ...ಧ್ಯೇಯವಾಗಿದ್ದು ಅದು ಊಳಿಗಮಾನ್ಯ ವ್ಯವಸ್ಥೆಯ ...ವಾಗಿದ್ದಂತೆ ಮೇಲುನೋಟಕ್ಕೆ ಕಂಡುಬಂದರೂ; ...ಸ್ತವವಾಗಿ ಆತ ಆಗಿನ್ನೂ ಅಸ್ಪಷ್ಟವಾಗಿದ್ದ ಊಳಿಗಮಾನ್ಯ-...ಮ್ರಾಜ್ಯಶಾಹಿ ವಿರುದ್ಧದ ಆಕಾಂಕ್ಷೆಗಳನ್ನು ...ಪಡಿಸಲಾರಂಭಿಸಿದ್ದ. ಕಂದಾಯ ಇಲಾಖೆ ರೈತರ ಮೇಲೆ ...ರಿದ್ದ ಸುಸ್ತಿ ಬಡ್ಡಿಯನ್ನು ವಿರೋಧಿಸುತ್ತಿದ್ದ ರಾಯಣ್ಣ ...ಎ ರೈತರಿಗೂ, ದಾರಿದ್ರ್ಯದಲ್ಲಿ ಮುಳುಗಿದ್ದ ಒಕ್ಕಲು ...ರಿಗೂ ಭೂಹಂಚಿಕೆಯಾಗಬೇಕು ಎಂಬ ಧೋರಣೆ ...ಸಿದ್ದ. ಜಮೀನ್ದಾರಿ ರಾಜ-ರಾಣಿಯರ ಹುಚ್ಚು ...ಹಸಗಳನ್ನೇ ಕೇಂದ್ರವಾಗಿರಿಸಿಕೊಂಡಿರುವ ನಮ್ಮ ...ತಿಹಾಸಕಾರರು ಆ ಕಾಲದ ಘಟನೆಗಳನ್ನು ವಿಶ್ಲೇಷಿಸುವಾಗ ...ನಸಾಮಾನ್ಯರ ಹೋರಾಟಗಳನ್ನು ಗಣನೆಗೆ ತೆಗೆದುಕೊಳ್ಳದೆ ...ಬಿಟ್ಟಿದ್ದಾರೆ. ಅದೇ ಕಾಲದಲ್ಲಿ ವರ್ಗ ವ್ಯವಸ್ಥೆಯ ವಿರುದ್ಧ ...ಾಹಸಿಕ ಹೋರಾಟಗಳೂ ನಡೆಯುತ್ತಿದ್ದವು ಎಂಬುದನ್ನು ...ವು ಪರಿಗಣಿಸಲೇಬೇಕು.

ರೈತ ಮತ್ತು ಸೈನಿಕ ಎರಡೂ ಆಗಿದ್ದ ರಾಯಣ್ಣ ...ಳಿಗಮಾನ್ಯ ವ್ಯವಸ್ಥೆಯ ಪರವಾಗಿ ಸಶಸ್ತ್ರವಾಗಿದ್ದರೂ, ...ತನ ಅಂತಃಸಾಕ್ಷಿ ಬಲಿಷ್ಠ ಜಮೀನ್ದಾರಿ ಪದ್ಧತಿ ಮತ್ತು ...ಮ್ರಾಜ್ಯಶಾಹಿಗಳ ವಿರುದ್ಧವೂ ಆಗಿದ್ದುದರಿಂದ ಆತನ ...ಹೋರಾಟ ಮೂಲಭೂತವಾಗಿ ಬಡಒಕ್ಕಲು ...ಮುದಾಯದ ಪರವಾಗಿತ್ತು. ಆತನ ಈ ಉದ್ದೇಶ ಮತ್ತು ...ಮಾರ್ಗಗಳು ಆತನ ಸಿದ್ಧಾಂತದ ಬುನಾದಿಯಾಗಿದ್ದುದರಿಂದಲೇ ...ಮುದಾಯದ ಅಂಚಿನಲ್ಲಿದ್ದವರೂ ಆತನೊಂದಿಗೆ ...ಗುರುತಿಸುವಂತಾದದ್ದು. ರಾಯಣ್ಣನ ಸಂಗ್ರಾಮ ಕೇವಲ ...ದ್ದೇ ತಿಂಗಳು ನಡೆಯಿತಾದರೂ ಈ ಅಲ್ಪಾವಧಿಯಲ್ಲಿ ಯಾವ ರಾಜ-ರಾಣಿಯರಿಂದಲೂ ಸಾಧ್ಯವಾಗದಷ್ಟು ಜನರನ್ನು ಆತ ಅಣಿಗೊಳಿಸಿ ಜಾಗೃತಗೊಳಿಸಿದ್ದನು.

ರಾಯಣ್ಣ ಮತ್ತು ಆತನ ಚಳವಳಿಯನ್ನು ವಿಭಿನ್ನ ದೃಷ್ಟಿಕೋನದಿಂದ ನೋಡಿದಾಗ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧದ ಆತನ ಹೋರಾಟದ ಎರಡು ಪ್ರಮುಖ ಅಂಶಗಳು ಗೋಚರಿಸುತ್ತವೆ. ಜನಸಾಮಾನ್ಯರಿಗೆ ಸಲ್ಲಬೇಕಾದ ನ್ಯಾಯದ ಬಗ್ಗೆ ಆತನಲ್ಲಿ ಎಷ್ಟು ಅಭಿಮಾನವಿತ್ತೆಂದರೆ ಅವರನ್ನು ಆತ ಗೌರವದಿಂದ ಕಾಣುತ್ತಿದ್ದ. ತನ ನಾಯಕತ್ವವನ್ನು ಆತ ಎಷ್ಟು ಗಂಭೀರವಾಗಿ ಪರಿಗಣಿಸುತ್ತಿದ್ದನೆಂದರೆ ತನ್ನ ಸೈನ್ಯಾಧಿಕಾರಿಗಳಾಗಲೀ; ಸೈನಿಕರಾಗಲೀ ಜನರ ಮೇಲೆ ಅತ್ಯಾಚಾರಗಳನ್ನು ಎಸಗದಂತೆ ಎಚ್ಚರ ವಹಿಸುತ್ತಿದ್ದ; ಹಾಗೆ ಎಸಗಿದಾಗ ತನ್ನ ಸೈನಿಕರಿಗೇ ಶಿಕ್ಷೆಯನ್ನು ವಿಧಿಸುತ್ತಿದ್ದ. ಉದಾಹರಣೆಗೆ ಬಾಪು ಭಂಡಾರಿ ಎಂಬ ಸೈನ್ಯಾಧಿಕಾರಿ ಹಡಲಗಿ ಮೇಲೆ ದಾಳಿ ನಡೆಸಿದಾಗ, ಮುದುಕನೊಬ್ಬನ ಮಕ್ಕಳು ಮತ್ತು ಜಾನುವಾರುಗಳು ಬೆಂಕಿಯಲ್ಲಿ ಸಿಕ್ಕಿ ಭಸ್ಮವಾಗಿದ್ದರು. ಇದು ರಾಯಣ್ಣನಿಗೆ ಗೊತ್ತಾದ ತಕ್ಷಣ ಆ ಮುದುಕನಿಗೆ ಪರಿಹಾರ ಧನವನ್ನು ನೀಡಿದ್ದ. ಹಾಗೆಯೇ ಇನ್ನೊಮ್ಮೆ ಬ್ರಾಹ್ಮಣ ಮಹಿಳೆಯೊಬ್ಬಳು ಬಾಪು ಭಂಡಾರಿ ತನ್ನ ಗಂಡನನ್ನು ಕಟ್ಟಿ ಹಾಕಿ ಸಾಯಿಸುವುದಾಗಿ ಬೆದರಿಸುತ್ತಿದ್ದಾನೆ ಎಂದು ಕಣ್ಣೀರಿಟ್ಟಾಗ ತಕ್ಷಣವೇ ಆ ಬ್ರಾಹ್ಮಣನನ್ನು ಬಿಡುಗಡೆ ಮಾಡಬೇಕೆಂದು ರಾಯಣ್ಣ ಆದೇಶಿಸಿದ್ದ. ಆದರೆ ಈತನ ಆದೇಶ ಮುಟ್ಟುವ ಮುನ್ನವೇ ದುರಂತ ಸಂಭವಿಸಿತ್ತು. ಅದಾದನಂತರ ಬಾಪು ಭಂಡಾರಿಗೆ ಶಿಕ್ಷೆಯನ್ನು ವಿಧಿಸಲಾಗಿ ರಾಯಣ್ಣನ ಸಂಗಡಿಗನೊಬ್ಬ ಕೊಟ್ಟ ಹೊಡೆತದಿಂದಲೇ ಆತ ಅಸುನೀಗಿದ್ದ.

ರಾಯಣ್ಣ ಬಿಟ್ಟುಹೋಗಿರುವ ಹೇಳಿಕೆಗಳಿಂದ ಆತ ಸಂಗ್ರಹಿಸಿದ್ದ ಅಥವಾ ವಶಪಡಿಸಿಕೊಂಡಿದ್ದ ಹಣದ ಲೆಕ್ಕವನ್ನು ದಕ್ಷತೆಯಿಂದ ನಿರ್ವಹಿಸಿದ್ದ ಎಂದು ಗೊತ್ತಾಗುತ್ತದೆ. ಹಾಗೆಯೇ ಆ ಹಣವನ್ನು ತನ್ನ ಸೈನಿಕರ ಆಹಾರಕ್ಕೆ ಮಾತ್ರ ವಿನಿಯೋಗಿಸಿದ್ದ ಎಂಬುದು ಕೂಡ ಮನದಟ್ಟಾಗುತ್ತದೆ. ರಾಯಣ್ಣ ಎಂದೂ ಕೊಳ್ಳೆ ಹೊಡೆಯಲಿಲ್ಲ, ಕದಿಯಲಿಲ್ಲ.

ರಾಯಣ್ಣನ ಹೋರಾಟದ ಮತ್ತೊಂದು ಪ್ರಮುಖ ಅಂಶ ಯಾವುದೆಂದರೆ ಆತನೊಂದಿಗೆ ಎಲ್ಲಾ ಜಾತಿಯ ಜನರಿದ್ದದ್ದು. ಆತನೊಂದಿಗೆ ಬಂಧಿತರಾಗಿದ್ದ ಹನ್ನೆರಡು ಮಂದಿಯಲ್ಲಿ, ಐವರು ಬೇಡ ಜನಾಂಗದವರು, ಇಬ್ಬರು ಲಿಂಗಾಯತರು, ಓರ್ವ ಪಂಚಮಸಾಲಿ, ಓರ್ವ ಮುಸ್ಲಿಂ, ಒಬ್ಬ ಮರಾಠ, ಒಬ್ಬ ನಾರ್ವೇಕರ, ಓರ್ವ


ಸಂಗೊಳ್ಳಿ ರಾಯಣ್ಣ ಹುತಾತ್ಮನಾದ ಸ್ಥಳ(ನಂದಗಡ)ದಲ್ಲಿ ನೆಟ್ಟಿರುವ ಆಲದ ಮರ

ಜೈನಸಮುದಾಯಕ್ಕೆ ಸೇರಿದವರಾಗಿದ್ದರು. ರಾಯಣ್ಣ ಸ್ವತಃ ಕುರುಬ ಜಾತಿಗೆ ಸೇರಿದವನಾಗಿದ್ದ. ಹಾಗೆಯೇ ಜನಪದ ಹಾಡುಗಳಲ್ಲಿ ವ್ಯಕ್ತವಾಗಿರುವಂತೆ ಅವನೊಂದಿಗೆ ಬೋವಿ ಜಾತಿಯವರಲ್ಲದೆ, ಪೋರ್ಚುಗೀಸರು ಮೊಜಾಂಬಿಕ್‌ನಿಂದ ಗೋವಾಗೆ ಅಡಿಯಾಳುಗಳಾಗಿ ತಂದಿದ್ದ ಸಿದ್ಧಿ ಜನಾಂಗದವರೂ ಇದ್ದರು. ಕಿತ್ತೂರಿನ ಪಶ್ಚಿಮ ಭಾಗದಲ್ಲಿ ವಾಸಿಸುತ್ತಿದ್ದ ಈ ಸಿದ್ಧಿಗಳು ರಾಯಣ್ಣನ ಅಂಗರಕ್ಷಕರಾಗಿದ್ದರು. ಗಜಾವೀರಾ ಎಂಬ ಸಿದ್ಧಿಯಂತೂ ರಾಯಣ್ಣನ ಸಾವಿನ ಸುದ್ದಿ ಕೇಳಿ ಆತ್ಮಹತ್ಯೆ ಮಾಡಿಕೊಂಡ.

ಹೀಗೆ ಸಮುದಾಯದ ಎಲ್ಲಾ ವರ್ಗಗಳ ಜನರನ್ನು ರಾಯಣ್ಣ ಸೇರಿಸಿದ್ದರೂ, ಅವರ್‍ಯಾರೂ ಜಮೀನ್ದಾರರಾಗಿರಲಿಲ್ಲ ಎಂಬ ಅಂಶ ಆತನ ಹೋರಾಟವು ಯಾರ ಪರವಾಗಿತ್ತು ಎಂಬುದನ್ನು ಸೂಚಿಸುತ್ತದೆ; ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧದ ಅದಿಪಾಯ ಮತ್ತು ವ್ಯಾಪ್ತಿ ಅರ್ಥವಾಗುತ್ತದೆ.

ಆದರೆ ರಾಯಣ್ಣನ ಹೋರಾಟ ಕೇವಲ ಭೂರಹಿತರ ಪರವಾಗಿ ಇರಲಿಲ್ಲ, ಆತ ವರ್ಗ, ಜಾತಿ ಭೇದವನ್ನು ಅಳಿಸಲು ಅನ್ನದಾಸೋಹ ಪದ್ಧತಿಯನ್ನೂ ಜಾರಿಗೆ ತಂದಿದ್ದ. ಹೀಗೆ ಮಾಡುವ ಮೂಲಕ ಭೂರಹಿತರ ಹೋರಾಟಕ್ಕೆ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧದ ತಿರುವನ್ನು ನೀಡಿದ್ದ ರಾಯಣ್ಣ. ಈ ಸಂಗ್ರಾಮ ಜಮೀನ್ದಾರಿ ಅಧಿಪತ್ಯದಲ್ಲಿದ್ದಿದ್ದರೆ ಅದರಲ್ಲಿ ಈ ಸಾಧ್ಯತೆಗಳಾಗಲೀ, ಅಂಶಗಳಾಗಲೀ ಅರಳಲು ಅಸಾಧ್ಯವಾಗುತ್ತಿರಲಿಲ್ಲ.

ಹೀಗೆ, ಬಡ ರೈತಾಪಿಗಳಿಂದ ದೂರವೇ ಉಳಿಯುತ್ತಿದ್ದ ಜಮೀನ್ದಾರರನ್ನು ಹೊರತುಪಡಿಸಿ ರಾಯಣ್ಣ ಸಂಘಟಿಸಿದ ಹೋರಾಟ ರೈತಾಪಿಗಳ ಗೆರಿಲ್ಲಾ ಯುದ್ಧಕ್ಕೆ ನಾಂದಿ ಹಾಡಿತು.

ಬೆಳೆದ ಸೈನ್ಯ

1830 ರ ಜನವರಿ 5 ರಂದು ಬಿಡಿ ಗ್ರಾಮದಲ್ಲಿದ್ದ ಸರ್ಕಾರಿ ಕಚೇರಿಗೆ ಬೆಂಕಿ ಹಚ್ಚುವ ಮೂಲಕ ತನ್ನ ಹೋರಾಟವನ್ನು ರಾಯಣ್ಣ ಪ್ರಾರಂಭಿಸಿದಾಗ ಅಂದು ಆತನೊಂದಿಗೆ ಇದ್ದವರ ಸಂಖ್ಯೆ ಕೇವಲ ನೂರು. ಆದರೆ ನಾಲ್ಕು ತಿಂಗಳ ನಂತರ ಏಪ್ರಿಲ್ 8 ರಂದು ರಾಯಣ್ಣನ ಬಂಧನವಾದಾಗ ಆತನೊಂದಿಗೆ ಒಂದು ಸಾವಿರ ಬಂಡಾಯಗಾರರಿದ್ದರು. ಈ ಅಂಶವನ್ನು ಧಾರವಾಡದ ಕಲೆಕ್ಟರ್ ಆಗಿದ್ದ ನಿಸ್ಬೆಟ್‌ರವರು ತಮ್ಮ ಪತ್ರದಲ್ಲಿ ಹೀಗೆ ದಾಖಲಿಸಿದ್ದಾರೆ: "ದಂಗೆಕೋರರ ಸಂಖ್ಯೆ ವೇಗವಾಗಿ ಹೆಚ್ಚಾಗುತ್ತಿದ್ದು ಇದನ್ನು ತಕ್ಷಣವೇ ತಡೆಯದಿದ್ದರೆ ಇನ್ನೂ ಹೆಚ್ಚು ಜನ ಅವರನ್ನು ಸೇರುವುದರಲ್ಲಿ ಯಾವ ಸಂಶಯವೂ ಇಲ್ಲ....."

ಅಮಲ್ದಾರರ ಮುಂದೆ ರಾಯಣ್ಣ ನೀಡಿದ "ತಪ್ಪೊಪ್ಪಿಗೆ" ಹೇಳಿಕೆಯಲ್ಲಿ ಆತ ಹೇಗೆ ತನ್ನ ಹೋರಾಟಕ್ಕೆ ಜನರನ್ನು ಒಗ್ಗೂಡಿಸಿದ ಎಂದು ಕಾಣಬಹುದು; "ಮಲೆನಾಡು ಕ್ಷೇತ್ರದ ಒಂದು ಸಾವಿರ ಜನ ಸೇರಿದರು. ಅವರನ್ನು ಕರೆದೊಯ್ದು ನಾವು ಖಾನಾಪುರಕ್ಕೆ ಬೆಂಕಿ ಹಚ್ಚಿ ಅಲ್ಲಿ ಕೊಳ್ಳೆ ಹೊಡೆದು ಶಮ್‌ಶೇರ್‌ಗಡ್‌ಗೆ ಹಿಂದಿರುಗಿದೆವು. ಅಂದು ಮೂರು ಸಾವಿರ ಜನ ಸೇರಿಕೊಂಡರು. ಅವರನ್ನು ಇಟಗಿಗೆ ಕರೆದುಕೊಂಡು ಹೋದ ನಾವು ಅಲ್ಲಿನ ಜಮೀನ್ದಾರರಿಂದ ಐದು ಸಾವಿರ ರೂಪಾಯಿಗಳ ಚಂದಾ ಪಡೆದೆವು."

ಹೀಗೆ ರಾಯಣ್ಣನ ನಾಯಕತ್ವದ ಸಶಸ್ತ್ರ ಹೋರಾಟದಲ್ಲಿ ಜನರನ್ನು ಸಜ್ಜುಗೊಳಿಸಲಾಯಿತು. ಈ ಸೈನ್ಯ ನಡೆಸಿದ ಹಲವಾರು ದಾಳಿಗಳಿಗೆ ಸರ್ಕಾರಿ ಆಸ್ತಿಗಳು, ಭೂಕಂದಾಯ ದಾಖಲೆಗಳು ಗುರಿಯಾದವಲ್ಲದೇ, ಬ್ರಿಟಿಷ್ ಆಡಳಿತದಡಿ ಕುಪ್ಪಸಿದ್ದ ಭೂಮಾಲೀಕರು ಮತ್ತು ಅಧಿಕಾರಿಗಳು ಜನರಿಂದ ವಸೂಲಿ ಮಾಡಿದ್ದ ಹಣವನ್ನೂ ಹಿಂದೆ ಪಡೆಯಲಾಗಿತ್ತು. ಇಂತಹ ಪ್ರಕ್ರಿಯೆಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಜನಸಾಮಾನ್ಯರು ಪಾಲ್ಗೊಳ್ಳುತ್ತಿದ್ದರಲ್ಲದೆ, ಪ್ರತಿ ದಾಳಿಯ ನಂತರ ಅಲ್ಲಿನ ಜನ ರಾಯಣ್ಣನ ಸೈನ್ಯವನ್ನು ಸೇರುತ್ತಿದ್ದರು. ಅಂದರೆ, ಇದು ಬರಿ ಗೆರಿಲ್ಲಾಗಳ ಯುದ್ಧವಾಗಿರದೆ ಜನಸಾಮಾನ್ಯರ ಯುದ್ಧವಾಗಿ ಮಾರ್ಪಟ್ಟಿತ್ತು.

ರಾಯಣ್ಣನ ಸಶಸ್ತ್ರ ಸಂಗ್ರಾಮಕ್ಕೆ ಜನಸಮುದಾಯದ ಅಪಾರ ಬೆಂಬಲವಿತ್ತಲ್ಲದೆ, ಆತನ ಚಲನವಲನದ ಬಗ್ಗೆ ಯಾವ ಮಾಹಿತಿಯನ್ನೂ ಸರ್ಕಾರದ ದೂತರಿಗೆ ನೀಡದಂತೆ ಇತರೆ ಅನುಚರರೂ ಸಹಕರಿಸಿದ್ದರು. ಸಂಪ್‌ಗಾಂವ್ ಮೇಲೆ ದಾಳಿ ನಡೆಸಿದ ನಂತರ, ರಾಯಣ್ಣನನ್ನು ಹಿಂಬಾಲಿಸಲು ಬ್ರಿಟಿಷರು ಯತ್ನಿಸಿ ವಿಫಲರಾಗಿದ್ದನ್ನು ಕುರಿತು ಕಲೆಕ್ಟರ್ ನಿಸ್ಬೆಟ್‌ನವರು ಹೀಗೆ ದಾಖಲಿಸಿದ್ದಾರೆ:


"ಅಮಲ್ದಾರ್ ಮತ್ತು ಇತರರು ಹೇಳುವುದೇನೆಂದರೆ ಆ ಕ್ಷೇತ್ರದಲ್ಲಿನ ಹಳ್ಳಿಗಳ ಜನ ಬಂಡಾಯಗಾರರ ವಿರುದ್ಧ ಯಾವುದೇ ಮಾಹಿತಿಯನ್ನು ನೀಡಲು ತಯಾರಿಲ್ಲ; ಅಷ್ಟೇ ಅಲ್ಲ, ಆ ಹಳ್ಳಿಗರು ಬಂಡಾಯಗಾರರೊಂದಿಗೆ ಸಹಕರಿಸಿ, ಅವರಿಗೇ ಮಾಹಿತಿ ನೀಡುತ್ತಿದ್ದಾರಲ್ಲದೇ ಅವರ ದಾಳಿಗಳನ್ನೂ ಬೆಂಬಲಿಸುತ್ತಿದ್ದಾರೆ...."

ಜನವರಿ 14 ರಂದು ನಿಸ್ಬೆಟ್ ಬರೆದ ಮತ್ತೊಂದು ಪತ್ರದಲ್ಲಿ ರಾಯಣ್ಣನ ಹೋರಾಟಕ್ಕೆ ಜನಸಮುದಾಯದ ಬೆಂಬಲವಿದೆಯೆಂದು ಸಾಬೀತುಪಡಿಸಿ "ಈ ಬಂಡುಕೋರರನ್ನು ಕಂಡವರ್‍ಯಾರೂ ನಮಗೆ ಸರಿಯಾದ ಮಾಹಿತಿ ನೀಡುತ್ತಿಲ್ಲ, ಬದಲಾಗಿ ತಪ್ಪು ಮಾಹಿತಿ ನೀಡಿ ನಮ್ಮ ದಾರಿ ತಪ್ಪಿಸುತ್ತಿದ್ದಾರೆ.... ನಮ್ಮ ಚಲನವಲನಗಳ ಬಗ್ಗೆ ಬಂಡುಕೋರರಿಗೆ ಯಾರು ಮಾಹಿತಿ ನೀಡುತ್ತಿದ್ದಾರೆ ಎಂದು ಪತ್ತೆ ಹಚ್ಚಲು ಇನ್ನೂ ಸಾಧ್ಯವಾಗಿಲ್ಲ" ಎಂದು ಹೇಳಿದ್ದಾರೆ.

ಬೆಳಗಾವಿ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ವ್ಯಾಪಿಸಿದ ಕಿತ್ತೂರು ಭೂಪ್ರದೇಶವನ್ನು ರಾಯಣ್ಣ ತನ್ನ ಗೆರಿಲ್ಲಾ ಯುದ್ಧಕ್ಕೆ ಸೂಕ್ತವಾಗಿ ಬಳಸಿಕೊಂಡನು. ಮಲೆನಾಡಿನ ಕಾಡುಗಳಂತೂ ರಾಯಣ್ಣನ ಸೈನ್ಯಕ್ಕೆ ಭದ್ರಕೋಟೆಯಂತಾಯಿತು.

ಜನ ವಿರೋಧಿಗಳಾಗಿದ್ದ ಭೂಮಾಲೀಕರು, ಅಧಿಕಾರಿಗಳು ಮತ್ತು ಸಾಹುಕಾರಶಾಹಿ ಸೈನ್ಯವನ್ನು ಮಾತ್ರ ರಾಯಣ್ಣ ಗುರಿಯಾಗಿಟ್ಟಿದ್ದರಿಂದ ಆತನಿಗೆ ಅಪಾರ ಬೆಂಬಲ ಸಿಕ್ಕಿತ್ತು. ಈ ಕಾರಣದಿಂದಾಗಿಯೇ ರಾಯಣ್ಣನನ್ನು ಯುದ್ಧದ ಮೂಲಕ ಮುಗಿಸಲಾಗುವುದಿಲ್ಲವೆಂದು ಅರಿತ ಸರ್ಕಾರ, ಆತನನ್ನು ಮೋಸದಿಂದಲೇ ಸೆರೆಹಿಡಿಯುವ ಸಂಚು ರೂಪಿಸಿತು.

ಇದಕ್ಕೆ ಭೂಮಾಲೀಕರ ಮತ್ತು ದುಷ್ಟ ಅಧಿಕಾರಿಗಳ ಬೆಂಬಲ ಸಿಕ್ಕಿತು. ರಾಯಣ್ಣನ ಸೈನ್ಯ ಸೇರಿ ಒಳಗಿಂದಲೇ ಈ ರೈತ ಸಂಗ್ರಾಮವನ್ನು ನಾಶ ಮಾಡುವ ಜವಾಬ್ದಾರಿಯನ್ನು ಅಮಲ್ದಾರ ಕೃಷ್ಣರಾವ್‌ಗೆ ವಹಿಸಲಾಯಿತು. ಖುದ್ದಾಪುರದ ಪಟೇಲ ಲಿಂಗಣ್ಣ ಗೌಡ ತಾನೂ 300 ಜನರೊಂದಿಗೆ ರಾಯಣ್ಣನ ಸೈನ್ಯ ಸೇರುವುದಾಗಿ ಸೂಚಿಸಿದ. ಇದಕ್ಕೆ ರಾಯಣ್ಣ



ಒಪ್ಪಿ ಮಾರ್ಚ್ ತಿಂಗಳ ಹದಿನೈದು ದಿನಗಳ ಕಾಲ ಲಿಂಗಣ್ಣ ಗೌಡ ಎಲ್ಲ ಗೆರಿಲ್ಲಾ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದ. ಸ್ಟೋಕ್ಸ್ ದಾಖಲಿಸಿರುವಂತೆ: "ಒಂದು ದಿನ, ರಾಯಣ್ಣ ತನ್ನ ಶಸ್ತ್ರಾಸ್ತ್ರಗಳನ್ನು ಬದಿಗಿಟ್ಟು ಸ್ನಾನ ಮಾಡುತ್ತಿದ್ದ. ಆಗ ನೇಗಿನಹಾಳದ ಸಾದಿ ಲಕ್ಕಪ್ಪ ಎಂಬಾತ ಇದ್ದಕ್ಕಿದ್ದಂತೆ ರಾಯಣ್ಣನ ಮೇಲೆರಗಿ ಅವನನ್ನು ಬಂಧಿಸಿದ. ಅದೇ ವೇಳೆಗೆ ಇತರರು ಅವನ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡರು. ರಾಯಣ್ಣನ ಕೈಕಾಲುಗಳನ್ನು ಕಟ್ಟಿ ಹಾಕಿ ಆತನನ್ನು ಧಾರವಾಡಕ್ಕೆ ಕರೆತಂದರು."

ರಾಯಣ್ಣನನ್ನು ಬಂಧಿಸಲು ಸಹಾಯ ಮಾಡಿದ್ದಕ್ಕೆ ಕೃಷ್ಣರಾವ್‌ಗೆ ನಗದು ಬಹುಮಾನ ನೀಡಲಾಯಿತು. ರೈತರ ಸಂಗ್ರಾಮಕ್ಕೆ ದ್ರೋಹ ಬಗೆದ ಭೂಮಾಲೀಕರಿಗೂ ಪ್ರಶಸ್ತಿಗಳನ್ನು ನೀಡಲಾಯಿತು. ಅವರೆಲ್ಲರಿಗೆ ಮುನ್ನೂರು ರೂಪಾಯಿಗಳ ನಗದು ಸೇರಿದಂತೆ ಇಡೀ ಹಳ್ಳಿಗಳನ್ನೇ ಇನಾಮಾಗಿ ನೀಡಿತು ಬ್ರಿಟಿಷ್ ಸರ್ಕಾರ. ಲಿಂಗಣ್ಣ ಗೌಡನಿಗೆ ಕಿತ್ತೂರು ಸಮೀಪದ ಕಲೊಲಿ ಗ್ರಾಮ ಸಿಕ್ಕಿದರೆ, ಯೆಂಕನ ಗೌಡನಿಗೆ ಧಾರವಾಡದ ಹತ್ತಿರದ ಧೋಂ ಗ್ರಾಮ ದಕ್ಕಿತು.

ಆದರೆ ಕುರುಬ, ಬೇಡ, ಜೈನ, ಲಿಂಗಾಯತ, ಸಿದ್ಧಿ ಮುಸ್ಲಿಂ, ಪಂಚಮಸಾಲಿ ಸೇರಿದಂತೆ ವಿವಿಧ ಜಾತಿಗಳಿಂದ ಬಂದಿದ್ದ ರಾಯಣ್ಣ ಮತ್ತು ಸಂಗಡಿಗರಿಗೆ ಸಿಕ್ಕಿದ್ದು ಮರಣದಂಡನೆ.

ಆದರೂ 1837-38 ರಲ್ಲಿ ಕಿತ್ತೂರಿನಲ್ಲಿ ಬಂಡಾಯವೊಂದು ಸಣ್ಣದಾಗಿ ತಲೆ ಎತ್ತಿತ್ತು. ಕಿತ್ತೂರನ್ನು ಅಲುಗಾಡಿಸಿದ ಐದನೇ ಮತ್ತು ಕೊನೆಯ ಬಂಡಾಯ ಅದಾಗಿತ್ತು. ಆ ಬಂಡಾಯವನ್ನೂ ಹತ್ತಿಕ್ಕಲಾಯಿತು. ಆದರೆ ಬಂಡಾಯಕೋರರು ರಾಯಣ್ಣನಿಗೆ ದ್ರೋಹ ಬಗೆದಿದ್ದ ಖುದ್ದಾಪುರದ ಪಟೇಲ ಲಿಂಗಣ್ಣ ಗೌಡನನ್ನು ಕೊಂದು ಹಾಕಿದರು.

ತಾನು ನಿರಪರಾಧಿ ಎಂದೇ ಹೇಳಿದ ಸಂಗೊಳ್ಳಿ ರಾಯಣ್ಣ ತನ್ನ ಕಾರ್ಯಗಳನ್ನು ಸಮರ್ಥಿಸಿಕೊಳ್ಳುತ್ತಾ ಕರ್ನಾಟಕದ ಜನತೆಗೆ ಒಂದು ಸಂದೇಶವನ್ನು ಬಿಟ್ಟು ಹೋಗಿದ್ದಾನೆ. ನಂದಗಡ್‌ದಲ್ಲಿ "ಕಳ್ಳತನ" ಮಾಡಿದ್ದಕ್ಕೆ ಅಲ್ಲೇ ಆತನನ್ನು ನೇಣು ಹಾಕಬೇಕೆಂದು ನಿರ್ಧರಿಸಲಾಯಿತು. ಸ್ಟೋಕ್ಸ್ ಹೇಳಿರುವಂತೆ "ರಸ್ತೆಯಲ್ಲಿ ರಾಯಣ್ಣ ನೇಣುಗಂಬದತ್ತ ಹಾದುಹೋಗುತ್ತಿದ್ದಾಗ ಒಂದು ಸ್ಥಳವನ್ನು ತೋರಿಸಿ ಅಲ್ಲೇ ತನ್ನ ಹೆಣವನ್ನು ಹೂಳಬೇಕೆಂದು ಹೇಳಿದ. ಹಾಗೆಯೇ ಆಲದಮರವನ್ನು ನೆಡಬೇಕೆಂದೂ ರಾಯಣ್ಣ ಹೇಳಿದ. ಈಗ ನಂದಗಡ್ ರಸ್ತೆಯ ಬದಿಯಲ್ಲಿರುವ ಬೃಹದಾಕಾರದ ಆಲದಮರವೇ ರಾಯಣ್ಣನ ಸಮಾಧಿಯ ಮೇಲೆ ಬೆಳೆದದ್ದು ಎಂದು ಜನ ಹೇಳುತ್ತಾರೆ."

ರಾಯಣ್ಣನ ಕೊನೆ ಆಸೆಯೂ ಒಂದು ಸಾಧಾರಣ ರೈತನ ಆಸೆಯೇ ಆಗಿತ್ತು. ಹಾಗೆಯೇ ಸಾಹುಕಾರಶಾಹಿ ವಿರೋಧಿಯೂ ಆಗಿತ್ತು. ನೇಣುಗಂಬವನ್ನೇರಿದ ಸಂಗೊಳ್ಳಿ ರಾಯಣ್ಣನ ಕೊನೇ ಮಾತುಗಳು ಇವಾಗಿದ್ದವು: "ನನ್ನ ಕೊನೆ ಆಸೆ ಯಾವುದೆಂದರೆ ಮತ್ತೆ ನಾನು ಈ ದೇಶದಲ್ಲಿ ಜನ್ಮತಾಳಿ, ಈ ಪುಣ್ಯ ಭೂಮಿಯಿಂದ ಬ್ರಿಟಿಷರ ವಿರುದ್ಧ ಹೋರಾಟವನ್ನು ಮುಂದುವರಿಸುವುದು."

ಸಂಗೊಳ್ಳಿ ರಾಯಣ್ಣ ಜನಪರ ಹೋರಾಟಕ್ಕಾಗಿ ಹುತಾತ್ಮನಾದ. ಜನರ ಕಣ್ಮಣಿಯಾದ. ಆತನ ಬಗ್ಗೆ ಜನ ನೂರಾರು ಕಾವ್ಯಗಳನ್ನು ರಚಿಸಿದರು. ಅಸಹಾಯಕರ, ವರ್ಗಭೇದದ ವಿರುದ್ಧದ ಜನರ ಹೋರಾಟಕ್ಕೆ ಸಂಗೊಳ್ಳಿ ರಾಯಣ್ಣ ಸಂಕೇತವಾದ. ನಂದಗಡ್‌ನಲ್ಲಿ ಬಿತ್ತಿದ್ದ ಬೀಜ ಚಿಗುರೊಡೆಯುವ ಮುನ್ನವೇ ನಗರದಲ್ಲಿ ಗೆರಿಲ್ಲಾ ಯುದ್ಧ ಪ್ರಾರಂಭವಾಯಿತು. ಆ ಗಿಡದ ರೆಂಬೆ, ಕೊಂಬೆಗಳು ರೂಪಗೊಳ್ಳುವ ಮುನ್ನವೇ ಸಂಗೊಳ್ಳಿ ರಾಯಣ್ಣ ತ್ಯಾಗ, ಮತ್ತಾತನ ಕ್ರಾಂತಿ ಕರ್ನಾಟಕದ ಉತ್ತರ ತುದಿಯಿಂದ ಮಲೆನಾಡಿನವರೆಗೂ ಹಬ್ಬಿ ರೈತಾಪಿ ಸಮುದಾಯವನ್ನು ಬಡಿದೆಬ್ಬಿಸಿತು.

ಸಂಗ್ರಹಾನುವಾದ: **ಗೌರಿ ಲಂಕೇಶ್**

ಸಾಕೇತ್‌ರಾಜನ್ ಅವರ 'ಮೇಕಿಂಗ್ ಹಿಸ್ಟರಿ-ಭಾಗ 2' ಪುಸ್ತಕದಿಂದ

ಅದ್ದೂರಿ ಮಾತ್ರವಲ್ಲ, ಉದ್ದ ಕೂಡ!

ಪ್ರೇಕ್ಷಕರಲ್ಲಿ ಈಗಾಗಲೇ ಕುತೂಹಲವನ್ನು ಕೆರಳಿಸಿರುವ 'ಸಂಗೊಳ್ಳಿ ರಾಯಣ್ಣ' ಚಿತ್ರವನ್ನು ಹೈದರಾಬಾದ್ ಕರ್ನಾಟಕ ಮತ್ತು ಹಳೇ ಮೈಸೂರು ಪ್ರದೇಶಗಳಲ್ಲಿ ಬೇರೆಬೇರೆ ರೀತಿಯಲ್ಲಿ ತೆರೆ ಕಾಣಿಸುವ ಸುದ್ದಿ ಕೇಳಿಬರುತ್ತಿದೆ. ಅದೇನೆಂದರೆ ಹಳೇ ಮೈಸೂರು ವಿಭಾಗದಲ್ಲಿ ಈ ಚಿತ್ರ ಮೂರು ಗಂಟೆಗಳ ಕಾಲಾವಧಿಯದ್ದಾಗಿರುತ್ತದೆ. ಆದರೆ ಸಂಗೊಳ್ಳಿ ರಾಯಣ್ಣನ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಉತ್ತರ ಕರ್ನಾಟಕದಲ್ಲಿ ಈ ಚಿತ್ರವನ್ನು ಮೂರೂವರೆ ಗಂಟೆಗಳ ಕಾಲ ತೋರಿಸಬೇಕೆಂಬ ಇರಾದೆ ನಿರ್ಮಾಪಕ ಆನಂದ್ ಅಪ್ಪುಗೋಳ್ ಅವರದ್ದು.

ಅಂತೂ–ಇಂತೂ ಕನ್ನಡ ಚಿತ್ರರಂಗದ ಅತ್ಯಂತ ಅದ್ದೂರಿಯ, ಭಾರಿ ನಿರ್ಮಾಣದ ಚಿತ್ರವೆಂಬ ಹೆಗ್ಗಳಿಕೆಯ 'ಸಂಗೊಳ್ಳಿ ರಾಯಣ್ಣ' ಅದರ ಜೊತೆಜೊತೆಗೆ ಅತ್ಯಂತ ಸುದೀರ್ಘವಾದ ಚಿತ್ರವೆಂಬ ಹೆಗ್ಗಳಿಕೆಯನ್ನೂ ಗಳಿಸಲಿದೆ. ಈ ಹಿಂದೆ ಡಾ. ರಾಜ್‌ಕುಮಾರ್ ನಟಿಸಿದ್ದ 'ಮಯೂರ' ಚಿತ್ರ ಅತ್ಯಂತ ಸುದೀರ್ಘ ಕಾಲಾವಧಿಯ ಚಿತ್ರವಾಗಿತ್ತು ಎಂದು ಗಾಂಧಿನಗರದ ಚಿತ್ರಬ್ರಹ್ಮರು ಹೇಳುತ್ತಿದ್ದಾರೆ.

ಸೂಪರ್ ಸಂಗೊಳ್ಳಿ!



ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಅತ್ಯಂತ ಅದ್ದೂರಿ ವೆಚ್ಚದಲ್ಲಿ ನಿರ್ಮಾಣವಾಗಿರುವ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಸಿನಿಮಾ ಒಂದು ರೀತಿಯಲ್ಲಿ ಸಂಗೊಳ್ಳಿ ರಾಯಣ್ಣನ ದೇಶಾಭಿಮಾನವನ್ನು ಪ್ರದರ್ಶಿಸಿರುವ ಚಿತ್ರ ಮಾತ್ರವಲ್ಲ. ಅದರ ಜೊತೆಗೆ ಕನ್ನಡ ಚಿತ್ರರಂಗದ ಮಾನ ಮತ್ತು ಮರ್ಯಾದೆಯನ್ನು ಹೆಚ್ಚಿಸಿರುವ ಸಿನಿಮಾ ಎಂದರೆ ತಪ್ಪಾಗಲಾರದು. ಇತ್ತೀಚೆಗೆ ತಮಿಳು ಚಿತ್ರರಂಗದಲ್ಲಿ ಬಿರುಗಾಳಿ ಎಬ್ಬಿಸಿದ 'ಮಗಧೀರ' ಚಿತ್ರಕ್ಕಿಂತಲೂ ಕನ್ನಡದ 'ಸಂಗೊಳ್ಳಿ ರಾಯಣ್ಣ' ಒಂದು ಪಟ್ಟು ಹೆಜ್ಜೆ ಮುಂದಿದೆ ಎನ್ನಬಹುದು.

ಕನ್ನಡ ರಾಜ್ಯೋತ್ಸವ ದಿನದಂದೇ ಬಿಡುಗಡೆಯಾದ 'ಸಂಗೊಳ್ಳಿ ರಾಯಣ್ಣ' ಖಂಡಿತವಾಗಿಯೂ ಕನ್ನಡ ಚಿತ್ರರಂಗದಲ್ಲಿ ಒಂದು ಹೊಸ ಇತಿಹಾಸವನ್ನೇ ಬರೆದಿದೆ. ಈಗಿನ ಕಾಲದ ಜನರು ಐತಿಹಾಸಿಕ ಚಿತ್ರವನ್ನು ನೋಡುತ್ತಾರೆಯೇ ಎಂದು ಅಪಸ್ವರ ಎತ್ತುವ ಜನರಿಗೆ "ಚಿತ್ರ ಚೆನ್ನಾಗಿದ್ದರೆ ಜನ ನೋಡುತ್ತಾರೆ" ಎಂಬ ದಿಟ್ಟವಾದ ಉತ್ತರ ನೀಡಿದೆ. ಬೆಂಗಳೂರಿನ ಸುತ್ತಮುತ್ತ ಗುರುವಾರ ಜೋರಾಗಿ ಮಳೆ ಸುರಿಯುತ್ತಿದ್ದರೂ, ಮಳೆಯನ್ನು ಲೆಕ್ಕಿಸದೇ ಬೆಳಗಿನ ಜಾವದಿಂದಲೇ ಥಿಯೇಟರ್ ಮುಂದೆ ಜನ ಕ್ಯೂ ನಿಂತಿದ್ದರು. ಬೆಂಗಳೂರಷ್ಟೇ ಅಲ್ಲ, ಬಳ್ಳಾರಿ, ರಾಯಚೂರು ಜಿಲ್ಲೆಗಳಲ್ಲೂ ರಾಯಣ್ಣ ಅಭಿಮಾನಿಗಳು ಚಿತ್ರಮಂದಿರಗಳಿಗೆ ಲಗ್ಗೆ ಹಾಕಿದ್ದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನಾಗಿ ಅದ್ಭುತವಾಗಿ ನಟಿಸಿರುವ ದರ್ಶನ್ ನಮಗೆ ಮತ್ತೊಮ್ಮೆ ರಾಜ್‌ಕುಮಾರರ ಯುಗವನ್ನು ನೆನಪಿಸುತ್ತಾರೆ.

ಈತನಕ ನಮಗೆಲ್ಲ ಪೌರಾಣಿಕ, ಐತಿಹಾಸಿಕ ಚಿತ್ರವೆಂದರೆ ರಾಜ್‌ಕುಮಾರ್ ಮಾತ್ರ ನೆನಪಿಗೆ ಬರುತ್ತಿದ್ದರು. ಆದರೆ ಸಂಗೊಳ್ಳಿ ರಾಯಣ್ಣ ಪಾತ್ರಧಾರಿ ದರ್ಶನ್ ಕುದುರೆ ಏರಿ ಬರುವ ದೃಶ್ಯ ನೋಡಿದರೆ ಮೈ ರೋಮಾಂಚನವಾಗುತ್ತದೆ. ಹಾಗೆಯೇ ಕತ್ತಿ ವರಸೆ ದೃಶ್ಯಗಳಲ್ಲೂ ದರ್ಶನ್ ವೀರಾವೇಶದಿಂದ ಹೋರಾಡಿ ಜನರನ್ನು ಮೂಕವಿಸ್ಮಿತರನ್ನಾಗಿಸುತ್ತಾರೆ. ಆರು ಅಡಿ ಎತ್ತರದ, ಉತ್ತಮ ದೇಹದಾರ್ಢ್ಯದ, ಸ್ಫುರದ್ರೂಪಿಯೂ ಆದ ದರ್ಶನ್ ಈ ಚಿತ್ರದಲ್ಲಿ ಎಲ್ಲರೂ ಆಶ್ಚರ್ಯಪಡುವಷ್ಟು ಚೆಂದಾಗಿ ಕಾಣಿಸಿದ್ದಾರೆ ಮತ್ತು ನಟಿಸಿದ್ದಾರೆ. ಕಟ್ಟಾ ದೇಶಾಭಿಮಾನಿಯಾಗಿಯೂ, ಸ್ವಾತಂತ್ರ್ಯ ಹೋರಾಟಗಾರನಾಗಿಯೂ ದರ್ಶನ್ ಚಿತ್ರದುದ್ದಕ್ಕೂ ವಿಜೃಂಭಿಸಿದ್ದಾರೆ.

ಈ ಚಿತ್ರ ನೋಡಿದನಂತರ ಬಹುಶಃ ಸಂಗೊಳ್ಳಿ ರಾಯಣ್ಣನ ಪಾತ್ರಕ್ಕೆ ದರ್ಶನ್‌ಗಿಂತ ಯೋಗ್ಯವಾದ ನಟ ಕನ್ನಡದಲ್ಲಿ ಮತ್ತೊಬ್ಬ ಸಿಗುತ್ತಿರಲಿಲ್ಲ ಎಂದೆನಿಸುತ್ತಿದೆ. ದರ್ಶನ್‌ನ ಅಭಿನಯ, ಪ್ರತಿಭೆಯನ್ನು ಸಮರ್ಥವಾಗಿ ಬಳಸಿಕೊಂಡ ನಿರ್ದೇಶಕ ನಾಗಣ್ಣ ಅವರ



ಹಾಕಿದ ದುಡ್ಡು ವಾಪಸ್ಸು ಬರುತ್ತಾ?

ಚಾಲೆಂಜಿಂಗ್ ಸ್ಟಾರ್ ದರ್ಶನ್ ಇದೇ ಮೊದಲ ಬಾರಿಗೆ ಸಂಗೊಳ್ಳಿ ರಾಯಣ್ಣನಾಗಿ ಐತಿಹಾಸಿಕ ಪಾತ್ರದಲ್ಲಿ ಕಾಣಿಸಿ ಕೊಂಡಿರುವುದು ಕೂಡ ಈ ಚಿತ್ರದ ವಿಶೇಷ.

ಆನಂದ ಅಪ್ಪುಗೋಳ್ ಎಂಬ ನಿರ್ಮಾಪಕ ಸುಮಾರು 30 ಕೋಟಿ ರೂ. ವೆಚ್ಚದಲ್ಲಿ ಈ ಚಿತ್ರವನ್ನು ನಿರ್ಮಿಸಿರುವುದು ಕನ್ನಡ ಚಿತ್ರರಂಗದ ಮಟ್ಟಿಗಂತೂ ವಿಶ್ವದಾಖಲೆಯೇ ಸರಿ. ಏಕೆಂದರೆ ಈತನಕ ಯಾವ ಕನ್ನಡದ ನಿರ್ಮಾಪಕರೂ ಒಂದು ಚಿತ್ರಕ್ಕೆ ಇಷ್ಟೊಂದು ಹಣವನ್ನು ಸುರಿದದ್ದು ಇಲ್ಲ.

ಈಗ ಗಾಂಧಿನಗರದ ಜನರ ಮುಂದಿರುವ ಪ್ರಶ್ನೆಯಷ್ಟೆ: ಇಷ್ಟೊಂದು ಅದ್ದೂರಿಯಾಗಿ ನಿರ್ಮಾಣಗೊಂಡ ಚಿತ್ರದ ಹಣ ವಾಪಸ್ ಬರುತ್ತದೆಯೇ? ಆದರೆ ಸಂಗೊಳ್ಳಿ ರಾಯಣ್ಣನ ಅಪ್ಪಟ ಅಭಿಮಾನಿಯಾಗಿರುವ ಆನಂದ್ ಅಪ್ಪುಗೋಳ್ ಚಿತ್ರ ನಿರ್ಮಾಣದ ಸಂದರ್ಭದಲ್ಲಿಯೇ "ನಾನು ಈ ಚಿತ್ರದಿಂದ ಲಾಭವನ್ನು ನಿರೀಕ್ಷಿಸುವುದಿಲ್ಲ, ಹಾಗೆಯೇ ಒಂದು ವೇಳೆ ನಷ್ಟವಾದರೂ ತಲೆ ಕೆಡಿಸಿಕೊಳ್ಳುವುದಿಲ್ಲ" ಎಂದು ಹೇಳಿದ್ದರು. ಅವರು ರಾಯಣ್ಣನ ಮೇಲಿನ ಅಭಿಮಾನದಿಂದ ಈ ಚಿತ್ರವನ್ನು ನಿರ್ಮಿಸಿದ್ದಾರೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ.

ಈ ಚಿತ್ರದ ಬಾಕ್ಸ್ ಆಫೀಸ್ ಯಶಸ್ಸಿನ ಬಗ್ಗೆ ಈಗಲೇ ಚರ್ಚೆ ಮಾಡುವುದು ಸೂಕ್ತವಲ್ಲ. ಆದರೂ ಸುಮಾರು 200 ಥಿಯೇಟರ್‌ಗಳಲ್ಲಿ ಈ ಚಿತ್ರವನ್ನು ಬಿಡುಗಡೆ ಮಾಡಲು ನಿರ್ಮಾಪಕರು ಬಯಸಿದ್ದಾರೆ. ಒಂದೊಂದು ಥಿಯೇಟರ್‌ನ ಮಾಲೀಕರೂ ಹತ್ತತ್ತು ಲಕ್ಷ ರೂಪಾಯಿ ಅಡ್ವಾನ್ಸ್‌ಅನ್ನು ನೀಡಿದ್ದಾರೆ. ಅದೇ ರೀತಿ ಈ ಚಿತ್ರದ ಹಂಚಿಕೆದಾರರಾದ ಗಂಗರಾಜು ಅವರು ಸುಮಾರು ಒಂಭತ್ತು ಕೋಟಿ ರೂಪಾಯಿ ತೆತ್ತು ಈ ಚಿತ್ರದ ಹಂಚಿಕೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಈ ಮಧ್ಯೆ ಚಿತ್ರದ ಟಿ.ವಿ. ಪ್ರಸಾರದ ಹಕ್ಕು ಏನಿಲ್ಲವೆಂದರೂ ಸುಮಾರು ನಾಲ್ಕೂವರೆ ಕೋಟಿ ರೂ.ಗಳಿಗೆ ವ್ಯಾಪಾರವಾಗುವ ನಿರೀಕ್ಷೆ ಇದೆ. ಇವೆಲ್ಲದರ ಜೊತೆಗೆ ಮೊದಲ ವಾರದಲ್ಲೇ ಬಾಕ್ಸ್ ಆಫೀಸಿನಲ್ಲಿ ಸುಮಾರು ಏಳು ಕೋಟಿ ರೂಪಾಯಿ ಸಂಗ್ರಹವಾಗುವ ಸಾಧ್ಯತೆಯೂ ಕಾಣಿಸುತ್ತಿದೆ. ಮೊದಲ ವಾರದ ನಂತರ ದೀಪಾವಳಿ ಪ್ರಯುಕ್ತ ಸಾಕಷ್ಟು ರಜಾ ದಿನಗಳು ಸಾಲುಸಾಲಾಗಿ ಬರುತ್ತಿರುವುದರಿಂದ ಎರಡನೇ ವಾರದ ಕಲೆಕ್ಷನ್‌ಗೂ ಯಾವುದೇ ಮೋಸವಾಗಲಾರದು. ಇವೆಲ್ಲವನ್ನೂ ಗಣನೆಗೆ ತೆಗೆದುಕೊಂಡರೆ 'ಸಂಗೊಳ್ಳಿ ರಾಯಣ್ಣ' ಮೊದಲೆರಡು ವಾರದೊಳಗಡೆ 20 ರಿಂದ 22 ಕೋಟಿ ರೂ. ಗಳಿಕೆಯನ್ನು ಮಾಡುವ ಎಲ್ಲ ಸಾಧ್ಯತೆ ನಿಚ್ಚಳವಾಗಿ ಕಂಡುಬರುತ್ತಿದೆ.

ಈ ಹಿಂದೆ ದರ್ಶನ್ ನಟಿಸಿದ್ದ 'ಸಾರಥಿ' ಚಿತ್ರ ಕೂಡ ಸುಮಾರು 20 ಕೋಟಿ ರೂ. ವ್ಯವಹಾರ ಮಾಡಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಹಾಗೆ ನೋಡಿದರೆ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ 20 ಕೋಟಿಗೆ ಸರಿಸಮಾನವಾಗಿ ಲಾಭವನ್ನು ಮಾಡಿರುವ ಮತ್ತೊಂದು ಚಿತ್ರವೆಂದರೆ ಪುನೀತ್ ರಾಜ್‌ಕುಮಾರ್ ನಟನೆಯ 'ಜಾಕಿ' ಎಂದು ಹೇಳಲಾಗುತ್ತಿದೆ. 20 ಕೋಟಿ ಗಡಿಯನ್ನು ದಾಟಿ ಹೆಚ್ಚಿನ ಲಾಭವನ್ನು ಮಾಡಿದ ಚಿತ್ರವೆಂದರೆ ಸಾಹಸಸಿಂಹ ವಿಷ್ಣುವರ್ಧನ್ ಅಭಿನಯಿಸಿದ್ದ 'ಯಜಮಾನ' ಮತ್ತು 'ಆಪ್ತರಕ್ಷಕ' ಚಿತ್ರಗಳು. ಗೋಲ್ಡನ್ ಸ್ಟಾರ್ ಗಣೇಶ್ ನಟಿಸಿರುವ 'ಮುಂಗಾರು ಮಳೆ' ಚಿತ್ರ ಕೂಡ ಇದೇ ರೀತಿ ಬಾಕ್ಸ್ ಆಫೀಸ್‌ನಲ್ಲಿ ಜಯಭೇರಿ ಬಾರಿಸಿ 20 ಕೋಟಿ ಗಡಿಯನ್ನು ದಾಟಿತ್ತು.

ಈ ಎಲ್ಲ ಅಂಕಿಅಂಶಗಳನ್ನು ಗಣನೆಗೆ ತೆಗೆದುಕೊಂಡರೆ 'ಸಂಗೊಳ್ಳಿ ರಾಯಣ್ಣ' ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲುವ ಸಾಧ್ಯತೆಯೇ ಹೆಚ್ಚು.

ಈ ಚಿತ್ರಕ್ಕಾಗಿ ನಾಯಕ ನಟ ದರ್ಶನ್ ಸಾಕಷ್ಟು ತಯಾರಿ ಮಾಡಿಕೊಂಡಿದ್ದರು. ತಮ್ಮ ಜೀವನದಲ್ಲಿ ಇದೇ ಮೊದಲ ಬಾರಿಗೆ ಅವರು ಚಿತ್ರದಲ್ಲಿ ನಟಿಸುವ ಮೊದಲು ಸಂಗೊಳ್ಳಿ ರಾಯಣ್ಣನನ್ನು ಕುರಿತ ಕಾದಂಬರಿಯನ್ನು ಓದಿದರಂತೆ. ಅಂದಹಾಗೆ ಅಲ್ಲಿಯತನಕ ದರ್ಶನ್ ಯಾವತ್ತೂ ಯಾವ ಕಾದಂಬರಿಯನ್ನೂ ಓದಿರಲಿಲ್ಲ. ಆದೇರೀತಿ ಚಿತ್ರವನ್ನು ಒಪ್ಪಿಕೊಳ್ಳುವ ಮೊದಲೇ ಎರಡು ಬಾರಿ ಅವರು ಸ್ಕ್ರಿಪ್ಟನ್ನು ಓದಿದರಂತೆ.

ಈ ಚಿತ್ರದ ಫೋಟೋ ಶೂಟ್‌ಗಾಗಿ ಸುಮಾರು 25 ದಿನಗಳ ಕಾಲ ಛಾಯಾಗ್ರಾಹಕರು ಫೋಟೋ ತೆಗೆದರಂತೆ. ಪ್ರತಿದಿನವೂ ಚಿತ್ರೀಕರಣದ ಮೊದಲು ಮೇಕಪ್



ರಾಕ್‌ಲೈನ್ ಸವಾಲು

'ಸಂಗೊಳ್ಳಿ ರಾಯಣ್ಣ' ಚಿತ್ರದ ಜೊತೆಜೊತೆಗೆ ಯಾವುದೇ ಚಿತ್ರ ಬಿಡುಗಡೆಯಾಗುವುದಿಲ್ಲ ಎಂದೇ ಎಲ್ಲರೂ ನಿರೀಕ್ಷಿಸಿದ್ದರು. ಇಂತಹ ದೊಡ್ಡ ಚಿತ್ರ ಬಿಡುಗಡೆಯಾಗುವಾಗ ಬೇರೆಯವರು ತಮ್ಮ ಚಿತ್ರವನ್ನು ಬಿಡುಗಡೆ ಮಾಡದೇ ಅದಕ್ಕೆ ಗೌರವ ಸೂಚಿಸಬೇಕು ಎಂದೂ ಕೆಲವರು ಹೇಳಿದ್ದರು. ಆದರೆ, ಈಗ 'ರಾಯಣ್ಣ'ನ ಜೊತೆಜೊತೆಗೆ ರಾಕ್‌ಲೈನ್ ವೆಂಕಟೇಶ್ ನಿರ್ಮಿಸಿ, ನಾಯಕನಟನಾಗಿ ನಟಿಸುತ್ತಿರುವ 'ಡಕೋಟ ಪಿಕ್ಚರ್ಸ್' ಬಿಡುಗಡೆಯಾಗುತ್ತಿದೆ. ಸುಮಾರು 25 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಿರುವ 'ಅದ್ದೂರಿ' ಚಿತ್ರ 'ಸಂಗೊಳ್ಳಿ ರಾಯಣ್ಣ'ನಿಗೆ 'ಲೋ ಬಜೆಟ್' ಚಿತ್ರವಾದ 'ಡಕೋಟ ಪಿಕ್ಚರ್ಸ್' ಒಂದು ಸವಾಲೇ ಎಂದು ನೀವು ಹುಬ್ಬೇರಿಸಬಹುದು. ಖಂಡಿತವಾಗಿಯೂ 'ರಾಯಣ್ಣ'ನಿಗೆ ಯಾವ ವಿಧದಲ್ಲೂ 'ಡಕೋಟ ಪಿಕ್ಚರ್ಸ್' ಪ್ರತಿಸ್ಪರ್ಧಿಯಲ್ಲ, ಅಷ್ಟೇ ಅಲ್ಲ, ರಾಕ್‌ಲೈನ್ ತಮ್ಮ ಚಿತ್ರದ ಬಿಡುಗಡೆಯನ್ನು ಒಂದೆರಡು ವಾರಗಳ ಕಾಲ ಮುಂದೂಡಿದ್ದರೆ ಖಂಡಿತವಾಗಿಯೂ ಅವರಿಗೆ ...ವಾಗುತ್ತಿತ್ತು. ಅದು ಗೊತ್ತಿದ್ದೂ ರಾಕ್‌ಲೈನ್ ಸ್ವತಃ ತಾವೇ ನಾಯಕ ನಟನಾಗಿರುವ ಈ ಚಿತ್ರದ ಬಿಡುಗಡೆಯನ್ನು ...ಕೆ ಮುಂದೂಡಿಲ್ಲ ಎಂಬುದು ಕೆಲವರನ್ನು ಕಾಡುತ್ತಿರುವ ಪ್ರಶ್ನೆ. ಆದರೆ ರಾಕ್‌ಲೈನ್ ಅವರನ್ನು ಹತ್ತಿರದಿಂದ ...ವರಿಗೆ ಅವರ ಪ್ರವೃತ್ತಿ ಗೊತ್ತು. ಅವರು ಯಾವುದೇ ಚಿತ್ರವನ್ನು ಆರಂಭಿಸುವಾಗ ಆ ಚಿತ್ರದ ಬಿಡುಗಡೆಯ ...ಂಕವನ್ನೂ ಗೊತ್ತುಪಡಿಸುತ್ತಾರೆ. ಮಾತ್ರವಲ್ಲ ಏನೇ ಆದರೂ ತನ್ನ ಚಿತ್ರವನ್ನು ಆ ದಿನಾಂಕದಂದೇ ಬಿಡುಗಡೆ ...ಸುತ್ತಾರೆ. ಕಳೆದ 25 ವರ್ಷಗಳಿಂದ ನಿರ್ಮಾಪಕರಾಗಿರುವ ರಾಕ್‌ಲೈನ್ ವೆಂಕಟೇಶ್ ಒಂದು ಬಾರಿಯೂ ಈ ... ಮುಂಚಿತವಾಗಿಯೇ ಗೊತ್ತುಪಡಿಸಿದ್ದ ದಿನಾಂಕವನ್ನು ಹೊರತುಪಡಿಸಿ ಬೇರೆ ದಿನಾಂಕದಂದು ಚಿತ್ರ ಬಿಡುಗಡೆ ...ಿದ ಉದಾಹರಣೆಯೇ ಇಲ್ಲ. ಈ ರೀತಿ ದೊಡ್ಡ ಚಿತ್ರಗಳಿಗೆ ಹೆದರಿ ಬೇರೆ ದಿನಾಂಕದಂದು ಅವರು ಬಿಡುಗಡೆ ...ಿದ್ದರೆ ಇಷ್ಟು ವರ್ಷ ಅವರು ಕಾದುಕೊಂಡು ಬಂದಿದ್ದ ಅವರ ನಿಲುವೇ ಮೂಲೆಗುಂಪಾಗುತ್ತಿತ್ತು. ಮಾತ್ರವಲ್ಲ ...ಗಾಂಧಿನಗರದ ಜನ ಅವರನ್ನು ರಣಹೇಡಿ ಎಂದು ಕರೆಯುತ್ತಿದ್ದರೋ ಏನೊ? ಈ ಕಾರಣದಿಂದಲೇ ರಾಕ್‌ಲೈನ್ ...ರನ್ನು ಉದ್ಯಮದಲ್ಲಿ ಉಕ್ಕಿನ ಮನುಷ್ಯ ಎಂದು ಕರೆಯುತ್ತಾರೆ.

ಸರ್ಟಿಫಿಕೇಟ್‌ಗಾಗಿ ಪರದಾಟ



'ಸಂಗೊಳ್ಳಿ ರಾಯಣ್ಣ' ಚಿತ್ರವನ್ನು ಬಿಡುಗಡೆ ಮಾಡಲು ಅದರ ನಿರ್ಮಾಪಕ ತನ್ನ ರಾಜಕೀಯ ಕಾಂಟಾಕ್ಟ್‌ಗಳನ್ನು ಉಪಯೋಗಿಸಿಕೊಂಡು ಸೆನ್ಸಾರ್ ಆಫೀಸರ್ ಮೇಲೆ ದೆಹಲಿಯಿಂದ ಒತ್ತಡ ತರಿಸಿದ್ದಾರೆ ಎಂಬ ಸುದ್ದಿ ಕೇಳಿಬರುತ್ತಿದೆ. ವಾಸ್ತವವಾಗಿ ಈ ಚಿತ್ರವನ್ನು ದಸರಾ ಹಬ್ಬದ ಸಂದರ್ಭದಲ್ಲಿ ಬಿಡುಗಡೆ ಮಾಡಬೇಕೆಂದು ನಿರ್ಧರಿಸಲಾಗಿತ್ತು. ಆದರೆ ಚೆನ್ನೈನಲ್ಲಿರುವ **Animal Welfare Board** ಅವರಿಂದ ಚಿತ್ರಕ್ಕೆ **No Objection Certificate** ಸಿಕ್ಕಿರಲಿಲ್ಲ.

ಈ ಚಿತ್ರದಲ್ಲಿ ಸುಮಾರು ಮೂವತ್ತು ಆನೆಗಳನ್ನು ಮತ್ತು ನೂರಾರು ಕುದುರೆಗಳನ್ನು ಉಪಯೋಗಿಸಿರುವುದರಿಂದ ಚಿತ್ರೀಕರಣದ ಸಮಯದಲ್ಲಿ ಅವುಗಳಿಗೆ ಯಾವುದೇ ತರಹದ ಹಾನಿ ಆಗಲಿಲ್ಲ ಎಂದು ದೃಢಪಡಿಸಿದ ನಂತರವೇ ಆ ಬೋರ್ಡ್ ಅನುಮತಿಯನ್ನು ನೀಡುತ್ತದೆ. ಆದರೆ ಆ ಬೋರ್ಡಿನ ಅಧ್ಯಕ್ಷರಾದ ಜಯಂತಿ ನಟರಾಜನ್ ಅವರು ವಿವಿಧ ಕಾರಣಗಳಿಗೆ ಅನುಮತಿ ಪತ್ರವನ್ನು ಕೊಡುವುದನ್ನು ಮುಂದೂಡುತ್ತಲೇ ಹೋದರು. ಜೊತೆಗೆ ಒಂದರನಂತರ ಮತ್ತೊಂದು ಎಂಬಂತೆ ರಜಾದಿನಗಳು ಬಂದವು. ಇದು ಹೀಗೇ ಮುಂದುವರೆದರೆ ಚಿತ್ರದ ಬಿಡುಗಡೆಯೂ ಮುಂದೆಮುಂದೆ ಹೋಗುತ್ತದೆಂದು ಗೊತ್ತಾದಾಗ ನಿರ್ಮಾಪಕ ಆನಂದ್ ಅಪ್ಪುಗೋಳ್ ಅವರ ಎದೆಬಡಿತ ಕೂಡ ಹೆಚ್ಚಾಗುತ್ತ ಹೋಯಿತು. ಆಗ ಅವರು ದೆಹಲಿಗೆ ಹಾರಿಹೋಗಿ ಲೋಕಸಭಾ ಸ್ಪೀಕರ್ ಮೀರಾಕುಮಾರ್ ಮತ್ತು ಕೇಂದ್ರ ಸಚಿವೆ ಅಂಬಿಕಾ ಸೋನಿಯವರಿಂದ ಜಯಂತಿ ನಟರಾಜನ್ ಅವರ ಮೇಲೆ ರಾಜಕೀಯ ಒತ್ತಡ ಹೇರಿಸಿದರು. ಈ ಮಧ್ಯೆ ಇನ್ನೊಂದು ಸಮಸ್ಯೆಯೂ ಎದುರಾಯಿತು. ಅದೇನೆಂದರೆ ಸಾಮಾನ್ಯವಾಗಿ ಚಿತ್ರದ ನಿರ್ಮಾಪಕರು ಚೆನ್ನೈ ಬೋರ್ಡಿನಿಂದ ಸರ್ಟಿಫಿಕೇಟ್ ತಂದ ನಂತರವೇ ಬೆಂಗಳೂರಿನಲ್ಲಿರುವ ಸೆನ್ಸಾರ್ ಅಧಿಕಾರಿಗಳು ಆ ಚಿತ್ರವನ್ನು ನೋಡುತ್ತಾರೆ. 'ಸಂಗೊಳ್ಳಿ ರಾಯಣ್ಣ'ನ ವಿಚಾರದಲ್ಲೂ ಹಾಗೇ ಆಗಿದ್ದರೆ ಬಹುಶಃ ಈ ವಾರವೂ ಆ ಚಿತ್ರ ಬಿಡುಗಡೆಯಾಗುತ್ತಿರಲಿಲ್ಲ. ಈ ಕಾರಣಕ್ಕಾಗಿಯೇ ಸೆನ್ಸಾರ್ ಆಫೀಸರ್ ತ್ಯಾಗರಾಜ್ ಅವರು ತನ್ನ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿ, ಚೆನ್ನೈ ಸರ್ಟಿಫಿಕೇಟ್ ಸಿಗುವ ಮುನ್ನವೇ ಚಿತ್ರವನ್ನು ವೀಕ್ಷಿಸುವ ದೊಡ್ಡ ಮನಸ್ಸು ಮಾಡಿದರು. ಆನಂತರ ಚೆನ್ನೈನಿಂದ ಸರ್ಟಿಫಿಕೇಟ್ ತಂದಕೂಡಲೇ ನಿರ್ಮಾಪಕರಿಗೆ ಸೆನ್ಸಾರ್ ಸರ್ಟಿಫಿಕೇಟ್‌ನ್ನು ನೀಡಿದರು. ಕಳೆದೆರಡು ವರ್ಷಗಳಿಂದ ಈ ಚಿತ್ರಕ್ಕಾಗಿ ಹಿಂದುಮುಂದು ಯೋಚಿಸದೆ ಸುಮಾರು 25 ಕೋಟಿ ರೂಪಾಯಿಗಳನ್ನು ಸುರಿದಿರುವ ನಿರ್ಮಾಪಕ ಅಪ್ಪುಗೋಳ್ ಅವರು ಚೆನ್ನೈನಲ್ಲಿರುವ ಬೋರ್ಡ್ ಮತ್ತು ಸೆನ್ಸಾರ್ ಮಂಡಳಿಯಿಂದ ಒಂದೆರಡು ಸರ್ಟಿಫಿಕೇಟ್‌ಗಳನ್ನು ಪಡೆಯಲು ಇಷ್ಟೆಲ್ಲಾ ಕಷ್ಟಪಟ್ಟಿದ್ದು ನಿಜಕ್ಕೂ ಅಚ್ಚರಿ ಮೂಡಿಸುತ್ತದೆ.

...ವನ್ನು ಮೆಚ್ಚಲೇಬೇಕು.

...ಸಾಧಾರಣವಾಗಿ ಐತಿಹಾಸಿಕ ಚಿತ್ರವೆಂದರೆ ಈಗಿನ ...ಜನದ ಹುಡುಗರಿಗೆ ಒಂದಿಷ್ಟು ಬೋರ್ ಆಗುವ ...ತೆ ಇದೆ. ಆದರೆ ಬರೋಬ್ಬರಿ ಮೂರು ಗಂಟೆ ...ದೀರ್ಘ ಕಾಲಾವಧಿಯ ಈ ಚಿತ್ರ ಆರಂಭದಿಂದ ...ಕೊನೆಯುವರೆಗೆ ಯಾವ ಹಂತದಲ್ಲೂ ಬೋರ್ ...ಹೊಡೆಸುವುದೇ ಇಲ್ಲ. ಇದೇ ಈ ಚಿತ್ರದ ಹೆಗ್ಗಳಿಕೆಗಳಲ್ಲಿ ...ಒಂದು. ಅದರ ಕೀರ್ತಿ ಸಂಭಾಷಣೆ ಬರೆದ ಕೇಶವಾದಿತ್ಯ ...ರಿಗೆ ಸಲ್ಲಬೇಕು.


...ಈ ಚಿತ್ರದಲ್ಲಿ ಬರುವ ಎರಡು ಯುದ್ಧದ ಸನ್ನಿವೇಶಗಳು ...ಕ್ಕೂ ನೋಡುಗರ ಉಸಿರನ್ನು ಹಿಡಿದಿಡುವಂತಿದೆ. ...ಬಹುಶಃ ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ ಈ ...ೆ ಯುದ್ಧದ ದೃಶ್ಯ ಮತ್ತೆಲ್ಲೂ ಮೂಡಿಬಂದಿಲ್ಲ ಎಂದೇ ...ಹೇಳಬೇಕು. ಎರಡು ಸಾವಿರ ಕುದುರೆಗಳು, ನೂರಾರು ...ಆನೆಗಳು, ನಾಲ್ಕೈದು ಸಾವಿರ ಸೈನಿಕರು ಯುದ್ಧ ಭೂಮಿಯಲ್ಲಿ ...ಸೆಣೆದಾಡುವ ದೃಶ್ಯ ಸಹಜವಾಗಿ ಮೂಡಿಬಂದಿದೆ.

...ಸುಮಾರು 65 ದಿನಗಳ ಕಾಲ ರಾಜಸ್ತಾನದ ...ರಣಭೂಮಿಯಲ್ಲಿ ಈ ಯುದ್ಧದ ದೃಶ್ಯಗಳನ್ನು ಚಿತ್ರತಂಡ ...ಚಿತ್ರೀಕರಿಸಿತ್ತು. ಸಾಧಾರಣವಾಗಿ ಇಂದಿನ ಕಂಪ್ಯೂಟರ್ ...ಯುಗದಲ್ಲಿ ಗ್ರಾಫಿಕ್ಸ್ ಮುಖಾಂತರ ಇಂತಹ ದೃಶ್ಯಗಳನ್ನು ...ಮಾಡುತ್ತಾರೆ. ಆದರೆ ನಿರ್ದೇಶಕ ನಾಗಣ್ಣ ಮತ್ತು ನಿರ್ಮಾಪಕ ...ಆನಂದ ಅಪ್ಪುಗೋಳ್ ಆಧುನಿಕ ತಂತ್ರಜ್ಞಾನಕ್ಕೆ ಶರಣಾಗದೇ ... ಸಾವಿರ ಜನರನ್ನು ಒಟ್ಟು ಸೇರಿಸಿ, ಯುದ್ಧದ



ದೃಶ್ಯವನ್ನು ಚಿತ್ರೀಕರಿಸಿದ್ದನ್ನು ಮೆಚ್ಚಲೇಬೇಕು.

ತಮ್ಮ ಎಲ್ಲಾ ಸಿನಿಮಾಗಳಲ್ಲಿ ಲಾಂಗು ಮತ್ತು ಮಚ್ಚು ಹಿಡಿದು ಆರ್ಭಟಿಸುವ ದರ್ಶನ್ ಸಂಗೊಳ್ಳಿ ರಾಯಣ್ಣನ ಪಾತ್ರದಲ್ಲಿ ಸ್ವಾತಂತ್ರ್ಯ ಹೋರಾಟಗಾರನಾಗಿ, ಸ್ವಾಭಿಮಾನಿ ಭಾರತೀಯನಾಗಿ ರೂಪಾಂತರಗೊಂಡಿದ್ದಾರೆ. ಅಷ್ಟೇ ಏಕೆ,



...ತ್ತು ಉಡುಗೆ-ತೊಡುಗೆಗಳನ್ನು ಹಾಕಿಕೊಳ್ಳಲು ...ಕನಿಷ್ಠವೆಂದರೂ ಐದು ಗಂಟೆ ಬೇಕಾಗುತ್ತಿತ್ತಂತೆ. ಈ ...ದ ಡಬ್ಬಿಂಗ್‌ಗಾಗಿ ದರ್ಶನ್ ಸುಮಾರು 25 ದಿನಗಳನ್ನು ...ದ್ದೂ ಮೆಚ್ಚಬೇಕಾದ ವಿಷಯ. ಹಾಗೆಯೇ ...ವಾಗಿ 45-50 ದಿನಗಳ ಕಾಲ್‌ಶೀಟ್‌ನ್ನು ಒಂದು ...ಕ್ಕೆ ನೀಡುವ ದರ್ಶನ್ ಈ ಚಿತ್ರಕ್ಕಾಗಿ ಸುಮಾರು ...0 ದಿನಗಳ ಕಾಲ ಚಿತ್ರೀಕರಣ ಮಾಡಿದ್ದು ಕೂಡ ...ೇಕು.

... ನಾಯಕ ನಟ ತನ್ನ ಜನಪ್ರಿಯತೆಯ ... ಇಂತಹ ಪ್ರಯೋಗ ಮತ್ತು

ಸಾಹಸಗಳಿಗೆ ಕೈಹಾಕುವುದು ನಿಜಕ್ಕೂ ಸ್ವಾಗತಾರ್ಹ. ಕನ್ನಡ ಚಿತ್ರರಂಗದಲ್ಲಿ ನೆರೆಯ ತಮಿಳು ಮತ್ತು ತೆಲುಗು ಮಾದರಿಯಲ್ಲಿ ಚಿತ್ರ ನಿರ್ಮಾಣವಾಗುತ್ತಿಲ್ಲ, ಇಲ್ಲಿಯ ನಟರು ಅಲ್ಲಿಯ ನಟರಂತೆ ಹೊಸತನಕ್ಕೆ, ಹೊಸ ಕಥೆಗಳಿಗೆ ಸ್ಪಂದಿಸುವುದಿಲ್ಲ ಎಂದು ಕೂಗಾಡುವ ಜನ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಚಿತ್ರವನ್ನು ನಿಜಕ್ಕೂ ಒಮ್ಮೆಯಾದರೂ ನೋಡಲೇಬೇಕು. ಆಗ ಮಾತ್ರ ಕನ್ನಡದಲ್ಲಿ ಏಕತಾನತೆಯ ಮಾಮೂಲಿ ಕಥೆಗಳ ಬದಲು ನಮ್ಮ ನಾಡು, ನುಡಿ, ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹ ಇಂತಹ ಚಿತ್ರಗಳು ಸೆಟ್ಟೇರಲು ಸಾಧ್ಯವಾಗುತ್ತದೆ.


ಕತೆಯನ್ನು ಸಿನಿಮಾಕ್ಕೆ ತಕ್ಕಂತೆ ಅಲ್ಪಸ್ವಲ್ಪ ಬದಲಾವಣೆ ಮಾಡಲಾಗಿದೆ. ಅಲ್ಲಲ್ಲಿ ಒಂದಿಷ್ಟು ಓರೆಕೋರೆಗಳಿದ್ದರೂ ಒಟ್ಟಾರೆಯಾಗಿ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಜನರನ್ನು ಮೆಚ್ಚಿಸುತ್ತಾನೆ.

ಕಥೆಗಾರ ಕೇಶವಾದಿತ್ಯ ಮತ್ತು ನಿರ್ದೇಶಕ ನಾಗಣ್ಣ ಅವರ ಶ್ರಮದಿಂದಾಗಿ ಚಿತ್ರ ಚೆನ್ನಾಗಿ ಮೂಡಿಬಂದಿದೆ. ಅದಕ್ಕಿಂತಲೂ ಮುಖ್ಯವಾಗಿ ಯಾವುದೇ ಲಾಭದ ಆಸೆ ಇಲ್ಲದೆ ಸುಮಾರು 25 ಕೋಟಿಗಳಿಗಿಂತಲೂ ಹೆಚ್ಚು ಹಣವನ್ನು ಕಳೆದ ಎರಡೂವರೆ ವರ್ಷಗಳಿಂದ ಈ ಚಿತ್ರಕ್ಕಾಗಿ ಸುರಿಯುತ್ತಾ ಬಂದ ರಾಯಣ್ಣನ ಅಭಿಮಾನಿ ನಿರ್ಮಾಪಕ ಆನಂದ ಅಪ್ಪುಗೋಳ್ ಅವರ ಎದೆಗಾರಿಕೆಯನ್ನೂ ನಾವು ಮೆಚ್ಚಲೇಬೇಕು.

ಬಹಳ ವರ್ಷದ ನಂತರ ಕನ್ನಡತನ ಇರುವ, ಕನ್ನಡದ ವಾಸನೆ ಇರುವ, ಜೊತೆಗೆ ಕನ್ನಡದ ಸೊಗಡನ್ನು ತೋರಿಸುವ



ಅಪಭ್ರಂಶ ಕನ್ನಡವನ್ನು ಮಾತನಾಡುವುದಕ್ಕೆ ಹೆಸರುವಾಸಿಯಾಗಿರುವ ದರ್ಶನ್ ಈ ಚಿತ್ರದ ಡೈಲಾಗ್ ಡಿಲಿವರಿಯಲ್ಲಿ ತೋರಿಸಿದ ಜಾಣ್ಮೆ ಮತ್ತು ಪ್ರತಿಭೆ ಆತನನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ದಿದೆ. ಇಡೀ ಚಿತ್ರದಲ್ಲಿ ಉತ್ತರ ಕರ್ನಾಟಕದ ಕನ್ನಡದಲ್ಲೇ ದರ್ಶನ್ ಆರ್ಭಟಿಸಿದ್ದಾರೆ. ಇವೆಲ್ಲವೂ ಬರೀ ದರ್ಶನ್ ಅಭಿಮಾನಿಗಳಿಗೆ ಮಾತ್ರವಲ್ಲ, ಇತರರಿಗೂ ಥ್ರಿಲ್ ನೀಡುತ್ತದೆ.



ದರ್ಶನ್‌ಗೆ ಸರಿಸಮಾನವಾಗಿ ಕಿತ್ತೂರು ರಾಣಿ ಚೆನ್ನಮ್ಮ ಪಾತ್ರದಲ್ಲಿ ನಟಿಸಿರುವ ಜಯಪ್ರದ ತನ್ನ ಪ್ರತಿಭೆಯನ್ನು ಮೆರೆದಿದ್ದಾರೆ. ನೋಡಲು ಈ ರಾಣಿ ಚೆನ್ನಮ್ಮ ವಯಸ್ಸಾದವರಂತೆ ಕಂಡರೂ ಆಕೆಯ ನಟನೆ ಅದ್ಭುತವಾಗಿದೆ. ಅದರಲ್ಲೂ ಯುದ್ಧ ಭೂಮಿಯಲ್ಲಿ ಕುದುರೆ ಸವಾರಿ ಮಾಡುತ್ತಾ ಆಕೆ ಹೋರಾಡುವ ದೃಶ್ಯ ಮೈ ಜುಮ್ ಎನಿಸುತ್ತದೆ.


ಕರ್ನಾಟಕದ ವೀರ ... ದೇಶಾಭಿಮಾನದ

ಕನ್ನಡ ಚಿತ್ರವೊಂದು ಕನ್ನಡದ ರಾಜ್ಯೋತ್ಸವ ದಿನದಂದೇ ಬೆಳ್ಳಿತೆರೆಗೆ ಬಂದಿರುವುದು ಕನ್ನಡಿಗರಿಗೆಲ್ಲ ಹೆಮ್ಮೆಪಡುವಂತಹ ವಿಷಯ.


ನಿಜಕ್ಕೂ ಕನ್ನಡಿಗರಾದ ನಾವೆಲ್ಲ ಇಂತಹ ಅಪರೂಪದ ಸಾಹಸದ ಚಿತ್ರವನ್ನು ಒಮ್ಮೆಯಾದರೂ ನೋಡಿ ಬೆಂಬಲಿಸುವುದು ನಮ್ಮ ಕರ್ತವ್ಯ. ಏಕೆಂದರೆ ಕನ್ನಡ ಚಿತ್ರಗಳು ಸೊರಗುತ್ತಿರುವ ಈ ಸಂದರ್ಭದಲ್ಲಿ, ಪರಭಾಷಾ ಚಿತ್ರಗಳು ... ಈ ಕಾಲಘಟ್ಟದಲ್ಲಿ ನಾವು ಕನ್ನಡಿಗರೂ ... ಚಿತ್ರವೊಂದನ್ನು ತೆಗೆಬಲ್ಲೆವು ಎಂದು ... ತೋರಿಸಲು ಇದು ಸಕಾಲ. ಈ ಕಾರಣಕ್ಕಾಗಿ ... ಕೆಲವು ಸಣ್ಣಪುಟ್ಟ ತಪ್ಪುಗಳು ... 'ಸಂಗೊಳ್ಳಿ ರಾಯಣ್ಣ' ಚಿತ್ರ ಗೆಲ್ಲಬೇಕು ಎಂದೆನಿಸುತ್ತದೆ.

● ಶೇಕ್


ಚಿಕ್ಕಮಗಳೂರು: ಅತ್ತ ದರಿ ಇತ್ತ ಪುಲಿ ಎತ್ತ ಪೋಗಲಯ್ಯಾ ರಾಮ, ರಾಮಾ?



ಸಿ.ಟಿ.ರವಿ



ಡಿ.ಎಸ್.ರಮೇಶ್



ಡಿ.ಎನ್. ಜೀವರಾಜ್ ಡಿ.ವಿಶ್ವನಾಥ್ ಎಂ.ಪಿ.ಕುಮಾರಸ್ವಾಮಿ

ಮುಂದಿನ ಅಸೆಂಬ್ಲಿ ಚುನಾವಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ರಾಜಕೀಯ ಚಿತ್ರಣ ಸಂಪೂರ್ಣವಾಗಿ ಬದಲಾಗುವ ಲಕ್ಷಣಗಳು ಗೋಚರವಾಗುತ್ತಿದೆ. ಹಿಂದಿನ ಚುನಾವಣೆ ಸಂದರ್ಭದಲ್ಲಿ ಗೆದ್ದಿದ್ದ ನಾಲ್ವರು ಬಿಜೆಪಿ ಶಾಸಕರು ಸದ್ಯದಲ್ಲೇ ಬಿಜೆಪಿಯನ್ನು ತೊರೆಯಲಿದ್ದಾರೆ ಎಂಬ ಅಂಶ ಜಿಲ್ಲಾ ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಕಳೆದ ಚುನಾವಣೆಯಲ್ಲಿ ಎಲ್ಲಾ ಐದು ಕ್ಷೇತ್ರಗಳನ್ನು ಸಾರಾಸಗಟಾಗಿ ಬಾಚಿಕೊಂಡಿದ್ದ ಬಿಜೆಪಿಗರಿಗೆ ಮುಂದಿನ ಚುನಾವಣೆ ಬೇಧಿಸಲಾಗದಷ್ಟು ಚಕ್ರವ್ಯೂಹವಾಗುವುದು ನಿಸ್ಸಂದೇಹ.

ಮೂಡಿಗೆರೆ ಮೀಸಲು ಕ್ಷೇತ್ರದ ಶಾಸಕ ಎಂ.ಪಿ. ಕುಮಾರಸ್ವಾಮಿ, ತರೀಕೆರೆ ಶಾಸಕ ದೊರನಾಳು ಸುರೇಶ್ ಮತ್ತು ಕಡೂರು ಶಾಸಕ ಡಾ.ವೈ.ಸಿ.ವಿಶ್ವನಾಥ್ ಬಿಜೆಪಿ ತೊರೆಯುವುದರಲ್ಲಿ ಈಗ ಯಾವ ಅನುಮಾನವೂ ಉಳಿದಿಲ್ಲ. ಆದರೆ ಈಗ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರ ಮಂತ್ರಿಮಂಡಲದಲ್ಲಿ ಸ್ಥಾನ ಪಡೆದು ಸಚಿವರೂ, ಜಿಲ್ಲಾ ಉಸ್ತುವಾರಿ ಮಂತ್ರಿಯೂ ಆಗಿರುವ ಶೃಂಗೇರಿ ಶಾಸಕ ಡಿ.ಎನ್.ಜೀವರಾಜ್‌ರ ಮುಂದಿನ ಹೆಜ್ಜೆಗಳು ಮಾತ್ರ ಇನ್ನೂ ನಿಗೂಢವಾಗಿವೆ.

ಸದ್ಯದ ಪರಿಸ್ಥಿತಿಯನ್ನು ಅವಲೋಕಿಸಿದರೆ ಹಿಂದಿನ ಚುನಾವಣೆಯಲ್ಲಿ ಜಿಲ್ಲೆಯಿಂದ ಬಿಜೆಪಿ ಪರವಾಗಿ ಸ್ಪರ್ಧಿಸಿದ್ದ ಅಭ್ಯರ್ಥಿಗಳಲ್ಲಿ ಪಕ್ಷದೊಳಗೆ ಉಳಿಯಲಿರುವ ಏಕೈಕ ಶಾಸಕನೆಂದರೆ ಅದು ಚಿಕ್ಕಮಗಳೂರು ಶಾಸಕ ಸಿ.ಟಿ.ರವಿ. ಈ ಮನುಷ್ಯ 2004ರ ಚುನಾವಣೆಯಲ್ಲಿ ಕಾಂಗ್ರೆಸ್ ಸಚಿವ ಸಗೀರ್ ಅಹಮ್ಮದ್‌ಗೆ ಸೆಡ್ಡು ಹೊಡೆದಿದ್ದ. ಈ ಕ್ಷೇತ್ರದಲ್ಲಿ 30 ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿರುವ ಲಿಂಗಾಯತರೇ ಪ್ರಬಲರಾಗಿದ್ದು ಕಳೆದ ಚುನಾವಣೆಯಲ್ಲಿ ಬಾಳೆಹೊನ್ನೂರು ಮಠದ ರಂಭಾಪುರಿ ಸ್ವಾಮಿಗಳ ಕೃಪಾಶೀರ್ವಾದ ಪಡೆದಿದ್ದರಿಂದ ಸಿ.ಟಿ.ರವಿ ಪರ ಮತಗಳು ಬಿದ್ದಿದ್ದವು. ಆದರೆ ಮುಂಬರುವ ಚುನಾವಣೆಯಲ್ಲಿ ಯಡ್ಡಿಗೆ ಜಿಲ್ಲೆಯ ಲಿಂಗಾಯತರು ಹೆಗಲು ಕೊಟ್ಟರೆ ಸಿ.ಟಿ.ರವಿಗೆ ಗೆಲುವೆಂಬುದು ಗಗನಕುಸುಮವಾಗಲಿದೆ.

ರವಿಯದ್ದು ಎಂತಹ ಪರಿಸ್ಥಿತಿ ಎಂದರೆ ಅತ್ತ ಲಿಂಗಾಯತರನ್ನೂ ಅವಲಂಬಿಸುವಂತಿಲ್ಲ, ಇತ್ತ ಮತಗಳನ್ನ ತರುದ ಅನಂತಕುಮಾರ್ ಬಣದಿಂದ ಹೊರಬರುವಂತೆಯೂ ಇಲ್ಲ. ಹೀಗಾಗಿ ಉನ್ನತ ಶಿಕ್ಷಣ ಮಂತ್ರಿ ರವಿಯದ್ದು ಅತ್ತ ದರಿ ಇತ್ತ ಪುಲಿ ಎತ್ತ ಪೋಗಲಯ್ಯಾ ರಾಮ, ರಾಮಾ.......? ಎಂಬಂತಾಗಿದೆ.

ಯಡಿಯೂರಪ್ಪನವರ ಬೆಂಬಲಿಗ ಎಂಬ ಹಣೆಪಟ್ಟಿ ಹೊತ್ತುಕೊಂಡಿರುವ ಮೂಡಿಗೆರೆ ಶಾಸಕ ಎಂ.ಪಿ. ಕುಮಾರಸ್ವಾಮಿ ಸತತ ಎರಡು ಭಾರಿ ಶಾಸಕರಾಗಿದ್ದಾರೆ. ಕ್ಷೇತ್ರದಲ್ಲಿ ಕುಮಾರಸ್ವಾಮಿಗೆ ವೈಯಕ್ತಿಕ ವರ್ಚಸ್ಸಿದೆ. ಜಿಲ್ಲೆಯ ಇತರ ಬಿಜೆಪಿ ಶಾಸಕರಿಗಿಂತ ಹೆಚ್ಚಿನ ಸ್ವಂತ ಬಲದ ಮತಗಳಿವೆ. ಆದರೆ ಇಂತಹ ಕುಮಾರಸ್ವಾಮಿಯನ್ನು ಬಿಜೆಪಿಯಿಂದ ಹೊರದಬ್ಬಿ ಮುಂದಿನ ಚುನಾವಣೆಯನ್ನು ಎದುರಿಸುವ ಉಮೇದು ಬಿಜೆಪಿಯ ಕೆಲವು ಸ್ಥಳೀಯ ಮುಖಂಡರದಾಗಿದೆ. ದೀಪಕ್ ದೊಡ್ಡಯ್ಯ ಎಂಬಾತನನ್ನು ಮುಂದಿನ ಬಾರಿ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿಸುವ ಮಾತುಗಳು ಕೇಳಿಬರುತ್ತಿವೆ. ಇತ್ತೀಚೆಗೆ ಚಿಕ್ಕಮಗಳೂರು ಬಳಿಯ ಮತ್ತಾವರ ಗೆಸ್ಟ್‌ಹೌಸ್‌ನಲ್ಲಿ ಬಿಜೆಪಿ ಮುಖಂಡರು ಕುಮಾರಸ್ವಾಮಿ ವಿರುದ್ಧ ಕಿಡಿಕಾರಿದ್ದರು. ಅಷ್ಟೇ ಅಲ್ಲ, ಮೂಡಿಗೆರೆ ತಾಲ್ಲೂಕಿನ ಕುಂದೂರು ಎಂಬಲ್ಲಿ ಸಭೆ ನಡೆಸಿ ಆತನ ವಿರುದ್ಧ ಗುಟುರು ಹಾಕಿದ್ದರು. ತನ್ನನ್ನು ಹಣಿಯಲು ಚೆಡ್ಡಿ ನಾಯಕರು ಮಾಡುತ್ತಿರುವ ಹುನ್ನಾರವನ್ನೆ ಬಲ್ಲ ಕುಮಾರಸ್ವಾಮಿ ಕಮಲ ಪಾಳೆಯವನ್ನು ತೊರೆಯುವುದು ಖಚಿತವಾಗಿದೆ.

ಆದರೆ ಯಾವ ಪಕ್ಷದಿಂದ ಭವಿಷ್ಯದ ಚುನಾವಣೆಯನ್ನು ಕುಮಾರಸ್ವಾಮಿ ಎದುರಿಸಲಿದ್ದಾರೆ ಎನ್ನುವುದು ಮಾತ್ರ ಖಚಿತವಾಗುತ್ತಿಲ್ಲ. ಮೂಡಿಗೆರೆ ಕ್ಷೇತ್ರದಲ್ಲಿ ಒಕ್ಕಲಿಗರ ಪ್ರಾಬಲ್ಯ ಇರುವುದರಿಂದ ಕುಮಾರಸ್ವಾಮಿಯ ಕಣ್ಣು ಜೆಡಿಎಸ್‌ನತ್ತ ಹರಿದಿದೆ. ಜೊತೆಗೆ ಈ ಕ್ಷೇತ್ರದಲ್ಲಿ ಲಿಂಗಾಯತ ಪ್ರಾಬಲ್ಯ ಇಲ್ಲದಿರುವುದರಿಂದ ಯಡ್ಡಿಯ ನೂತನ ಪಕ್ಷಕ್ಕೆ ಕುಮಾರಸ್ವಾಮಿ ಹಾರುವುದು ಅನುಮಾನವಿದೆ.

ಕಡೂರು ಕ್ಷೇತ್ರದ ವಿಶ್ವನಾಥ್ ಯಡಿಯೂರಪ್ಪನ ಬಣದೊಂದಿಗೆ ಸ್ಪಷ್ಟವಾಗಿ ಗುರುತಿಸಿಕೊಂಡಿರುವುದರಿಂದ ಅವರು ಯಡ್ಡಿಯ ನೂತನ ಪಕ್ಷದಿಂದ ಚುನಾವಣೆ ಎದುರಿಸುವುದು ಬಹುತೇಕ ಖಚಿತವಾಗಿದೆ. ಆದರೂ ಈ ವಿಶ್ವನಾಥ್ ಪರವಾಗಿ ಈ ಕ್ಷೇತ್ರದಲ್ಲಿ ಅಲೆಗಳೇನೂ ಇಲ್ಲ, ಇಲ್ಲಿ ಬಲಿಷ್ಟವಾಗಿರುವ ಕುರುಬ ಸಮುದಾಯದ ಮತಗಳ ಮೇಲೆ ವಿಶ್ವನಾಥ್ ಕಣ್ಣಿದೆ.

ತರೀಕೆರೆ ಕ್ಷೇತ್ರದಿಂದ 2008ರ ಚುನಾವಣೆಯನ್ನು ಗೆದ್ದಿದ್ದ ದೊರನಾಳ ಸುರೇಶ್‌ನ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ, ಇಲ್ಲಿ ದೇವಾಂಗ ಮತ್ತು ಲಿಂಗಾಯತರ ಪ್ರಾಬಲ್ಯ ಕಡಿಮೆ ಮಟ್ಟದ್ದೇನಲ್ಲ.

ಶೃಂಗೇರಿ ಶಾಸಕ ಜೀವರಾಜ್‌ರ ಮುಂದಿನ ನಡೆ ಕುತೂಹಲ ಹುಟ್ಟಿಸುತ್ತಿವೆ. ಅವರ ಕ್ಷೇತ್ರದಲ್ಲಿ 40 ಸಾವಿರಕ್ಕೂ ಅಧಿಕ ಬ್ರಾಹ್ಮಣ ಮತಗಳಿವೆ. ಇದನ್ನು ಆಧರಿಸಿಯೇ ಕಳೆದ ಬಾರಿ ಗೆದ್ದ ಜೀವರಾಜ್‌ಗೆ ಬಿಜೆಪಿ ತೊರೆದು ಯಡ್ಡಿಯ ಬಾಲ ಹಿಡಿಯುವುದು ಅಸಾಧ್ಯ.

ಒಟ್ನಾರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಿಜೆಪಿ ಪಕ್ಷ ಹಾರುವ ರಾಜಕೀಯ ಪಕ್ಷಿಗಳ ತಾಣದಂತಾಗಿದೆ. .

● ಅಜೀಜ್ ಕಿರುಗುಂದ

ಹುಬ್ಬಳ್ಳಿ-ಧಾರವಾಡ: ಸಂಘ ಪರಿವಾರಕ್ಕೆ ಶರಣಾದ ಪೊಲೀಸ್ ಕಮೀಷನರ್



ಪೊಲೀಸರ [illegible] ಪ್ರತಿಭಟನೆ



[illegible] ವಿರುದ್ಧ ಕಾಂಗ್ರೆಸ್ ಮತ್ತು ದಲಿತ ಸಂಘಟನೆಗಳ ಪ್ರತಿಭಟನೆ...

ಆರೆಸ್ಸೆಸ್‌ನ ಕಚೇರಿ 'ಕೇಶವಕುಂಜ'ಕ್ಕೆ ತನ್ನ ಸಿಬ್ಬಂದಿಗಳನ್ನು ಕಳಿಸಿ ಸಾಷ್ಟಾಂಗ ಬೀಳಿಸಿರುವ ಹುಬ್ಬಳ್ಳಿ-ಧಾರವಾಡದ ಪೊಲೀಸ್ ಕಮೀಷನರ್ ಪದ್ಮನಯನ ಎಂಬ ಬ್ರಾಹ್ಮಣೋತ್ತಮ ತಾನೊಬ್ಬ ಸಂಘ ಪರಿವಾರದ ಕಟ್ಟಾಳು ಎಂಬುದನ್ನು ರುಜುವಾತುಪಡಿಸಿದ್ದಾನೆ.

ಹುಬ್ಬಳ್ಳಿ ಶಹರದ ಕೆಲವು ಕಡೆ ವರ್ಷಕ್ಕೊಂದೆರಡು ಸಲವಾದರೂ ಕರ್ಫ್ಯೂ ಹಾಕುವಂತಹ ಸೂಕ್ಷ್ಮ ಪ್ರದೇಶಗಳಿವೆ. ಈ ಕಾರಣಕ್ಕಾಗಿಯೇ ಹಿಂದೆ ಹುಬ್ಬಳ್ಳಿ ಗಲಭೆಗ್ರಸ್ತ ನಗರ ಎಂತಲೇ ಕುಖ್ಯಾತಿ ಪಡೆದಿತ್ತು. ಆದರೆ ಹು-ಧಾ ಕ್ಕೆ ಕಮೀಷನರ್‌ಗಳಾಗಿ ಬಂದಿದ್ದ ಗಗನ್‌ದೀಪ್, ನಾರಾಯಣ ನಡುಮನಿ, ಶಿವಕುಮಾರ್, ಡಾ.ರಾಮಚಂದ್ರಾ ರಾವ್‌ರಂತಹ ದಕ್ಷ ಅಧಿಕಾರಿಗಳು ಹುಬ್ಬಳ್ಳಿಯ ಜನರಿಗೆ ಒಂದಿಷ್ಟು ನೆಮ್ಮದಿಯನ್ನು ಮರಳಿಸಿದ್ದರು.

ಇತ್ತೀಚೆಗೆ ಈದ್ಗಾ ಮೈದಾನ ವಿವಾದದ ನಂತರ ಹೆಚ್ಚುಕಡಿಮೆ ಹುಬ್ಬಳ್ಳಿಯಲ್ಲಿ ಅಂಥ ದೊಡ್ಡ ಕೋಮುಗಲಭೆಗಳು ಘಟಿಸಿರಲಿಲ್ಲ. ಆದರೆ ಹೊರಗೆ ಸೌಹಾರ್ದದ ವಾತಾವರಣ ಇದ್ದಂತೆ ಕಂಡರೂ ಒಳಗೆ ಬೂದಿಮುಚ್ಚಿದ ಕೆಂಡ ಇದ್ದೇ ಇತ್ತು. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದನಂತರ ಕೆಲವು ವಾನರ ಸೇನೆಗಳು ಕಪಿಚೇಷ್ಟೆ ಶುರುಹಚ್ಚಿಕೊಂಡಿದ್ದವು. ಪದ್ಮನಯನ ಎಂಬ ಜನವಾರಿ ಕಮೀಷನರ್ ಆಗಿ ವಕ್ಕರಿಸಿದ ನಂತರ ಸಮಾಜಘಾತುಕ ಚೆಡ್ಡಿ ಸಂಘಟನೆಗಳಿಗೆ ವೀಳ್ಯ ನೀಡಿದಂತಾಗಿತ್ತು. ಮೊನ್ನಿನ ಬಕ್ರೀದ ಹಬ್ಬದ ಮುನ್ನಾ ದಿನ ಇಂತಹದ್ದೊಂದು ಪ್ರಕರಣ ನಡೆದು ಪದ್ಮನಯನನ ಅಸಲಿ ಬಣ್ಣವನ್ನು ಮತ್ತೊಮ್ಮೆ ಬಯಲು ಮಾಡಿದೆ.

ಬಕ್ರೀದ್ ಹಬ್ಬದಂದು ಕುರ್ಬಾನಿಗಾಗಿ ಒಂದಷ್ಟು ದನಗಳನ್ನು ಖರೀದಿಸಿ ಕಲಘಟಗಿ ತಾಲ್ಲೂಕಿನ ಹಳ್ಳಿಯೊಂದರಿಂದ ನಾಲ್ವರು ಮುಸಲ್ಮಾನರು ಸಾಗಿಸುತ್ತಿದ್ದಾರೆ ಎಂಬ ಸುದ್ದಿ ವಿಶ್ವ ಹಿಂದೂ ಪರಿಷತ್ತಿನ ಹಲವು ಪುಂಡರಿಗೆ ಗೊತ್ತಾಯಿತು. ದನ ಖರೀದಿಸಿ ಗಾಡಿಯಲ್ಲಿ ಸಾಗಿಸುತ್ತಿದ್ದ ಅಲ್ತಾಫ್ ಪ್ಯಾಟಿನ, ಮಹಮ್ಮದ್ ಆಲಿ ನಾಸಾಲೆ, ಜಾವೇದ ನಾಯ್ಕ್, ಏಜೀಜಾಜ್ ನಾಯ್ಕ ಎಂಬ ಮುಸಲ್ಮಾನರನ್ನು ಮಾರ್ಗದಲ್ಲಿ ತಡೆದ ಮುಕುಂದ ಹಿರೇಮಠ, ಮಂಜುನಾಥ ತೇರದಾಳ, ಅಣ್ಣಪ್ಪ ದೊಡ್ಡಮನಿ ಮತ್ತು ಕಿರಣ ತೇರದಾಳ ಎಂಬ 'ಹಿಂದೂ ಸೇನಾನಿಗಳು' ದಾಳಿ ನಡೆಸಿದರು. ಮುಸಲ್ಮಾನರನ್ನು ಇವರೆಲ್ಲ ಅದೆಷ್ಟು ಬರ್ಬರವಾಗಿ ಥಳಿಸಿದರೆಂದರೆ ಏಜೀಜಾಜ್ ನಾಯ್ಕನ ಕಣ್ಣಿಗೆ ಬಲವಾದ ಪೆಟ್ಟು ಬಿದ್ದು ಆತ ಇವತ್ತು ತನ್ನ ಕಣ್ಣನ್ನೇ ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದಾನೆ.

ಈ ನಾಲ್ವರು ಮುಸ್ಲಿಮ್ ಯುವಕರನ್ನು ಮನಸ್ಪೋಇಚ್ಛೆ ಥಳಿಸಿದ ನಂತರ, ಆ ಯುವಕರನ್ನೂ, ಅವರ ಗಾಡಿಯನ್ನೂ ಮತ್ತು ದನಗಳನ್ನೂ ಹಳೇಹುಬ್ಬಳ್ಳಿ ಪೊಲೀಸ್ ಠಾಣೆಗೆ ಹಿಂದೂ ಗೂಂಡಾಗಳೇ ತಂದೊಪ್ಪಿಸಿದರು. ಠಾಣೆಯಲ್ಲಿದ್ದ ಅಬ್ಬಾಸ್ ಸುಂಕದ ಮತ್ತು ಇತರೆ ಪೇದೆಗಳು ದಾಳಿ ವಿಷಯವನ್ನು ಇನ್ಸ್‌ಪೆಕ್ಟರ್ ಸಚಿನ ಚಲವಾದಿಗೆ ತಿಳಿಸಿದ್ದಾರೆ. ದಲಿತ ಸಮುದಾಯದ ಹಿನ್ನೆಲೆಯ ಇನ್ಸ್‌ಪೆಕ್ಟರ್ ಚಲವಾದಿ ಪರಿಸ್ಥಿತಿಯ ಸೂಕ್ಷ್ಮತೆಯನ್ನು ಅರಿತಿದ್ದಾರೆ. ಅವರು ದನ ಸಾಗಾಟ ನಡೆಸಿದ ಮುಸಲ್ಮಾನ ಯುವಕರ ಮೇಲೊಂದು ಕೇಸು ಹಾಗು ಅವರ ಮೇಲೆ ದಾಳಿ ಮಾಡಿದ ಹಿಂದೂ ಯುವಕರ ಮೇಲೂ ಒಂದು ಕೇಸು ಜಡಿಯಲು ಸೂಚಿಸಿದ್ದಾರೆ. ಇದಾದನಂತರ ಹಲ್ಲೆಗೊಳಗಾದ ಮುಸಲ್ಮಾನರನ್ನು ಕಿಮ್ಸ್ ಆಸ್ಪತ್ರೆಗೆ ದಾಖಲಿಸಿ, ಹಿಂದೂ ಗೂಂಡಾಗಳನ್ನು ಬಂಧಿಸಿದಾರೆ.

ಆದರೆ ಇವತ್ತು ರಾಜ್ಯಾದ್ಯಂತ ಅನೈತಿಕ ಗೂಂಡಾಗಿರಿಯನ್ನು ನಡೆಸುತ್ತಿರುವ ಸಂಘಪರಿವಾರಿಗಳಿಗೆ ಸಹಸಲಸಾಧ್ಯವಾಯಿತು. ಪೊಲೀಸರು ಹುಬ್ಬಳ್ಳಿಯಲ್ಲಿ ಗೋಹತ್ಯೆಗೆ ಸಹಕರಿಸುತ್ತಿದ್ದಾರೆ, 'ಅಕ್ರಮವಾಗಿ' ಗೋವುಗಳನ್ನು ಸಾಗಿಸುತ್ತಿದ್ದವರನ್ನು ರಕ್ಷಿಸಿ ಅವರನ್ನು ತಡೆದ ಹಿಂದೂಗಳ ಮೇಲೆ ಕೇಸ್ ಹಾಕಿದ್ದಾರೆ ಎಂದೆಲ್ಲ ಪ್ರಕರಣವನ್ನು ತಿರುಚಿದರು. ಅಷ್ಟೇ ಅಲ್ಲ ಇನ್ಸ್‌ಪೆಕ್ಟರ್ ಮೋಹನ ಪ್ರಸಾದ ಮತ್ತು ಸಚಿನ ಚಲವಾದಿಯನ್ನು ವರ್ಗ ಮಾಡಬೇಕು, ಪೇದೆಗಳಾದ ಅಬ್ಬಾಸ್ ಸುಂಕದ, ಇಬ್ರಾಹಿಂ ಧಾರವಾಡ, ದನಿಗೊಂಡ ದವಳೆ ಸೇರಿದಂತೆ ಎಂಟು ಮಂದಿ ಪೇದೆಗಳನ್ನು ಅಮಾನತ್ತುಗೊಳಿಸಬೇಕು ಎಂದು ಅರಚುತ್ತಾ ಪೊಲೀಸ್ ಠಾಣೆಗಳೆದುರು ಸಂಘಿಗಳು ಧರಣಿ ನಡೆಸಿದರು.

ಚೆಡ್ಡಿಗಳ ಇಂತಹ ಬೆದರಿಕೆಗೆ ಹೆದರಿದ ಕಮೀಷನರ್ ಪದ್ಮನಯನ ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿದರಲ್ಲದೆ ಅಬ್ಬಾಸ ಸುಂಕದ ಎಂಬ ಪೇದೆಯನ್ನು ಅಮಾನತುಗೊಳಿಸಿದರು. ಇಷ್ಟಕ್ಕೂ ಸುಮ್ಮನಾಗದ ಪದ್ಮನಯನ ಡಿಸಿಪಿಗಳಾದ ಎಸ್.ಎಂ.ಪ್ರತಾಪನ್, ಶ್ರೀನಾಥ ಜೋಶಿ, ಎಸಿಪಿಗಳಾದ ಎನ್.ಎಸ್.ಪಾಟೀಲ ಮತ್ತು ಎ.ಆರ್. ಬಡಿಗೇರ್ ಇವರನ್ನು ಆರೆಸ್ಸೆಸ್‌ನ ಕಚೇರಿ 'ಕೇಶವಕುಂಜ'ಕ್ಕೆ ಕಳಿಸಿ ತಮ್ಮಿಂದ ತಪ್ಪಾಗಿದ್ದರೆ ಕ್ಷಮಿಸಬೇಕೆಂದು ಹೇಳಿಸಿ ಸಂಘ ಪಾರಿವಾರದ ಪಾದಕ್ಕೆ ಎರಗಿ ಬರಲು ತಿಳಿಸಿದರು!

ಇದು ಪದ್ಮನಯನ ತಮ್ಮ ಇಲಾಖೆಯ ಅಧಿಕಾರಿಗಳಿಗೆ ಮಾಡಿದ ಅವಮಾನ ಮಾತ್ರವಲ್ಲ ತಾವು ತೊಟ್ಟಿರುವ ಖಾಕಿಗೂ ಬಗೆದ ದ್ರೋಹವಲ್ಲದೆ ಇನ್ನೇನು?

● ಹುಬ್ಬಳ್ಳಿಯಾಂವ



ಕಮೀಷನರ್ ಪದ್ಮನಯನ ಡಿಸಿಪಿ ಪ್ರತಾಪನ್ ಡಿಸಿಪಿ ಶ್ರೀನಾಥ್ ಎಸಿಪಿ ಎ.ಆರ್.ಬಡಿಗೇರ್ ಎಸಿಪಿ ಎನ್.ಎಸ್.ಪಾಟೀಲ್





ವಮೊಗ್ಗ: ದಂಡಾವತಿ ಹೋರಾಟಗಾರರ ದಿಟ್ಟ ಹೋರಾಟ

ಾಚ್ಚೆಗೆದ್ದ ಸಾವಿರಾರು ಮಹಿಳೆಯರಿಂದ ಎಸಿಗೆ ಪೊರಕೆ ಸೇವೆ, ದಿಗ್ಬಂಧನ

ಂಡಾವತಿ ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನಲ್ಲಿ ವ ಒಂದು ಪುಟ್ಟ ಹಳ್ಳ. ಇದಕ್ಕೆ ಆಣೆಕಟ್ಟು ಪ್ರಸ್ತಾಪ ಬಂದಿದ್ದು ಮೂರು ದಶಕಗಳ ಹಿಂದೆಯೇ. ತಜ್ಞರು ಇದು ಒಂದು ಪ್ರಯೋಜನವಿಲ್ಲದ, ಜ್ಞಾನಿಕ ಯೋಜನೆ ಎಂದು ವರದಿ ನೀಡಿದ್ದರು. ಈ ಮು ವರ್ಷಗಳಲ್ಲಿ ಮಹತ್ತರ ಬದಲಾವಣೆಗಳಾಗಿವೆ. ವತಿ ನೀರಾವರಿ ಯೋಜನೆಯ ಫಲಾನುಭವಿಗಳಾದ ್ರಿಯ ರೈತರು ಕೆರೆ ಹಾಗೂ ಬೋರ್‌ವೆಲ್‌ಗಳ ಚಕ ಬದಲಿ ನೀರಾವರಿ ವ್ಯವಸ್ಥೆಯನ್ನು ಕೊಂಡಿದ್ದಾರೆ. ಈಗ ಈ ಯೋಜನೆಯ ವೆಚ್ಚ 125 ಗಳನ್ನು ಮೀರಿ ಅಧಿಕವಾಗಿದೆ. ತಮ್ಮ ತಾಲ್ಲೂಕಿನ ರು ರೈತರನ್ನು ಬೀದಿಪಾಲು ಮಾಡಿ ಈ ಯೋಜನೆ ಳಿಸಿ ಎಂದು ಆನವಟ್ಟಿ ಜನರೂ ಹೇಳುತ್ತಿಲ್ಲ. ಚುನಾವಣೆಯವರೆಗೂ ಇದು ರಾಮಮಂದಿರದ ದಂತೆ ಮೂಲೆ ಸೇರಿತ್ತು. ಆದರೆ ಹೇಗಾದರೂ ವಣೆ ಗೆಲ್ಲುವ ಹಠಕ್ಕೆ ಬಿದ್ದ ಯಡಿಯೂರಪ್ಪ ಮತ್ತು ಪ್ಪ ಬಂಗಾರಪ್ಪನವರನ್ನು ಮಣಿಸಲು ಆಗ ್ನುಕೊಂಡಿದ್ದೇ ಶವದಪೆಟ್ಟಿಗೆಯಲ್ಲಿದ್ದ ಈ ಜನೆಯನ್ನು.

ಪ್ರಳಯಾಂತಕ ಜೋಡಿಯ ಲೆಕ್ಕಾಚಾರ ವಾಗಿದೆ. ದಂಡಾವತಿ ಅಣೆಕಟ್ಟು ಯೋಜನೆಯ ುಭವಿಗಳೆಂದು ಗುರುತಿಸಲಾಗಿರುವ ಆನವಟ್ಟಿ ಡ ಹೆಚ್ಚಿನವರು ಲಿಂಗಾಯತ ಸಮುದಾಯದವರು. ಯೋಜನೆಯಿಂದ ಬೀದಿಪಾಲಾಗುವವರು ಹಿಂದುಳಿದ ಈಡಿಗ ಸಮುದಾಯದ ಜನ. ಬಂಗಾರಪ್ಪ ತನ್ನ ಎಲ್ಲ ಮಿತಿಗಳಾಚೆಯೂ ಇಲ್ಲಿ ಎಲ್ಲ ಸಮುದಾಯದವರ ನಾಯಕನಾಗಿ ಬೆಳೆದಿದ್ದರು. ಬಂಗಾರಪ್ಪನವರನ್ನು ಹಣಿದು ಚುನಾವಣೆ ಗೆಲ್ಲಲು ಈ ಜೋಡಿ ಬಳಸಿಕೊಂಡಿದ್ದೇ ಎಂದೋ ಜೀವ ಕಳೆದುಕೊಂಡು ಮೂಲೆ ಸೇರಿದ್ದ ಈ ಯೋಜನೆಯನ್ನು. ಇದಕ್ಕೆ ಇನ್ನೊಂದು ಆಯಾಮವೂ ಇದೆ. ಅದೆಂದರೆ ಈ ಯೋಜನೆಯಿಂದ ಕಿಕ್ ಬ್ಯಾಕ್ ರೂಪದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ದೋಚುವ ಸಂಚು.

ಈ ರೀತಿ ಒಂದೇ ಕಲ್ಲಿಗೆ ಎರಡು ಹಕ್ಕಿ ಹೊಡೆಯುವುದು ಈ ಜೋಡಿಯ ಹುನ್ನಾರ. ಕಳೆದ ಬಾರಿ ಇದೇ ತಂತ್ರದಿಂದ ಮತ್ತು ಬಂಗಾರಪ್ಪನವರ ಕುಟುಂಬದ ಎಡವಟ್ಟುಗಳಿಂದ ಹರತಾಳು ಹಾಲಪ್ಪ ಚುನಾವಣೆಯಲ್ಲಿ ಗೆದ್ದುಬಿಟ್ಟರು. ಆದರೆ ಜನರ ಪ್ರತಿರೋಧದಿಂದ ಚುನಾವಣಾ ನಂತರದ ಈ ಐದು ವರ್ಷಗಳಲ್ಲಿ ಯೋಜನೆ ಜಾರಿಯಾಗುವುದಿರಲಿ, ದಂಡಾವತಿ ಪ್ರದೇಶಕ್ಕೆ ಯಡಿಯೂರಪ್ಪನವರಾಗಲೀ ಹಾಲಪ್ಪನವರಾಗಲೀ ಕಾಲಿಡುವುದಕ್ಕೂ ಇದುವರೆಗೆ ಸಾಧ್ಯವಾಗಿಲ್ಲ.

ಈ ಯೋಜನೆಯ ಶಂಕುಸ್ಥಾಪನೆಯ ವೇಳೆಯೂ ಬೃಹತ್ ಪ್ರತಿಭಟನೆ ಎದುರಾಗಿತ್ತು, ಆ ಸಂದರ್ಭ ಈ ಯೋಜನೆಯಿಂದ ಬೀದಿ ಪಾಲಾಗಲಿದ್ದ ಕುತ್ಲೂರು ಶಿವಪ್ಪ ಎಂಬ ರೈತ ಆತ್ಮಹತ್ಯೆ ಮಾಡಿಕೊಂಡಿದ್ದರು. ಪರಿಸ್ಥಿತಿ ಹೇಗಿತ್ತೆಂದರೆ ಯಡಿಯೂರಪ್ಪ ಹಾಲಪ್ಪ ಈ ಪ್ರದೇಶಕ್ಕೆ ಬಂದಿದ್ದರೆ ಅವರು ಜೀವಸಹಿತ ಹೊರಬರುವುದೇ ಕಷ್ಟವಾಗಿತ್ತು.


ಈಗ ಮತ್ತೆ ಚುನಾವಣೆ ಹತ್ತಿರ ಬರುತ್ತಿರುವುದರಿಂದ ಈ ಯೋಜನೆಯತ್ತ ಇವರ ಕಣ್ಣು ಹೊರಳಿದೆ. ಮೊನ್ನೆ ಹಾಲಪ್ಪ ಅವರ ಸೂಚನೆ ಮೇರೆಗೆ ಉಪವಿಭಾಗಾಧಿಕಾರಿ ಪ್ರವೀಣ್‌ಕುಮಾರ್ ಸಾವಿರಾರು ಪೊಲೀಸರ ದಂಡಿನೊಂದಿಗೆ ಸರ್ವೆಯರ್‌ಗಳನ್ನು ಕರೆದುಕೊಂಡು ಸರ್ವೆ ಮಾಡಿಸಲು ದಂಡಾವತಿ ಪ್ರದೇಶಕ್ಕೆ ದಾಳಿ ಇಟ್ಟರು. ಸರ್ವೆಗೆ ಬರುವ ಸುಳಿವರಿತ ಹೋರಾಟಗಾರರು ಹಿಂದಿನ ದಿನದಿಂದಲೇ ಆಹೋರಾತ್ರಿ ಧರಣಿ ಕುಳಿತಿದ್ದರು. ಸಾವಿರಾರು ಜನ ಜಮಾಯಿಸಿದ್ದರು.

ರೈತರೊಬ್ಬರು ಸರ್ವೆಯರ್ ಕೈಲಿದ್ದ ಸರ್ವೆ ಮಾಡುವ ಚೈನನ್ನು ಕಿತ್ತುಕೊಂಡರು. ಆಗ ಪೊಲೀಸ್ ಇನ್ಸಪೆಕ್ಟರ್‌ರೊಬ್ಬರು ಈ ಸಂತ್ರಸ್ತ ರೈತನಿಗೆ ಲಾಠಿಯಿಂದ ಮನಸೋ ಇಚ್ಛೆ ಹೊಡೆದರು. ಇದು ಹೆಜ್ಜೇನು ಗೂಡಿಗೆ ಕಲ್ಲು ಹೊಡೆದಂತಾಯಿತು. ಇದನ್ನು ತೀವ್ರವಾಗಿ ಪ್ರತಿಭಟಿಸಿದ ರೈತರ ಮೇಲೆ ಪೊಲೀಸರು ಲಾಠಿ ಬೀಸಿದರು. ಹೋರಾಟ ಸಮಿತಿಯ ಅಧ್ಯಕ್ಷರಾದ ವಾಮದೇವ ಗೌಡ, ದಲಿತ ಸಂಘರ್ಷ ಸಮಿತಿಯ ಪರಮೇಶ್ವರ ದೂಗೂರು ಮತ್ತು ಇತರರನ್ನು ಬಂಧಿಸಿದ ಪೊಲೀಸರು ಅವರನ್ನೆಲ್ಲ ಕೊಂಡೊಯ್ದರು. ಇದು ಹೋರಾಟನಿರತ ರೈತರನ್ನು, ರೈತ ಮಹಿಳೆಯರನ್ನು ಇನ್ನಷ್ಟು ಕೆರಳಿಸಿತು. ರೈತ ಮಹಿಳೆಯರು ಉಪವಿಭಾಗಾಧಿಕಾರಿ ಪ್ರವೀಣ್ ಕುಮಾರರಿಗೆ ತಾವು ತಂದಿದ್ದ ಪೊರಕೆಯಿಂದ ಬಾರಿಸಿದರು. ಅವರು ಮಿಸುಕಾಡದಂತೆ ದಿಗ್ಬಂಧನ ಹಾಕಿ ಬಂಧಿಸಲ್ಪಟ್ಟ ಮುಖಂಡರನ್ನು ವಾಪಸು ಕರೆತರುವವರೆಗೂ ಇಲ್ಲಿಂದ ಹೊರಹೋಗಲು ಬಿಡುವುದಿಲ್ಲವೆಂದು ಪಟ್ಟು ಹಿಡಿದರು. ಅನಿವಾರ್ಯವಾಗಿ ಬಂಧಿತರನ್ನು ಕುಂಸಿ ಪೊಲೀಸ್ ಠಾಣೆಯಿಂದ ಬಿಡುಗಡೆ ಮಾಡಿ ಹೋರಾಟನಿರತ ಮಹಿಳೆಯರಿಗೆ ತಂದೊಪ್ಪಿಸಿದ ಎಸಿ ಪ್ರವೀಣ್ ಕುಮಾರ್ ತಮ್ಮ ಪೊಲೀಸ್ ದಂಡಿನೊಂದಿಗೆ ಬಂದ ದಾರಿಗೆ ಸುಂಕವಿಲ್ಲವೆಂದು ಮರಳಿದರು. ಇಲ್ಲಿಗೆ ಈ ಹಂತದ ಹೋರಾಟ ಯಶಸ್ವಿಯಾಗಿ ಮುಗಿದಿದೆ.

ಆದರೆ ತನ್ನ ಕೃಷ್ಣಲೀಲೆಗಳಿಂದ ಸಾಕಷ್ಟು ಹೆಸರು ಕೆಡಿಸಿಕೊಂಡಿರುವ ಹಾಲಪ್ಪ ತಾನು ಗೆಲ್ಲಲು ಇರುವ ಏಕೈಕ ಆಸರೆ ಎಂದರೆ ಈ ದಂಡಾವತಿ ಯೋಜನೆ ಎಂದು ಅಂದುಕೊಂಡಿರುವುದರಿಂದ ಹೇಗಾದರೂ ಮಾಡಿ ಹತ್ತು ಜನ ಹೋರಾಟಗಾರರನ್ನು ಕೊಂದಾದರೂ ಈ ಯೋಜನೆಯ ಅನುಷ್ಠಾನಕ್ಕೆ ಮುಂದಾಗುವುದು ಖಚಿತವಾಗಿದೆ. ತಮ್ಮ ಪ್ರದೇಶಕ್ಕೆ ಕಾಲಿಟ್ಟರೆ ಉಪವಿಭಾಗಾಧಿಕಾರಿಗೆ ಆದ ಪೊರಕೆಸೇವೆ ಹಾಲಪ್ಪನವರಿಗೂ ಕಾದಿದೆ ಎಂದು ಮಹಿಳೆಯರು ಎಚ್ಚರಿಸಿದ್ದಾರೆ. ದಂಡಾವತಿ ಯೋಜನೆಯನ್ನು ವಿರೋಧಿಸುತ್ತಿರುವ ಸಂತ್ರಸ್ತ ರೈತರ ಪರವಾಗಿ ನಾಡಿನ ಪ್ರಜ್ಞಾವಂತರು ದನಿ ಎತ್ತಬೇಕಾಗಿದೆ.

● ಸರ್ಜಾಶಂಕರ ಹರಳಿಮಠ

ರೋ' ಮಲ್ಯನಿಗೆ ಬಲಿಯಾದವರಲ್ಲಿ ನಾನೂ ಒಬ್ಬ



ೋಮ್ ಹೊತ್ತಿ ಉರಿಯುತ್ತಿರುವಾಗ ಪಿಟೀಲು ುತ್ತಿರುವ' ನಮ್ಮ ಹೆಂಡೋದ್ಯಮಿ ವಿಜಯ ಮಲ್ಯನ ಳ ಬಗ್ಗೆ 'ಕಂಡಹಾಗೆ' ಅಂಕಣದಲ್ಲಿ ಗೌರಿ ಲಂಕೇಶ್ ವಿವರವಾಗಿ ಬೆಳಕನ್ನು ಚೆಲ್ಲಿದ್ದಾರೆ. ಆರು ಸಾವಿರ ಿ ಬದುಕು ಅನಿಶ್ಚಿತತೆಯಲ್ಲಿರುವಾಗಲೂ ಮೋಜು ದಲ್ಲಿ ಮುಳುಗಿ, ಏನೂ ಆಗಿಲ್ಲವೇನೋ ಎಂಬಂತೆ




ಯಲ್ಲಿರುವ ಆತನ ಉಡಾಫೆತನದ ಬಗ್ಗೆಯೂ ಿದ್ದಾರೆ.

ಂಬಳ ಹೆಚ್ಚಿಸಬೇಕೆಂದು ನೌಕರರು ಚೌಕಾಸಿ ುವುದನ್ನು ನಾವೆಲ್ಲ ಕೇಳಿದ್ದೇವೆ. ಆದರೆ ಬಾಕಿ ರುವ ಏಳು ತಿಂಗಳ ಪೈಕಿ ನಾಲ್ಕು ತಿಂಗಳ ಸಣ್ಣಾದರೂ ಈಗ ಕೊಡಿ ಎಂದು ಚುವ ಪರಿಸ್ಥಿತಿಯನ್ನು ಕಿಂಗ್‌ಫಿಶರ್ ನ ಸಂಸ್ಥೆಯ ನೌಕರರು ತಲುಪಿರಬೇಕಾದರೆ ನ್ನು ನಮ್ಮ ಕೋಕೀಲಾಲ ಮಲ್ಯ ಎಂತಹ ತಲುಪಿರಬೇಡ, ಅದರನ್ನು ಯಾವ ರೀತಿ ೊಂಡಿರಬೇಡ?

ಒಂದು ಪತ್ರ

ದರೆ ತನ್ನ ಬಡ ನೌಕರರ ಕಷ್ಟಗಳ ವಿಚಾರದಲ್ಲಿ ಅಸಂವೇದನಾಶೀಲತೆಯ ಬಗ್ಗೆ, ಅವರೊಂದಿಗೆ ಅಮಾನವೀಯ ವ್ಯವಹಾರಗಳ ಬಗ್ಗೆ ವೈಯುಕ್ತಿಕವಾಗಿ ೂ ಅಂಥ ಅಚ್ಚರಿ ಎನಿಸಲಿಲ್ಲ, ಯಾಕೆಂದರೆ ಮಲ್ಯನ ಕ್ರೌರ್ಯದ ಓರ್ವ ಬಲಿಪಶು ನಾನೇ ಆಗಿರುವುದರಿಂದ ಅದರ ಅನುಭವ ನನಗೆ ಚೆನ್ನಾಗಿದೆ.

ಉದಾರೀಕರಣದ ಯುಗವಾದ 90 ರ ದಶಕದಲ್ಲಿ ಅನಾಯಾಸವಾಗಿ ಮಲ್ಯನ ತೆಕ್ಕೆಗೆ ಬಂದ ಸರಕಾರಿ ಸ್ವಾಮ್ಯದ 'ಮಂಗಳೂರು ರಸಗೊಬ್ಬರ ಸ್ಥಾವರ'ದಲ್ಲಿ 1983 ರಿಂದಲೂ ನಾನು ಉದ್ಯೋಗಿಯಾಗಿದ್ದೆ. 1998ರಲ್ಲಿ ವಸತಿಗೃಹದ ಬಳಿಯಲ್ಲಿ ನಡೆದ ಅವಘಡವೊಂದರಲ್ಲಿ ಬೆನ್ನುಹುರಿಗೆ ಜಖಂ ಆಗಿ ಪ್ಯಾರಾಪ್ಲೀಜಿಕ್ ಆಗಿಬಿಟ್ಟ ನಾನು ಚಿಕಿತ್ಸೆ ಪಡೆಯುತ್ತಾ ಹಾಸಿಗೆಯಲ್ಲಿರುವಾಗಲೇ ಮಲ್ಯನ ಸಂಸ್ಥೆ ನಿರ್ದಯವಾಗಿ ನನ್ನನ್ನು ಅಮಾನತುಗೊಳಿಸಿ, ಕೊನೆಗೆ ಸೇವೆಯಿಂದ ವಜಾ ಕೂಡಾ ಮಾಡಿತು (ಸಂಸ್ಥೆ ಮಲ್ಯನ ಕೈಗೆ ಬಂದಮೇಲೆ ಮೊದಲು ಆತ ಮಾಡಿದ್ದೆಂದರೆ ವಿಆರ್‌ಎಸ್ ನೆಪದಲ್ಲಿ ನೌಕರರ ಸಂಖ್ಯೆಯನ್ನು ಕಡಿಮೆ ಮಾಡುವ ಕಾರ್ಯಕ್ಕೆ ಕೈಹಾಕಿದ್ದು. ನೌಕರರಿಗೆ ಕಿರುಕುಳ ನೀಡುವ ಮತ್ತು ಅವರನ್ನು ಸೇವೆಯಿಂದ ವಜಾಗೊಳಿಸುವ ಯಾವ ಅವಕಾಶವನ್ನೂ ಆತನ ಅಧಿಕಾರಿಗಳು ಕೈಚೆಲ್ಲುತ್ತಿರಲಿಲ್ಲ. ನಾನು ಕಾರ್ಮಿಕ ಸಂಘಟನೆಯಲ್ಲಿ ಸಕ್ರಿಯನಾಗಿದ್ದೆ ಎಂಬ ಬಗ್ಗೆ ಕೂಡಾ ಸಂಸ್ಥೆಗೆ ನನ್ನ ಮೇಲೆ ಕಣ್ಣಿತ್ತು). ವಜಾ ಮಾಡಿದ್ದಷ್ಟೇ ಅಲ್ಲ ವಸತಿಗೃಹವನ್ನು ತೊರೆಯುವಂತೆ ಆದೇಶಿಸಿತು. ಬಹುದೂರದ ಶಾಲೆಗೆ ಸಂಸ್ಥೆಯ ವಾಹನದಲ್ಲಿ ಹೋಗುತ್ತಿದ್ದ 12ರ ಹರೆಯದ ನನ್ನ ಮಗನನ್ನು ನಿರ್ದಯವಾಗಿ ಆ ವಾಹನದಿಂದ ಕೆಳಗಿಳಿಸಿತು. ಕಾಲುಗಳ ಮೇಲಣ ಸ್ವಾಧೀನ ಕಳೆದುಕೊಂಡಿದ್ದ, ಜೀವನೋಪಾಯದ ದಾರಿಯೂ ಇಲ್ಲದೆ, ಬೇರೆ ವಸತಿಯ ಅವಕಾಶವೂ ಇಲ್ಲದೆ ಚಿಂತಾಜನಕಸ್ಥಿತಿಯಲ್ಲಿದ್ದ ನಾನು ಕಂಪೆನಿಯ ಕ್ವಾರ್ಟರ್ಸ್ ಬಿಡಲಿಲ್ಲ ಎಂಬ ನೆಪದಲ್ಲಿ ವಸತಿಗೃಹದ ವಿದ್ಯುತ್ ಸಂಪರ್ಕ ಮಾತ್ರವಲ್ಲ ನೀರು ಸರಬರಾಜನ್ನೂ ಕತ್ತರಿಸಿಹಾಕಿತು. ಬದಲಿ ಉದ್ಯೋಗವನ್ನಾದರೂ ಕೊಡಿ, ಪದವೀಧರೆಯಾಗಿರುವ ನನ್ನಾಕೆಗೆ ಅನುಕಂಪದ ಆಧಾರದಲ್ಲಿಯಾದರೂ ಉದ್ಯೋಗ ನೀಡಿ ಮುಂತಾದ ನಮ್ಮ ಎಲ್ಲ ವಿನಂತಿಗಳೂ ಗೋರ್ಕಲ್ಲ ಮೇಲೆ ನೀರೆರದಂತೆ ಆದಾಗ ವಿಷಯ ಅರಿತ (ಈಗಿನ ಕೇಂದ್ರ ಮಂತ್ರಿ) ಮಾನ್ಯ ವೀರಪ್ಪ ಮೊಯ್ಲಿಯವರು ಸ್ವತಃ ವಿಜಯ ಮಲ್ಯರಿಗೆ ಪತ್ರ ಬರೆದು ಪ್ರಕರಣವನ್ನು ಸಹಾನುಭೂತಿಯಿಂದ ಪರಿಗಣಿಸುವಂತೆ, ಮಾನವೀಯತೆ ತೋರುವಂತೆ ವಿನಂತಿಸಿಕೊಂಡರು (ಪತ್ರದ ಪ್ರತಿ ಲೇಖನದ ಜತೆಗಿದೆ) ಆದರೆ ಸದಾ ಆಕಾಶದಲ್ಲಿಯೇ ಹಾರಾಡುತ್ತಿರುವ ಮಲ್ಯನಂತಹವರಿಗೆ ನೆಲದಲ್ಲಿರುವ ನಮ್ಮಂಥವರ ನೋವು



13 July, 2000
Date

M. VEERAPPA MOILY
Former Chief Minister of Karnataka
Chairman, Taxation Reforms Commission
Government of Karnataka

Dear Sri Vijay Maliya ji,

I had made a request in my earlier letter written a couple of months ago regarding one Sri M Srinivas, T No.1320, Sr. Operator, Qtrs. No.C-130, MCF Township, Kunjathbail, Mangalore for reconsideration of the discharge order which was made vide No.546-T.1320/99 dated 25.03.2000.

Sri M Srinivas had a fall on 2.2.98 from the height when he is in the house and suffered injury on his back. Even though he lost control over his limbs, he is now quite fit enough to do clerical job. Even if it is not possible to restore him back to the services, his wife Smt [illegible] who is also a graduate can be considered for appropriate job with MCF Ltd., on humanitarian ground.

Sri Srinivas is now asked to vacate his quarter and he will be thrown to street, if he is not retained in the quarter and employment is provided.

Sri Srinivas has put in 17 years service as Sr. Operator. Even though he is not in a position to work as an operator, he could have been considered for any other suitable job. Sri Srinivas is also a scholar and writer. You may also kindly note that [illegible] B.Sc. B.Ed and also possesses Senior Typewriting qualification. He is quite competent to put up any desk work. I am enclosing herein all the correspondences and also details for your sympathetic consideration.

As the matter was not considered and the plea is rejected by your people at various level, I am making earnest request to your kindself [illegible] consideration on humanitarian ground. I had addressed a letter earlier and received a reply from your people. I am requesting you to personally consider my letter and I shall be happy if you can send a personal reply after due and sympathetic consideration.

With regards

Yours sincerely,
(M VEERAPPA MOILY)

Sri Vijay Mallya
[illegible]

ವೀರಪ್ಪ ಮೊಯ್ಲಿ ಮಲ್ಯನಿಗೆ ಬರೆದ ಪತ್ರ

ಹೇಗೆ ತಾನೇ ಅರ್ಥವಾಗಬೇಕು? ಮೊಯ್ಲಿಯವರ ಪತ್ರಕ್ಕೆ ಸ್ಪಂದಿಸುವುದಿರಲಿ, ಪ್ರತಿಕ್ರಿಯಿಸುವ ಸೌಜನ್ಯವನ್ನೂ ಆತ ತೋರಲಿಲ್ಲ, ಆತನ ಅಧಿಕಾರಿಗಳ ಕಿರುಕುಳ ನಿರಂತರವಾಗಿ ಮುಂದುವರಿಯಿತು. 17 ವರ್ಷ ಸಂಸ್ಥೆಯಲ್ಲಿ ದುಡಿದಿದ್ದ ನಾನು ಕೊನೆಗೂ ವಿಆರ್‌ಎಸ್ ಸೌಲಭ್ಯ, ಸೂಪರ್ ಆನ್ಯುವೇಶನ್ ಸೌಲಭ್ಯ ಎಲ್ಲದಕ್ಕೂ ಸಂಚಕಾರ ಅನುಭವಿಸಿ ಮಲ್ಯನ ಕೃಪೆಯಿಂದ ಹೆಚ್ಚುಕಡಿಮೆ ಬರಿಗೈಲಿ ಹೊರಬಿದ್ದೆ.

ಇದು ನನ್ನೊಬ್ಬನ ಕತೆಯಲ್ಲ, ವಿಜಯ ಮಲ್ಯನ ಸಂಸ್ಥೆಗಳ ನೌಕರರನ್ನು ಮಾತನಾಡಿಸಿದರೆ ಇಂತಹ ನೂರಾರು ಕತೆಗಳು ಬೆಳಕಿಗೆ ಬಂದಾವು. ಹಣದ ಬಲದಿಂದ ಸರ್ಕಾರಗಳನ್ನೇ ಕೊಂಡುಕೊಳ್ಳುವ ಸಾಮರ್ಥ್ಯ ಹೊಂದಿರುವ ಮಲ್ಯನಿಗೆ ಬಡಪಾಯಿ ನೌಕರರು ಯಾವ ಲೆಕ್ಕ? ಆ ಧೈರ್ಯದಲ್ಲಿಯೇ, ಕಿಂಗ್‌ಫಿಷರ್ ಉದ್ಯೋಗಿಗಳು ಹೊಟ್ಟೆಪಾಡಿನ ಚಿಂತೆಯಲ್ಲಿ ಬೀದಿಯಲ್ಲಿರುವಾಗಲೂ ಆತ ಪ್ರಪಂಚದ ಯಾವುದೋ ಮೂಲೆಯಲ್ಲಿ ಹಾರಾಡುತ್ತಾ ಸುಖವಾಗಿರುತ್ತಾನೆ, ಫಾರ್ಮುಲಾ ವನ್ ರೇಸ್‌ನಲ್ಲಿ ತಪ್ಪದೆ ಹಾಜರಾಗಿ ಮಜಾ ಅನುಭವಿಸುತ್ತಿರುತ್ತಾನೆ, ಐಪಿಎಲ್ ಸಂಭ್ರಮಗಳ ಬಗ್ಗೆ ಕನಸು ಕಾಣುತ್ತಿರುತ್ತಾನೆ. ಇಂತಹ ಕೋಕೀಲಾಲ ಮಲ್ಯ ನಮ್ಮ ಘನತೆವೆತ್ತ ರಾಜ್ಯಸಭೆಯ ಸದಸ್ಯ ಬೇರೆ!

ಶ್ರೀನಿವಾಸ ಕಾರ್ಕಳ, ಮಂಗಳೂರು

ನವೆಂಬರ್ 10 ರಂದು ಬಿಡುಗಡೆ ಆಗುತ್ತಿರುವ ಕಲ್ಕುಳಿ ವಿಠಲ್ ಹೆಗ್ಗಡೆ ಅವರ 'ಮಂಗನ ಬ್ಯಾಟೆ' ಕೃತಿಗೆ ರಹಮತ್ ತರೀಕೆರೆ ಅವರು ಬರೆದಿರುವ ಮುನ್ನುಡಿ ಇಲ್ಲಿದೆ.

ಮಲೆನಾಡನ್ನು ಸೆರೆಹಿಡಿಯುವ ಕೃತಿ

ಕರ್ನಾಟಕದ ಜನಪರ ಚಳವಳಿಗಳಲ್ಲಿ ತೊಡಗಿಸಿಕೊಂಡವರಲ್ಲಿ ಕಲ್ಕುಳಿಯ ವಿಠಲ ಹೆಗ್ಡೆಯವರೂ ಒಬ್ಬರು. ಒಳ್ಳೆಯ ಮಾತುಗಾರರಾದ ಅವರು ಮಲೆನಾಡಿನ ಸಮಸ್ಯೆಗಳ ಬಗ್ಗೆ ಪರಿಣಾಮಕಾರಿಯಾಗಿ ವಿಶ್ಲೇಷಣೆ ಮಾಡಿರುವುದನ್ನು ಕೇಳಿರುವೆ. ಅವರು ಕೆಲವು ವರ್ಷಗಳ ಹಿಂದೆ ನನಗೆ ಓದಲು ಕೊಟ್ಟಿದ್ದ ಬರೆಹದ ಹಸ್ತಪ್ರತಿಯೊಂದರ ನೆನಪಿನಲ್ಲಿ ಹೇಳುವುದಾದರೆ, ಬರೆಹ ಅವರ ಕಪ್ಪಿನ ಚಹವಲ್ಲ ಎಂದು ನನಗೆ ಅನಿಸಿತ್ತು. ಸಮೃದ್ಧವಾದ ಅನುಭವವೂ ಪ್ರಖರವಾದ ಚಿಂತನೆಯೂ ಇರಬಹುದು. ಅವನ್ನು ವ್ಯಕ್ತಮಾಡಲು ಬೇಕಾದ ಅಭಿವ್ಯಕ್ತಿಯ ಉಪಾಯಗಳು ಕೈವಶವಾಗದಿದ್ದರೆ, ಬರೆಹ ಸಿದ್ಧಿಸುವುದಿಲ್ಲ.

ಆದರೆ ಈಚೆಗೆ ಕಲ್ಕುಳಿಯವರು ಗೂಳಿಸಾಕುವ ಒಂದು ಪ್ರಸಂಗದ ಮೇಲೆ ಗೌರಿಯವರ 'ಲಂಕೇಶ್' ವಾರ ಪತ್ರಿಕೆಯಲ್ಲಿ ಬರೆದ ವಿಡಂಬನ ಲೇಖನ ಓದಿದ ಬಳಿಕ, ನನ್ನ ಅಭಿಪ್ರಾಯವನ್ನು ಬದಲಿಸಿಕೊಳ್ಳಬೇಕಾಯಿತು. ಕರಾವಳಿಯಲ್ಲಿ ದನದ ಸಾಗಣೆ ಮಾಡುತ್ತಿದ್ದಾರೆ ಎಂದು ಆರೋಪಿಸಿ, ಗೋರಕ್ಷಕರು ಹೊಡೆದು ಬಡಿದು ಒಂದು ಗೂಳಿಯನ್ನು ಕಿತ್ತುಕೊಂಡು ಬಂದು, ಅದನ್ನು ಸಾಕಲು ಪಡುವ ಪಡಿಪಾಟಲನ್ನು ಕುರಿತ ಆ ಲೇಖನವು, ಕನ್ನಡದ ಅಪೂರ್ವ ವಿನೋದ ಬರೆಹಗಳಲ್ಲಿ ಒಂದಾಗಿತ್ತು. ಆದರೆ ಅದು ಕೇವಲ ನಗಿಸುವುದಕ್ಕೆ ಬರೆದ ತಮಾಷೆ ಲೇಖನವಾಗಿರಲಿಲ್ಲ, ಬದಲಿಗೆ ಉರಿಯುವ ಮಾನವೀಯ ಸಾಮಾಜಿಕ ಸಮಸ್ಯೆಯೊಂದನ್ನು ವ್ಯಂಗ್ಯದ ಮೂಲಕ ಹೇಳುತ್ತಲೇ ಆಳವಾದ ಚಿಂತನೆ ಹುಟ್ಟಿಸಬಲ್ಲ ಲೇಖನವಾಗಿತ್ತು. ಲಘುಹಾಸ್ಯದಲ್ಲಿ ಪ್ರಸಂಗವನ್ನು ವಿವರಿಸುತ್ತಲೇ ಅದರ ಆಳದಲ್ಲಿರುವ ದಾರುಣತೆಯನ್ನು ಅದು ಓದುಗರಿಗೆ ಮುಟ್ಟಿಸುತ್ತಿತ್ತು. ಬಾಳನ್ನು ಪ್ರೀತಿಸುತ್ತ ಕೇಡನ್ನು ಪ್ರತಿರೋಧಿಸುತ್ತ ಹುಟ್ಟುವ ವ್ಯಂಗ್ಯಕ್ಕೆ ಬಹಳ ಆಳವಾದ ಮೊನಚಿರುತ್ತದೆ. ಕೋಮುವಾದಿ ರಾಜಕಾರಣದ ಕಾರ್ಯಕ್ರಮಗಳ ಒಳಗಿನ ಹುಸಿಯನ್ನು ಹೀಗೆ ವಿಡಂಬಿಸಿದ ಬರೆಹಗಳನ್ನು ನಾನು ಬಹಳ ಕಾಣಲಿಲ್ಲ.

ಮತೀಯ ವಿಕಾರದ ಶಕ್ತಿಗಳು ಅಧಿಕಾರಸ್ಥವಾಗಿ ಸಾಮಾಜಿಕ ರಾಜಕೀಯ ಸ್ಪೇಸನ್ನು ಆಕ್ರಮಿಸಿಕೊಂಡಿರುವ ಹಾಗೂ ಜನಪರ ಚಳವಳಿಗಳು ಹಿನ್ನಡೆ ಕಂಡಂತಿರುವ ಪ್ರಸ್ತುತ ಸನ್ನಿವೇಶವೇ ಇಂತಹದೊಂದು ಮೊನಚಿನ ಧಾಟಿಯನ್ನು ಹುಟ್ಟಿಸಿರಬೇಕು. ವರ್ತಮಾನದ ಸಾಮಾಜಿಕ ರಾಜಕೀಯ ಸಮಸ್ಯೆಗಳನ್ನು ವ್ಯಗ್ರತೆ ಆಕ್ರೋಶ ಮತ್ತು ವಿಷಾದದ ಧಾಟಿಯಲ್ಲಿ ಬರೆಬರೆದು, ಕನ್ನಡ ಚಿಂತನೆ ಭಾಷೆಯನ್ನು ದಣಿಸಿಬಿಟ್ಟಿದೆ. ಹೀಗಿರುವಾಗ, ವಾಸ್ತವತೆಯ ವೈರುಧ್ಯಗಳನ್ನು ವಿಡಂಬನೆ ಅಲಗಿನೊಂದಿಗೆ ಬರೆಯಬಲ್ಲ ಹೊಸಹಾದಿಯನ್ನು ಕಲ್ಕುಳಿಯಂತಹ ಲೇಖಕರು ಹುಡುಕುತ್ತಿದ್ದಾರೆ. ಪ್ರಸ್ತುತ 'ಮಂಗನ ಬ್ಯಾಟೆ' ಕೃತಿ ಸಹ ಇಂತಹ ಹೊಸ ಅಭಿವ್ಯಕ್ತಿ ಕ್ರಮದ ಹುಡುಕಾಟದ ಪರಿಣಾಮವಾಗಿ ಹುಟ್ಟಿದ ಬರೆಹವಾಗಿದೆ. ಇದು 'ಲಂಕೇಶ್' ವಾರ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬರುವಾಗ ಓದಲು ನನಗೆ ಸಾಧ್ಯವಾಗಿರಲಿಲ್ಲ. ಎಷ್ಟೇ ಒಳ್ಳೆಯ ಬರೆಹವಿದ್ದರೂ ಧಾರಾವಾಹಿ ರೂಪದಲ್ಲಿ ನನಗೆ ಓದಲು ಆಗುವುದಿಲ್ಲ. ಅದು ಪುಸ್ತಕ ರೂಪದಲ್ಲಿ ಬಂದಾಗಲೇ ಓದಬಯಸುತ್ತೇನೆ. ಈಗ ಕಲ್ಕುಳಿಯವರ ಪ್ರಸ್ತುತ ಕೃತಿಯನ್ನು ಒಂದು ಬೈಠಕ್ಕಿನಲ್ಲಿ ಓದಿದಾಗ ನನಗೆ ಹೊಳೆದ ಕೆಲವು ಮಾತುಗಳನ್ನು ಓದುಗರಲ್ಲಿ ಹಂಚಿಕೊಳ್ಳಬಯಸುತ್ತೇನೆ.



ಈ ಕೃತಿಯು ರೈತಾಪಿ ವ್ಯಕ್ತಿಯೊಬ್ಬರು ತಾವು ಬದುಕುತ್ತಿರುವ ಮಲೆನಾಡಿನ ಪರಿಸರ ಹಾಗೂ ಪ್ರಜ್ಞೆಗಳಲ್ಲಾಗಿರುವ ಪಲ್ಲಟಗಳನ್ನು ನಿರೂಪಿಸುವ ಕಥನವಾಗಿದೆ. ರೈತರು ತಮ್ಮ ಬೆಳೆಯನ್ನು ತಿಂದು ಹಾಳುಮಾಡುವ ಮಂಗಗಳನ್ನು ಬೇಟೆಯಾಡಲು ಯತ್ನಿಸಿ ಸೋತುಹೋಗಿದ್ದು ಇದರ ವಸ್ತು. ಸದರಿ ಕಥನವು ಬಸ್ಸಿನಲ್ಲಿ ಲೇಖಕರಿಗೆ ಸಿಕ್ಕ ರೈತರೊಬ್ಬರು ಬೆಳೆದ ಬೆಳೆಯನ್ನು ಮಂಗಗಳು ತಿನ್ನುತ್ತಿವೆ ಎಂದು ಕಂಗಾಲಾಗಿ ತಮ್ಮ ಕಷ್ಟವನ್ನು ಹೇಳಿಕೊಳ್ಳುವ ಮೂಲಕ ಆರಂಭವಾಗುತ್ತದೆ; ಮಂಗಗಳ ಬೇಟೆಯಲ್ಲಿ ಸೋತ ವ್ಯಕ್ತಿಯು ಊರಿಗೆ ತಂದ ಮಂಗಗಳನ್ನು ಮರಳಿ ಕಾಡಿಗೆ ಒಯ್ದು ಬಿಡುವ ಮೂಲಕ ಮುಗಿಯುತ್ತದೆ. ಈ ಕೊನೆಗೂ ಗೆಲ್ಲುವುದು ಮಂಗಗಳೇ! ಆದರೆ ಈ ಕಥನದ ಸ್ವಾರಸ್ಯ ಇರುವುದು, ರೈತನೊಬ್ಬನ ಅಳಲಿನ ಸಣ್ಣ ಎಳೆ ಹಿಡಿದುಕೊಂಡು, ಇಡೀ ಮಲೆನಾಡಿನ ಜಮೀನ್ದಾರಿ ಪದ್ಧತಿ, ಜಾತಿವ್ಯವಸ್ಥೆ, ಧರ್ಮ, ಸಂಪ್ರದಾಯ, ರಾಜಕಾರಣಗಳನ್ನು ಚಿತ್ರಿಸುವುದಕ್ಕೆ ಯತ್ನಿಸುವುದರಲ್ಲಿ. ಮಂಗಗಳ ಬೇಟೆಯ ನೆಪದಲ್ಲಿ ಮಲೆನಾಡಿನ ಚರಿತ್ರೆ ಮತ್ತು ವರ್ತಮಾನಗಳೆರಡೂ ಏಕಕಾಲಕ್ಕೆ ಬಿಚ್ಚಿಕೊಳ್ಳುತ್ತ ಹೋಗುತ್ತವೆ. ಮಲೆನಾಡಿನ ರೈತರು, ಭೂಮಾಲೀಕರು, ವ್ಯಾಪಾರಿಗಳು, ಪೊಲೀಸರು, ಅಧಿಕಾರಿಗಳು, ದಲಿತರು, ಪುರೋಹಿತರು, ರೈತರು, ಮಹಿಳೆಯರು ಪಾತ್ರಗಳಾಗಿ ಬಂದುಹೋಗುತ್ತಾರೆ. ಇಲ್ಲಿನ ಪ್ರತಿಯೊಂದು ವರ್ಗಕ್ಕೂ ಅದರದ್ದೇ ಆದ ತಾಪತ್ರಯ ಮತ್ತು ತಲ್ಲಣಗಳಿದ್ದು ಕಥನವು ಅವುಗಳನ್ನು ವಿಶ್ಲೇಷಿಸುತ್ತ ಹೋಗುತ್ತದೆ. ನಡುನಡುವೆ ಓದುಗರಿಗೆ ಮಂಗನ ಬೇಟೆಯ ಎಳೆ ತಪ್ಪಿಹೋಗುತ್ತಿದೆ ಎಂದು ಕೂಡ ಅನಿಸುತ್ತದೆ. ಆದರೆ ಯಾವುದೊ ಗಳಿಗೆಯಲ್ಲಿ ಆ ಎಳೆ ಮತ್ತೆ ಬಂದು ಕೂಡಿಕೊಂಡು, ಬಿಡಿಬಿಡಿ ಘಟನೆಗಳನ್ನು ಜೋಡಿಸುವ ದಾರವಾಗುತ್ತದೆ. ಈ ಕೃತಿ 10ನೇ ಶತಮಾನದ 'ವಡ್ಡಾರಾಧನೆ' ಕಥಾಸಂಕಲನದಂತೆ ಒಂದು ಕಥಾಗುಚ್ಛವಾಗಿ ಕಾಣುತ್ತದೆ. ಒಂದು ಮುಖ್ಯ ಕತೆಯಲ್ಲಿ ಹಲವು ಉಪಕತೆಗಳನ್ನು ಜೋಡಿಸಿ ಹೆಣೆಯುತ್ತ ಒಂದು ಕತೆಯ ಗೊಂಚಲನ್ನಾಗಿಸುವ ವಿನ್ಯಾಸ ಇಲ್ಲಿದೆ. ಕಥನದ ಕೊನೆಯ ಭಾಗವಂತೂ ರೋಚಕವಾದ ನಾಟಕೀಯ ತಿರುವುಗಳನ್ನು ಪಡೆಯುತ್ತದೆ.

ನಾವು ಬದುಕುತ್ತಿರುವ ಪರಿಸರದಲ್ಲಿ ಘಟಿಸುತ್ತಿರುವ ಘಟನೆಗಳನ್ನು ಸಂಬಂಧವಿಲ್ಲದ ಅಂಶಗಳೆಂದು ನೋಡುವ ಒಂದು ಕ್ರಮವಿದೆ. ಆದರೆ ಈ ಬಿಡಿಬಿಡಿ ಘಟನೆಗಳು ಇಡಿಯಾದ ವ್ಯವಸ್ಥೆಯ ಬಿಡಿಭಾಗಗಳು ಎಂದು ನೋಡುವ ಇನ್ನೊಂದು ಕ್ರಮವಿದೆ. ಎರಡನೆಯ ಕ್ರಮವನ್ನು ಅನುಸರಿಸಿರುವ ಇಲ್ಲಿನ ಕಥನವು, ಸಮಸ್ತ ಘಟನೆಗಳಿಗೂ ಹಾದುಹೋಗುವಂತಹ ಒಂದು ಕೇಂದ್ರವನ್ನು ಸೃಷ್ಟಿಸಿದೆ. ಮಂಗನಬೇಟೆಯ ನೆಪದಲ್ಲಿ ಸೃಷ್ಟಿಯಾಗಿರುವ ಆ ಕೇಂದ್ರವೆಂದರೆ, ಅಧಿಕಾರಸ್ಥ ರಚನೆಗಳು ಮತ್ತು ಅವಕ್ಕೆ ಹುಟ್ಟುವ ಪ್ರತಿರೋಧ.

ತೇಜಸ್ವಿಯವರ 'ಕೃಷ್ಣಗೌಡನ ಆನೆ' ನೀಳ್ಗತೆಯನ್ನು ಕೆಲಮಟ್ಟಿಗೆ ನೆನಪಿಗೆ ತರುವ ಈ ಕಥನವನ್ನು, ಏಕಕಾಲಕ್ಕೆ ಮಲೆನಾಡಿನ ವಾಸ್ತವತೆಯನ್ನು ಕಂಡುಂಡ ವ್ಯಕ್ತಿಯೊಬ್ಬರ ಅನುಭವ ನಿರೂಪಣೆಯನ್ನಾಗಿಯೂ, ಅನುಭವಕ್ಕೆ ಕಲ್ಪಕತೆಯನ್ನು ಸೇರಿಸಿ ಬರೆದ ಕಾದಂಬರಿಯನ್ನಾಗಿಯೂ ನೋಡಬಹುದು. ಮಲೆನಾಡಿನಿಂದ ಬಂದ ಕುವೆಂಪು, ಬಿಳುಮನೆ ರಾಮದಾಸ್, ಕಡಿದಾಳು ಶಾಮಣ್ಣ, ತ್ಯಾನಂದೂರು ಪುಟ್ಟಣ್ಣ ಗಂಗಾಧರ್ ಮುಂತಾದವರನ್ನು ಓದಿರುವವರಿಗೆ 'ಮಲೆನಾಡಿನ ಚಿತ್ರಗಳು' ಅಪರಿಚಿತವೇನಲ್ಲ. ಆದರೆ ಈ ಕಥನದಲ್ಲಿರುವ ಮಲೆನಾಡು ಹಾಗೆ ನೆನಪುಗಳ ಹಳಹಳಿಕೆಯಲ್ಲಿ ತೆರೆದುಕೊಳ್ಳುವ ಗತವಲ್ಲ. ಬದಲಾಗಿ ನಿಗಿನಿಗಿ ಉರಿಯುವ ಮತ್ತು ಸ್ಥಿತ್ಯಂತರದಲ್ಲಿರುವ ವರ್ತಮಾನವಾಗಿದೆ. ಇದಕ್ಕೆ ಕಾರಣ ಕಲ್ಕುಳಿಯವರ ಅಪಾರ ಅನುಭವ, ಸೂಕ್ಷ್ಮನೋಟಗಳು ಮಾತ್ರವಲ್ಲದೆ, ಅನುಭವವನ್ನು ಜನಪರವಾದ ರಾಜಕೀಯ ಪ್ರಜ್ಞೆಯೊಳಗೆ ಹಿಡಿದಿಡುವ ವಿಧಾನವಾಗಿದೆ. ಅನುಭವವು ತನಗೆ ತಾನೇ ಬರೆಹಗಾರರ ಅಥವಾ ಭಾಷಣಕಾರರ ಸಂಪತ್ತಲ್ಲ. ಅದು ಯಾವ ತಾತ್ವಿಕ ದೃಷ್ಟಿಕೋನದಲ್ಲಿ ಮತ್ತು ರಾಜಕೀಯ ಪ್ರಜ್ಞೆಯಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ ಎಂಬುದೇ ಮುಖ್ಯವಾದುದು. ಪ್ರಸ್ತುತ ಕಥನದಲ್ಲಿ ಅನುಭವದ ಸಮೃದ್ಧತೆ, ಅಧ್ಯಯನ ಚಿಂತನೆ ಮತ್ತು ಅವನ್ನು ಹೊಮ್ಮಿಸಲು ಬೇಕಾದ ತಾತ್ವಿಕ ಚೌಕಟ್ಟುಗಳು ಹದವಾಗಿ ಮಿಳಿತವಾಗಿವೆ. ಕಥನವು ಅತಿಸಾಮಾನ್ಯ ಎನಿಸುವ ಸಂಗತಿಗಳ ಮೂಲಕ ಅಸಾಧಾರಣ ಸಂಗತಿಗಳಿಗೆ ನೆಗೆಯುತ್ತದೆ; ಸ್ಥಳೀಯ ಎನಿಸುವ ಸಂಗತಿಗಳನ್ನು ವಿವರಿಸುತ್ತಲೇ ರಾಷ್ಟ್ರೀಯ ಅಂತಾರಾಷ್ಟ್ರೀಯ ಎನಿಸುವ ಚೌಕಟ್ಟನ್ನು ಪಡೆದುಕೊಳ್ಳುತ್ತದೆ. ಜಾತಿ ಮತ್ತು ಅಸ್ಪೃ ಕೋಮುವಾದ ಮತ್ತು ವ್ಯಾಪಾರಿ ಪೈಪೋಟಿ, ಅಧಿಕಾರ ಮತ್ತು ಧರ್ಮಗಳ ನಡುವಣ ಅಪವಿತ್ರ ಸಂಬಂಧಗಳ ಅನೇಕ ಮಾರ್ಮಿಕ ಚಿತ್ರಗಳು ಇಲ್ಲಿವೆ. ಹೋಲಿಕೆಯ ಮಾತಾಡುವುದಾದರೆ, ಇಲ್ಲಿನದು ತ್ಯಾನಂದೂರು ಪುಟ್ಟಣ್ಣನವರ ಬರೆಹಕ್ಕಿಂತ, ಕಡಿದಾಳು ಶಾಮಣ್ಣನವರ ಬರೆಹಕ್ಕೆ ಹತ್ತಿರವಾಗಿದೆ. ಇದಕ್ಕೆ ಕಾರಣ, ಇವರಿಬ್ಬರೂ ರೈತ ಚಳವಳಿಗಳ ಭಾಗವಾಗಿ ಪಡೆದ ರಾಜಕೀಯ ಪ್ರಜ್ಞೆಯಲ್ಲಿ ಬರೆದವರು.


'ಮಂಗನ ಬ್ಯಾಟೆ' ಕೃತಿಯಲ್ಲಿ ಎದ್ದು ಕಾಣುವ ಚಹರೆಯೆಂದರೆ, ಅದರ ಸರಳತೆ. ಆದರೆ ಈ ಸರಳತೆಯು ಸರಳೀಕರಣವಾಗಿಲ್ಲ. ಅಧಿಕಾರರೂಢ ವ್ಯವಸ್ಥೆಯನ್ನು ಗುರುತಿಸಿ, ಅದನ್ನು ವಿಮರ್ಶೆ ಮಾಡುವ ದೃಷ್ಟಿಕೋನವಿರುವ ಕಾರಣ, ಇಲ್ಲಿನ ಕಥನದಲ್ಲಿ ಅನುಭವದ ಸರಳ ನಿರೂಪಣೆಗಳಿಗಿರದ ತಾತ್ವಿಕ ಉದ್ದೇಶವೊಂದು ಸುಪ್ತವಾಗಿದೆ. ಇದನ್ನು ಚಾರಿತ್ರಿಕ ಅರಿವಿನಿಂದ ವರ್ತಮಾನವನ್ನು ಅರ್ಥಮಾಡಿಕೊಳ್ಳುವ ದೃಷ್ಟಿಕೋನ ಎಂದೂ ಕರೆಯಬಹುದು. ನಿದರ್ಶನಕ್ಕೆ ಕಾಡಿನ ಕಲ್ಪನೆಯು ಬ್ರಿಟಿಷರ ಕಾಲದಲ್ಲಿ ಹೇಗಿತ್ತು ಮತ್ತು ಅದು 1947ರ ನಂತರ ಹೇಗೆ ಬದಲಾಗಿ ಕಾಡಿನಲ್ಲಿ ಸಹಜವಾಗಿ ವಾಸಮಾಡುತ್ತಿದ್ದವರೆಲ್ಲ ಅತಿಕ್ರಮವಾಸಿಗಳಾದರು ಎಂಬ ಇಲ್ಲಿನ ವಿಶ್ಲೇಷಣೆ ಇರಬಹುದು; ಹೆಂಡ ಮಾಡಬಾರದು, ಬೈನೆ ಕಟ್ಟಬಾರದು, ಕಾಡೊಳಗೆ ಹೋಗಬಾರದು, ಮಂಗನ ಹೊಡೆಯಬಾರದು, ದನದ ಮಾಂಸವನ್ನು ತಿನ್ನಬಾರದು ಮುಂತಾದ ಕಾನೂನುಗಳು ಬುಡಕಟ್ಟು ರೈತಾಪಿ ಹಾಗೂ ಕೆಳಸ್ತರದ ಜನರ ಬದುಕುವ ಹಕ್ಕುಗಳನ್ನು ಹೇಗೆ ನಿರಾಕರಿಸುತ್ತವೆ ಎಂಬುದರ ವಿವೇಚನೆಯಿರಬಹುದು; ಜನ ಮತ್ತು ಪ್ರಾಣಿಗಳ ಸಂಘರ್ಷವು ವಸಾಹತುಶಾಹಿ ಕಾಲಘಟ್ಟದಲ್ಲಿದ್ದ ರೀತಿಗೂ ನಂತರದ ಘಟ್ಟದಲ್ಲಿ ಬದಲಾಗಿದ್ದಕ್ಕೂ ಇರುವ ಫರಕಿನ ಚರ್ಚೆಯಿರಬಹುದು. ಇಲ್ಲೆಲ್ಲ ಬರೆಹದಲ್ಲಿ ಅಧ್ಯಯನದಿಂದ ಮೂಡಿದ ಚಾರಿತ್ರಿಕವಾದ ತಿಳಿವಳಿಕೆಯಿದೆ, ಮಾತ್ರವಲ್ಲ ಭವಿಷ್ಯದ ನೋಟವೂ ಇದೆ. ಆದ್ದರಿಂದಲೇ 'ಮಂಗನ ಬ್ಯಾಟೆ'ಯು ಕೇವಲ ಬೇಟೆಯನ್ನು ಕುರಿತು ಕಥನವಾಗದೆ, ವಿಚಾರಕ್ಕೆ ಹಚ್ಚುವ ಚಿಂತನ ಕೃತಿಯಾಗಿದೆ.

ಇಲ್ಲಿನ ಕಥನಕ್ಕೆ ವೈಚಾರಿಕವಾದ ಆಯಾಮ ಇದೆಯಾದರೂ ಅದು ಭಾರ ಮತ್ತು ಜಡವಾಗಿಲ್ಲ. ಇದಕ್ಕೆ ಕಾರಣ, ಕಥನವು ಮಲೆನಾಡಿನ ಜೀವಜಗತ್ತಿನ ವಿಸ್ಮಯಗಳನ್ನು ಒಳಗೊಳ್ಳುತ್ತ ಹೋಗಿರುವುದು. ಕುತೂಹಲಕರವಾದ ಬೆರಗು ಪಡುವ ಮನಸ್ಸು ಈ ಕಥನದ ಹಿಂದೆ ಕೆಲಸ ಮಾಡಿರುವುದರಿಂದ ಈ ಕೃತಿ ಪರಿಸರದ ಕಥೆಯೂ ಆಗಿದೆ. ಮೀನು ಕಪ್ಪೆ ಏಡಿಗಳು ಮರಿಮಾಡುವುದಕ್ಕೆ ಮುಂಗಾರು ಮಳೆ ಬರುವುದಕ್ಕೂ ಇರುವ ಸಂಬಂಧದ ಬಗ್ಗೆ; ಅಣಬೆ ಮುಂತಾದ ಸಸ್ಯಗಳ ಬಗ್ಗೆ; ಬರ್ಕ ಕ್ಯಾರೆ ಕಾಳಿಂಗ ಹುಲಿ ಚಿರತೆ ನರಿ ಮುಂತಾದ ಪ್ರಾಣಿಗಳ ಜೀವನ ಕ್ರಮದ ಬಗ್ಗೆ ಇಲ್ಲಿ ವರ್ಣನೆಗಳು ಬರುತ್ತವೆ; ಕಬ್ಬೆಕ್ಕು ಹಂದಿ, ಹುಲಿ, ಏಡಿ, ಮೀನು, ಜೇನು ಮುಂತಾದವುಗಳ ಬೇಟೆಗಳ ವಿವರಗಳು ಬರುತ್ತವೆ. ಬೇಟೆಯಾಡಿದ ಪ್ರಾಣಿಗಳನ್ನು ಹಸಿಗೆ ಮಾಡಿ ಪಾಲುಹಾಕುವುದರಿಂದ ಹಿಡಿದು ಅಟ್ಟು ಉಣ್ಣುವುದರ ತನಕ ವಿವರಗಳು ಬರುತ್ತವೆ.

ಈ ಕಥನದ ಮತ್ತೊಂದು ವಿಶಿಷ್ಟತೆ ನಾಟಕೀಯವಾದ ಚಿತ್ರಣಗಳಲ್ಲಿದೆ. ಏಡಿಗಳು ಬಯಲಿಗೆ ಬರುವುದನ್ನು ಮಾರಾಟಗಾರನ ಸೈಕಲ್ಲು ಬೆಲ್ಲಿಗೆ ಮನೆಯಲ್ಲಿರುವ ಮಹಿಳೆಯರು ಬೀದಿಗೆ ಬರುವುದಕ್ಕೆ ಹೋಲಿಸುವುದು; ಚಿಪ್ಪುಹಂದಿ ಹುತ್ತದೊಳಗಿರುವ ಗೆದ್ದಲು ತಿನ್ನುವುದನ್ನು ಬಾಳೆಲೆಯಲ್ಲಿರುವ ಪದಾರ್ಥವನ್ನು ಎರಡೇ ಬೆರಳಲ್ಲಿ ಎತ್ತಿ ಸುರುವಿಕೊಳ್ಳುವ ಊಟಗಾರರಿಗೆ ಹೋಲಿಸುವುದು, ಗಂಡು ನವಿಲು ಹೆಣ್ಣನ್ನು ಒಲಿಸುವುದಕ್ಕಾಗಿ ಮಾಡುವ ನಟನೆಯನ್ನು ಅಥವಾ ಹೆಣ್ಣುಮೀನನ್ನು ಗಂಡು ಮೀನುಗಳು ಕೂಡಲು ಹಿಂಬಾಲಿಸುವುದನ್ನು ಜಡೆಗಟ್ಟಿ ಹೋಗುವುದನ್ನು ವರ್ಣಿಸುವುದು-ಇವೆಲ್ಲ ಇಲ್ಲಿನ ಬರೆಹದ ಜೀವಂತ ಭಾಗಗಳಿವೆ. ಇಲ್ಲಿನ ಅನೇಕ ಪ್ರಾಣಿ ಮತ್ತು ಸಸ್ಯ ಬದುಕಿನ ವರ್ಣನೆಗಳನ್ನು ಓದುವಾಗ ನ್ಯಾಷನಲ್ ಜಿಯಾಗ್ರಫಿಕ್ ಚಾನಲ್ಲನ್ನು ನೋಡುತ್ತಿರುವಂತೆ ಭಾಸವಾಗುತ್ತದೆ. ಈ ಹೋಲಿಕೆ ಕೂಡ ಸರಿಯಲ್ಲವೇನೊ? ಎನ್‌ಜಿಸಿಯವರು ಪ್ರಾಣಿಜಗತ್ತನ್ನು ಅಲ್ಲಿರುವ ಮಾನವಬದುಕಿನ ಹೋರಾಟವನ್ನು ಹೊರತುಪಡಿಸಿ ತೋರಿಸುವುದೇ ಹೆಚ್ಚು. ಆದರೆ ಈ ಕಥನವು ಪ್ರಾಣಿ ಮತ್ತು ಮಾನವ ಬದುಕಿನ ನಡುವಣ ಸ್ನೇಹ ಮತ್ತು ಸಂಘರ್ಷಗಳನ್ನು ಬೇರ್ಪಡದಂತೆ ತೋರಿಸುತ್ತದೆ. ಇಲ್ಲಿನ ಬರವಣಿಗೆ ಜೀವಂತಿಕೆ ಪಡೆಯುವುದು ಮನುಷ್ಯರ ಪ್ರವೇಶ ಬಂದಕಡೆಯೇ ಎನ್ನುವುದು ಮಾರ್ಮಿಕವಾಗಿದೆ.

ಈಚೆಗೆ ಕನ್ನಡದಲ್ಲಿ ಪರಿಸರದ ಕಥನಗಳು ಜನಪ್ರಿಯವಾಗುತ್ತಿವೆ. ಅವನ್ನು ಜನಪ್ರಿಯಗೊಳಿಸುವಲ್ಲಿ ತೇಜಸ್ವಿಯವರ ಬರೆಹಗಳು ಹಾಗೂ ಅವರು ಅನುವಾದಿಸಿದ ಪ್ರಸಿದ್ಧ ಬೇಟೆಗಾರ ಅಂಡರ್ಸನ್ನರ ಕಥನಗಳು ತುಸುಮಟ್ಟಿಗೆ ಕಾರಣ. ಅಂಡರ್ಸನ್ನರ ಅನುಭವಗಳು ರೋಚಕವಾಗಿದ್ದು ಅವು ಕಾಡುಪ್ರಾಣಿಗಳನ್ನು ಕೊಲ್ಲುವುದು ಮಾನವ ಸಾಹಸದ ಒಂದು ಭಾಗವೆಂದು ಭಾವಿಸಿದ ಯೂರೋಪಿಯನ್ ಬೇಟೆಗಾರನ ನೋಟದಿಂದ ಕೂಡಿವೆ. ಅಂಡರ್ಸನ್ನರ ಬರೆಹವನ್ನು ಅನುವಾದಿಸಿದ ತೇಜಸ್ವಿಯವರಲ್ಲೂ ಬೇಟೆಯು ಸಂಭ್ರಮ ಮತ್ತು ಸಾಹಸಗಳ ಲೀಲಾವಿನೋದವಾಗಿದೆ. ಆದರೆ ತೇಜಸ್ವಿಯವರಿಗೆ ಸಸ್ಯ ಪ್ರಾಣಿ ಕೀಟಪಕ್ಷಿಗಳ ಜೀವನಕ್ರಮದ ಬಗ್ಗೆ ಇರುವ ಅದಮ್ಯ ಕುತೂಹಲ, ಮಾನವ ಅರಿವಿನಾಚೆ ಉಳಿದುಬಿಡುವ ನಿಸರ್ಗದ ನಿಗೂಢತೆಯ ಬಗೆಗಿನ ವಿಸ್ಮಯ ಹಾಗೂ ಮನುಷ್ಯ ಬದುಕಿನ ಸುಖದುಃಖಗಳ ಶೋಧಿಸುವ ಶ್ರದ್ಧೆಯ ಕಾರಣದಿಂದ, ಅವರ 'ಪರಿಸರ'ದ ಚಿತ್ರಗಳಿಗೆ ದಾರ್ಶನಿಕ ಆಯಾಮವೊಂದು ದೊರಕಿಬಿಡುತ್ತದೆ. ಆದರೆ ಕಲ್ಕುಳಿಯವರ ಪರಿಸರದ ಕಥನದಲ್ಲಿ ತೇಜಸ್ವಿಯವರಲ್ಲಿ ಕಾಣದ ಸಾಮಾಜಿಕ ರಾಜಕೀಯ ಆಯಾಮದ ಒಂದು ಅಂಶವಿದೆ ಎನಿಸುತ್ತದೆ. ಹೀಗನಿಸುವುದಕ್ಕೆ ಕಾರಣ ಚಳವಳಿಗಳ ಜತೆಗಿನ ಅವರ ಸಂಬಂಧವಿರಬಹುದು. ಹೀಗಾಗಿಯೇ ಮಂ... ಬೇಟೆಯಂತಹ ಸಂಗತಿಯು, ಜಾತಿ ಮತ ಧರ್ಮ ಆ... ಮುಂತಾದ ಮುಖಗಳನ್ನು ಕೂಡಿಸಿಕೊಂಡು ಸಂಕೀರ್ಣ... ರಾಜಕೀಯ ಕಥನವಾಗಲು ಸಾಧ್ಯವಾಗಿದೆ.

ಇಲ್ಲಿನ ಕಥನದಲ್ಲಿ ಮಲೆನಾಡಿನ ವಿಶಿಷ್ಟ ನುಡಿಗಟ್ಟು... ಗಾದೆಗಳು ಹೇರಳವಾಗಿ ಬಳಕೆಯಾಗಿವೆ. ಮುಜುಗಿ, ಚೆಂಗೂಲಿ, ಒಗದೆ, ಫೌಲು ದಿರ್ಕನುಳಿ ಕೊಲೆ ಮು... ಪದಗಳಿವೆ; ಮಲೆನಾಡಿನ ಅನೇಕ ಆಚರಣೆ-ನಂಬಿ... ವಿವರಣೆಯಿದೆ. ಇಲ್ಲಿ ಬರುವ ಹೆಂಡದ, ಚಕ್ಕೆಯ, ವಿ... ಕೂಳಿಗಳ, ಕಾಡುಹಣ್ಣುಗಳ, ನೀರಿನ ವೈವಿಧ್ಯಗಳನ್ನು ... ಸೋಜಿಗವಾಗುತ್ತದೆ. ಹಸಿಗೆಯ ಪಾಲುಗಳನ್ನು ... ಬಲೆ ಕೋವಿ ನೆಲದಪಾಲು ಇರುವಂತೆ ಸ... ಮುರಿದುಕೊಂಡವರ ಪಾಲು ಇರುವುದು ನನಗೆ ಮೊ... ಸಲ ಅರಿವಾಯಿತು. ಇಲ್ಲಿ ನಾಟಿ ಹಾಕುವ, ಬೈನೆಕಟ್ಟು... ಅಕ್ಕಿಬೋಜ ಮಾಡುವ, ಉಪ್ಪಿನಕಾಯಿ ಹಾಕುವ, ಮ... ಮಿಡಿ ಇಳಿಸುವ, ಜೇನು ಕೀಳುವ, ತಿನ್ನುವ ... ಕುಡಿಯುವ ಅನೇಕ ವಿವರಗಳು ಬರುತ್ತವೆ. ಮಲೆನಾ... ಉಣ್ಣುವ ಕುಡಿಯುವ ಚಿತ್ರಗಳಲ್ಲೆಲ್ಲ ಬೈನೆಕಳ್ಳನ್ನು ... ಚಿತ್ರಗಳು ವಿಶಿಷ್ಟವಾಗಿದೆ. ಲೇಖಕರು ಬೈನೆಕ...



ಅಮೃತವೆಂದು ಕರೆಯುತ್ತಾರೆ. ಬೈನೆಕಟ್ಟುವವರು ಅ... ಯೋಗಿಗಳಂತೆ ಬಹಳ ಶ್ರದ್ಧೆಯಲ್ಲಿ ಕೆಲಸ ಮಾಡುತ್ತಾರೆಂ... ಅದನ್ನು ಕುಡಿಯುವವರು ಮುದುಕರಾದರೂ ಕೆನ್ನೆ ಕೆಂಪ... ಯುವಕರಂತೆ ಕಾಣುತ್ತಾರೆಂದೂ, ಅವರು ಸ್ವರ್ಗದ ಸುಖ... ಕಾಣುತ್ತಾರೆಂದೂ ಬಣ್ಣಿಸುತ್ತಾರೆ. ಬೈನೆ ಕಟ್ಟುವವ... ತಮ್ಮ ಬಗ್ಗೆ ಕಟ್ಟಿಕೊಂಡಿರುವ ಮಿತ್ ಸಹ ಅದ್ಭುತವಾ... ಆಹಾರಕ್ಕೂ ದೈವಕ್ಕೂ ಕಸುಬಿಗೂ ಆಚರಣೆಗಳಿಗೂ ಇ... ಆಂತರಿಕ ಸಂಬಂಧದ ಬಗ್ಗೆ ಇಲ್ಲಿ ಅನೇಕ ಒಳನೋಟಗ... ಈ ಕಥನವು ಮಲೆನಾಡಿನ ಆಹಾರ ಸಂಸ್ಕೃತಿಯನ್ನು ಒ... ಪ್ರದೇಶದ ಅಸ್ಮಿತೆ ಮತ್ತು ಹಕ್ಕನ್ನಾಗಿ ಮಂಡಿಸುವ... ಕುತೂಹಲಕರವಾಗಿದೆ.

ಕುವೆಂಪು ಕಾದಂಬರಿಗಳನ್ನು ಓದಿರುವವರಿಗ ಇ... ಚಿತ್ರಗಳು ಹೊಸತೆನಿಸದೆ ಇರಬಹುದು. ಕುವೆಂ... ಕಾದಂಬರಿಗಳಲ್ಲಿ ಮಲೆನಾಡಿನ ಬದುಕಿನ ಮತ್ತು ನಿಸರ್ಗ... ವಿವರಗಳು ಕೇವಲ ಈ ಭಾಗದ ಚರಿತ್ರೆಯ... ಕಟ್ಟಿಕೊಡುವುದಿಲ್ಲ. ಅದರಾಚೆ ಹೋಗಿ, ಬದು... ಅರ್ಥಶೋಧಕ್ಕೆ ಬಳಕೆಯಾಗುತ್ತವೆ. ಈ ಹಿನ್ನೆಲೆಯಿ... ಕಲ್ಕುಳಿಯವರ ಬರೆಹವು ಕುವೆಂಪು ಹಾಗೂ ತೇ... ಬರೆಹಗಳಿಂದ ಸಾಕಷ್ಟು ಪ್ರೇರಣೆ ಪಡೆದಿದೆ. ಆ... ಅವುಗಳಿಗಿಂತ ಅವರ ಕಥನವು ಭಿನ್ನವಾಗಲು ಸಹ ಯತ್ನಿ... ಇದು ಭಿನ್ನವಾಗಲು ಮೊದಲನೇ ಕಾರಣ, ಕುವೆಂ... ಚಿತ್ರಿಸುವ ಮಲೆನಾಡಿಗಿಂತಲೂ ಜಟಿಲತೆಯಿಂದ ಕೂ... ಮಲೆನಾಡನ್ನು ಚಿತ್ರಿಸುವುದು. ಎರಡನೇ ಕಾರಣ, ಮಲೆನಾ... ಸಾಂಸ್ಕೃತಿಕ ವೈವಿಧ್ಯಗಳ ಜತೆಜತೆಯಲ್ಲಿಯೇ ಅವು... ಒಳಗಿರುವ ವೈರುಧ್ಯಗಳನ್ನು ಕಟ್ಟಿಕೊಡುವು... ಉದಾಹರಣೆಗೆ, ಈ ಕಥನದ ಪ್ರಧಾನ ವಸ್ತುವಾಗಿರ... 'ಮಂಗ'ವು ಎನ್ನುವುದು ಮಲೆನಾಡಿನಲ್ಲಿ ತೀಕ್ಷ್ಣವ... ಬೈಗುಳವಾಗಲು ಅದು ರೈತಾಪಿ ವಿರೋಧಿಯಾಗಿರುವು... ಕಾರಣವೆಂದು ಕಥನವು ವ್ಯಾಖ್ಯಾನಿಸುವುದನ್ನು ಗಮನಿಸಬೇ... ಒಂದು ಪ್ರಾಣಿಯು ಏಕಕಾಲಕ್ಕೆ ಧಾರ್ಮಿಕರಿಗೆ ಪುರಾ... ದೇವತೆಯ ಸಂಕೇತವಾಗಿ, ರೈತರಿಗೆ ತಮ್ಮ ಬೆಳೆತಿನ... ಪೀಡೆಯಾಗಿ, ಬೇಟೆಯಾಡುವವರಿಗೆ ಅದು ಆಹಾರವ... ಇಲ್ಲಿ ಕಾಣಿಸಿಕೊಳ್ಳುತ್ತದೆ. ಪ್ರಾಣಿಗಳನ್ನು ಕುರಿ... ಕರ್ನಾಟಕದಲ್ಲಿಯೇ ಇರುವ ವೈರುಧ್ಯವೆಂದರೆ, ಬಯ... ಸೀಮೆಯಿಂದ ಮಲೆನಾಡಿಗೆ ಬಂದ ಶಾಲಾ ಮೇಷ್ಟರೊಬ್... ಅರಿಯದೆ ಹಾವು ಹೊಡೆದು ದಂಡಕಟ್ಟುತ್ತಾರೆ. ಮಲೆನಾ... ತರುಣನೊಬ್ಬ ಬೆಂಗಳೂರಿನಲ್ಲಿ ಮಂಗವನ್ನು ಹೊಡೆ... ಅಪರಾಧಿಯಾಗುತ್ತಾನೆ. ಇದೇ ತರಹ ಮುಸ್ಲಿಮರಿ... ಹಿಂದೂಗಳಿಗೂ ಇರುವ ಫರಕುಗಳನ್ನು ಪಟ್ಟಿಮಾಡ... ಕೋಮುವಾದಿ ತರ್ಕಕ್ಕೆ ಪ್ರತಿಯಾಗಿ, ಕಲ್ಕುಳಿಯವ...

ನಾಡಿನ ಬ್ರಾಹ್ಮಣರಿಗೂ ದಲಿತ ಶೂದ್ರರಿಗೂ ಕ್ರಮದಲ್ಲಿರುವ ಭಿನ್ನತೆಗಳನ್ನು ಕಾಣಿಸುತ್ತಾರೆ. ಲೆಗಳು ಮಲೆನಾಡಿಗ ಬರುತ್ತವೆ ಎನ್ನುವುದು ಮು ಹಾಳಾಗಿರುವುದರ ಸಂಕೇತವೆಂಬ ಅಥವಾ ವರೆಗೂ ಕಾಳಿಂಗ ಸರ್ಪ ಕಡಿದು ಜನ ಸತ್ತ ರೆಯೇ ಇಲ್ಲವೆನ್ನುವ ವಿಶ್ಲೇಷಣೆಗಳು ಕುತೂಹಲ ವೆ. ಇಂತಹ ಅನೇಕ ವೈರುಧ್ಯಗಳನ್ನು ಈ ಕಥನವು ಸರವಾಗಿ ಕಟ್ಟಿಕೊಡುತ್ತದೆ. ಈ ಕಾರಣಕ್ಕೆ ಈ ಕೃತಿಯು ಶಾಸ್ತ್ರೀಯ ನೋಟಗಳುಳ್ಳ ಸಾಂಸ್ಕೃತಿಕ ಕಥನವಾಗಿದೆ.

ಕಥನದ ಮಹತ್ವವಿರುವುದು ಮಲೆನಾಡಿನ ತೋದ ಅಥವಾ ಸ್ಥಗಿತ (ಸ್ಟಿಲ್) ಚಿತ್ರಗಳನ್ನು ಕೆಯಲ್ಲಿ ನೀಡುವುದರಲ್ಲಿ ಅಲ್ಲ; ಬದಲಿಗೆ ಅನಿರೀಕ್ಷಿತ ಗಳನ್ನು ಪಡೆಯುತ್ತಿರುವ ವರ್ತಮಾನದ ಚಲನಶೀಲ ಾಡನ್ನು ಚಿತ್ರಿಸುವುದರಲ್ಲಿ. ಇಲ್ಲಿ ಬರುವ ಪಾತ್ರಗಳು ಾಗುತ್ತವೆ ಮತ್ತು ಬೆಳೆಯುತ್ತವೆ. ಮೇಲ್ಜಾತಿಯ ದಿಯೊಬ್ಬರು ಬೆಂಗಳೂರಿನ ಮಗನ ಮನೆಯಲ್ಲಿದ್ದು ಬಳಿಕ, ಮಿಲಿಟರಿ ಹೋಟೆಲಿನಿಂದ ಊಟ ಂಡು ಕೆಳಜಾತಿಯವರ ಜತೆ ಕೂತು ತಿನ್ನುವಂತೆ ಾಗುತ್ತಾರೆ. ಜಮೀನ್ದಾರರ ಮನೆಯಲ್ಲಿ ನಿಷ್ಠಾವಂತ ಾಳಾಗಿದ್ದ ಸಿದ್ದನು ಪಟ್ಟಣಕ್ಕೆ ಬಂದು ಹೊಸಹೊಸ ಕಲಿತು, ಅಧಿಕಾರಿಗಳನ್ನು ಆಟವಾಡಿಸುವಂತೆ ದುತ್ತಾನೆ. ಜನರ ಬದುಕಿನಲ್ಲಿ ಆಗಿರುವ ಾವಣೆಗಳು ಅವರ ಆಲೋಚನಾ ಕ್ರಮದಲ್ಲಿ ಕೂಡ ಾವಣೆ ತಂದಿವೆ ಎಂಬುದನ್ನು ಕಥನವು ಹಿಡಿಯುತ್ತದೆ.

ಕಥನದ ಕೇಂದ್ರದಲ್ಲಿ ಮಂಗನ ಬ್ಯಾಟೆ ಇದ್ದರೂ, ಕೃತಿಯು ಪ್ರಧಾನವಾಗಿ ನಿರೂಪಿಸುವುದು ದಲಿತ ದಾಯಕ್ಕೆ ಸೇರಿದ ಸಿದ್ದನ ಪ್ರತಿಭೆ ಕ್ರಿಯಾಶೀಲತೆ ಸಾಹಸಗಳನ್ನು. ಮಂಗನ ಬ್ಯಾಟೆಯಿಂದ ಆರಂಭಿಸಿ ಬ್ಯಾಟೆ, ಹೂಟಿಗೆ ಆರುಕಟ್ಟುವುದು, ಮಾವಿನ ಮಿಡಿ ಪ್ರದು, ಜೇನು ಕೀಳುವುದು ಎಲ್ಲವೂ ಅವನ ಪ್ರತಿಭೆಯ ಭಿಂದ ಸೃಜನಶೀಲ ಕಾಯಕಗಳಾಗುತ್ತವೆ. ಈ ದಿಂದ ಕಥನಕ್ಕೆ ಸಿದ್ದನ ಸಾಹಸಲೀಲೆಗಳು ಎಂದು ಟ್ಟರೂ ನಡೆಯುತ್ತದೆ. ಕಥನದ ಕೇಂದ್ರ ಪಾತ್ರವಾದ ಕುವೆಂಪು ಕಾದಂಬರಿಯಲ್ಲಿ ಬರುವ ಗುತ್ತಿಯಂತೆ ಚಾಲಾಕಿ ನಾಯಕನು ಅಥವಾ ಯವರ 'ಕರ್ವಾಲೊ' ಕಾದಂಬರಿಯ ಮಂದಣ್ಣನಂತೆ ಶಾಸ್ತ್ರಜ್ಞನು. ಅವನ ಸಾಹಸ ಮತ್ತು ಪ್ರತಿಭೆಯ ಬೇರೆ ಮುಖಗಳನ್ನು ಬಣ್ಣಿಸುವಲ್ಲಿ ಕಥನವು ಯವಾಗುತ್ತದೆ. ಎಷ್ಟೆಂದರೆ, ಸಿದ್ದನ ಖ್ಯಾತಿಯು ಬೆಣ್ಣೆಗುಡ್ಡೆ ನ ಮಿಡಿಯ ಪರಿಮಳದಂತೆ ಊರೆಲ್ಲ ಹಬ್ಬಿತು ಅದು ಬಣ್ಣಿಸುತ್ತದೆ. ಮಾವಿನ ಮಿಡಿಯನ್ನು ನದ್ರಾವಣದಲ್ಲಿ ಹಾಕಿದರೆ ಅದು ಸಿದ್ದನಂತೆ ಮುಜುಗಿ ಗುತ್ತದೆ ಎಂದು ವಿವರಿಸುತ್ತದೆ. ಸಿದ್ದನು ಮಲೆನಾಡಿನ ಮಾಲಿಕರ ಮನೆಯ ಕೂಲಿಕಾರನ ಸ್ಥಿತಿಯಿಂದ ದೊಡ್ಡ ಸರ್ಕಾರಿ ಅಧಿಕಾರಿಗಳೆಲ್ಲ ಸಲಾಮು ಹಾಕಿ ಮಾಡಿಸುವಂತಹ ಮಂಗನ ಬೇಟೆಗಾರನಾಗಿ ಅವನು ಾಂತರ ಪಡೆಯುತ್ತಾನೆ. ಆದರೂ ಜಾತಿಯ ಕಾರಣಕ್ಕೆ ಮಾನಿತನಾಗುವ ಅವಸ್ಥೆಯಿಂದ ಅಪರಿವರ ಕೆಲಸಗಳನ್ನೇ ಕೊಂಡು ಬದುಕುವ ಸ್ಥಿತಿಯಿಂದ ಸಿದ್ದ ಅಂತಿಮವಾಗಿ ಬರಲು ಆಗುವುದಿಲ್ಲ; ಪ್ರಾಣಿಯ ಧರ್ಮ ಸುಟ್ಟು ಮ ಹಸಿಗೆ ಮಾಡುವುದಕ್ಕೆ ಅವನನ್ನು ಬಳಸುವ ಯ ಸಮಾಜ, ಮಾಂಸವನ್ನು ತುಂಡು ಮಾಡುವ ಬಿಡುವುದಿಲ್ಲ. ಇಂತಹ ಅವಸ್ಥೆಯಲ್ಲಿದ್ದ ಸಿದ್ದನ ಮಲೆನಾಡಿನ ಬಾಳಿನ ಪಲ್ಲಟದ ಜತೆಜತೆಯಲ್ಲೇ ಾಗುತ್ತದೆ. ಆದರೆ ಈ ಬದಲುವಿಕೆ ಅಂತಿಮವಾಗಿ ಸಮುದಾಯಕ್ಕೆ ಬಿಡುಗಡೆ ತರುತ್ತದೆಯೇ ಎಂಬ ಡಕರ ಪ್ರಶ್ನೆಯನ್ನು ಕಥನವು ಉಳಿಸುತ್ತದೆ.

ವರ ಮಾತುಕತೆಯನ್ನು ಸನಿಹದಿಂದ ಕೇಳಬಲ್ಲ ಮತ್ತು ಜನರ ಕೆಲಸವನ್ನು ಆದರದಿಂದ ನೋಡಬಲ್ಲ ಮಾತ್ರ ಇಂತಹ ಕಥನವನ್ನು ಬರೆಯಬಲ್ಲದು. ಮಾತುಕತೆ ಕೇಳಲು ಮತ್ತು ಕೆಲಸಗಾರರ ಮೆಯನ್ನು ನೋಡಲು ಜೈವಿಕವಾದ ಕಿವಿಕಣ್ಣುಗಳು ಸಾಲದು; ಆ ಮಾತುಕತೆಯ ಒಳಗಿರುವ ತಲ್ಲಣಗಳಿಗೆ ಯುವ ಮನಸ್ಸೂ, ದುಡಿಮೆಯ ಮೌಲ್ಯವನ್ನು ವುದಕ್ಕೆ ಬೇಕಾದ ಪ್ರಜ್ಞೆಯೂ ಬೇಕು. ಅಂಥ ಮನಸ್ಸು ಪ್ರಜ್ಞೆ ಬರೆದಿರುವ ಕಥನವಿದು. ಕಲ್ಕುಳಿಯವರಂತೆಯೆ ೂಲಸ್ಟ್ ಎನ್ನಬಹುದಾದ ರೈತರಾದ ಕಡಿದಾಳು ಮತ್ತು ಮಧುಸೂದನ ಪೆಜತ್ತಾಯರ ಬರೆಹಗಳಲ್ಲಿ ಹ ಮನಸ್ಸು ಮತ್ತು ಪ್ರಜ್ಞೆಯನ್ನು ನಾನು ಕಂಡಿರುವೆ. ಅನುಭವವನ್ನು ಅಭಿವ್ಯಕ್ತಿಸಲು ಅಕ್ಷರವೂ ವಿರಾಮವೂ ಕೋನವೂ ಇರುವ ಈ ರೈತರ ಬಗೆಯವು, ಇವರ ಕೆಲಸ ಮಾಡುವ ಕಾರ್ಮಿಕರು ತಮ್ಮ ವ ಬರೆದರೆ ಅದು ಬೇರೆಯೇ ಕಥನವಾಗಬಲ್ಲದು. ಗನಬ್ಯಾಟೆ'ಯಲ್ಲಿರುವ ಮಲೆನಾಡಿನ ಕಥನವನ್ನು ವಿಚಿತ್ರ ವ ಮತ್ತು ವಿನೋದಪ್ರಜ್ಞೆಗಾಗಿ ಮಾತ್ರವಲ್ಲದೆ, ಗಳ ಒಳಹೊಕ್ಕಾಗಿ ಸೇರಿಕೊಂಡಿರುವ ಲೋಕದೃಷ್ಟಿ ಯೂ ಓದಬೇಕೆನಿಸುತ್ತದೆ. ನಾನು ಬರೆಹಗಾರನಲ್ಲ ಕೊರಗುತ್ತಲೇ, ಅದ್ಭುತವಾದ ಬರೆಹವನ್ನು ವ ಕಲ್ಕುಳಿಯವರು ಇಂತಹ ಕಥನಗಳನ್ನು ಮತ್ತಷ್ಟು ಲಿ ಎಂದು ಕೋರುತ್ತೇನೆ.

● ರಹಮತ್ ತರೀಕೆರೆ

ಶೌಚ: ಆಲಯದೊಳಗೋ? ಬಯಲೊಳಗೋ?

ಇತ್ತೀಚೆಗೆ ಗ್ರಾಮೀಣಾಭಿವೃದ್ಧಿ ಸಚಿವ ಜೈರಾಮ್ ರಮೇಶ್ 'ಭಾರತದಲ್ಲಿ ಶೌಚಾಲಯಗಳಿಗಿಂತ ದೇವಾಲಯಗಳೇ ಹೆಚ್ಚಿವೆ' ಎಂಬ ಹೇಳಿಕೆ ನೀಡಿ ತಮ್ಮಲ್ಲಿನ್ನೂ ಸ್ವಲ್ಪ ವಿವೇಚನೆ, ಯೋಚನಾಶಕ್ತಿ ಇದೆಯೆಂಬ ಭರವಸೆ ಮೂಡಿಸಿದ್ದಾರೆ. ಅವರೇ ಈಗ 'ಶೌಚಾಲಯವಿಲ್ಲದ ಮನೆಯ ಗಂಡನ್ನು ಮದುವೆಯಾಗಬೇಡಿ' ಎಂದು ಕನ್ಯೆಯರಿಗೆ ಕರೆ ನೀಡಿ ಈ ಮೊದಲ ಮಹಿಳಾ ವಿರೋಧಿ ಹೇಳಿಕೆಗಳ ಭಾರದಿಂದ ಹಗುರವಾಗಲು ಯತ್ನಿಸಿದ್ದಾರೆ. ರಾಜಸ್ತಾನದ ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಿದ್ದ ಅವರು 'ಶೌಚಾಲಯವಿಲ್ಲದಿದ್ದರೆ ವಧುವಿಲ್ಲ' ಎಂಬ ಘೋಷಣೆಗೆ ಚಾಲನೆ ನೀಡಿದರು. ಮಧ್ಯಪ್ರದೇಶದ ಅನಿತಾ ನರ್ರೆ ಎಂಬ ಯುವತಿ ಮದುವೆಯಾಗಿ ಗಂಡನ ಮನೆಗೆ ಹೋದವಳು ಅಲ್ಲಿ ಶೌಚಾಲಯವಿಲ್ಲದ್ದನ್ನು ಕಂಡು ಪ್ರತಿಭಟಿಸಿ ತವರಿಗೆ ವಾಪಸಾದ ಘಟನೆಯನ್ನು ಉಲ್ಲೇಖಿಸಿ ಜ್ಯೋತಿಷಿಗಳ ಬಳಿ ಗಂಡುಹೆಣ್ಣಿನ ಜಾತಕ ಹೊಂದಾಣಿಕೆಯಾಗುವುದೇ ಎಂದು ವಿಚಾರಿಸುವ ಹಾಗೆ ಹುಡುಗನ ಮನೆಯಲ್ಲಿ ಶೌಚಾಲಯವಿದೆಯೇ ಎಂದು ವಿಚಾರಿಸಬೇಕೆಂಬ ಸಲಹೆಯಿತ್ತಿದ್ದಾರೆ.

ಈ ವರದಿಯ ಬೆನ್ನಲ್ಲೇ ರಾಜ್ಯದಲ್ಲಿ 'ಕಾಲರಾಗೆ ನಾಲ್ಕು ಬಲಿ' ಎಂದು ವರದಿಯಾಗಿದೆ. ಬೆಳಗಾವಿ ಸಮೀಪದ ಸದಲಗಾ ಪಟ್ಟಣ ಕಾಲರಾಪೀಡಿತ ಎಂದು ಘೋಷಿಸಲಾಗಿದೆ. ರೋಗ ಹರಡದಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ಪತ್ರಿಕಾ ಹೇಳಿಕೆ ಕೊಟ್ಟಿದೆ. ಇಡೀ ಬಯಲನ್ನೇ ಶೌಚಾಲಯ ಮಾಡಿಕೊಂಡಿರುವ ಊರುಗಳಲ್ಲಿ ಕಾಲರಾ ಅಷ್ಟೇ ಅಲ್ಲ, ಟೈಫಾಯ್ಡ್, ಜಾಂಡೀಸ್, ಪೋಲಿಯೋನಂತಹ ಕಲುಷಿತ ನೀರಿನಿಂದ ಬರುವ ಕಾಯಿಲೆಗಳು ಹರಡುವುದು ಏನೇನೂ ಕಷ್ಟವಲ್ಲ. ರೋಗಪೀಡಿತ ವ್ಯಕ್ತಿಯ ಮಲದ ಮೇಲೆ ಕೂರುವ



ನೊಣ, ನುಸಿಗಳು ಆಹಾರ, ನೀರಿನ ಮೇಲೂ ಕೂರುವುದರಿಂದ ಕಾಯಿಲೆ ಒಬ್ಬರಿಂದೊಬ್ಬರಿಗೆ ಬಲುಬೇಗ ಹರಡುತ್ತದೆ.

'ನಿರ್ಮಲ ಭಾರತ ಅಭಿಯಾನ' ಶುರುಮಾಡಿರುವ ಜೈರಾಮ್ ರಮೇಶ್ ಇನ್ನು 10 ವರ್ಷದೊಳಗೆ ಪೂರ್ಣ ಪ್ರಮಾಣದ ಜನತೆಗೆ ಶೌಚ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಹೇಳಿದರು. ರಾಜ್ಯದಲ್ಲೂ ಸ್ವಚ್ಛ ಗ್ರಾಮ ಯೋಜನೆ ಚಾಲ್ತಿಯಲ್ಲಿದೆ. 'ಸ್ವಚ್ಛಗ್ರಾಮ' ಕಾರ್ಯಗತವಾದದ್ದೇ ಆದರೆ ಪೋಲಿಯೋ ನಿರ್ಮೂಲನೆ ಜೊತೆಗೆ ಹಲವಾರು ಕಾಯಿಲೆಗಳ ನಿಯಂತ್ರಣ ಸುಲಭವಾಗುತ್ತದೆ ಎಂದೇ ಭಾವಿಸಲಾಗಿತ್ತು. ಏಕೆಂದರೆ ಒಳಚರಂಡಿ ವ್ಯವಸ್ಥೆಯಿರದ ಹಳ್ಳಿಗಳಲ್ಲಿ ಶೌಚಾಲಯ ಕಟ್ಟಿಕೊಳ್ಳಲು ಜನರನ್ನು ಪ್ರೇರೇಪಿಸುವುದು ಆರೋಗ್ಯ ದೃಷ್ಟಿಯಿಂದ ತುಂಬ ಮುಖ್ಯವಾಗಿದೆ. ಸರ್ಕಾರ ಸಬ್ಸಿಡಿ ಹಣ, ಪಡಿತರ ಚೀಟಿ, ಚುನಾವಣೆಗೆ ಅನರ್ಹವಾಗುವಿಕೆ ಇತ್ಯಾದಿ ಹಲವು ಆಮಿಷ, ಉಪಾಯಗಳನ್ನು ಬಳಸಿ ಪಾಯಖಾನೆಗಳನ್ನು ಹೊಂದಲು ಪ್ರೋತ್ಸಾಹಿಸುತ್ತಿದೆ.

ಆದರೂ ಬಹುತೇಕ ಗ್ರಾಮಗಳಲ್ಲಿ ಚೊಂಬು ಹಿಡಿದು 'ತಂಬಿಗಿ ತೊಗೊಂಡು ಹೋಗುವ' ದೃಶ್ಯ ಬೆಳಗು ಬೈಗುಗಳಲ್ಲಿ ಸಾಮಾನ್ಯವಾಗಿದೆ. ಗ್ರಾಮೀಣ ಪ್ರದೇಶದ ಕೆಲವರಿಗೆ ನಾಲ್ಕು ಗೋಡೆಯ ನಡುವೆ ಕುಳಿತರೆ ಹೊಟ್ಟೆಯೊಳಗಿರುವುದು ಹೊರಬರುವುದೇ ಇಲ್ಲ. ಉತ್ತರ ಕರ್ನಾಟಕದ ಹಳ್ಳಿಗಳಂತೂ ಸಂಡಾಸು ರೂಮಿನ ಕಲ್ಪನೆಯನ್ನೇ ಹೊಂದದೇ ಇಡೀ ಬಯಲನ್ನು ಶೌಚಕ್ಕೆ ಉಪಯೋಗಿಸುತ್ತವೆ. ಹಾದಿಬೀದಿ, ಶಾಲೆ, ಟಾರು ರೋಡಿನ ಇಕ್ಕೆಲಗಳನ್ನು ಯಾವ ಎಗ್ಗಿಲ್ಲದೆ ಜನ ಶೌಚಕ್ಕೆ ಬಳಸುವುದನ್ನು ನೋಡುವಾಗ; ಶೌಚಾಲಯಕ್ಕೆ ನೀಡಿದ ಹಣ ಎಲ್ಲೋ ಮುಳುಗಿ ಇನ್ನು ನೂರು ವರ್ಷ ಕಳೆದರೂ ಸ್ವಚ್ಛಗ್ರಾಮ ಕಾಗದದ ಮೇಲಷ್ಟೇ ಉಳಿವ ಯೋಜನೆಯಾಗುವುದೇನೋ ಎನಿಸದೇ ಇರುವುದಿಲ್ಲ.

****

ಭಾರತ ಉಪಖಂಡಕ್ಕೆ ಒಂದು ವಿಲಕ್ಷಣ ಅಸ್ಮಿತೆ ಇದೆ. ಇಲ್ಲಿ ಮಾತ್ರವೇ ಶೌಚಕ್ಕೆ ಬಯಲು-ಗುಡ್ಡ ನೆಚ್ಚಿರುವುದು ಹಾಗೂ ಅದಕ್ಕೆ ಕೈಗಳನ್ನು ಬಳಸುವುದು. ಬಳಸಿದ ಕೈಯನ್ನು ತೊಳೆದಾದ್ದರೂ ಹೇಗೆ? ಬರಿ ನೀರು, ಹೆಚ್ಚೆಂದರೆ ಮಣ್ಣು-ಬೂದಿ ಹಾಕಿ ತೊಳೆದರೆ ಮುಗಿಯಿತು! ನಾವು ಗಮನಿಸುವಂತೆ ಈ ಅಶೌಚ ಅಭ್ಯಾಸ ಜಾತಿ-ಅಂತಸ್ತಿನ ಭೇದವಿಲ್ಲದೇ ತುಂಬ ಹಳ್ಳಿಗರಲ್ಲಿ ಈಗಲೂ ಕಾಣಬಹುದಾಗಿದೆ. ತೊಳೆವ ಕೈಗಳೋ ಬೆಳೆದ ಉಗುರನ್ನು ಹೊಂದಿರುತ್ತವೆ. ಬೆಳೆದ ಉಗುರು ರೋಗಾಣುಗಳ ಅಡಗುದಾಣ. ಕೃಷಿ ಕೆಲಸಕ್ಕೆ ಹೋಗುವವರು ಮತ್ತು ಹೆಂಗಸರು ಉಗುರನ್ನು ಹತಾರದಂತೆ ಬಳಸುತ್ತಾರೆ. ಚುಚ್ಚಲು ಶುರುವಾದಾಗಷ್ಟೇ ತಿಂಗಳಿಗೊಮ್ಮೆ ಕತ್ತಿಯಲ್ಲಿ ಅದನ್ನು ಕೊಯ್ಯುವುದು. ಚಿವುಟಲು, ಮುರಿಯಲು, ಗೆರೆ ಎಳೆಯಲು, ಗುರ್ತು ಮಾಡಲು – ಹೀಗೆ ಬಹುಪಯೋಗಿ ಉಗುರೆಂಬ ಹತಾರವನ್ನು ಕತ್ತರಿಸಿ ಬಿಸುಡಲು ಅವರ ಮನವೊಪ್ಪುವುದಿಲ್ಲ. ಶಾಲಾಕಾಲೇಜು ಮೆಟ್ಟಿಲು ಹತ್ತಿರುವ ಪೋರ ಪೋರಿಯರು ನಟನಟಿಯರಿಗೆ ತಾವೇನು ಕಮ್ಮಿಯಿಲ್ಲವೆಂಬಂತೆ ಉಗುರು ಬೆಳೆಸಿ 'ಶೂರ್ಪನಖಿ'ರಾಗಿರುತ್ತಾರೆ.

ನಮ್ಮ ದೇಶದಲ್ಲಿ ಎಷ್ಟೆಲ್ಲ ಧರ್ಮಗುರುಗಳು, ತತ್ವಜ್ಞಾನಿಗಳು, ದಾರ್ಶನಿಕರು ಹುಟ್ಟಿದರು. ಆದರೆ ವೈಯಕ್ತಿಕ ಸ್ವಚ್ಛತೆ ಬಗೆಗೆ ಏನೂ ಹೇಳಲಿಲ್ಲವಲ್ಲ! ನೀರನ್ನು ಶೌಚಕ್ಕೆ ಬಳಸಿ ಕಲುಷಿತಗೊಳಿಸಬೇಡಿ ಎಂದಂತೂ ಯಾರೂ ಹೇಳಲಿಲ್ಲ!! 'ಹರಿಯುವ ನೀರಿಗೆ ದೋಷವಿಲ್ಲ' ಎನ್ನುತ್ತಾ ಸಕಲ ತ್ಯಾಜ್ಯಗಳನ್ನು ನದಿಗೆ ಬಿಡುತ್ತಾ, ಅದೇ ನೀರನ್ನೇ ಕುಡಿಯುತ್ತಾ, ದೇವರನ್ನೂ ಪ್ರಾಣಿಗಳನ್ನೂ ಬಟ್ಟೆಯನ್ನೂ ವಾಹನಗಳನ್ನೂ ಒಂದೇ ಕಡೆ ತೊಳೆಯುತ್ತಾ, ಅಕ್ಷರಶಃ ಹಳ್ಳನದಿಕೆರೆಗಳನ್ನು ಕಸದಗುಂಡಿಗಳನ್ನಾಗಿಸಿದ್ದೇವೆ. ಪವಿತ್ರವೆಂದು ಭಾರತೀಯರ ಮನದಲ್ಲಿ ದಾಖಲಾಗಿರುವ ಗಂಗಾನದಿಯಂತೂ ಜಗತ್ತಿನ ಅತಿ ಕಲುಷಿತ ನದಿಗಳಲ್ಲಿ ಒಂದು. ಅದರ ನೀರು ಕುಡಿಯಲು ಯೋಗ್ಯ ವಲ್ಲದಷ್ಟು ಕಲುಷಿತಗೊಂಡಿದೆ ಎಂದು ಅಧ್ಯಯನ ವರದಿಗಳು ಹೇಳುತ್ತಿವೆ. ಅದರ ಶುದ್ಧೀಕರಣಕ್ಕಾಗಿ ಬಿಡುಗಡೆಯಾದ ಕೋಟ್ಯಂತರ ಹಣ ಹೊಳೆಯಲ್ಲಿ ಹುಣಿಸೆಹಣ್ಣು ತೊಳೆದಂತೇ ಆಗಿದೆ.

ಸ್ವಚ್ಛ ಗ್ರಾಮ ಯೋಜನೆ ಹಳ್ಳಿಗಳ ಹಳ್ಳಹೊಳೆಗಳಿಗೆ ಮಾರಕವಾಗಿದ್ದು ಇತ್ತೀಚೆಗೆ ತಿಳಿದುಬಂತು. ಹೊಳೆದಂಡೆಯಲ್ಲಿ ವಾಸಿಸುವ ಕರಾವಳಿ, ಮಲೆನಾಡಿನ ಜನ ಯೋಜನೆಯ ಫಲಾನುಭವಿಗಳಾಗಿ ಹಣ ಪಡೆದು ಶೌಚಾಲಯವನ್ನೇನೋ ಕಟ್ಟಿಕೊಂಡರು, ಆದರೆ ಸೆಪ್ಟಿಕ್ ಟ್ಯಾಂಕ್ ಕಟ್ಟಲಿಲ್ಲ! ಅದರ ಬದಲಿಗೆ ಪೈಪನ್ನು ಹೊಳೆಗೆ ಬಿಟ್ಟು ಅಷ್ಟು ದುಡ್ಡನ್ನು ಉಳಿಸಿಕೊಂಡರು! ತಾವು ಕಂಡುಹಿಡಿದ ಹೊಚ್ಚಹೊಸ ಕಾಸ್ಟ್ ಕಟ್ಟಿಂಗ್ ವಿಧಾನ ಅದೆಂದು ಬಹಳ ಹೆಮ್ಮೆಯಿಂದ ಹೇಳಿಕೊಂಡರು. ಯಾವುದು ಅನಾರೋಗ್ಯಕರ ಎಂದು ಶೌಚದ ಬಗೆಗೆ ಹೇಳುತ್ತ ಎಷ್ಟು ವರ್ಷಗಳಾದವು? ಶೌಚದ ಅಭ್ಯಾಸ ಸರಿಯಿಲ್ಲದುದರಿಂದಲೇ ಪೋಲಿಯೋ, ಕಾಲರಾ ಬರುವುದೆಂದು ಹೇಳುತ್ತ ಎಷ್ಟು ದಶಕ ಕಳೆದವು? ಉಳಿದ ಬಾಬತ್ತುಗಳಿಗೆ ಸಾಲಸೋಲ ಮಾಡಿ ಹಣ ಖರ್ಚು ಮಾಡುವವರಿಗೂ ಸ್ವಯಂಪ್ರೇರಣೆಯಿಂದ ಶೌಚಕ್ಕೊಂದು ವ್ಯವಸ್ಥೆ ಮಾಡಿಕೊಳ್ಳಬೇಕೆನಿಸುತ್ತಿಲ್ಲ ಏಕೆ? ಹೀಗಾಗಿಯೇ ರಮೇಶ್ ದೇವಾಲಯ ಕಟ್ಟುವುದಕ್ಕಿಂತ ಶೌಚಾಲಯ ಕಟ್ಟಿಕೊಳ್ಳಿ ಎಂಬ ಮಾತು ಹೇಳಿದರೆ ವಿವಾದಾಸ್ಪದವಾಗಿ ಕೇಳುತ್ತದೆ. ಶುದ್ಧ ಕುಡಿಯುವ ನೀರು ಮರೀಚಿಕೆಯಾಗಿಯೇ ಉಳಿಯುತ್ತದೆ.

****

ಇಲ್ಲಿಯೇ ಕಾಲರಾ ಮತ್ತು ನೊಣಗಳ ಬಗೆಗೆ ಒಂದೆರಡು ಮಾತು.

ಎಲ್ಲೆಲ್ಲಿ ಹೊಲಸು, ಕೊಳಕು ತುಂಬಿದೆಯೋ ಅಲ್ಲೆಲ್ಲ ನೊಣಗಳು ಇರುತ್ತವೆ. ನೊಣಗಳು ಕೊಳಕುತನದ ಸೂಚಕಗಳು. ಕೊಳೆಯುವ ವಸ್ತುಗಳಿರುವ ಕಡೆ ಅವು ಕುಳಿತು ಮೊಟ್ಟೆಯಿಡುತ್ತವೆ. ಎಂಟು ಹತ್ತು ದಿನಗಳಲ್ಲಿ ಹೊಸಮರಿಗಳು ಹಾರಿ ಅವುಗಳ ವಂಶ ಬೆಳೆಯುತ್ತಾ ಹೋಗುತ್ತದೆ. ಈ ನೊಣಗಳೇ ಹೊಲಸಿನ ಮೇಲೂ ಕುಳಿತು, ತೆರೆದಿಟ್ಟ ಆಹಾರ ಪದಾರ್ಥಗಳ ಮೇಲೂ ಕೂರುವುದರಿಂದ ಅವುಗಳ ಕಾಲು ಸರ್ವರೋಗವಾಹಕಗಳಾಗುತ್ತವೆ. ಮಲದಲ್ಲಿ ವಿಸರ್ಜಿತವಾಗುವ ಹಲವು ಬ್ಯಾಕ್ಟೀರಿಯಾ, ವೈರಸ್, ಜಂತುಮೊಟ್ಟೆಗಳು ಮರಳಿ ಮನುಷ್ಯನ ಹೊಟ್ಟೆ ಸೇರುವುದು



ಹೆಚ್ಚಾಗಿ ಅವುಗಳಿಂದಲೇ.

ನೊಣಗಳ ಬಗ್ಗೆ ಒಂದು ಪ್ರಖ್ಯಾತ ಇಂಗ್ಲಿಷ್ ಹೇಳಿಕೆಯಿದೆ – ದೇವರು ತನ್ನ ಬುದ್ಧಿವಂತಿಕೆಯಿಂದ ನೊಣಗಳನ್ನು ಸೃಷ್ಟಿಸಿದ, ಕೊನೆಗೆ ಅವನ್ನು ಸೃಷ್ಟಿಸಿದ್ದೇಕೆಂದು ನಮಗೆ ಹೇಳಲು ಮರೆತ! ಎಂದು. ಆದರೆ ಅವು ಹರಡುವ ಕಾಯಿಲೆಗಳ ಪಟ್ಟಿಯನ್ನು ನೋಡಿದರೆ ದೇವರು ಅವನ್ನೇಕೆ ಸೃಷ್ಟಿಸಿದೆ ಎಂದೇ ಮರೆತ ಹಾಗೆನಿಸುತ್ತದೆ. ಕೇವಲ 15ರಿಂದ 25 ದಿನ ಬದುಕುವ ನೊಣಗಳು ಒಮ್ಮೆಗೆ 100-150 ಮೊಟ್ಟೆಗಳನ್ನಿಡುತ್ತವೆ ಹಾಗೂ ತಮ್ಮ ಅಲ್ಪ ಜೀವಿತಾವಧಿಯಲ್ಲಿ ವಂಶಜರ ಸಂಖ್ಯೆಯನ್ನು ಲಕ್ಷಗಟ್ಟಲೆ ಬೆಳೆಸುತ್ತವೆ ಎಂದರೆ ಆ ಪುಟ್ಟ ಜೀವಿಗಳಿಗಿರುವ ವಿಲಕ್ಷಣ ಶಕ್ತಿ ಊಹಿಸಬಹುದು.

ಈಗ ಕಾಲರಾ ಎಂದರೆ ಜನ ಯಾವುದೋ ಮರೆತ ಹೆಸರಿನಂತೆ ವರ್ತಿಸುತ್ತಾರೆ, ಆದರೆ ಆರೋಗ್ಯ ಇಲಾಖೆ ಬೆಚ್ಚಿಬೀಳುತ್ತದೆ. ಮೊದಲೆಲ್ಲ ಇಡೀ ಊರಿಗೆ ಊರನ್ನೇ ನಾಶ ಮಾಡಿದ ಕೀರ್ತಿ ಈ ಕಾಯಿಲೆಗಿದೆ. ಇದು ಭಾರತದ ಪಾರಂಪರಿಕ ಕಾಯಿಲೆ. ಕ್ರಿ.ಪೂ. ಏಳನೇ ಶತಮಾನದಲ್ಲಿ ರಚಿತವಾದ ಸುಶ್ರುತ ಸಂಹಿತೆಯಲ್ಲಿ ಈ ಕಾಯಿಲೆಯನ್ನು 'ವಿಶುಚಿಕಾ' ಎಂದು ಹೆಸರಿಸಲಾಗಿತ್ತು. 19ನೇ ಶತಮಾನದ ಪೂರ್ವಾರ್ಧದವರೆಗೂ ಇದು 'ಪೂರ್ವದ ಕಾಯಿಲೆ' ಎಂದೇ ಬಣ್ಣಿಸಲ್ಪಡುತ್ತಿತ್ತು. ಆನಂತರ ಯೂರೋಪು ಸೇರಿದಂತೆ ವಿಶ್ವದ ಹಲವೆಡೆ ಹರಡಿ ಇಪ್ಪತ್ತನೇ ಶತಮಾನದ ಪೂರ್ವಾರ್ಧದವರೆಗೆ ಆರು ಬಾರಿ ವಿಶ್ವದಲ್ಲಿ ಮಹಾ ಸೋಂಕು (ಪ್ಯಾಂಡೆಮಿಕ್) ಉಂಟುಮಾಡಿ ಲಕ್ಷಾಂತರ ಜನರ ಸಾವುನೋವಿಗೆ ಕಾರಣವಾಯಿತು. ಆರರಲ್ಲಿ ಐದು ಬಾರಿ ಈ ಕಾಯಿಲೆ ಭಾರತದಲ್ಲೇ ಶುರುವಾಯಿತು. 1957ರಲ್ಲಿ ಭಾರತವೊಂದರಲ್ಲೇ ಇದರಿಂದ 87,000 ಜನ ಸಾವನ್ನಪ್ಪಿದರೆಂದರೆ ಈ ಕಾಯಿಲೆಯ ತೀವ್ರತೆ ಎಷ್ಟೆಂದು ತಿಳಿಯುತ್ತದೆ. ಮೊದಮೊದಲು ಬಂಗಾಲವನ್ನು 'ಕಾಲರಾ ತಾಯಿ' ಎಂದು ಕರೆಯುತ್ತಿದ್ದರು. 1965ರ ನಂತರವೇ ಅದು ಅಂಡಮಾನ್ ನಿಕೋಬಾರ್, ರಾಜಸ್ತಾನ ಹಾಗೂ ದಕ್ಷಿಣದ ರಾಜ್ಯಗಳಲ್ಲಿ ಪ್ರಬಲವಾಗಿದ್ದು.


ಕಾಲರಾ ಎಂಬ ವಾಂತಿ-ಭೇದಿ ರೋಗಕ್ಕೆ ಕಾರಣವಾದದ್ದು 'ವಿಬ್ರಿಯೋ ಕಾಲರೆ' ಎಂಬ ಬ್ಯಾಕ್ಟೀರಿಯಾ. 1960ರ ನಂತರ ಪಶ್ಚಿಮದ ದೇಶಗಳಲ್ಲಿ ಕಾಲರಾ ಇಲ್ಲ. ಈಗದು ಏಷಿಯಾ ದೇಶಗಳಿಗಷ್ಟೇ ಸೀಮಿತ. ಅಲ್ಪ ಪ್ರಮಾಣದಲ್ಲಿ ಆಫ್ರಿಕಾದ ದೇಶಗಳಲ್ಲಿ ಕಾಣಿಸಿಕೊಳ್ಳುತ್ತದಾದರೂ ಕಾಲರಾವನ್ನು 'ಏಷಿಯಾ ಕಾಲರಾ'ವೆಂದೇ ಕರೆಯುತ್ತಾರೆ. ಈಗಿನ ಏಷಿಯಾಟಿಕ್ ಕಾಲರಾದ ರೋಗಾಣು ಇಂಡೋನೇಷ್ಯಾ ಸಂಜಾತ. ಇದಕ್ಕೆ ಮೊದಲಿನಷ್ಟು ತೀವ್ರವಾಗಿ ಹರಡಬಲ್ಲ ಸಾಂಕ್ರಾಮಿಕತೆ ಇಲ್ಲ. ಮರಣ ಪ್ರಮಾಣವೂ ಗಣನೀಯವಾಗಿ ಕಡಿಮೆಯಾಗಿದೆ. ಇತ್ತೀಚೆಗೆ ಅತಿಕಡಿಮೆ ಬೆಲೆಯ ಪರಿಣಾಮಕಾರಿ ಬಾಯಿ ಲಸಿಕೆಯೊಂದನ್ನು ಕಂಡುಹಿಡಿಯಲಾಗಿದೆ. ಈಗಿನ ಎಲ್ಲ ವಾಂತಿ ಭೇದಿ ಕೇಸುಗಳಲ್ಲಿ 5-10% ಮಾತ್ರ ಕಾಲರಾದಿಂದ ಆಗಿರುತ್ತವೆ. ಕಾಲರಾ ಇಷ್ಟು ನಿಯಂತ್ರಣಕ್ಕೆ ಬಂದಿರುವುದು ಸಮಾಧಾನದ ವಿಷಯವಾಗಿದೆ.

****

ಶೌಚಾಲಯ ಹೊಂದುವುದು ವ್ಯಕ್ತಿಯೊಬ್ಬನ ಸ್ವಾಭಿಮಾನದ ಪ್ರಶ್ನೆ. ಅದರಲ್ಲೂ ಮಹಿಳೆಗೆ ಖಾಸಗಿತನ, ವ್ಯಕ್ತಿತ್ವದ ಘನತೆ, ಸುರಕ್ಷತೆಯ ದೃಷ್ಟಿಯಿಂದ ಅತಿ ಮುಖ್ಯವಾದುದು. ಆದರೆ ಅದು ಮಹಿಳೆಯರಲ್ಲೂ, ಉಳ್ಳವರಲ್ಲೂ ಆದ್ಯತೆಯ ವಿಷಯವಾಗದೇ ಇರುವುದು ಆಶ್ಚರ್ಯ ಹುಟ್ಟಿಸುತ್ತದೆ. ವೈಯಕ್ತಿಕ ಸ್ವಚ್ಛತೆ ಕುರಿತ ನಿರ್ಲಕ್ಷ್ಯ ಬದುಕಿನಲ್ಲಿ ಮತ್ತೆಲ್ಲ ಸವಲತ್ತು, ನೆಮ್ಮದಿಗಳ ನಡುವೆಯೂ ಇರುವ ನಿರಾಸಕ್ತಿಯನ್ನು ಸೂಚಿಸುವುದೇ?

● ಡಾ. ಎಚ್. ಎಸ್. ಅನುಪಮಾ

ಧೂಲ್ ಕಾ ಫೂಲ್




ಮುಂಬೈನ ರೀಲು ರಂಗೀಲ ಲೋಕದಲ್ಲಿ 'ಹಿಂದಿ' ಸಿನಿಮಾಗಳು ತಯಾರಾಗುತ್ತವೆ ಅಂತ ನಾವು ಒಪ್ಪಿಕೊಂಡುಬಿಟ್ಟಿದ್ದೇವೆ. ಆದರೆ ಅಲ್ಲಿ ರೀಲು ಬಿಚ್ಚೋದು 'ಹಿಂದೂಸ್ತಾನಿ' ಸಿನಿಮಾಗಳು. ಇಂದಿಗೂ ಬಾಲಿವುಡ್ ಸಿನಿಮಾಗಳಲ್ಲಿ ಮಾತು-ಹಾಡುಗಳಿಗೆ ಬಳಕೆಯಾಗುವ ಭಾಷೆ ಹೆಚ್ಚುಕಮ್ಮಿ 'ಹಿಂದೂಸ್ತಾನಿ'ಯೇ. ಇದೇನು ಕೂದಲು ಸೀಳುವ ವರಸೆ ಎನ್ನದಿರಿ. ಹಿಂದೂಸ್ತಾನಿಯು ಅರಬ್ಬಿ ಪಾರ್ಸಿ, ಉರ್ದು, ಪ್ರಾಕೃತ ಮತ್ತು ಉತ್ತರ ಭಾರತದ ಹಲವು 'ಖಡಿ ಬೋಲಿ'(ಉತ್ತರ ಭಾರತದ ಹಳ್ಳಿ ಪ್ರದೇಶಗಳ ವಿಶಿಷ್ಟ ಭಾಷೆ-ಕಬೀರನ ದೋಹಗಳಿರುವುದು ಈ ಭಾಷೆಯಲ್ಲಿ)ಗಳ ಸಂಗಮವಾದ ಭರಪೂರ ಭಾಷೆ. ಸ್ವತಂತ್ರಪೂರ್ವ ಉತ್ತರ ಭಾರತದಲ್ಲಿ, ಬಹುಪಾಲು ಜನ ತಮ್ಮ 'ತಾಯಿ ಭಾಷೆ' 'ಹಿಂದೂಸ್ತಾನಿ' ಎಂದು ದಾಖಲಿಸುತ್ತಿದ್ದರು. 1920ರ ನಂತರದ ಯೋಜಿತ ಫರಂಗಿ ರಾಜಕೀಯ ಮತ್ತು ಕೋಮುವಾದಿ ರಾಜಕೀಯಗಳ ಫಲವಾಗಿ, ಬಹುಪಾಲು ಜನರಾಡುವ 'ಹಿಂದೂಸ್ತಾನಿ' ಭಾಷೆಯನ್ನು 'ಅಧಿಕೃತ ಭಾಷೆ'ಗಳ ಪಟ್ಟಿಯಿಂದ ಹೊರತಳ್ಳಿ, ಸದ್ದಿಲ್ಲದೆ ಒಂದು ಭಾಷೆಯ ಪರಂಪರೆಯನ್ನೇ ಮಣ್ಣುಗೂಡಿಸಲಾಯಿತು. ಆ ಕತೆ ದೊಡ್ಡದಿದೆ. ಈಗ ಹಿಂದೂಸ್ತಾನಿ ಜೀವಂತವಾಗಿರುವುದು ಉತ್ತರ ಭಾರತದ ಬೀದಿಗಳಲ್ಲಿ ಮತ್ತು ಮುಂಬೈ ರಂಗೀಲ ರೀಲುಗಳಲ್ಲಿ, ಅಯ್ಯೋ ಏನು ವಯ್ಯ ಸಖತ್ ಸೀರಿಯಸ್ಸಾಗಿ ಭಾಷಭಟ್ಟನ ಥರ ಆಡ್ತಾವ್ನೆ ಅನ್ನೋಬೇಡಿ. ಮುಂಬೈ ಸಿನಿಮಾಗಳು ವಿಚಿತ್ರ ನಮೂನೆಯಲ್ಲಿ ಮತಾತೀತ ಮನೋಭಾವವನ್ನೂ, ಬ್ರಿಟಿಷ್ ವಸಾಹತುಶಾಹಿ ವಿರೋಧಿ ಹೋರಾಟಗಳ ಕೆಲವು ಜೀವಂತ ಲೋಕಕಲ್ಯಾಣ ವಿಚಾರಗಳನ್ನೂ ಅಷ್ಟೋ ಇಷ್ಟೋ ಉಳಿಸಿಕೊಂಡಿವೆ. ಸಾದತ್ ಹಸನ್ ಮಾಂಟೊ, ಸಹೀರ್



ಲುಧಿಯಾನ್ವಿ, ಮಜ್ರು ಸುಲ್ತಾನ್ಪುರಿ, ಕೈಫಿ ಆಜ್ಮಿ, ಗುಲ್ಜಾರ್‌ರಂತಹ ಉರ್ದು ಸಾಹಿತ್ಯ ಪ್ರತಿಭೆಗಳು 1980ರವರೆಗೂ ಮುಂಬೈ ರಂಗೀಲ ದುನಿಯಾದ ಚಲನಚಿತ್ರ ಸಾಹಿತ್ಯದ ಬೆನ್ನುಹುರಿಯಾಗಿದ್ದರು ಎನ್ನೋದು ನನ್ನ ಮಾತಿಗೆ ಸಾಕ್ಷಿಯಾಗಿ ಮುಂದಿಡುವೆ. ಮೊನ್ನೆ ಸೋಮವಾರ ಮುಂಬೈ ರಂಗೀಲ ದುನಿಯಾದ ದೊಡ್ಡ ಕುಳ ಯಶ್‌ಚೋಪ್ರ, 80ನೇ ವಯಸ್ಸಿನಲ್ಲಿ ತೀರಿಕೊಂಡದ್ದು ಕಾರಣವಾಗಿ ಇದೆಲ್ಲ ನೆನಪಿಗೆ ಬಂತು. ಯಶ್ ಚೋಪ್ರ ಭರ್ಜರಿ ಹಣ ಬಾಚಿದ 'ರಮ್ಯ ಪ್ರಣಯ' ಸಿನಿಮಾಗಳನ್ನು ನಿರ್ಮಿಸಿ, ನಿರ್ದೇಶಿಸಿದ 'ಪ್ರಣಯ ರಾಜ' ಎಂದು ಕನ್ನಡದ ಜಾಣಜಾಣೆಯರು ನೆನಪಿಟ್ಟುಕೊಳ್ಳಬೇಕಾದ್ದಿಲ್ಲ, ಆದರೆ, ಅವರ ರೀಲ್ ಬದುಕು (1957-2012) ಭಾರತದ 20ನೇ ಶತಮಾನದ ಚರಿತ್ರೆಯ ಹರಿವ ನದಿಯಲ್ಲಿ ಒಂದು ಹನಿಯಾಗಿತ್ತು; ಶತಮಾನದ ಯುಗಧರ್ಮವು ಹಲವು ನಮೂನೆಗಳಲ್ಲಿ ಬದಲಾದ ಬಗೆಯನ್ನು ಯಶ್ ಚೋಪ್ರರ ರಂಗೀಲ ರೀಲುಗಳಲ್ಲಿ ಕಾಣಬಹುದು ಎಂಬ ಒಂದು ಕಾರಣಕ್ಕೆ ಅವರ ಸಿನಿಮಾಗಳನ್ನು ನೆನೆಸಿಕೊಳ್ಳಬಹುದು. ದೇಶವಿಭಜನೆಯ ಕಾರಣ ಪಶ್ಚಿಮ ಪಂಜಾಬಿನಿಂದ ವಲಸೆಬಂದ ಸಮುದಾಯದ ಸಾಮಾಜಿಕ ಮನೋಭಾವವು ಭಾರತದ ರಾಜಕೀಯ ಸಾಮಾಜಿಕ ವಿದ್ಯಮಾನಗಳ ಹರಿವಿನಲ್ಲಿ ಬದಲಾಗುತ್ತ ಹೋದ ಬಗೆಯನ್ನು ಒಂದು ಕಡೆಯಿಂದ- ಸ್ಥಿತಿವಂತ ಮನೆತನದಿಂದ ಬಂದ ಗಂಡಸಿನ ಕಣ್ಣಲ್ಲಿ ಕಂಡಂತೆ- ಯಶ್ ಚೋಪ್ರರ ಸಿನಿಮಾಗಳು ತೋರಿಸುತ್ತವೆ. ಯಶ್ ಚೋಪ್ರರ ಮೊದಲ ಮೂರು ಸಿನಿಮಾಗಳು ಈ ನಿಟ್ಟಿನಲ್ಲಿ ಕುತೂಹಲಕಾರಿಯಾಗಿವೆ. ಮತೀಯವಾದ ಮತ್ತು ಶ್ರೀಮಂತಿಕೆಯ ದರ್ಪ ಒಂದೇ ನಾಣ್ಯದ ಎರಡು ಮುಖಗಳು ಎಂಬ ನಿಲುವು ಮೊದಲ ಎರಡು ಚಿತ್ರಗಳಲ್ಲಿದೆ (ಧೂಲ್ ಕಾ ಫೂಲ್-1957, ಧರ್ಮಪುತ್ರ -1961). ಆಸ್ತಿವಂತ ಮಂದಿ ಪ್ರತಿಕೂಲ ಪರಿಸ್ಥಿತಿಯಲ್ಲೂ ಗೆದ್ದು ತಮ್ಮ ವ್ಯಾಪಾರ, ವ್ಯವಹಾರ ಕೌಶಲ್ಯ, ಗಂಡಸಿನ ಧಾಡಸಿತನ ಉಳ್ಳ 'ನವಭಾರತದ' ಮೌಲ್ಯನಿರ್ಮಾಣ ಮಾಡುವ ನಾಯಕರೆಂದು ಚಿತ್ರಿಸುವ ಕಡೆ ಮೂರನೇ ಸಿನಿಮಾ (ವಕ್ತ್-1965) ಹೊರಳುತ್ತದೆ. ವಿಭಜನೆಯ ಪೂರ್ವದ ಮತಾತೀತ ಸಾಮುದಾಯಿಕ ಮನೋಭಾವ ನಿಧಾನಕ್ಕೆ ನಾಶವಾಗಿ ಆಸ್ತಿವಂತರಿಗೆ ಮಣೆ ಹಾಕುವ ದೇಶನಿರ್ಮಾಣದ ಕಡೆ ಹೊರಳುವಲ್ಲಿ 1965ರ ಮೊದಲ ಭಾರತ-ಪಾಕಿಸ್ತಾನ ಯುದ್ಧ ಕಾರಣವಾದ ಬಗೆಯನ್ನು ಪಂಡಿತರು ಸೋದಾಹರಣವಾಗಿ ತೋರಿಸಿದ್ದಾರೆ. ಆ ಕಾಲವೇ, ಮತಾತೀತ ಸಮುದಾಯದ



ಒಲವಿನ ಭಾಷೆಯಾದ 'ಹಿಂದೂಸ್ತಾನಿ ಜುಬಾನ್' ಸಾಮಾಜಿಕ ಸ್ಥಾನ ಕಳೆದುಕೊಂಡದ್ದು, 'ಹಿಂದಿ' ಹಿಂದೂಗಳ ಭಾಷೆಯಾದದ್ದು, 'ಉರ್ದು' ಮುಸಲ್ಮಾನರ ಭಾಷೆಯಾದದ್ದು- ಈ ತರಹದ ಸಮುದಾಯ ಮನೋಭಾವದ ಅಲ್ಲೋಲಕಲ್ಲೋಲಗಳು ನಡೆದ ಕಾಲವೂ ಆಗಿದೆ! ಈ ನಡುವೆ 'ಹಿಂದೂಸ್ತಾನಿ' ಭಾಷೆಯನ್ನು ಮರೆಯದ ಮುಂಬೈ ಸಿನಿಮಾ ನಿರ್ದೇಶಕನಲ್ಲಿ ಈ ಬಗೆಯ ತಿರುವು! ವಿಚಿತ್ರ ಇಲ್ಲಿಗೇ ಮುಗಿಯದು. ನಂತರ ಸಾಲು, ಸಾಲು 'ಪ್ರೀತಿಯ ಸಿಹಿಸಕ್ಕರೆ ಗೊಂಬೆ'ಯ ಸಿನಿಮಾಗಳನ್ನು ಮಾಡುತ್ತ, ಹಣ ಬಾಚುತ್ತ ಹೋದ ಯಶ್ ಚೋಪ್ರ, ನಡು ನಡುವೆ 'ದಿವಾರ್', 'ಕಲಾಪತ್ತರ್', 'ವೀರ್ ಜಾರ', 'ಫನ್ನಾ'ದಂಥ ಚಿತ್ರಗಳಲ್ಲಿ (ಇವೆಲ್ಲ ಪಕ್ಕಾ ಜನಪ್ರಿಯ ಸಿನಿಮಾಗಳೇ- ಅನುಮಾನ ಬೇಡ) ನಿದ್ದೆಯಿಂದ ಎದ್ದು ಕನವರಿಸಿ, ಮತ್ತೆ ಶ್ರೀಮಂತರ ಲಾಲಿಪಪ್ ಪ್ರಣಯ ಜಗತ್ತಿನ ನಿದ್ದೆಗೆ ಜಾರಿಬಿಡುತ್ತಿದ್ದರು. ಈ ನಮೂನೆಯ ಕನಸು-ಕನವರಿಕೆಯ ಆಟ ಮುಂಬೈ ರಂಗೀಲ ರೀಲ್ ಜಗತ್ತಿನ ಇಬ್ಬಗೆಯ ಮನೋಸ್ಥಿತಿಯ ಛಾಪು ಆಗಿದೆ. ಆ ಛಾಪೆ ನನ್ನಂಥ ರೀಲು ಹುಚ್ಚರನ್ನು ಥಿಯೇಟರಿಗೆ ಎಳೆಯುತ್ತದೆ. ಬಿಡಿ, ನಮ್ಮಂಥ ತಲೆಕೆಟ್ಟವರ ಸುದ್ದಿ. ಕನ್ನಡದ ಜಾಣ-ಜಾಣೆಯರು ನೆನಪಿಡಬೇಕಾದ ಯುಗಧರ್ಮದ ಉದಾಹರಣೆಯಾಗಿ 'ಧೂಲ್ ಕಾ ಫೂಲ್' ಸಿನಿಮಾಕ್ಕೆ ಒನ್ ಅಂಡ್ ಓನ್ಲಿ ಸಾಹೀರ್ ಲುಧಿಯಾನ್ವಿ ಬರೆದ 'ತು ಹಿಂದೂ ನ ಬನೇಗ, ನ ಮುಸಲ್ಮಾನ್ ಬನೇಗ, ಇನ್ಸಾನ್ ಕಿ ಔಲಾದ್ ಹೈ ಇನ್ಸಾನ್ ಬನೇಗ...' ಖ್ಯಾತ ಹಿಂದುಸ್ತಾನಿ ಹಾಡಿನ ಒಣಾಒಣ ಅನುವಾದ ಕೊಡ್ತ ಇದ್ದೇನೆ. ಆ ಹಾಡಿನ ಜೋಶ್ ಹಾಗೂ ಹಿಂದೂಸ್ತಾನಿ ಜುಬಾನಿನ ಅಪ್ರತಿಮ ಲಯವನ್ನು ಶುದ್ಧ ಕನ್ನಡದಲ್ಲಿ ನಮ್ಮಪ್ಪನಾಣೆ ತರೋಕೆ ಸಾಧ್ಯವಿಲ್ಲ ಕಣ್ರಿ. ಒಂಚೂರು ಏನಾದ್ರು ಹಿಡೀಬೇಕು ಅಂದ್ರೆ ಪಂಡಿತ ರಹಮತ್ ಶಾಸ್ತ್ರಿಗಳು ಹೇಳುವ 'ಸಂಕರ ಭಾಷೆ'ಯನ್ನೇ ಉಪಯೋಗಿಸಬೇಕು (ಇದು ದೇಶಿ ಕನ್ನಡ, ತೆಲುಗು, ಮರಾಠಿ, ದಖಣಿ, ಹಳೆಗನ್ನಡ, ತುಳು, ತಮಿಳುಗಳು ಸೀಮೆಯ ಹಂಗಿಲ್ಲದೆ ಹರಿದು ಕಟ್ಟಿಕೊಳ್ಳುವ ಭಾಷೆ). ಜಾಣ-ಜಾಣೆಯರು ಕಲಿತು ಪ್ರಯತ್ನಿಸಿ. ಸದ್ಯಕ್ಕೆ ಪಾಮಾರನ ಪುಳಿಚಾರು ಅನುವಾದ ಒಪ್ಪಿಸಿಕೊಳ್ಳಿ.



-ಸಾಹಿರ್ ಲುಧಿಯಾನ್ವಿ

ಹಿಂದೂವೂ ಆಗಲ್ಲ ಮರಿ ನೀನು ಮುಸಲಮಾನನೂ ಆಗಲ್ಲ
ಮನುಷ್ಯರ ಕಂದ ನೀನು ಮನುಷ್ಯನೇ ಆಗ್ತೀಯ

ಒಳ್ಳೆಯದೇ ಆಯ್ತು ಮರಿ ನಿನಗೊಂದು ಹೆಸರಿಲ್ಲ
ಮತ ಮತ ಅನ್ನೋರ ನೆಂಟುಗಂಟು ನಿನಗಿಲ್ಲ
ಯಾವ ಶಾಸ್ತ್ರ ಮನುಷ್ಯರನ್ನು ಒಡೆದಿದೆಯೋ
ಆ ಶಾಸ್ತ್ರ ನಿನ್ನನ್ನು ದೂರಲಾರದು
ಬದಲಾಗುತ್ತಿರೋ ಕಾಲದ ಹೊಸ ಕೂಸು ನೀನು ಮರಿ
ಮನುಷ್ಯರ ಕಂದ ನೀನು ಮನುಷ್ಯನೇ ಆಗುವೆ.

ದೇವರು ಭೂಮಿ ಮೇಲೆ ಮನುಷ್ಯರನ್ನು ಹುಟ್ಟಿಸಿದ
ನಾವು ಮನುಷ್ಯರನ್ನು ಹಿಂದೂ, ಮುಸಲಮಾನರೆಂದೆವು
ನಿಸರ್ಗ ನಮಗೆ ಒಂದೇ ಭೂಮಿ ಕೊಟ್ಟರೆ
ನಾವಿಲ್ಲಿ ಇಂಡಿಯಾ, ಇರಾನ್ ಗಡಿ ಕೊರೆದೆವು
ಗಡಿಗಳನ್ನು ಅಳಿಸೋನು ಬಿರುಗಾಳಿಯಾಗುವ ಮರಿ
ಮನುಷ್ಯರ ಮಗು ನೀನು ಮನುಷ್ಯನೇ ಆಗುವೆ.

ದ್ವೇಷವನ್ನು ಕಲಿಸುವ ಮತ ನಿನದಲ್ಲ
ಮನುಷ್ಯರನ್ನು ತುಳಿಯುವ ಹೆಜ್ಜೆ ನಿನದಲ್ಲ
ಕುರಾನ್ ಪಠಣ ಮಾಡದ ಮಂದಿರ ನಿನದಲ್ಲ
ಗೀತೆಯ ಪಠಣ ಮಾಡದ ಮಸೀದಿ ನಿನದಲ್ಲ
ಶಾಂತಿಸಹನೆಯ ಆಸೆ ಕೂಸು ನೀನು ಮರಿ
ಮನುಷ್ಯರ ಮಗು ನೀನು ಮನುಷ್ಯನೇ ಆಗುವೆ.

ಮತಧರ್ಮದ ವ್ಯಾಪಾರಿಗಳು, ದೇಶವನ್ನೇ ಮಾರುವವರು
ಶವದ ಮೇಲಿನ ಬಟ್ಟೆಯನ್ನೂ ಬಿಡದವರು
ಮಹಲಲ್ಲಿ ಕೂತಿರುವ ಕಳ್ಳ ಕೊಲೆಗಡುಕರು
ಮುಳ್ಳನ್ನು ಕೊಳ್ಳಲು ಹೂದೋಟ ಮಾರುವವರು
ಇವರಿಗೆಲ್ಲ ನೀನು ಜವರಾಯನಾಗುವೆ ಮರಿ
ಮನುಷ್ಯರ ಕಂದ ನೀನು ಮನುಷ್ಯನೇ ಆಗುವೆ.

ಒಳಗಿನ ಬೆಂಕಿಗೆ ಯಾರ ಕಾವಲು?

ಒಳಗು...

ಪರಿವರ್ತನೆ ಜಗದ ನಿಯಮ
ಮನುಷ್ಯನೂ ಬದಲಾದಾನು, ಬೇಕು ಸಂಯಮ

ಬದಲಾವಣೆ ನಿಲ್ಲದ ನದಿಗೆ, ಅಡಿಗಡಿಗೂ ಗಡಿದಾಟುವುದೇ ಪರಿವರ್ತನೆ
ದಾರಿ ದುರ್ಗಮ, ಬೆಟ್ಟಗುಡ್ಡ ಕಡಿದಾದ ಕಣಿವೆ ಕಾಡು
ಹತ್ತಿಹೂತ ಗುಡ್ಡ ಇಳಿಯದೆ ಮುಂದುವರೆಯದು ಪಯಣ
ಏರುವುದಕ್ಕೆ ಉತ್ಸಾಹ ಬೇಕು, ಇಳಿಯುವುದಕ್ಕೆ ಸ್ಥೈರ್ಯ. ಎರಡೂ ತಪ್ಪಬಾರದು ಲಕ್ಷ್ಯ
ಏರಿಕೆಯ ಸೊಕ್ಕು ತೇರು, ಇಳಿವಿನ ಜಾರು ಮನಕೆ ಅಂಟದಿರೆ ಮನುಷ್ಯ

ಬದಲಾವಣೆ ನಿಘಂಟಿನಲ್ಲಿ ಇಲ್ಲದ ಪದಗಳಿಗೆ ನಿರಂತರ ಹುಡುಕಾಟ
ಹಾಚಿಗಟ್ಟಿದ ಪದಗಳನ್ನು ಅರ್ಥವಿಲ್ಲದ ಶಬ್ದಗಳನ್ನು ದೂರಸರಿಸಿ
ಹಿಂತ ಕೇಳದ ಪದಗಳನ್ನು, ಕ್ಷರವಾಗಲು ಹೆದರದ ಅಕ್ಷರಗಳನ್ನು
ಹೊಸ ಸಂಟನೆಲಿ ಜೋಡಿಸಲು ಬೇಕಾದ ಅಂಟಿನ ಹುಡುಕಾಟ

ಬದಲಾವಣೆ ನಾನು ನಾನಾಗುವ ಗುಟ್ಟು
ಹುಟ್ಟುಹಾಕುತ್ತಲೇ ನನ್ನೊಳಗೆ ನಾನು ಪಡೆಯುವ ಮರುಹುಟ್ಟು
ಇಲ್ಲಿ, ಇದು, ಉಯಿಲು ಬರೆದಿಟ್ಟರೆ ಪಡೆಯುವ ಕುಯಿಲಲ್ಲ
ಚರ್ಮ ಸುಲಿದರೆ ಕರ್ಮ ಕಳೆಯುವುದಕ್ಕೆ
ಹಾವ ಬೇಡ ಹಾವ ಅರಿಯದೆ ಮರುಹುಟ್ಟು ಸಾಧ್ಯವಿಲ್ಲ.


ಹೊರಗು..

ಬದಲಾವಣೆ ಪವಾಡವಲ್ಲ, ಪವಾಡದಲ್ಲಿ ಬದಲಾವಣೆ ಇಲ್ಲ
'ಸಮಯದ ಗೊಂಬೆ' ಎಂದರಂತೂ ಪೂರ್ತಿ ವಿಶ್ರಾಂತಿ
'ಸಮಯ ನಮ್ಮ ಕೈಗೊಂಬೆ' ಎಂಬುದು ಬರಿಯ ಭ್ರಾಂತಿ
ರಥದ ರೀತಿ, ಗಾಳಿಯ ಬೀಸು, ರಕ್ತದ ಬಿಸುಪು ಹದವಾಗಿ ಬೆರೆತರೆ ಮಾತ್ರ ಸಂಕ್ರಾಂತಿ

ನಿನ್ನೆಯ ತನಕ ಕಾಲಕ್ಕೆ ತಕ್ಕ ಮಳೆ, ಬರದಿದ್ದರೆ ಬರ,
ಒಟ್ಟಲ್ಲಿ ಇಳೆಯ ಜಾತಕ ನಿಚ್ಚಳವಾಗಿತ್ತು, ಲೆಕ್ಕಾಚಾರ ಸ್ಪಷ್ಟವಾಗಿತ್ತು
ಹಂಗಿನ ಬದುಕು ಹೇಸಿಗೆಯಾಗಿ ಹುಸ್ತ ಕಹಿಯಾಗುತ್ತಿತ್ತು,
ಬಿಸಿಲಿನ ಝಳಕ್ಕೆ ಒಡಲಿನ ಕಿಚ್ಚಿಗೆ
ಧಗಧಗ ಉರಿದು ಸೂರ್ಯನಿಗೆ ಕೆಂಪೇರುತ್ತಿತ್ತು

ಇಂದು ಕಾಲ ಬದಲಾಗುತ್ತಿದೆ,
ಈಗ, ಮಳೆಯೆಂದರೆ ಮಳೆಯಲ್ಲ, ಬರವೆಂದರೆ ಬರವಲ್ಲ..
ಸಿಟ್ಟಿನ ಹೊಟ್ಟೆಯಲ್ಲಿ ಸ್ವಾರ್ಥದ ಮೊಟ್ಟೆಯೊಡೆದು, ಸಿದ್ಧಾರ್ಥ ಅರಮನೆ ತೊರೆಯುತ್ತಿಲ್ಲ
ತುಂತುರು ಮಳೆ ಯಾವುದೂ ಸ್ಪಷ್ಟವಿಲ್ಲ

ಬಿಗಿದ ಮುಷ್ಟಿ ಬಿಗಿದಂತೆ ಇದ್ದರೂ,
ಬೆರಳುಗಳ ನಡುವೆ ವಿಶ್ವಾಸವಿಲ್ಲ
ಹಸಿಸೌದೆ ಉರಿಯುತ್ತಿಲ್ಲ
ಹಣೆತಂತ್ರಕ್ಕೆ ಕಾಯಿ ಉದುರುತ್ತಿಲ್ಲ



ಮೋಡ ಬಿತ್ತನೆ ವಿಫಲವಾಗಿದೆ
ಅಂತರಾಳದ ಜೀವಜಲ ಹೊರತರುವುದು ಹೇಗೆ?
ಕನಸಿನೂರಿಗೆ ನೇರ ವಿಮಾನ ರದ್ದಾಗಿದೆ
ಸುದೀರ್ಘ ಪಯಣಕೆ ಸಿದ್ಧತೆ ಸಾಕೆ?

ಸರದಿ ತಪ್ಪಿದ ಪ್ರಶ್ನೆಗಳ ಸಾಲು, ಸಾಲು
ಕವಲು ದಾರಿ ಸದಾ ಸವಾಲು
ಒಳಗಿನ ಬೆಂಕಿಗೆ ಯಾರ ಕಾವಲು?

● ಶಿವಸುಂದರ್

ಜೆಡಿಎಸ್ ಅಕೌಂಟಿಗೆ ಥರ್ಟಿಫೈವ್ ಲಕ್ಷ ಓಟು ಬಿದ್ದವಂತೆ

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

...ಒಂದು ಸಣ್ಣ ಸೋನೆ ಮಳೆಯ ಮೇಲೆ ಹಳ್ಳಿಯ ...ನ ಭರವಸೆಯಿಟ್ಟು ಬದುಕುತ್ತಿತ್ತು. ಆ ಭರವಸೆ ...ಯಾಗಲಿಲ್ಲ. ಒಣಗಿದ ಪೈರಿನ ಬೇರು ನೆನೆಯುವಂತ ...ಯಾಯ್ತು. ಅದನ್ನು ನೋಡಿದ ಕಾಳ ಮಾವನಿಗೆ ...ದ ಅನಿರ್ವಚನೀಯ ಸಂತೋಷವಾಯ್ತು. ನೆನ್ನೆ ...ಗಿಹೋಗಿದ್ದ ರಾಗಿ ಪೈರು ಬೆಳಗಾಗುವುದರಲ್ಲಿ ಹಸಿರು ...ಬೀರಿದ್ದವು. ಅದನ್ನ ಕಣ್ಣು ತುಂಬ ನೋಡಿಬಂದು, "ಅಂತೂ ಆತಗಂಬುಟ್ಟ ದೇವರು" ಎಂಬ ಉದ್ಗಾರ ...

"ಅಂಗೆ ಆಯ್ತಪ್ಪ, ಇನ್ನೊಂದು ವಾರ ಏನಾರ ...ಯಾಗದೆ ಇದ್ರೆ ಕತೆನ ಮುಗದೋಗದು" ಎಂದ ...

"ರಾಗಿ ಪೈರೇನೋ ಬದಿಕ್ಕಂಡೊ. ಕ್ಯರೆಕಟ್ಟೆಲಿ ...ಬವಂತಲ್ಲಾ, ಮುಂದೆ ದನಕರಿನ ಕತೆಯೇನೂ" ಎಂದ ...

"ಹೆದರಬ್ಯಾಡ ಕಣೊ ಸೀರ ಮಾವ. ಈ ವರ್ಸ ...ದ್ದಿಯಿರೊ ಮಳೆ ಎಲ್ಯೊ ಅದೆ, ಯಾವಾಗ್ಲೊ ...ದು ಸರಿಯಾಗಿ ಚಚ್ಚಿ ಬುಟ್ಟು ಹೋಯ್ತದೆ ...ನಿರು" ಎಂದ ಉಗ್ರಿ.

"ನೀನೇಳದು ನಿಜ ಕಂಡ್ಳ. ಈಗಾಗ್ಲೆ ಸೂಚನೆ ಕಾಣ್ತಾ ..." ಎಂದಳು ಜುಮ್ಮಿ.

"ಕಾಣ್ತಾವ್ವ, ಕಾಣ್ತೆ. ಮನೆ ಮಠ ಕೊಚ್ಚಿ ಹೋಗಂಗೆ ... ಹೂದ್ರೆ ತಡಕಬಲ್ಲೆ, ಆದ್ರೆ ಬರಗಾಲ ...ಯಕ್ಕಾಗದಿಲ್ಲ. ನೋಡಾಗ್ಲೆ ನನ್ನ ಹೋರಿ ಕರವ ... ಸಾವುರುಪಾಯಿಗೆ ಕೇಳ್ತಯಿದ್ರು. ಯಾವಾಗ ...ರಿಗೆ ಹುಲ್ಲಿಲ್ಲ ಕುಡಿಯಕ್ಕೆ ನೀರಿಲ್ಲ ಅನ್ನಂಗಾಯ್ತೊ, ...ರು ಸಾವುರುಪಾಯಿಗೆ ಕೇಳ್ತರಲ್ಲಾ. ಆಡು ಕುರಿ ...ಗೆ ದನ ಕೇಳಿದ್ರೆ ಕೊಡಕ್ಕಾದತೆ" ಎಂದ ಸೀರ.

"ಏ ಕೊಳ್ಳೊದೆ ಆದ್ರೆ ದನಕರ ಸಿಗತವೆ ಕಣೋ. ... ಕುರಿ ಎಲ್ಲಿ ಸಿಕ್ಕವೂ" ಎಂದ ಉಗ್ರಿ.

"ಈಗ ಕೋಳಿ ಕಾಯ್ಲ ಬಂದು ಕೋಳಿನ್ಯಲ್ಲ ಸಾಯಿಸಿ ...ಣಾತಯಿದ್ದರಂತೆ. ಬಾಡ ತಿನ್ನೂರ ಕತಿಯೇನ್ಲ?"

"ದನ ತಿಂತರೆ ತಗೊ, ಈಗಾಗ್ಲೆ ಸಾಬರ ಜೊತೆ ...ಕಂಡು ನಮ್ಮೊರೂ ದನ ತಿಂದರಂತೆ."

"ದನ ಏನ್ಲ ಕೋತಿಗಳೆಲ್ಲಿ ಕಾಣ್ತಾಯಿದ್ದವ್ವಾ. ಮದ್ದಿಗೆ ... ವಸಿ ಇದ್ದವೇ. ಮಲದ ಬಾಡು ಅಂತ ಸುಳ್ಳೇಳಿ ...ತಿನ್ನಲ್ಲ ತಿನ್ನಸ್ತ ಕುಂತುವುರೆ ಈ ಮಿಲ್ಟ್ರಿ ಹೋಟ್ಲೋರು."

"ನಿಜವೇನೋ ಮಾವ?"

"ಊ ಕಂಡ್ಯೆ. ನಾನ್ಯಾಕೆ ಸುಳ್ಳೇಳ್ಳಿ. ಬೇಕಾದ್ರೆ ಉಗ್ರಿನೆ ..."

"ಬೆಕ್ಕು, ನಾಯಿ ಒಂದೂ ಉಳಿತಾಯಿಲ್ಲ, ಬೆಂಗಳೂರು ...ನ್ನೀ ಬ್ರಹ್ಮ ರಾಕ್ಷಸನ ಬಾಯಿಗೆ ಯಾವುದೂ ಸಾಲ್ತಾಯಿಲ್ಲ ... ನರಮನ್ಸಾದೋನು ಬದುಕಕ್ಕಾದತೆ ಅಲ್ಲೀ. ಕಸ ...ದ ಇಡೀ ಬೆಂಗಳೂರೆ ಅಪಾಟಿ ವಾಸನೆ ಬಂದು ...ಟ್ಟದಂತೆ."

"ಸುಮ್ನಿರು ಅಂಗಾಗ್ಲಿ. ಅಹಹ ಯಲ್ಲಾವಳೂ ...ಗಳೂರಿಗೆ ಓಡತಿದ್ಲು, ಈಗ ಗೊತ್ತಾಗ್ಲಿ ಸುಮ್ನಿರು" ...ಮ ಸೀರ ಸೇಡಿನ ಕಣ್ಣು ಬಿಟ್ಟ.

"ಅಂಗರೆ ಬೆಂಗಳೂರಲ್ಲಿ ಕಸಗುಡಸರಿಲ್ವೆ?" ಎಂದ ಕಾಳ ಮಾವ.

"ಅವುರೆ ಕಣಮಾವ. ಪಾಪ ಅವುರು ತಾನೆ ಏಟು ಅಂತ ಗುಡಿಸ್ಯರೂ. ಅದಕ್ಕಿಂತ ಪ್ರತಿ ಮನೆಲೂ ಕನಿಷ್ಟ ಅರ್ಧ ಕೆಜಿ ಕಸ ತಯಾರು ಮಾಡಿ ಬೀದಿಗಾಕ್ತರೆ. ಅದ ಎಲ್ಲಿಗಾಕಬೇಕು. ಹಾಕಿದ ಮ್ಯಾಲೆ ಅದರ ಕತೆಯೇನು, ಇಂತಹ ಯಾವ ನನ್ನ ಮಗನೂ ಯೋಚನೆ ಮಾಡ್ತಾಯಿಲ್ಲವಂತೆ. ಆ ಬಿ.ಜೆ.ಪಿ ಬದ್ದೆತ್ತವುಕೆ ಎಡೂರಪ್ಪ ಪಾರ್ಟಿ ಬುಡದೇ ಒಂದು ದೊಡ್ಡ ಸುದ್ದಿಯಾಗ್ಯದೆ, ಜೆ.ಡಿ.ಎಸ್‌ನೋರಾಗ್ಲೆ ಯಲಕ್ಷನಿಗೆ ತಯಾರಿ ನ್ಯಡಿಸಿಗಂಡು ಅಂಗವಿಕಲರ ಸಭೆ ಮಾಡಿಕೊಂಡು ನಮ್ಮ ಅಕೌಂಟಿಗಾಗ್ಲೆ ಅಂಗವಿಕಲರ ಓಟು ಬಂದೋ ಅಂತ ಬೀಗ್ತ ಅವುರೆ. ಇನ್ನ ಕಾಂಗ್ರೆಸ್‌ನವು ಯಸ್ಸೆಮ್ ಕೃಷ್ಣ ಬತ್ತನೆ, ಬೆಂಗಳೂರಲ್ಲಿ ಅದೇನೋ ಜಾದೂ ಮಾಡ್ತನೆ ಅನ್ನಂಗಾಡ್ತ ಅವುರೆ. ಹೀಗಾಗಿ ಪಾಪ ಆ ಬೆಂಗಳೂರ ಜನಗಳ ಗೋಳಾಟ ನೋಡಕ್ಕಾಯ್ತಾಯಿಲ್ಲ ಕಣ ಮಾವ."

"ಯಸ್ಯೆಂ ಕಿಸ್ಣ ಯಾಕೆ ಬಂದನೂ. ಅವುನಿರದು ಕೇಂದ್ರದಲಲ್ಲವೆ."



"ಕೇಂದ್ರದ ಸೇವೆ ಸಾಕು ನಿನ್ನ ಪ್ರಾಂತ್ಯಕ್ಕೋಗು ಅಂತ ಮಂತ್ರಿಗಿರಿ ಕಿತಗಂಡು ಕಳಿಸಿದ್ರು ದೊಡಪ್ಪ" ಎಂದು ವಾಟಿಸ್ಸೆ ಬಂದ.

"ಅದ್ಯಾಕ್ಲ ಅಂಗೆ ಮಾಡಿದ್ರು?" ಎಂದಳು ಜುಮ್ಮಿ.

"ಯಾಕೆ ಅಂದ್ರೆ ಪಂಚಾಯ್ತಿ ಮೆಂಬ್ರಾಗಿ ನೀನು ಮಾಡೋವಷ್ಟು ವರಕುನೂ ಅವುನು ಮಾಡಿಲ್ಲ ಕಣಕ್ಕ. ನೀನು ಪಂಚಾತಿಗೋಗಬೇಕಾದ್ರೆ ಸೀರೆ ಉಟಗಂಡು, ರವುಕ್ಕೆ ಇಕ್ಕಂಡು, ತಲೆಬಾಚಗಂಡು, ಕುಂಕುಮ ಇಲ್ದೆಯಿದ್ರೂ ವಂಟೋಯ್ತಿ. ಅದೆ ನಮ್ಮ ಎಸ್ಸೆಂ ಕೃಷ್ಣ ಯಾವ ಡ್ರಸ್ ಹಾಕಬೇಕು ಅಂತ ಸೆಲೆಕ್ಟ್ ಮಾಡಕ್ಕೆ ಒಂದು ಗಂಟೆ ತಗತನೆ. ಅಮ್ಯಾಲೆ ವಿಗ್ಗಾಯ್ಕಂಡು ಅದ ಸರಿಮಾಡಿಕಳಕ್ಕೆ ಒಂದು ಗಂಟೆ. ಅಮ್ಯಾಲೆ ಸೆಂಟು. ಹಿಂಗೆ ಸುಂದರ ಪುರುಸನಾಗಿ ಆಪೀಸಿಗೋಗಿ ಯಾವ ದೇಶದೋನಾರ ಫೋನ್ ಮಾಡಿದ್ರೆ, ಹ್ಯಾಗಿದೀರಿ, ತಿಂಡಿ ಆಯ್ತಾ, ಅಲ್ಲಿ ಟೆನಿಸ್ ಕೋರ್ಟು ಹೇಗಿವೆ, ಕಾಫಿ ಬಾರಿದಾವ ಅಂತ ಕೇಳಿಕಂಡು ಮನಿಗೋಗದ ಸೋನಿಯಾಗಾಂಧಿ ಕಡಿಯೋರು ನೋಡಿ, ಯಾಕೆ ನೀನು ರಿಟೈರ್ ಅಗಬಾರ್ದು ಅಂದವುರೆ."

"ನಿಜವೇನ್ಲ ನೀನೇಳದು?"

"ನಿಜಕ್ಕೆ ಹತ್ರ ಅದೆ ಕಣಕ್ಕ. ಯಸ್ಸೆಂ ಕಿಷ್ಣ ಯಥಾಸ್ಥಿತಿವಾದಿ ಅಂತ ಮದ್ಲೆ ಹೇಳಿದ್ದಿನಿ. ಅವುನು ಯಾವತ್ತೂ ರಿಸ್ಕತಗಳೋನಲ್ಲ ಕಣಕ್ಕ. ಅಮ್ಯಾಲೆ ಸೋನಿಗಾಂಧಿ ನೆರೆಕೂದ್ಲಿಗೆ ಬಣ್ಣ ಹಾಕಿಲ್ಲ, ಅದೆ ಇವುನ ವಿಗ್ಗ ನೋಡಿ ನಗಾಡಿರದಿಲ್ವೆ ಅವುಳು. ಅದ್ಕೆ ನಿನ್ನ ಸೇವೆ ಸಾಕು ಅಂತ ಕಳಿಸಿ ಕೊಟ್ಟವುರೆ ಕಣಕ್ಕ."

"ಅದಷ್ಟೆ ಅಲ್ಲ ಕಣೊ ವಾಟಿಸ್ಸೆ. ಕಿಷ್ಣನಿಗಾಗ್ಲೆ ಯಂಬತ್ತು ವರ್ಸದ ಮ್ಯಾಲಾಯ್ತು. ಕಿವಿ ಸರಿಯಾಗಿ ಕೇಳದಿಲವಂತೆ. ನೀನೇನೋ ಹೇಳಿದ್ರೆ ಅವುನೇನೋ ಹೇಳ್ತನಂತೆ."

"ನಿಜ ಕಣೊ ಉಗ್ರೀ. ಆ ಪಾಕೀಸ್ತಾನದ ಕಳ್ಳರಿಗೆ ಇಂಥೋನೆ ಬೇಕಲವೆ. ಅವೇನೋ ಹೇಳಿದ್ರೆ ಇವುನೇನೋ ಹೇಳಿದನಂತೆ. ಅಮ್ಯಾಲೆ ಅದ್ಯಾವುದೊ ದೇಶದ ಭಾಷಣವ ಇನ್ನೊಂದ ದೇಶದಲ್ಲಿ ಓದಿದನಂತೆ. ಅದ್ಕೆ ಪಿಂಚಣಿ ತಗಂಡು ನಡಿಯಪ್ಪ ಅಂದ್ರು."

"ಅಂಗರೆ ಯಸ್ಸೆಂ ಕಿಷ್ಣನಿಗೆ ಪಿಂಚಣಿ ಆಯ್ತು ಅನ್ನು" ಎಂದ ಕಾಳ ಮಾವ.

"ಪಿಂಚಣಿ ತಗಂಡು ಸುಮ್ಮನಿರಂಗಿಲ್ಲ ದೊಡಪ್ಪ ಕರ್ನಾಟಕದ ಕಾಂಗ್ರೆಸ್ ಸರಿ ಮಾಡಿ ಅಧಿಕಾರಕ್ಕೆ ತರಬೇಕಂತೆ ಅವುನು."

"ಅವುನ್ಯಾಕ್ ತತ್ತನ್ಲ, ಅವುನ ಕತೆ ಮುಗಿತಲವೆ?"

"ಅದ ತಿಳಕಬೇಕಲ್ಲ ಕಾಂಗ್ರೆಸ್‌ನವು. ಬರಿ ಹರಿಜನರು, ಕುರುಬ್ರು ಇದ್ರಾಗದಿಲ್ಲ. ಒಕ್ಕಲೀಗರೂ ಸೇರಿಕಂಡ್ರೆ ಏನಾರ ಮಾಡಬವುದು ಅಂತ ಕೃಷ್ಣನ್ನ ಕರಕಂಡು ವಂಟವೆ."

"ಅಂಗರೆ ಲಿಂಗಾಯತ್ರ ಬ್ಯಾಡ ಅನ್ನು?"

"ಲಿಂಗಾಯಿತ್ರ ಎಡೂರಪ್ಪನ ಜೊತೆ ಹೊಂಟವುರಂತೆ ಕಣೊ."

"ಎಷ್ಟು ಜನ ಹೋದರೂ?"

"ನನಿಗನಿಸಿದಂಗೆ ಬಿ.ಜೆ.ಪಿಲಿರೋರ್‍ಯಲ್ಲ ಹೋಯ್ತರೆ. ಇನ್ನ ಕಾಂಗ್ರೆಸ್ ಲಿಂಗಾಯತ್ರ ಮಾತ್ರ ಯಾವತಿಗೂ ಕಾಂಗ್ರೆಸ್ಸಲ್ಲೇ ಇರತರೆ, ಪರೆಗ್‌ಜಾಂಪಲ್ ಶಾಮನೂರು ಶಿವಶಂಕರಪ್ಪನಂಥೋರು."

"ಶಾಮನೂರು ಶಿವಶಂಕರಪ್ಪ ಅಂದ್ರೆ ಯಾರ್ಲ?"

"ಅವುನು ಕಾಂಗ್ರೆಸ್ ಕುಬೇರ ಕಣಕ್ಕ, ದಾವಣಗೆರೆಯ ಕಮ್ಯುನಿಸ್ಟ್ ಪಂಪಾಪತಿ ಕಟ್ಟಿದ ಮ್ಯಾಲೆ, ಶಿವಶಂಕರಪ್ಪ ಬ್ಯಾರೆ ತರ ಕಟ್ಟಿದ, ದಾವಣಗೆರೆ ಅಂದ್ರವುನು ಅವುನು ಅಂದ್ರೆ ದಾವಣಗೆರೆ ಅನ್ನಂಗಾಗ್ಯದೆ."

"ಅವನೂ ಕಾಂಗ್ರೆಸ್ಸಲಿದ್ದನೆ?"

"ಊ. ಕಾಂಗ್ರೆಸ್ಸಿನಿಂದ್ಲೆ ಅವುರ್‍ಯಲ್ಲ ಬ್ಯಳದದ್ದು. ಯಾವೊ ಕೆಲುವು ಅಡ್ಡಕಸಬಿ ಲಿಂಗಾಯಿತ್ರ ಎಡೂರಪ್ಪನ ಹಿಂದೆ ಹೋಗಿ ಸಿಗಾಯ್ಕಂಡು ಈಗ ಬಿ.ಜೆ.ಪಿ.ಲಿರದೋ. ಇಲ್ಲ ಎಡೂರಪ್ಪನ ಹಿಂದೆ ಹೋಗದೋ ಅಂತ ಸಂತೇಲಿ ತಪ್ಪಿಸಿಗಂಡ ನಾಯಿತರ ಆಗ್ಯವೆ, ಬ್ಯಾಡ ಅವುರ ಪಾಡು."

"ಊ ಕಣೊ, ನ್ಯನಿಸಿಗಂಡ್ರೆ ನಗ ಬತ್ತದೆ."

"ಇನ್ನೂ ನಗುಸ್ತರೆ ಇರೊ ಉಗ್ರಿ, ಈಗ ಅವುರು ಮಾಡಿಕಂಡಿರೊ ದುಡ್ಡಲ್ಲಿ ಯಲಕ್ಷನ್ನಿಗೆ ಹೋಗ್ಲೆಬೇಕು. ಬಿ.ಜೆ.ಪಿಲಿದ್ರೆ ಟಿಕೆಟ್ ಸಿಗತದೊ ಇಲವೊ ಅನ್ನೊ ಅನುಮಾನ. ಎಡೂರಪ್ಪನಿಂದೋದ್ರೆ ಗೆಲ್ತಿವೊ ಇಲ್ಲವೊ ಅನ್ನೊ ಡವುಟು. ಇದ್ಯಾವುದೂ ಬ್ಯಾಡ ಕೇಳಿದಷ್ಟು ದುಡ್ಡು ಕೊಡ್ತನಂತೆ ರಾಮುಲು ಕಡಿಕೋದ್ರೆ, ಯಂಗೇ ಅನ್ನೊದೊಂದು ಆಲೋಚನೆ. ಇನ್ನ ಹ್ಯಾಂಡಿಕ್ಯಾಪಾಗಿದ್ರಂತೂ ಜೆ.ಡಿ.ಎಸ್ಸಲ್ಲಿ ಒಳ್ಳೆ ಬೆನಿಫಿಟ್ಟದಂತೆ."

"ಜೆ.ಡಿ.ಎಸ್ಸಲ್ಲಿ ಯಾವ ಬೆನಿಫಿಟ್ ಸಿಗತದೊ?"

"ಜೆ.ಡಿ.ಎಸ್ಸಿಗಂತೂ ಸಿಗತದೆ ಕಣೊ ಉಗ್ರಿ. ದ್ಯಾವೇಗೌಡ್ರು ಈಗ ಅವುರಿವುರ ಸಹಾಯದಿಂದ ಏಳೊದು, ಕುಂತಗಳದು ಅಂತ ಪರಾವಲಂಬಿ ಆಗಿದ್ದರಂತೆ. ಆಗ ಅವುರಿಗೆ ಹ್ಯಾಂಡಿಕ್ಯಾಪ್ ಪರಸನ್ನ ಮ್ಯಾಲೆ ಯೋಚನೆ ಮಾಡಂಗಾಯ್ತಂತೆ. ಕೂಡ್ಲೆ ಇಡೀ ರಾಜ್ಯದಲ್ಲಿ ಅಂಗವಿಕಲರು ಎಷ್ಟು ಜನವುರೆ ಅಂತ ಮಾಹಿತಿ ತರಿಸಿಗಂಡ್ರಂತೆ. ಬರೊಬ್ಬರಿ ಮುವ್ವತ್ತೈದರಿಂದ ನಲವತ್ತು ಲಕ್ಷ ಅಂಗವಿಕಲರು ಅವುರಂತೆ ಅಂತ ಗೊತ್ತಾಯ್ತು."

"ಅಯ್ಯೋ ಅಯ್ಯೋ ಅಷ್ಟೊಂದು ಜನಿದ್ದರೇನ್ಲ"

"ಊ ಕಣಕ್ಕ, ಇನ್ನೂ ಜಾಸ್ತಿಯವುರೆ, ಸರಿಯಾಗಿ ಚೆಕಪ್ ಮಾಡಿಸಿಗಂಡ್ರೆ ನಮ್ಮಲ್ಲೆ ಮೂರು ಜನ ಸಿಗತಿವಿ."

"ಮೂರು ಜನ ಯಾರಿದ್ದರ್ಲ?"

"ಕಾಳದೊಡಪ್ಪನಿಗೆ ತಲೆ ಕೂದಲಿಲ್ಲ, ಅದೂ ಹ್ಯಾಂಡಿಕ್ಯಾಪೆ. ಸೀರಚಿಗಪ್ಪನಿಗೆ ಟೋಟಲ್ಲಿ ನಲವತ್ತ ಕೂದ್ಲಿರಬವುದು. ಅವುನೂ ಹ್ಯಾಂಡಿಕ್ಯಾಪ್. ಇನ್ನ ಕುಡುದಾಗ ಬಿದ್ದು ನನ್ನಲ್ಲೂ ಕೆಲವು ಮಾರ್ಕವೆ. ನಾನು ಅದ್ಕೆ ಜಮಾವ್ವೊಟು. ಅಂಗೆ ನೋಡಿದ್ರೆ ದ್ಯಾವೇಗೌಡ್ರು, ಕುಮಾರಸ್ವಾಮಿನೂ ಹ್ಯಾಂಡಿಕ್ಯಾಪೆ ಕಣಕ್ಕ."

"ಅವುರಿಗೇನಾಗ್ಯದ್ಲ?"

"ದ್ಯಾವೇಗೌಡ್ರು ಒಂದು ಕಾಲದಲ್ಲಿ ಯರಡು ಬಾಚಣಿಗೆ ಇಟಗಂಡಿದ್ರಂತೆ. ಇವತ್ತು ಅವರ ಪರಿಸ್ಥಿತಿ ಏನಾಗ್ಯದೆ? ಅಂಗೆ ಕುಮಾರಣ್ಣನಿಗೆ ಬೈ ಪಾಸಾಗ್ಯದೆ. ಅಂಗಾಗಿ ಅಂಗವಿಕಲರ ಸಮಾವೇಶ ಮಾಡಿ ಓಟು ಕೇಳ್ಯವುರೆ."

"ಅಂಥೋರ ಕರದು ಊಟಕೊಟ್ಟು ಸಭೆ ಮಾಡ್ತರೆ ಅಂದ್ರೆ ದ್ಯಾವೇಗೌಡ ದೊಡ್ಡಮನ್ಸ ಕಂಡ್ಳ."

"ನಾನು ಇಲ್ಲ ಅನ್ನಲಿಲ್ಲ ದೊಡಪ್ಪ, ಆದ್ರೆ ಓಟು ಕೇಳಿದಾಗ ನೀವು ಸಣ್ಣ ಮನುಷ್ಯರಾಯ್ತಿರಿ. ನಿಮ್ಮ ಅಂಗವಿಕಲತೆನ ಓಟಾಗಿ ಪರಿವರ್ತನೆ ಮಾಡೊ ಮನಸ್ಸೇ ನೀಚತನದ್ದು. ಅದೇನಾರ ಆಗ್ಲಿ, ಅಂತೂ ಜೆ.ಡಿ.ಎಸ್ ಪಾರ್ಟಿ ಅಕೌಂಟಿಗೆ ಥರ್ಟಿಫೈವ್ ಲಕ್ಷ ಓಟು ಡ್ರಾ ಮಾಡಿದಷ್ಟು ಈಜಿಯಾಗಿ ಬಿದ್ದೊ ದೊಡಪ್ಪ"

"ಬೀಳ್ಳಿ ಬುಡ್ಳ."

"!?" ●


...ಖಾಸಗಿ, ಸಾರ್ವಜನಿಕ ಎಂಬ ಪ್ರಜ್ಞೆ ಇಲ್ಲವಾದಾಗ

ಇದನ್ನು ನೆನೆದರೇ ಭಯವಾಗುತ್ತದೆ ಹಾಗೂ ನಾಚಿಕೆಯಾಗುತ್ತದೆ. ಇದು ಈ ಲೋಕದ ಮಹಾ ಶಕ್ತಿವಂತ ...ಶ. ವಿಶಾಲ ದೇಶ, ಅಪಾರ ಪ್ರಕೃತಿ ಸಂಪತ್ತು ಇದೆ. ಜಗತ್ತಿನ ಎಲ್ಲ ಪ್ರತಿಭಾವಂತರಿಗೂ ಇಲ್ಲಿ ಸ್ವಾಗತವಿದೆ. ಇದು ...ಮೆರಿಕಾ. ಮಾನವ ಇತಿಹಾಸದಲ್ಲಿ ಯಾವ ನಾಗರಿಕತೆಯೂ ಅಮೆರಿಕದಷ್ಟು ಶ್ರೀಮಂತವೂ ಸಂಕೀರ್ಣವೂ ...ಯುತವೂ ಆಗಿರಲಿಲ್ಲ. ಇಲ್ಲಿ ಎಲ್ಲ ಬಗೆಯ ಜನಕ್ಕೆ ಕೆಲಸವಿದೆ. ಎಲ್ಲ ಕಲೆಗೆ, ಕುಶಲತೆಗೆ, ವಿಜ್ಞಾನಕ್ಕೆ ...ವಕಾಶವಿದೆ. ಸಮಾನತೆ, ನ್ಯಾಯವಂತಿಕೆ–ಎಲ್ಲ ಇವೆ. ಇಲ್ಲಿ ಯಾವ ಹೆಣ್ಣನ್ನಾಗಲಿ, ಕಪ್ಪು ವ್ಯಕ್ತಿಯನ್ನಾಗಲಿ, ...ಡವನನ್ನಾಗಲಿ, ದಲಿತನನ್ನಾಗಲಿ ಅವಮಾನಿಸಲಾಗುವುದಿಲ್ಲ.

ಇಂಥ ಒಂದು ದೇಶದ ಅಧ್ಯಕ್ಷ ಈಗ ಜಗತ್ತಿನ ಚಕ್ರವರ್ತಿ ಇದ್ದಂತೆ. ಅವನ ಕೆಟ್ಟ ಕೆಲಸ ಇಡೀ ...ಗತ್ತನ್ನು ವಿಸ್ಮಯಗೊಳಿಸುತ್ತದೆ. ಆತನಿಗಾದ ಅವಮಾನ ಎಲ್ಲ ಮನುಷ್ಯರಿಗಾದ ಅವಮಾನದಂತೆ ...ಸುತ್ತದೆ.

ಅಧ್ಯಕ್ಷ ಕ್ಲಿಂಟನ್ ಅಮೆರಿಕಾದ ಅಧ್ಯಕ್ಷನಾದಾಗ ನಲವತ್ತೈದು ವರ್ಷದವನು. ಚಿಕ್ಕಂದಿನಿಂದಲೇ ...ಧ್ಯಕ್ಷನಾಗಬೇಕೆಂಬ ಕನಸು ಕಂಡು ಆ ಕನಸನ್ನು ನಿಜವಾಗಿಸಿಕೊಳ್ಳಲು ಸದಾ ಪ್ರಯತ್ನಿಸಿದ. ತಂತ್ರ, ...ಹ, ಮುತ್ಸದ್ದಿತನ ಎಲ್ಲವನ್ನೂ ಕರಗತ ಮಾಡಿಕೊಂಡ. ಹಾಗೆಯೇ ಎಲ್ಲ ಆಸೆಗಳನ್ನು ಈಡೇರಿಸಿಕೊಳ್ಳುತ್ತ ...ಯೋದಂತೆ ವಿಚಿತ್ರ ರೀತಿಯ ಕಾಮದ ದಾಹ ಬೆಳೆಸಿಕೊಂಡ.

ಈತ ಅಧ್ಯಕ್ಷನಾದೊಡನೆ ಪೌಲಾ ಜೋನ್ಸ್ ಎಂಬ ಹೆಣ್ಣುಮಗಳು, "ಈತ ನನ್ನನ್ನು ಕೆಡಿಸಲು ...ಂದವನು, ಇವನನ್ನು ನೀವು ಅಧ್ಯಕ್ಷನನ್ನಾಗಿಸಿದ್ದು ಸರಿಯೆ?" ಎಂದು ಅನೇಕ ಸಾಕ್ಷ್ಯಗಳೊಂದಿಗೆ ...ಳಿಕೊಂಡಿದಳು. ಆಮೇಲೆ ಇನ್ನೊಬ್ಬಳು, ಆಮೇಲೆ ಮತ್ತೊಬ್ಬಳು. ಈಗ ಮೋನಿಕಾ ಲೆವಿನ್‌ಸ್ಕಿ ...ಂಬ ಹುಡುಗಿ ತಾನು ಕ್ಲಿಂಟನ್‌ನ ಪ್ರೇಯಸಿಯೆಂದೂ ಆತ ಸಂಭೋಗ ಮಾಡದೆ ಅಸಹಜ ...ರೀತಿಯಲ್ಲಿ ಪ್ರೇಮಿಸಿದನೆಂದೂ ಗೆಳತಿಯೊಬ್ಬಳೊಂದಿಗೆ ಹೇಳಿದ್ದು ರೆಕಾರ್ಡ್ ಆಗಿ ಕ್ಲಿಂಟನ್ ಸಿಕ್ಕಿಹಾಕಿಕೊಂಡಿದ್ದಾನೆ. ಈತ ಈ ಆಪಾದನೆಗೆ ಉತ್ತರ ಕೊಡಬೇಕಾಗಿದೆ. ಈ ಬಗ್ಗೆ ಪತ್ರಕರ್ತರು ಬಿಡಿಸಿಬಿಡಿಸಿ ಕೇಳುತ್ತಿದ್ದಾರೆ. ಅಮೆರಿಕನ್ ಪತ್ರಿಕೆಗಳು, ಟಿವಿ ಎಲ್ಲವೂ ದೊಡ್ಡ ಸುದ್ದಿ ಎನ್ನುವಂತೆ ಪ್ರಸಾರ ಮಾಡುತ್ತಿವೆ. ಈ ಮಧ್ಯೆ ಅಮೆರಿಕಾ ಶ್ರೀಮಂತವಾಗುತ್ತಲೇ ಇದೆ. ಕ್ಲಿಂಟನ್‌ನನ್ನು ಜನ ಮೆಚ್ಚುತ್ತಲೇ ಇದ್ದಾರೆ. ಕ್ಲಿಂಟನ್‌ನ ಪ್ರೇಮಪ್ರಕರಣಗಳು ಬಯಲಾದಂತೆಲ್ಲ ಆತನ 'ಗಣ್ಯ'ತೆ ಹೆಚ್ಚಿ ಅವನಿಗೆ ನೊಬೆಲ್ ಬಹುಮಾನ ಕೊಡಬೇಕೆಂದು ಕೆಲವರು ವಾದಿಸುತ್ತಿದ್ದಾರೆ.





ಇದೆಲ್ಲ ಏನು? ಪ್ರೇಮದಲ್ಲಿ ಯಾವುದು ಸಹಜ, ಯಾವುದು ಅಸಹಜ; ಯಾವುದನ್ನು ವೇದಿಕೆಯಿಂದ ಮಾತಾಡಬಹುದು ಯಾವುದು ಮಾತಾಡಿದೊಡನೆ ಅಸಹ್ಯವೆನ್ನಿಸುತ್ತದೆ? ಸಂಭೋಗ ಕೂಡ ವರ್ಣಿಸಿದರೆ ಒಂದೇ ವಾಕ್ಯದಲ್ಲಿ ಮುಗಿಯುತ್ತದೆ. ಪ್ರೇಮ ಎನ್ನುವುದು ಸ್ಪರ್ಶ, ಗಂಧ, ಶಬ್ದ ಇತ್ಯಾದಿ ಎಲ್ಲವೂ ಆಗಿರುತ್ತದೆ; ನೆನಪು, ಆಶೆ, ಕಲ್ಪನೆ ಸೇರಿಕೊಂಡಿರುವುದರಿಂದಲೇ ಇದೊಂದು ನಿಗೂಢ ವಿಸ್ಮಯ ಕೂಡ.

ಅಮೆರಿಕಾದ ಸಂಪತ್ತು, ಸಂಸ್ಕೃತಿ ಅತ್ಯುನ್ನತ ಮಟ್ಟ ತಲುಪಿರುವಾಗಲೇ ಅಲ್ಲಿಯ ಪ್ರಜ್ಞೆ ರಸಾತಳ ತಲುಪಿರುವುದು ವಿಚಿತ್ರ: ಅಲ್ಲಿಯ ಪ್ರಚಾರ ಮತ್ತು ತಂತ್ರವನ್ನು ಹೊಲಸು ಎಂಬ ಪದದಲ್ಲಿ ಮಾತ್ರ ವರ್ಣಿಸಬಹುದು. ಮೇಲಿನ ಪೌಲಾ ಜೋನ್ಸ್, ಮೋನಿಕಾ ಲೆವಿನ್‌ಸ್ಕಿಯ ಕತೆಗೆ ಇನ್ನೊಂದು ಆಯಾಮವಿದೆ. ಲೆವಿನ್‌ಸ್ಕಿ ಕ್ಲಿಂಟನ್‌ನನ್ನು ಪ್ರೇಮದಿಂದ ಖುಷಿಗೊಳಿಸಿದ್ದು ನಿಜ; ಹಾಗೆಯೇ ಆತ ಅಧ್ಯಕ್ಷನಾದ್ದರಿಂದ ಅವನನ್ನು ಪ್ರೇಮಿಸಿದ ಬಗ್ಗೆ ಪುಸ್ತಕ ಬರೆದು ಲಕ್ಷಾಂತರ ಪ್ರತಿ ಮಾರಿ ಹಣ ಮಾಡಿಕೊಳ್ಳಬೇಕೆಂಬ ಗುಟ್ಟಾದ ಆಶೆ ಇಟ್ಟುಕೊಂಡಿರುವುದು ನಿಜ. ವಾಟರ್‌ಗೇಟ್ ಹಗರಣದಲ್ಲಿ ಸಿಕ್ಕಿಹಾಕಿಕೊಂಡ ಕೇಡಿಗಳು, ಹೆಂಡತಿಯನ್ನು ಕೊಂದ ಆಪಾದನೆಗೊಳಗಾದ ಓ.ಜೆ. ಸಿಂಪ್ಸನ್ ತಮ್ಮ ಕ್ರಿಮಿನಲ್ ಚಟುವಟಿಕೆಯ ಬಗ್ಗೆ ಭಾಷಣ ಕೊಟ್ಟರೆ ಟಿಕೆಟ್ ಕೊಂಡುಕೊಂಡು ಭಾಷಣ ಕೇಳುವ ದೇಶದಲ್ಲಿ ಇನ್ನೇನೇನು ಆಗಬಹುದು?

ಮನುಷ್ಯ ಎತ್ತರ ಹೋದಷ್ಟೂ ಜೋರಾಗಿ ಕೆಳಗೆ ಬೀಳುತ್ತಾನೆ. ● ಫೆಬ್ರವರಿ 18, 1998

ಎಲ್ಲ ಶ್ರೀಮಾನ್ 420 ಗಳೆ!

ಹೆಸರು ಹೇಳಬೇಕಿಲ್ಲ, ಸಾಹುಕಾರರು ಅಂದರೆ ಸಾಕು. ಕುರ್ತೋಟು ಆ ಉದ್ಯಮಿಯಂದೇ ಎಲ್ಲರಿಗೂ ತಿಳಿಯುತ್ತಿತ್ತು, ಅಷ್ಟು ಖ್ಯಾತಿ ಅವರ ಸಾಹುಕಾರಿಕೆ. ಅವರಿಗೂ ನನ್ನ ಮಾವನವರಿಗೂ ಬಳಕೆ ಇದ್ದಿತು. ಒಂದು ಸಲ ಅವರು 'ಗೌಡ್ರ ನಿಮ್ಮ ಸಹಾಯ ಬೇಕಿತ್ತಲ್ಲ' ಎಂದರಂತೆ. ಇವರಿಗೆ ಏನೋ ಅಳುಕು. ಸಾಹುಕಾರರು ಸಹಾಯ ಕೇಳುತ್ತಾರೆ ಎಂದರೆ ಏನು ಕೇಳಿಬಿಡುತ್ತಾರೋ ಎಂಬ ಅಳುಕು. 'ನನ್ನ ಕೈಲಿ ಆಗುವುದಾದರೆ ಮಾಡುತ್ತೇನೆ. ಅದೇನು ಹೇಳಿ ಸಾಹುಕಾರರೆ' ಎಂದರಂತೆ. 'ಅಂತಹ ತಲೆ ಹೋಗುವ ವಿಷಯ ಏನೂ ಅಲ್ಲ ಗೌಡರೆ, ನೀವು ಸುಲಭವಾಗಿ ಮಾಡಬಹುದಂತಹದ್ದು' ಅಂದರಂತೆ ಅವರು. ಇವರಿಗೆ ಇನ್ನೂ ಪೀಕಲಾಟಕ್ಕಿಟ್ಟುಕೊಂಡಿತಂತೆ. 'ಅದೇನು ಅಂತ ಮೊದಲು ಹೇಳಿ ಸಾಹುಕಾರರೆ' ಎಂದರಂತೆ ಇವರು. 'ಇನ್‌ಕಂಟ್ಯಾಕ್ಸ್ ರಿಟರ್ನ್ಸ್ ಫೈಲ್ ಮಾಡಬೇಕಿತ್ತು' ಅಂತ ರಾಗ ಎಳೆದರಂತೆ ಅವರು. 'ಮಾಡಿ ಅದಕ್ಕೇನು ಈಗ' ಎಂದು ಸರಾಗವಾಗಿ ಹೇಳಿದರಂತೆ ಇವರು. 'ಮಾಡೇ ಬಿಡುತ್ತಿದ್ದೆ. ಅಂದರೆ ನಿಮಗೆ ತಿಳಿದೇ ಇದೆಯಲ್ಲ, ಹಾಳು ಇನ್‌ಕಂಟ್ಯಾಕ್ಸ್‌ನವರ ಕಾಟ' ಎಂದರಂತೆ ಅವರು. ಇವರಿಗೊ ತೆರಿಗೆ ಕಟ್ಟುವಷ್ಟು ಆದಾಯ ಇರಲಿಲ್ಲ, ಇನ್ನು ತೆರಿಗೆಯವರ ಕಾಟ ತಿಳಿಯುವುದಾದರೂ ಹೇಗೆ? ಆದರೂ 'ಹೂಂ. ತಿಳಿದೇ ಇದೆಯಲ್ಲ' ಅಂದರಂತೆ. 'ಅದಕ್ಕೇ ನಿಮ್ಮಿಂದ ಒಂದಷ್ಟು ಸಾಲ ತೆಗೊಂಡಿದೀನಿ ಅಂತ ತೋರುಸ್ತೀನಿ ಅಷ್ಟೇಯ' ಅಂದರಂತೆ ಅವರು. ಹಣಾ ಕೊಡುವ ಹಾಗಿಲ್ಲ, ಆದರೂ ಹಣ ತೆಗೆದುಕೊಂಡ ಹಾಗೆ ತೋರಿಸುತ್ತಾರಂತೆ! ಸಾಹುಕಾರರಿಗೇ ಸಾಲ ನೀಡಿದ ಗೌಡ ಎಂಬ ಹೆಸರು ಕಾಗದ ಮೇಲಾದರೂ ಇರುತ್ತದಲ್ಲ ಎಂಬ ಒಂದು ರೀತಿಯ ಗತ್ತು ಮುಖದಲ್ಲಿ ಮೂಡಿದ ಹಾಗೆ ಆಯಿತಂತೆ. ಜುಬ್ಬದ ಖಾಲಿ ಜೇಬಿನಲ್ಲೂ ಹಣ ಹರಿದಾಡಿದ ಅನುಭವವೂ ಆಯಿತಂತೆ ಮಾವನವರಿಗೆ. 'ಧಾರಾಳವಾಗಿ ತೋರಿಸಿ ಸಾಹುಕಾರರೆ ಅದಕ್ಕೇನು' ಅಂದರಂತೆ.

ಒಂದೆರಡು ವರ್ಷ ಕಳೆದರಂತೆ. ಸಾಲದ ವಿಷಯ ಮರೆತೇಹೋಗಿತ್ತಂತೆ.


'ಪೋಸ್ಟ್ ಪೋಸ್ಟ್' ಅಂಚೆಯವನ ಕೂಗು.

ಮಾವನವರು ಹೋಗಿ ತೆಗೆದುಕೊಂಡರಂತೆ. ಒಡೆದು ನೋಡಿದರೆ ಆದಾಯ ತೆರಿಗೆ ಮಾವ ಸಾಹುಕಾರರಿಗೆ ನೀಡಿದ ಸಾಲ, ಆದಾಯದ ಮೂಲ ಇತ್ಯಾದಿ ಇತ್ಯಾದಿಗಳ ಕುರಿತು ಆಟಕಾಯಿಸಿದ್ದನಂತೆ! ಗಾಬರಿ ಬಿದ್ದ ಇವರು ಸಾಹುಕಾರರಿಗೆ ಫೋನು ಹಚ್ಚಿದರಂತೆ. ಏನು ಸಾಹುಕಾರರೆ ಹೀಗಾಗಿದೆಯಲ್ಲ ಎಂದು ಪ್ರವರ ಒಪ್ಪಿಸಿದರಂತೆ. ಸಾವಧಾನವಾಗಿ ಎಲ್ಲವನ್ನೂ ಕೇಳಿಸಿಕೊಂಡ ಸಾಹುಕಾರರು 'ನನ್ನದೇನು ತಪ್ಪಿದೆ ಗೌಡ್ರೆ ನೀವೇ ತೋರಿಸಿಕೊಳ್ಳಿ ಅಂತ ಹೇಳಿದ್ದರಲ್ಲಾ' ಅಂದರಂತೆ!

ಕಪ್ಪು ಹಣ ಅಂದರೆ ಏನು? ಹೇಗೆ ಉತ್ಪತ್ತಿಯಾಗುತ್ತೆ ಎಂಬುದು ಮನದಟ್ಟಾಗಿರಬೇಕು ಮಾವನವರಿಗೆ!

ಇದು ನಡೆದದ್ದು ಕಳೆದ ಎಪ್ಪತ್ತನೆ ದಶಕದ ಪೂರ್ವಾರ್ಧದಲ್ಲಿ.

*****



ಕಾವೇರಿ ನದಿ ನೀರಿನ ವಿವಾದ ವಾರ್ಷಿಕ ಕ್ರಿಯೆ ಆಗಿದೆ. ತಮಿಳುನಾಡಿನವರು 'ನೀರು ಬಿಡಿ' ಎಂದು ತಾಕೀತು ಮಾಡುವುದು, ನಾವು 'ನೀರೇ ಇಲ್ಲ ಎಲ್ಲಿಂದ ಬಿಡೋದು' ಎನ್ನುವುದು; ಅವರು 'ಕರ್ನಾಟಕದವರು ನೀರೇ ಬಿಡುತ್ತಿಲ್ಲ' ಅಂತ ಸುಪ್ರೀಂಕೋರ್ಟಿಗೆ ದೂರು ಒಯ್ಯುವುದು, ಅದು ಇಂತಿಷ್ಟು ನೀರು ಬಿಡಬೇಕು ಅನ್ನೋ ಆದೇಶ ನೀಡುವುದು ನಡೆಯುತ್ತಲೇ ಇರುತ್ತದೆ. ಇದೆಲ್ಲವನ್ನೂ ನೋಡಿದ್ದ ನನಗೆ ಅಲ್ಲಿನ ರೈತರ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳನ್ನು ನೋಡುವ ಅವಕಾಶ ಒದಗಿ ಬಂದಿತು.

ತಂಜಾವೂರು ಕಾವೇರಿ ನದಿ ಪಾತ್ರದಲ್ಲಿರುವ ಜಿಲ್ಲೆ. ಅಲ್ಲಿನವರು ದೈವಭಕ್ತರು ಇರಬೇಕು. ವಾಸದ ಮನೆಗಳಿಗಿಂತ ದೇವಸ್ಥಾನಗಳ ಸಂಖ್ಯೆ ಹೆಚ್ಚು ಇದೆ ಎಂಬ ಭ್ರಮೆ ಮೂಡಿಸುತ್ತಿತ್ತು, ದೇವರ ಹೆಸರಿನಲ್ಲಿ, ಜಮೀನ್ದಾರರ ಹೆಸರಲ್ಲಿ ನೂರಾರು ಎಕರೆ ತರಿ ಜಮೀನು ಇದ್ದಿತಂತೆ. ಭೂಸುಧಾರಣೆ ಕಾನೂನು ಬಂದಿತು. ಉಳುವವನೇ ಭೂಮಿಯ ಒಡೆಯ ಎಂದು ಸಾರಿತು. ದೇವರು ಮತ್ತು ಜಮೀನ್ದಾರರು ಈ ಗುಂಪಿನವರಲ್ಲ, ಭೂಮಿ ಅವರ ಕೈತಪ್ಪಿ ಹೋಗಬೇಕಿತ್ತು, ಆದರೆ ಇಂತಹದ್ದು ಬರುತ್ತದೆ ಎಂದು ದೇವರಿಗೆ ತಿಳಿಯದೇ ಇರಬಹುದು ದೇವತಾಕಾರ್ಯಗಳನ್ನು ನಿರ್ವಿಘ್ನವಾಗಿ ನಡೆಸಿಕೊಂಡು ಬಂದ ಪಾರುಪತ್ಯೇಗಾರರು ಕಲಿಗಾಲದಲ್ಲಿ ಇಂತಹ ಕಾನೂನು ಬಂದು ಅನಾಹುತ ಸಂಭವಿಸಬಹುದೆಂದು ಮೊದಲೇ ಊಹಿಸಿದ್ದರು. ದೇವರ ಹೆಸರಿನಲ್ಲಿ ಟ್ರಸ್ಟ್ ರಚಿಸಿ ಗೇಣಿದಾರರಿಗೆ ಸಲ್ಲಬೇಕಾಗಿದ್ದ ಭೂಮಿಯನ್ನು ದೇವರಿಗೇ ಉಳಿಸಿ ಕೃತಾರ್ಥರಾದರು! ಇನ್ನು ಜಮೀನ್ದಾರರು ದಯಾಮಯರಾದರು. ತಮ್ಮ ತಮ್ಮ ಮನೆಯ ಆಳುಕಾಳುಗಳ ಹೆಸರಿಗೆ ಭೂಮಿ ದಾಖಲಿಸಿದರು! ಇದು ಯಾವ ಭರದಲ್ಲಿ ನಡೆಯಿತಂತೆ ಎಂದರೆ ರಾಷ್ಟ್ರದ ಅತ್ಯುನ್ನತ ಸ್ಥಾನವನ್ನಲಂಕರಿಸಿದ್ದ ಮಹಾನುಭಾವರೊಬ್ಬರು ತಮ್ಮ ಮನೆಯ ಅಡಿಗೆಯವಳ ಹೆಸರಿಗೂ, ಅಷ್ಟೇ ಏಕೆ ತಮ್ಮ ಮನೆಯ ನಾಯಿಯ ಹೆಸರಿಗೂ ಜಮೀನು ಬರೆದರು ಎಂದು ಹೇಳಲಾಗುತ್ತದೆ. ಪುಣ್ಯಾತ್ಮರು! ಇವರಿಗೆಲ್ಲ ಕಾನೂನು ರೀತಿ ಭೂಮಿ ಹಂಚಿಕೆ ಆಗಿದೆ, ಕಾಗದದ ಮೇಲೆ! ಸಂಬಂಧಿಸಿದ ದಾಖಲಾತಿಗಳೆಲ್ಲ ಜತನದಿಂದ ಜಮೀನ್ದಾರರ ತಿಜೋರಿ ಸೇರಿವೆಯಂತೆ!

*****

ಭಾರತೀಯ ಜನತಾ ಪಕ್ಷದ ನಿತಿನ್ ಗಡ್ಕರಿ 'ಪೂರ್ತಿ' ಕಂಪನಿ ಪೂರ್ತಿ ಬೇನಾಮಿ ಹೊಲಸೇ ತುಂಬಿದೆ ಎಂಬುದನ್ನು ತಿಳಿದಾಗ ಇವೆಲ್ಲ ನೆನಪಾದವು. ಆ ಕಂಪನಿಯ ವ್ಯವಹಾರವೇ ಮಜಬೂತಾಗಿದೆ. ಅದರಲ್ಲಿ ಒಬ್ಬ ಕೋಟಿ ಕೋಟಿ ಹಣ ಹೂಡಿದ್ದಾನೆ. ಕಂಪನಿಯ ನಿರ್ದೇಶಕನೂ ಆಗಿದ್ದಾನೆ. ಆದರೂ ಅದೇ ಕಂಪನಿಯ ಡ್ರೈವರ್ ಕೆಲಸ ಮಾತ್ರ ಬಿಟ್ಟಿಲ್ಲ!

ಖುಷ್‌ವಂತ್ ಸಿಂಗ್ ಅವರು ತಮ್ಮ ಅನುಭವವನ್ನು ಒಂದು ಕಡೆ ದಾಖಲಿಸಿದ್ದಾರೆ. ಅವರು ಒಂದು ಸಾರಿ ಟ್ಯಾಕ್ಸಿಯಲ್ಲಿ ಹೋಗುತ್ತಿದ್ದರಂತೆ. ಅದರ ಡ್ರೈವರ್ ಸಿಖ್ ಜನಾಂಗದವನಂತೆ. ಅಂತಹವರ ಜೊತೆ ಮಾತನಾಡುವುದು ಅವರಿಗೆ ಖುಷಿ ಕೊಡುವ ಸಂಗತಿ. ಅದೂ ಇದು ಮಾತನಾಡುತ್ತಾ ಇರುವಾಗ ಟಾಟಾ ವಿಷಯ ಬಂತಂತೆ. ಅವನು 'ನಾನು ಟಾಟಾ ಆಗಿದ್ದರೆ ಅವನಿಗಿಂತ ಹೆಚ್ಚಿಗೆ ಸಂಪಾದಿಸುತ್ತಿದ್ದೆ' ಎಂದನಂತೆ. ಖುಷ್‌ವಂತ್‌ಗೆ ಈ ಮಾತು ಮೋಜು ತರಿಸಿತಂತೆ. 'ಅದು ಹೇಗೆ' ಎಂದು ಕೇಳಿದರಂತೆ. ಅದಕ್ಕೆ ಆತ 'ಟಾಟಾ ಆಸ್ತಿಯಿಂದ ಬರುವುದು ಬಂದೇಬರುತ್ತೆ, ಅದರ ಜೊತೆಗೆ ನಾನು ಟ್ಯಾಕ್ಸಿನೂ ಓಡಿಸ್ತೀನಿ' ಅಂದನಂತೆ!

'ಪೂರ್ತಿ' ಚಾಲಕನೂ ಈ ಜಾಯಮಾನದವನೇ ಇರಬೇಕು!

ಹಣ ಹೂಡಿದ್ದರ ಅರಿವಿಲ್ಲ, ಡೈರೆಕ್ಟರ್‌ಗಿರಿ ಸವಿದಿಲ್ಲ, ದಾಖಲಾತಿಯ ಡೈರೆಕ್ಟರೆ ಇವನು!

ಅಣಕ



• ಎಚ್.ಎಲ್.ಕೇಶವಮೂರ್ತಿ

ಇಂತಹವನೇ ಇನ್ನೊಬ್ಬ ಗಡ್ಕರಿ ಸಾಹೇಬನ ಜ್ಯೋತಿ ವೃತ್ತಿಯೇ ಅದು. ಬೇರೆ ವೃತ್ತಿ ಅರಿಯ. ಜ್ಯೋತಿಷಿ ಎಂ ಅವನನ್ನು ಗುರುತಿಸುತ್ತಿದ್ದುದು. ಹೆಂಡತಿ, ಮಕ್ಕಳು ತಿಳಿದ ಇದನ್ನೆ. ಗಿರಾಕಿ ಸಿಕ್ಕಿದರೆ ಜೀವನ. ಇಲ್ಲದಿದ್ದರೆ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ. ಇವನೂ ಡೈರೆಕ್ಟರ್!

ಎಂತಹ ಡೈರೆಕ್ಟರ್‌ಗಳು!

ಇವರು ಹಾಳಾಗಲಿ. ಹಣ ಹೂಡಿರುವ ವಾಣಿ ಕಂಪನಿಗಳು ಹಣದ ವ್ಯವಹಾರವೇ ಅವುಗಳ ಕಸುಬ ಅವಾದರೂ ಸರಿಯಾಗಿ ಕಾರ್ಯನಿರ್ವಹಿಸಬೇಕಲ್ಲ, ಎಳ ತಡಕುತ್ತಾ ಹೋದರೆ ಅವೂ ನಾಪತ್ತೆ!

ಎಲ್ಲರೂ ಶ್ರೀಮಾನ್ 420 ಗಳು!

ಕಂಪನಿ ಸ್ಥಾಪಿಸಿ ನಡೆಸಬೇಕಾದರೆ ನೂರೆಂ ಅಡಚಣೆಗಳನ್ನು ದಾಟಿ ಮುಂದುವರಿಯಬೇಕ ಅಂತಹದ್ದರಲ್ಲಿ ಎಲ್ಲಿಯೂ, ಯಾರಿಗೂ ಈ ಲೋಪ ಕಣ್ ಬೀಳಲಿಲ್ಲವೆ? ಈ ಪ್ರಶ್ನೆ ಸಹಜ. ಆದರೆ ಎಲ್ಲ ಕಾರ್ಪೊರೇ ಕಂಪನಿಗಳ ವ್ಯವಹಾರವೂ ಹೀಗೆ ನಡೆಯುವುದಂತೆ!

ಕಾನೂನು ಒಂದು ಬದಿಗಿರಲಿ. ಪುಂಖಾನುಪುಂಖವಾ ರಾಜಧರ್ಮ, ನೈತಿಕತೆ ಎಂದು ಬೊಬ್ಬೆ ಹೊಡೆಯು ರಾಷ್ಟ್ರೀಯ ಸ್ವಯಂಸೇವಕ ಸಂಘವಾದರೂ ಅವ್ಯವಹಾರದತ್ತ ಗಮನ ಹರಿಸಬಾರದೆ? ಬೀಸಬಾರ ಖಡ್ಗವ? ಉರುಳಿಸಬಾರದೆ ಗಡ್ಕರಿ ತಲೆಯ? ಏನ ಮಾಡುತ್ತಿದೆ ಅದು?

'ಪಕ್ಷದ ಆಂತರಿಕ ವಿಚಾರದಲ್ಲಿ ನಾವು ತ ಹಾಕುವುದಿಲ್ಲ' ಎನ್ನುತ್ತಿದೆ!

ಇದು ಆರ್‌ಎಸ್‌ಎಸ್ ನೈತಿಕತೆ!

*****

ಗಡ್ಕರಿ ಹಗರಣ ಬಯಲಾಗಿದೆ.

ಯಾರಿಗೆ ಅತಿ ಸಂತೋಷ ಆಗಿದೆ?

ಕಾಂಗ್ರೆಸ್‌ಗೆ?

ಅಲ್ಲ, ಯಡ್ಯೂರಪ್ಪಗೆ! ಅವರ ಬೆಂಬಲಿಗರಿಗೆ!

ಕಪ್ಪ ಪಡೆದೂ ಅಧಿಕಾರ ಸ್ಥಾನ ನೀಡಲಿಲ್ಲ ಎಂದ ಅಲ್ಲ ತನಗೆ ಬಿದ್ದಿದ್ದಕ್ಕಿಂತ ಹೆಚ್ಚು ಉಗಿತ ಅವನಿಗೆ ಬೀಳುತ್ತಿ ಎಂದು!

ಅದೂ ನಿಜವೆ. ಯಡ್ಯೂರಪ್ಪಗೆ ಸಿಕ್ಕಿದ್ದು ರಾಜ್ಯಮಟ್ಟ ಉಗಿತ. ಗಡ್ಕರಿಗೆ ರಾಷ್ಟ್ರಮಟ್ಟದ ಉಗಿತ!

ಮಲ್ಯ ಮತ್ತು ಕಾಮತರ ನೀಚ ಬುದ್ಧಿ

ನವೆಂಬರ್ 7 ರ 'ಕಂಡಹಾಗೆ'ಯಲ್ಲಿ ಗೌರಿಯವರು ಮಲ್ಯನ ಹುಚ್ಚಾಟ ಹಾಗು ಜನರ ಪೇಚಾಟವನ್ನು ಸರಿಯಾಗಿ ಬಹಿರಂಗಪಡಿಸಿದ್ದಾರೆ.



ಭಾರತವನ್ನು ಇಂದಿಗೂ ಕೃಷಿ ಪ್ರಧಾನ (ಇವತ್ತು ಅಮಿತಾಬ್ ಬಚ್ಚನ್ ಹಾಗು ಅಮೀರ್ ಖಾನರೂ ಕೃಷಿಕರೆಂದು ಘೋಷಿಸಬಹುದಾದ ದೇಶವಿದು) ಹಾಗು ಬಡವರೇ ತುಂಬಿರುವ ದೇಶವೆಂದು ತಪ್ಪಾಗಿ ವಿಶ್ಲೇಷಿಸಲಾಗುತ್ತಿದೆ. ಆದರೆ ವಾಸ್ತವವಾಗಿ ವಿಶ್ವದ ಪ್ರಮುಖ ಶ್ರೀಮಂತರ ಪಟ್ಟಿಯಲ್ಲಿ ಜಾಗ ಗಿಟ್ಟಿಸುವಂತಹ, ಹಳೆಯ ರಾಜಮಹಾರಾಜರನ್ನೂ ಮೀರಿಸುವ ಅದ್ದೂರಿ ಮದುವೆ ಸಮಾರಂಭಗಳನ್ನು ನಡೆಸುವಂತಹ ಶ್ರೀಮಂತರುಗಳು ಹಾಗು ಒಪ್ಪೊತ್ತಿನ ಊಟಕ್ಕಾಗಿ ಪರದಾಡುವ ಬಡವರು ಎಲ್ಲರೂ ಇರುವಂತಹ ದೇಶವಿದು. ಇಲ್ಲಿನ ಶ್ರೀಮಂತರ ಐಲುಪೈಲುಗಳು, ಐಷಾರಾಮಿ ಜೀವನ ಹಾಗು ದಾರ್ಷ್ಟ್ಯತನಗಳು ಬಹುಶಃ ಸಿರಿವಂತ ದೇಶ ಎನ್ನಿಸಿಕೊಳ್ಳುವ ರಾಷ್ಟ್ರಗಳಲ್ಲೂ ಸಿಗಲಾರವೇನೋ!!? ಇದಕ್ಕೆ ಸಿದ್ಧದ ಮಟ್ಟಿಗೆ ಮಲ್ಯ ಒಂದು ಒಳ್ಳೆಯ ಉದಾಹರಣೆಯಾಗಿ ನಿಲ್ಲುತ್ತಾನೆ.

ಮಲ್ಯನಲ್ಲಿ ಕೊಳೆಯುವಷ್ಟು ದುಡ್ಡಿದೆ. ಆ ದುಡ್ಡಿನ ಮೂಲ ಬತ್ತದೇ ಇರುವ ಹೆಂಡದ ರೂಪದಲ್ಲಿ ಅಕ್ಷಯವಾಗಿದೆ. ಹಣ ಎಷ್ಟಿದ್ದರೇನಂತೆ ಈತನಲ್ಲಿ ಮನುಷ್ಯತ್ವವೆಂಬುದು ಮಾತ್ರ ಅವರೇ ಕಾಳಿನಷ್ಟೂ ಇಲ್ಲ, ಅದು ತನ್ನದೇ ಸಂಸ್ಥೆಯಲ್ಲಿ ದುಡಿಯುವ ನೌಕರರಿಗೆ ಸಂಬಳಕೊಡದೇ ಸತಾಯಿಸುತ್ತಿರುವುದರಿಂದ ಸ್ಪಷ್ಟವಾಗಿದೆ. ಹಳ್ಳಿಗಾದೆಯಂತೆ ಊರಮೇಲೆ ಊರಬಿದ್ದರೆ ತನಗೇನು ಎಂಬ ರೀತಿಯಲ್ಲಿ ತಿರುಗಾಡುವ ಈತ ಇದೀಗ ಬೆಂಗಳೂರ ದೇಗುಲವೊಂದರಲ್ಲಿ 45 ದಿನಗಳ ಸುಂದರಕಾಂಡದ ಪಾರಾಯಣದಲ್ಲಿ ತೊಡಗಿಸಿಕೊಂಡಿದ್ದಾನೆ. ಓರ್ವ ದೊಡ್ಡಮಟ್ಟದ ವ್ಯವಹಾರಸ್ಥನಾಗಿ ಎದುರಾಗಿರುವ ಸಮಸ್ಯೆಯನ್ನು ವ್ಯಾವಹಾರಿಕವಾಗಿ ಬಗೆಹರಿಸುವ ಬಗ್ಗೆ ಚಿಂತಿಸುವ ಬದಲು ದೇವಸ್ಥಾನಗಳಿಗೆ ವ್ರತ ಹರಕೆಯ ಹೆಸರಲ್ಲಿ ಈತ ದುಡ್ಡು ಸುರಿಯುತ್ತಿರುವುದು ವಿಚಿತ್ರವಾಗಿದೆ. ನ್ಯಾಯವಾಗಿ ಕೊಡಬೇಕಾದ ನೌಕರರ ಸಂಬಳದ ಬಗ್ಗೆ ಚೌಕಾಸಿಯ ಮಾತಾಡುವ ಈತ ಒಂದು ತಿಂಗಳ ಹಿಂದೆ 80 ಸಾವಿರ ರೂಪಾಯಿ ಮೌಲ್ಯದ ಚಿನ್ನದ ಮಂಟಪವನ್ನು ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಒಪ್ಪಿಸಿ ಬಂದಿದ್ದ. ಇಂಥವನನ್ನು ಪ್ರಶ್ನಿಸುವವರೇ ಇಲ್ಲವೇ? ಇಂಥವನನ್ನು ಜೈಲಿಗಟ್ಟುವ ಕಾನೂನೂ ಕೂಡ ನಮ್ಮಲ್ಲಿಲ್ಲದಿರುವುದು ಒಂದು ದೌರ್ಭಾಗ್ಯವೇ ಸರಿ.

ಆದೇರೀತಿ ಶ್ರೀಯುತ ಶ್ರೀನಿವಾಸ ಕಾರ್ಕಳರವರು ಎಂ.ವಿ.ಕಾಮತರ ನೀಚಬುದ್ಧಿಯ ಕುರಿತು ಬರೆದಿದ್ದಾರೆ. ಜಿಎಸ್‌ಬಿ ಸಮಾಜ (ಗೌಡ ಸಾರಸ್ವತ ಬ್ರಾಹ್ಮಣರು) ಹೊರಗಿನಿಂದ ಬಂದವರಾದ್ದ ಕಾರಣ ತಮ್ಮದಲ್ಲದ ಸ್ಥಳೀಯ ಪರಿಸರದಲ್ಲಿ ಬದುಕಲು ಕಷ್ಟತನದ ಸ್ವಾಭಿಮಾನಿ ಬದುಕನ್ನೇ ಆರಿಸಿಕೊಂಡು ಮೇಲೆ ಬಂದವರು. ಇಂದಿಗೂ ಕರಾವಳಿ ಜಿಲ್ಲೆಯ ಊರೂರಲ್ಲೂ ದಾರಿ ಬದಿ ಬಜ್ಜಿ ಮಾಡಿ ಮಾರಿ ಬದುಕುವ ಈ ಸಮಾಜದವರಿದ್ದಾರೆ. ಅವರ ಮಕ್ಕಳು ಸಾಫ್ಟ್‌ವೇರ್ ಎಂಜಿನಿಯರ್‌ಗಳಾಗಿರಬಹುದು. ಆದರೆ ದುಡಿದು ಬದುಕುವ ವಿಷಯದ ಛಲದಲ್ಲಿ ಯಾವುದೇ ರಾಜಿಯಿಲ್ಲ. ಪೈಯಂತವರು ಯಾರಿಗೂ ಬೇಡದ ಮಣಿಪಾಲವನ್ನು ಕಟ್ಟಿ ಬೆಳೆಸುವುದರ ಹಿಂದಿದ್ದದ್ದು ಇಂಥದ್ದೇ ಹಟ. ರಾಷ್ಟ್ರ ಕವಿ ಗೋವಿಂದ ಪೈಗಳು, ಹೋರಾಟಗಾರ ಕಾರ್ನಾಡ್ ಸದಾಶಿವರಾಯರು, ದಲಿತರನ್ನು ಮೇಲೆತ್ತಿದ ಕುದ್ಮುಲ್ ರಂಗರಾಯರನ್ನು ಕೊಟ್ಟಂತಹ ಈ ಸಮಾಜಕ್ಕೆ ಈ ಮಲ್ಯ ಹಾಗು ಎಂ.ವಿ.ಕಾಮತರಂತವರು ಒಂದ ಕಪ್ಪುಚುಕ್ಕೆ ಎಂದೆನ್ನಬಹುದು.



ಹೋಂ ಸ್ಟೇ ದಾಳಿಕೋರರ ಕುರಿತು ಮಾಧ್ಯಮದವ ಖಂಡಿಸಿ ಬರೆದದ್ದನ್ನು ಓದಿ ಕಣ್ಣೀರು ಬಂತು ಎನ್ನು ಕಾಮತ್, ಕರಾವಳಿಯ ಪತ್ರಿಕೆಯೊಂದರಲ್ಲಿ ಪ್ರತಿ ರವಿವಾ ಹಿಂದೂತ್ವವಾದಿಗಳ ಪರವಹಿಸಿ ತನ್ನ ಅಂಕಣದ ಮೂಲ ಜನರನ್ನು ಪ್ರಚೋದಿಸುತ್ತಾ ಕರಾವಳಿ ಜಿಲ್ಲೆಯ ಧಾರ್ಮಿ ಸೌಹಾರ್ದ ಹಾಳುಗೆಡುವಲು ತನ್ನದೇ ಆದ ಕಾಣಿಕೆಯನ್ನು ಕೊಡುತ್ತಾ ಬಂದಿದ್ದಾರೆ. ಏಕಪಕ್ಷೀಯವಾಗಿ ಕೇಂದ್ರ ಯುಪಿಎ ಹಗರಣದ ಬಗ್ಗೆ ಕೊರೆಯುವ ಈತ ತ ಕಣ್ಣೆದುರಿಗೇ ಇರುವ ರಾಜ್ಯ ಸರ್ಕಾರದ ಭ್ರಷ್ಟಾಚಾರ ಬಗ್ಗೆ ತಪ್ಪಿಯೂ ಮಾತಾಡುವುದಿಲ್ಲ.

ಕೆಲವು ಅಂಕಣದಲ್ಲಿ ದಲಿತರ ಮೀಸಲಾತಿಯನ್ನ ಖುದ್ದಾಗಿ ವಿರೋಧಿಸುತ್ತಾ ಮತ್ತೊಂದರಲ್ಲಿ ಮೀಸಲಾ ಹೆಸರಲ್ಲಿ ಕಾಂಗ್ರೆಸ್ ದಲಿತರಿಗೆ ಮೋಸ ಮಾಡಿದ ಅಂಬೇಡ್ಕರರಿಗೆ ಮೋಸ ಮಾಡಿದೆ ಎಂದೆಲ್ಲ ಹಲುಬು ಕಾಮತರ ನೀಚಬುದ್ದಿ ಇಲ್ಲಿನವರಿಗೆ ಹೊಸದೇನೂ ಅಲ

- ಓದುಗ, ಪುತ್ತೂರು

ಬಕರಾಗಳು ಸಾರ್ ಬಕರಾಗಳು

ಕೆ.ಫಣಿರಾಜರ 'ಡಬಲ್‌ಗಳ ಕಥೆ ವ್ಯಥೆ' ಚೆನ್ನಾಗಿತ್ತು ತೆರೆಯ ಹಿಂದೆ ಮತ್ತೊಬ್ಬನಿಗಾಗಿ ತಮ್ಮ ಅಸ್ತಿತ್ವವನ್ನೆ ಮರೆಯಿಸಿಕೊಂಡು ಹೆಣಗಾಡುವ ಡಬ್ಬಲ್‌ಗಳು ತಮ ಪ್ರಾಣವನ್ನೆ ಒತ್ತೆ ಇಟ್ಟು ಹೀರೋಗಾಗಿ ಇಮೇಜನ್ನು ಹಾಗ ಚಪ್ಪಾಳೆಯನ್ನು ದೊರಕಿಸಿಕೊಡುತ್ತಾರೆ. ಇಂತಹ ಅಸ್ತಿತ್ವವಿರ ಛಾಯಾಪ್ರತಿಭೆಗಳು ಕೇವಲ ಢಿಶುಂ ಢಿಶುಂ ಹಾಗ ಥ್ರಿಲ್ಲಿಂಗ್ ಸಾಹಸಗಳಲ್ಲಷ್ಟೇ ಕಾಣಿಸಿಕೊಳ್ಳುವುದಲ್ಲ, ತಮ ದನಿಯ ಮೂಲಕವೇ ಮುಖ್ಯ ಪಾತ್ರದ ಖದರನ್ನೆ ಬದಲಿಸಬಲ್ಲರು. ಇದಕ್ಕೆ ಉದಾಹರಣೆ 'ಆಪ್ತಮಿತ್ರ' ಚಿತ್ರದ ನಾಗವಲ್ಲಿ ಪಾತ್ರ. ಸೌಂದರ್ಯ ಅದ್ಭುತ ನಟಿ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಈ ಚಿತ್ರದಲ್ಲಿ ಬರುವ ನಾಗವಲ್ಲಿಯ ವಿಶಿಷ್ಟ ಮಾತಿನ ಸನ್ನಿವೇಶ ಪ್ರೇಕ್ಷಕರನು ಇನ್ನಿಲ್ಲದಂತೆ ಕಾಡುತ್ತದೆ. ಅದಕ್ಕೆ ಜೀವ ತುಂಬಿದ್ದು ಶಶಿಕಲ

...ಮ್ಮ ಆದ ರಮ್ಯಕೃಷ್ಣ

... ಚಿತ್ರರಂಗದ 'ಪರ್ಮನೆಂಟ್ ತಂಗಿ' ಎಂದೇ ಖ್ಯಾತಿ ಪಡೆದಿದ್ದ ತಾರಾ ...ನ್ನೆ ನಿಜಜೀವನದಲ್ಲಿ ತಾಯಿಯಾದರು. ಇದೀಗ ಚಿತ್ರರಂಗದ 'ಪರ್ಮನೆಂಟ್ ...ಮಾಕಿ' ಎಂಬ ಖ್ಯಾತಿಯ ರಮ್ಯಕೃಷ್ಣ ಕೂಡ ತಾಯಿ ಆಗಿದ್ದಾರೆ. ಆದರೆ ... ಜೀವನದಲ್ಲಲ್ಲ, ಬದಲಾಗಿ ರೀಲ್ ಲೈಫಿನಲ್ಲಿ.

... ರಾಧಿಕಾ ಕುಮಾರಸ್ವಾಮಿ ನಿರ್ಮಿಸಿ, ನಾಯಕಿಯಾಗಿ ನಟಿಸುತ್ತಿರುವ ...ಟಿ' ಎಂಬ ಚಿತ್ರದಲ್ಲಿ ನಾಯಕ ನಟ ಆದಿತ್ಯನ ತಾಯಿಯಾಗಿ ರಮ್ಯಕೃಷ್ಣ ...ಸಿಕೊಳ್ಳುತ್ತಿದ್ದಾರೆ. ಕನ್ನಡ ಚಿತ್ರರಂಗದ ವಿಷ್ಣುವರ್ಧನ್, ರವಿಚಂದ್ರನ್, ...ಜೇಂದ್ರ ಮೊದಲಾದ ಹೀರೋಗಳ ಜೊತೆ ನಾಯಕಿಯಾಗಿ ನಟಿಸಿದ್ದ ...ಮ್ಯಕೃಷ್ಣ ತಮಿಳಿನಲ್ಲಿ ರಜನಿಕಾಂತ್, ಕಮಲಹಾಸನ್, ತೆಲುಗಿನಲ್ಲಿ



ನಾಗಾರ್ಜುನ, ಬಾಲಕೃಷ್ಣ ತರಹದ ಪ್ರಮುಖ ನಾಯಕ ನಟರ ಜೊತೆಗೆ ನಾಯಕಿಯಾಗಿ ಮರ ಸುತ್ತುತ್ತಿದ್ದವರು. ಮಾತ್ರವಲ್ಲ, ತನ್ನ ಮಾದಕವಾದ ನೃತ್ಯದ ಮೋಡಿಯಿಂದ ಲಕ್ಷಾಂತರ ಜನರ ಹೃದಯವನ್ನು ಗೆದ್ದವರು. ಏನಿಲ್ಲವೆಂದರೂ ಕಳೆದ ಮೂರು ದಶಕಗಳಿಂದ ರಮ್ಯಕೃಷ್ಣ ವಿವಿಧ ಭಾಷೆಯ ಸಿನಿಮಾಗಳಲ್ಲಿ ನಾಯಕಿಯಾಗಿ ಕಾಣಿಸಿಕೊಂಡವರು.


ರಮ್ಯಕೃಷ್ಣರ ವಯಸ್ಸು ಸರಿಸುಮಾರು 50 ವರ್ಷ ದಾಟಿದ್ದರೂ ಈಗಿನ ಜಮಾನದ ನಾಯಕಿಯರನ್ನೂ ನಾಚಿಸುವಂತಹ ಮೈಕಟ್ಟನ್ನು ...ಂದಿದ್ದಾರೆ. ಆಕೆ ಇನ್ನೂ ಕನಿಷ್ಟ ಐದಾರು ವರ್ಷ ನಾಯಕಿಯಾಗಿ ...ರೆಯುವಷ್ಟು ಸುಂದರ ಮೈಕಟ್ಟು ಮತ್ತು ಸೌಂದರ್ಯವನ್ನು ಹೊಂದಿದ್ದಾರೆ ...ದರೂ ತಪ್ಪಾಗಲಾರದು.

ಇಂತಹ ರಮ್ಯಕೃಷ್ಣ ಇಲ್ಲಿಯತನಕ ತಾಯಿಯ ಪಾತ್ರವನ್ನು ಮಾಡಲು ...ದ್ದರಲಿಲ್ಲ. ಆದರೀಗ ಯಾರ ಒತ್ತಡಕ್ಕೆ ಮಣಿದು ಆಕೆ 'ತಾಯಿ' ಆಗಿದ್ದಾರೆ ...ಬುದು ಗೊತ್ತಾಗಿಲ್ಲ. ಇತ್ತೀಚೆಗೆ ಆಕೆ ಬೆಂಗಳೂರಿಗೆ ...ದು 'ಸ್ವೀಟಿ' ಚಿತ್ರದಲ್ಲಿ ತಾಯಿಯ ಪಾತ್ರದಲ್ಲಿ ...ಸುತ್ತಿದ್ದಾರೆ ಎಂದು ಆ ಚಿತ್ರದ ನಿರ್ದೇಶಕಿ ವಿಜಯಲಕ್ಷ್ಮಿ ...ಗ್ ದೃಢೀಕರಿಸಿದರು. ಅದೇ ಸಂದರ್ಭದಲ್ಲಿ ವಿಜಯಲಕ್ಷ್ಮಿ ...ಗ್ ಅವರ ಪತಿ ಜೈಜಗದೀಶ್ ಅವರು ರಮ್ಯಕೃಷ್ಣರ ...ಕ್ಕೆ ಏನಂದರು ಗೊತ್ತಾ? "ನಾಯಕ ನಟ ಆದಿತ್ಯನ ...ಪಕ್ಕ ರಾಧಿಕಾ ಮತ್ತು ರಮ್ಯಕೃಷ್ಣ ನಿಂತಿದ್ದನ್ನು ನೋಡಿದರೆ ... ಚಿತ್ರದಲ್ಲಿ ಆದಿತ್ಯನಿಗೆ ಇಬ್ಬರು ನಾಯಕಿಯರು ಎಂದು ... ತಪ್ಪು ತಿಳಿಯುವ ಸಾಧ್ಯತೆಯಿದೆ" ಎಂದು ಆಕೆಯನ್ನು ...ಂಡಾಡಿದರು. ಸ್ವತಃ ರಾಧಿಕಾ ಕುಮಾರಸ್ವಾಮಿ ಕೂಡ ...ವರ ದೇಹಸಿರಿಯನ್ನು ಮೆಚ್ಚುತ್ತಾ "ಆ ವಯಸ್ಸಿನಲ್ಲಿ ನಾವೆಲ್ಲ ಬಲೂನ್‌ನಂತೆ ...ದಿಕೊಳ್ಳುತ್ತೇವೋ ಏನೋ" ಎಂದು ತನ್ನ ಭಯವನ್ನು ತೋಡಿಕೊಂಡರು.

ಅದೇನೇ ಇರಲಿ, ರಮ್ಯಕೃಷ್ಣ ಕನ್ನಡ ಚಿತ್ರರಂಗದ ಮುಖಾಂತರ ...ಯಿಯಾಗಿ ತನ್ನ ವೃತ್ತಿಜೀವನದ ಇನ್ನೊಂದು ಅಧ್ಯಾಯವನ್ನು ...ಂಭಿಸುತ್ತಿರುವುದು ವಿಶೇಷವಾಗಿದೆ.



ವಾತ್ಸಾಯನನಿಗೇ ಸೆಡ್ಡು ಹೊಡೆಯುವ 'ಚಂದ್ರ'



ರೂಪಾ ಅಯ್ಯರ್ ನಿರ್ದೇಶನದ 'ಚಂದ್ರ' ಚಿತ್ರದ ಚಿತ್ರೀಕರಣ ಅಮೆರಿಕಾ ಮತ್ತು ಕರ್ನಾಟಕದಲ್ಲಿ ಬಹುತೇಕ ಮುಗಿದಿದೆ. ಇದೀಗ ಬಂದಿರುವ ಸುದ್ದಿಯ ಪ್ರಕಾರ ಐತಿಹಾಸಿಕ ಕಥಾವಸ್ತುವಿನ ಈ ಚಿತ್ರದಲ್ಲಿ ರೂಪಾ ಅಯ್ಯರ್ ಒಂದು ಟಪ್ಪಾಂಗೋಚಿ ಸಾಂಗ್‌ನ್ನು ಸೇರಿಸಿದ್ದಾರಂತೆ. ಈ ಹಾಡಿನಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳಲು ಯಶ್ ಒಪ್ಪಿಕೊಂಡಿರುವುದು ಕೂಡಾ ಖಾತ್ರಿಯಾಗಿದೆ.

'ಚಂದ್ರ' ಚಿತ್ರದಲ್ಲಿ ತಮಿಳಿನ ಗ್ಲಾಮರಸ್ ಗೊಂಬೆ ಶ್ರೇಯಾಳ ಜೊತೆ 'ನೆನಪಿರಲಿ' ಖ್ಯಾತಿಯ ಪ್ರೇಮ್ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಈಗ ಪ್ರೇಮ್ ಜೊತೆ ಯಶ್ ಕೂಡ ಸೇರಿರುವುದರಿಂದ ಮೈಸೂರಿನ ಇಬ್ಬರು ಯುವ ನಾಯಕರು 'ಚಂದ್ರ' ಚಿತ್ರದಲ್ಲಿ ಶ್ರೇಯಾ ಜೊತೆಗೆ ಮಿಂಚಲಿದ್ದಾರೆ ಎಂದಾಯಿತು.

ರೂಪಾ ಅಯ್ಯರ್ ಈಗಾಗಲೇ ಪತ್ರಿಕೆಗಳಿಗೆ ಕಳುಹಿಸಿರುವ ಸ್ಟಿಲ್ಸ್‌ಗಳಲ್ಲಿ ಯುವ ಜೋಡಿಯಾದ ಪ್ರೇಮ್ ಮತ್ತು ಶ್ರೇಯಾ ವಾತ್ಸಾಯನನ 64 ಭಂಗಿಗಳನ್ನೂ ನಾಚಿಸುವಂತೆ ಕಾಣಿಸಿಕೊಂಡಿದ್ದಾರೆ. ಅಮೆರಿಕಾದಲ್ಲಿ ನಡೆದ ಈ ಚಿತ್ರದ ಚಿತ್ರೀಕರಣದ ಸ್ಟಿಲ್‌ಗಳು ಅತ್ಯಂತ ಸುಂದರವಾಗಿ ಮತ್ತು ಮೋಹಕವಾಗಿ ಮೂಡಿಬಂದಿದೆ.

ಬಾರ್ ಗರ್ಲ್ ರಮ್ಯಾ



ಒಂದು ದಶಕದ ನಂತರ ಕೊನೆಗೂ ನಟಿ ರಮ್ಯಾ ಬದಲಾಗಿದ್ದಾಳೆ.

ಕನ್ನಡ ಚಿತ್ರರಂಗದಲ್ಲಿ ಕಳೆದ 10 ವರ್ಷಗಳಿಂದ ನಂಬರ್ ಒನ್ ನಾಯಕಿಯಾಗಿ ತನ್ನ ಸ್ಥಾನವನ್ನು ಅಲಂಕರಿಸಿರುವ ರಮ್ಯಾ ಈಗ ಪಾತ್ರಗಳ ಆಯ್ಕೆಯಲ್ಲಿ ಬಹಳ ಚೂಸಿಯಾಗಿದ್ದಾರೆ ಎಂಬುದು ಗಾಂಧಿನಗರದವರ ಆರೋಪ, ಅಪಸ್ವರ ಮತ್ತು ಅಭಿಮಾನದ ಮಾತು ಕೂಡ ಆಗಿದೆ.

ವಿಜಯಪ್ರಸಾದ್ ನಿರ್ದೇಶನದಲ್ಲಿ ಜನವರಿಯಲ್ಲಿ ಆರಂಭವಾಗಲಿರುವ 'ನೀರುದೋಸೆ' ಚಿತ್ರದಲ್ಲಿ ಜಗ್ಗೇಶ್ ಜೊತೆಗೆ ಮಂಡ್ಯದ ಹುಡುಗಿ ರಮ್ಯಾ ನಟಿಸಲು ಒಪ್ಪಿಕೊಂಡಿರುವುದು ನಿಮಗೆಲ್ಲಾ ಗೊತ್ತಿದೆ. ಆದರೆ ಈ ಚಿತ್ರದಲ್ಲಿ ರಮ್ಯಾ ಯಾವ ಪಾತ್ರವನ್ನು ಮಾಡುತ್ತಿದ್ದಾರೆ ಎಂಬುದರ ಬಗ್ಗೆ ವಿಜಯಪ್ರಸಾದ್ ಇನ್ನೂ ಬಾಯಿಬಿಟ್ಟಿಲ್ಲ. ಆದರೆ, ನಮಗೆ ಬಂದಿರುವ ಮಾಹಿತಿ ಪ್ರಕಾರ 'ನೀರುದೋಸೆ'ಯಲ್ಲಿ ರಮ್ಯಾ ಬಾರ್ ಡ್ಯಾನ್ಸರ್ ಮತ್ತು ವೇಶ್ಯೆಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರಂತೆ.

ಯಾವಾಗಲೂ ಗ್ಲಾಮರ್ ಪಾತ್ರಗಳಲ್ಲೇ ಕಾಣಿಸಿಕೊಳ್ಳುತ್ತಿದ್ದ ರಮ್ಯಾ ಈಗ ತನ್ನ ಮನಸ್ಸನ್ನು ಬದಲಾಯಿಸಿ ಚಾಲೆಂಜಿಂಗ್ ಪಾತ್ರಗಳಿಗೆ ಸೈ ಅನಿಸುತ್ತಿರುವುದು ಆಶ್ಚರ್ಯವೇ ಸರಿ. ರಮ್ಯಾಳಂತಹ ಮೇರುನಟಿ ಹೊಸ ಹೊಸ ಪಾತ್ರಗಳಿಗೆ ತನ್ನನ್ನು ತಾನು ತೊಡಗಿಸಿಕೊಳ್ಳಲು ಮನಸ್ಸು ಮಾಡಿರುವುದು ನಿಜಕ್ಕೂ ಅಭಿನಂದನೀಯ. ಇನ್ನು ಮುಂದೆಯೂ ರಮ್ಯಾ ಇಂತಹ ಸವಾಲಿನ ಪಾತ್ರಗಳನ್ನು ಒಪ್ಪಿಕೊಂಡು ತನ್ನ ನಟನಾ ಪ್ರತಿಭೆಯನ್ನು ತೋರಿಸುವಂತಾಗಲಿ ಎಂಬುದು ನಮ್ಮ ಹಾರೈಕೆ.

ಹೊಗಳಿಕೆ ತೆಗಳಿಕೆ

...ವ ತೆರೆಯ ಹಿಂದಿನ ಕಂಠದಾನ ಕಲಾವಿದೆ. ಟಿವಿ ...ದರ್ಶನವೊಂದರಲ್ಲಿ "ಈ ವಿಶಿಷ್ಟ ಧ್ವನಿಯ ಪ್ರಯೋಗ ... ಮೂಲ ಧ್ವನಿಯ ಮೇಲೆ ಪರಿಣಾಮ ಬೀರಿತ್ತು" ...ದು ಶಶಿಕಲಾ ಹೇಳಿದ್ದರಲ್ಲದೆ, ಸಂದರ್ಶಕರ ವಿನಂತಿಯಂತೆ ...ಗವಲ್ಲಿಯ ಸಂಭಾಷಣೆಯನ್ನು ಆಕೆಗೆ ಯಥಾವತ್ತಾಗಿ ...ರುಚ್ಚರಿಸಲು ಕೂಡ ಆಗಲಿಲ್ಲ.

...ಡಾ.ಸೋಮನಾಥರು ಅಂದಂತೆ ಗುಂಡಿಗೆ ಬಿದ್ದ ...ಣೀಳಕ್ಕೆ ಆಳಿಗೊಂದು ಕಲ್ಲು ಗೊತ್ತಿದೆಯಲ್ಲ) ಕಾಳಿಕಾ ...ಠದ ಸ್ವಾಮಿಯ ಬಗ್ಗೆ ಸುವರ್ಣ ಛಾನೆಲ್‌ನವರು 14 ...ವು ಎಳೆದು ರಂಪಾಟ ಮಾಡಿದ್ದು ಅನವಶ್ಯಕವಾಗಿತ್ತು. ...ಷ್ಟೆಂದರೆ ಒಂದು-ಒಂದೂವರೆ ತಾಸು ಇರಬಹುದಾಗಿದ್ದ ...ರ್ಯಕ್ರಮ ಅದು. ಬಿದ್ದವನು ಎಂತವನೇ ಆಗಿರಲಿ ...ನ ಪೇಟ ಕೀಳುವ (ಅದನ್ನು ಮಹಾನ್ ಕ್ಷಣ ಎಂಬಂತೆ ... ಪುನಃ ಬಿತ್ತರಿಸುತ್ತಿದ್ದುದು ಬೇರೆ) ಕೀಳುಮಟ್ಟದವರೆಗೆ ...ಯಬಾರದಿತ್ತು.


ಯಾವ್ಯಾವುದೋ ಕುಟುಕು ಕಾರ್ಯಾಚರಣೆಯಲ್ಲಿ ದುಡ್ಡಿನ ...ಸೆಳೆಹಿಗೆ ಬಿದ್ದ ಈ ಹುಂಬ ಋಷಿಕುಮಾರನನ್ನು ...ಲ್ಲದಂತೆ ಕಾಡಿದ ವಿಶ್ವೇಶ್ವರಭಟ್ಟರ ಛಾನೆಲ್‌ಗೆ ...ರ್ಯವಿದ್ದರೆ ಸ್ಥಳೀಯರ ವಿರೋಧದ ನಡುವೆಯೂ ...ಕರ್ಣ ದೇಗುಲವನ್ನು ನುಂಗಿದ ಹಾಗು ಗೋವಿನ ...ದಲ್ಲಿ ಸರಕಾರದಿಂದ ಕೋಟಿಗಟ್ಟಲೆ ಹಣ ತಿಂದು ...ಗದ ತಪ್ಪುದೇ ಹವ್ಯಕ ಜಾತಿಯ ಸಗಣಿ ಸ್ವಾಮಿಯ ...ಕೆ ಇದೇ ರೀತಿಯ 14 ಗಂಟೆ ಬೇಡ, ಕೇವಲ ...ಮೂರು ತಾಸಿನ 'ಜನತಾ ನ್ಯಾಯಾಲಯ' ನಡೆಸಿಯಾರೇ?

- ಶಶಿ ಪುತ್ತೂರು, ದ.ಕ.

ಎದ್ದೇಳು ಮಂಜುನಾಥಾ...

25 ವರ್ಷಗಳ ಹಿಂದೆ ಧರ್ಮಸ್ಥಳದ ಪದ್ಮಲತಾ ಪ್ರಕರಣವನ್ನುದ್ದೇಶಿಸಿ ಲೇಖಕ, ಚಿಂತಕ ಡಾ. ಪುರುಷೋತ್ತಮ ಬಿಳಿಮಲೆಯವರು ಒಂದು ಮಾತನ್ನು ಹೇಳಿದ್ದರು. ಅದೇನೆಂದರೆ "ಇದು ಧರ್ಮಸ್ಥಳವಲ್ಲ, ಅಧರ್ಮಸ್ಥಳ" ಎಂದು. ಸುಧಾ ಪತ್ರಿಕೆಯ ಸಂದರ್ಶನವೊಂದರಲ್ಲಿ ಶಿವರಾಮ ಕಾರಂತರ ಅಣ್ಣ ಕೋಟ ಲಕ್ಷ್ಮೀನಾರಾಯಣ ಕಾರಂತರು (ಕೆ.ಎಲ್.ಕಾರಂತರು) ಹೀಗೆ ಹೇಳಿದ್ದರು: "ಧರ್ಮಸ್ಥಳದಲ್ಲಿ ಕಳ್ಳರ ಭಯದಿಂದ ತೆಂಗಿನಮರಗಳಿಗೆ ಮುಳ್ಳು ಕಟ್ಟಿರುವುದನ್ನು ನೋಡಿ ನಗುಬಂತು."

ಹೋಮ್ ಸ್ಟೇ ಪ್ರಕರಣದಿಂದ ಹಿಡಿದು ಜಗತ್ತಿನ ಎಲ್ಲಾ ಉಸಾಬರಿಗಳ ಬಗ್ಗೆ ವೇದಾಂತ ಮಾತಾಡುವ ಅಲ್ಲಿನ ಧರ್ಮಾಧಿಕಾರಿಗಳಿಗೆ ತನ್ನ ಮನೆ ಬಾಗಿಲ ಬುಡದಲ್ಲೇ ನಡೆದ ಮುದ್ದು ಮುಖದ ಅಮಾಯಕ ಯುವತಿಯ ಮೇಲಿನ ಅತ್ಯಾಚಾರ ಹಾಗು ದಾರುಣ ಕೊಲೆ ಪ್ರಕರಣದ ಬಗ್ಗೆ ಮಾತಾಡುವ ಅಥವಾ ತನ್ನ ಪ್ರಭಾವ ಬಳಸಿ ನಿಜವಾದ ಆರೋಪಿಗಳನ್ನು ಹಿಡಿಯುವ, ಶಿಕ್ಷಿಸುವ ವ್ಯವಧಾನ, ಸೌಜನ್ಯ ಅಥವಾ ಮಾನವೀಯತೆಯೋ ಇಲ್ಲದಿರುವುದು ವಿಚಿತ್ರವಾಗಿದೆ. ಅಲ್ಲಿನ ಬೆಟ್ಟದ ಮೇಲೆ ಭವ್ಯವಾಗಿ ಪ್ರತಿಷ್ಠಾಪಿಸಲಾದ ಅಹಿಂಸಾವಾದಿ ಬಾಹುಬಲಿ ಇವನ್ನೆಲ್ಲ ಕಂಡು ಅದೆಷ್ಟು ಮರುಕಪಡುತ್ತಿರುವನೋ ಪಾಪ...!!



ಧರ್ಮಸ್ಥಳದಲ್ಲಿ ನಡೆಯುತ್ತಿರುವುದು ಇದು ಮೊದಲ ಕೊಲೆಯೇನಲ್ಲ. ಧರ್ಮಸ್ಥಳದಲ್ಲಿ ಹಾಗು ಸುತ್ತಮುತ್ತಲಿನ ಪರಿಸರದಲ್ಲಿ ನಡೆಯುವ ಅತ್ಯಾಚಾರ-ಅನಾಚಾರಗಳಿಗೆ ಕೊನೆ ಮೊದಲೆಂಬುದಿಲ್ಲ. ಅನ್ನದಾನ-ನ್ಯಾಯದಾನದ ಪವಿತ್ರ ಸ್ಥಳ ಎಂಬೆಲ್ಲ ವಿಶೇಷಣಗಳಿಂದ ಬೀಗುತ್ತಿರುವ ಈ ನಾಡಿನಲ್ಲಿ ನಡೆಯುತ್ತಿರುವುದಾದರೂ ಏನು? ಸಹಸ್ರಾರು, ಲಕ್ಷಾಂತರ ಜನರು ಬಂದುಹೋಗುವ, ವಿಐಪಿಗಳು ಬಂದು ತಂಗುವ (ಅ)ಧರ್ಮಸ್ಥಳದಲ್ಲಿ ಊರಿನ ಹೆಸರಿಗೆ ತಕ್ಕಂತೆ ಇಲ್ಲಿ ಅನಾಚಾರಗಳೇ ನಡೆಯುವುದಿಲ್ಲ ಎಂದು ಬಿಂಬಿಸಲು ಪೊಲೀಸ್ ಠಾಣೆಯನ್ನು ಕೂಡ ಸ್ಥಾಪಿಸದೇ ಬಿಡಲಾಗಿದೆ. ಎಲ್ಲವೂ ತಮ್ಮ ಅಂಕೆಯಲ್ಲೇ ಇದ್ದು ಧರ್ಮಸ್ಥಳದ ಮತ್ತೊಂದು ಪುಂಡುಗಾರಿಕೆಯ ಕರಾಳಮುಖ ಹೊರಜಗತ್ತಿಗೆ ತಿಳಿಯದಿರಲಿ ಎಂಬ ಉದ್ದೇಶ ಇದರ ಹಿಂದಿರುವುದು ಸ್ಪಷ್ಟ. "ಮಾತಾಡುವ ಮಂಜುನಾಥ" ಇನ್ನಾದರೂ ಜೊಂಪಿನಿಂದ ಎದ್ದಾನೆಯೇ?

-ಎಸ್.ಎಸ್.ಗೇರುಗಟ್ಟೆ

ಹೌದು, ಮೈಸೂರು ವಿಶ್ವವಿದ್ಯಾಲಯದಲ್ಲಿಯ ವಿದ್ಯಾರ್ಥಿಗಳಿಗೆ ಆಗಿರುವ ತಾರತಮ್ಯದ ವಿರುದ್ಧ ದಲಿತರು ನಿಲ್ಲಬೇಕು. ಆಗ ಮಾತ್ರ ಒಂದು ವಿಶಾಲ ಚಳವಳಿಗೆ ಎಲುಬುಗಳನ್ನು ಜೋಡಿಸಬಹುದು. ಈ ವಿಷಯಕ್ಕೆ ಅತಿ ಹೆಚ್ಚಿನ ಪ್ರಚಾರ ಕೊಡಿ.

We miss Shivasundar's 'Charvaaka' a lot.

ವಾಸು ಅವರಿಗೆ ಸ್ವಾಗತ.

- ಬಳ್ಳಾರಿಯ ಅಧ್ಯಾಪಕರು, ಎಸ್ ಎಂ ಎಸ್ ಮೂಲಕ

ದಿನೇದಿನೇ ದುಬಾರಿಯಾಗುತ್ತಾ ನಡೆದಿರುವ ಖಾಸಗಿ ವೈದ್ಯರು, ನಕಲಿ ವೈದ್ಯರು, ಕೈಬಿಸಿ ಮಾಡಿದರಷ್ಟೇ ರೋಗಿಯ ಬಗ್ಗೆ ಆಸಕ್ತಿ ನಟಿಸುವ ಸರ್ಕಾರಿ ವೈದ್ಯರು.... ಇಂತಹವರ ನಡುವೆ ಡಾ. ವೆಂಕಟರೆಡ್ಡಿ ಅವರನ್ನು ಕುರಿತು ಓದಿದಾಗ ನೆಮ್ಮ... ಅನ್ನಿಸುತ್ತದೆ. ಜನಪರ ಕಾಳಜಿಯ, ಬಡವರ ಜೀವದ ಬೆಲೆ ತಿಳಿದ ಮತ್ತು ಅನ್ಯಾಯಗಳ ವಿರುದ್ಧ ದನಿ ಎತ್ತಿದ ಹೋರಾಟಗಾರ ವೈದ್ಯ ವೆಂಕಟರೆಡ್ಡಿ ಅವರು ನಮ್ಮ ನಡುವೆ ಇದ್ದರು ಎಂಬುದೇ ತಿಳಿದಿರಲಿಲ್ಲ.

ಇನ್ನು ಅವರ ಮೆಡಿಕಲ್ ಶಾಪಿಗೆ, ತೋಟಕ್ಕೆ ಇಟ್ಟ ಹೆಸರುಗಳು ಅವರ ಸಾಹಿತ್ಯ ಪ್ರೀತಿಗೆ ಸಾಕ್ಷಿ. ಅವರ ನಿಧನಕ್ಕೆ ಒಂದು ಹನಿ ಕಣ್ಣೀರು ಮಾತ್ರ ನನ್ನಿಂದ ಸಾಧ್ಯ. ಇಂತಹ ವೈದ್ಯರನ್ನು ಪರಿಚಯಿಸಿದ್ದಕ್ಕಾಗಿ ಪತ್ರಿಕೆಗೆ ವಂದನೆಗಳು.

- ಓದುಗ, ಎಸ್‌ಎಂಎಸ್ ಮೂಲಕ

ಕಳೆದ ಸಂಚಿಕೆಯಲ್ಲಿ 'ಏರ್‌ಟೆಲ್ ಬಗ್ಗೆ ಎಚ್ಚರಿಕೆ' ಎಂದು ಗುಲಾಬಿ ಮೇಡಮ್ ಅವರು ಬರೆದಿದ್ದಾರೆ. ನನಗೂ ಏರ್‌ಟೆಲ್ ಕಂಪನಿಯವರಿಂದ ಇಂತಹದ್ದೇ ಅನುಭವ ಆಗಿತ್ತು. ನಾನು ಕೂಡ ಬಹಳ ಹಣ ಕಳೆದುಕೊಂಡು ಈಗ ಬರೀ ಸಿಮ್‌ಅನ್ನು ಉಪಯೋಗಿಸುತ್ತಿದ್ದೇನೆ. ಆದರೆ ಇಂತಹ ವಂಚನೆ ಕುರಿತು ಬರೆದದ್ದಕ್ಕೆ ಗುಲಾಬಿ ಮೇಡಮ್ ಅವರಿಗೆ ಧನ್ಯವಾದಗಳು.

- ವಿಶ್ವನಾಥ್ ಪೊಂಥ್ನಾಲ್

ಕುಮ್ಮಿ ಮತ್ತು ಯಡ್ಡಿ ಕುರಿತ 'ಧೂರ್ತೇರಿ' ಅದ್ಭುತವಾಗಿತ್ತು.

- ಸಿ.ಎಮ್.ಅಂಗಡಿ, ಸುಪ್ರೀಂ ಕೋರ್ಟ್ ವಕೀಲರು, ದೆಹಲಿ

ನರೇಂದ್ರ ಮೋದಿ ಭಾರತದ ಪ್ರಧಾನಿ ಆಗೋದೂ ಒಂದೇ, ಅಜ್ಮಲ್ ಕಸಬ್ ಪಾಕಿಸ್ತಾನದ ಪ್ರಧಾನಿ ಆಗೋದೂ ಒಂದೇ.

- ಸಿ.ಜೆ. ತುಮಕೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ... ಅಥವಾ ಪತ್ರದ ... ಕಳುಹಿಸಬಹುದು. ನಿಮ್ಮ ... 9980331427 ನಂಬರಿಗೂ ... ಕಳುಹಿಸಬಹುದು.

ಶಿವರಾಜ್‌ಕುಮಾರ್ ಸಿಕ್ಸ್‌ಪ್ಯಾಕ್ ಸಾಹಸ



ಕನ್ನಡ ಚಿತ್ರರಂಗದಲ್ಲಿ ಇತ್ತೀಚೆಗೆ ಹಲವಾರು ನಾಯಕನಟರು ಕಷ್ಟಪಟ್ಟು ಸಿಕ್ಸ್‌ಪ್ಯಾಕ್‌ಗಳನ್ನು ಪಡೆಯುತ್ತಿದ್ದಾರೆ. ಅದಕ್ಕೆಂದು ಐದಾರು ತಿಂಗಳ ಕಾಲ ಸತತವಾದ ಕಠಿಣವಾದ ವ್ಯಾಯಾಮ ಮಾಡಿ, ಸೂಕ್ತವಾದ ಆಹಾರವನ್ನು ತೆಗೆದುಕೊಳ್ಳುವುದು, ಇತ್ಯಾದಿಗಳು ಎಲ್ಲವೂ ನಿಮಗೆ ಗೊತ್ತಿದೆ.

ಹಿಂದಿಯಲ್ಲಿ ಶಾರುಖ್ ಖಾನ್ ಈ ರೀತಿ ವ್ಯಾಯಾಮ ಮಾಡಿ ಮೊದಲಿಗೆ ಸಿಕ್ಸ್ ಪ್ಯಾಕ್ ದೇಹವನ್ನು ಹೊಂದಿದ್ದೇ ತಡ ಆಮೀರ್ ಖಾನ್ ಕೂಡ ಹಾಗೆಯೇ ಮಾಡಿದರು. ಹಾಗೆಯೇ ಕನ್ನಡದಲ್ಲಿ ಮೊದಲೇ ಸಿಕ್ಸ್‌ಪ್ಯಾಕ್ ಹೊಂದಿದ್ದ ದುನಿಯಾ ವಿಜಿ ಕೂಡ ತಮ್ಮ ದೇಹದಾರ್ಢ್ಯವನ್ನು ಬೆಳ್ಳಿತೆರೆಯ ಮೇಲೆ ಪ್ರದರ್ಶಿಸಿದರು. ಆದಾದನಂತರ ಪುನೀತ್ ರಾಜ್‌ಕುಮಾರ್ ಕೂಡ ತನ್ನ ದೈಹಿಕ ಪವರ್‌ಅನ್ನು ಮೆರೆದರು. ಪುನೀತ್ ಬೆನ್ನಲ್ಲೇ ಲೌವ್ಲಿ ಸ್ಟಾರ್ ಪ್ರೇಮ್ ಕೂಡ ಕಷ್ಟಪಟ್ಟು ಸಿಕ್ಸ್‌ಪ್ಯಾಕ್ ದೇಹವನ್ನು ಪಡೆದರು. ಹೀಗೆ ಇನ್ನೂ ಅನೇಕ ಕನ್ನಡ ಸಿನಿಮಾದ ನಾಯಕನಟರು ದಿನದ ಐದಾರು ಗಂಟೆಗಳನ್ನು ಜಿಮ್‌ನಲ್ಲೇ ಕಾಲ ಕಳೆದು ಸಿಕ್ಸ್‌ಪ್ಯಾಕ್ ಹೊಂದಿದ ರೋಚಕ ಕಥೆಗಳನ್ನು ನೀವೆಲ್ಲ ಕೇಳಿರಬಹುದು.

ಆದರೆ ಅಂಥವರಲ್ಲಿ ಶಿವರಾಜ್‌ಕುಮಾರ್ ಒಬ್ಬರಾಗಿರಲಿಲ್ಲ. ಚಿತ್ರರಂಗವನ್ನು ಪ್ರವೇಶಿಸಿದ ಆರಂಭದ ದಿನದಿಂದಲೂ ಒಂದೇ ತರಹದ ಮೈಕಟ್ಟನ್ನು ಉಳಿಸಿಕೊಂಡು ಬಂದಿರುವ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮರ್ ಸಿಕ್ಸ್‌ಪ್ಯಾಕ್ ಪಡೆಯುವ ಸಾಹಸಕ್ಕೆ ಕೈಹಾಕಿರಲಿಲ್ಲ. ಆದರೆ ಈಗ ಬಂದಿರುವ ಸುದ್ದಿಯ ಪ್ರಕಾರ ಅವರು ಕೂಡ ಈಗ ಸಿಕ್ಸ್‌ಪ್ಯಾಕ್ ದೇಹವನ್ನು ಹೊಂದಲು ವ್ಯಾಯಾಮ ಮಾಡುತ್ತಿದ್ದಾರಂತೆ.

ಅಂದಹಾಗೆ, ಅವರು ಮುಂದಿನ ಚಿತ್ರವಾದ 'ಬಜರಂಗಿ'ಗಾಗಿ ಈ ತರಹ ತನ್ನ ದೇಹವನ್ನು ಮಣಿಸುತ್ತಿದ್ದಾರೆ. ಈ ಚಿತ್ರವನ್ನು ನೃತ್ಯ ನಿರ್ದೇಶಕರೂ ಆಗಿರುವ ಹರ್ಷ ನಿರ್ದೇಶಿಸುತ್ತಿದ್ದಾರೆ. ಶಿವಣ್ಣ ಸಿಕ್ಸ್‌ಪ್ಯಾಕ್ ಹೊಂದಲು ಪ್ರಯತ್ನಿಸುತ್ತಿರುವ ಸುದ್ದಿ ಅವರ ಅಭಿಮಾನಿಗಳಿಗೆ ಈಗಾಗಲೇ ಥ್ರಿಲ್ ಕೊಟ್ಟಿದೆ. ಆದರೆ ಯಾವ ವ್ಯಾಯಾಮವನ್ನೂ ಮಾಡದೇ ಉತ್ತಮ ದೇಹದಾರ್ಢ್ಯವನ್ನು ಹೊಂದಿರುವ ಶಿವಣ್ಣ ಈ ರೀತಿ ಸಿಕ್ಸ್‌ಪ್ಯಾಕ್‌ಗೆ ತಮ್ಮ ದೇಹವನ್ನು ದಂಡಿಸುವ ಅಗತ್ಯವಿತ್ತೇ ಎಂದೂ ಅವರ ಕೆಲವು ಅಭಿಮಾನಿಗಳು ಪ್ರಶ್ನಿಸುತ್ತಿದ್ದಾರೆ.

ಅದೇನೇ ಇರಲಿ, ಒಂದು ಪಾತ್ರಕ್ಕಾಗಿ ಇತ್ತೀಚಿನ ದಿನಗಳಲ್ಲಿ ತಮ್ಮ ದೇಹದ ಗಾತ್ರವನ್ನು ಹಿಗ್ಗಿಸುವ ಮತ್ತು ಕುಗ್ಗಿಸುವ ಪ್ರಯೋಗಗಳನ್ನು ಹೀರೋಗಳು ಮಾಡುತ್ತಿರುವುದೇ ಸಂತೋಷದ ಸುದ್ದಿ.

ಮಾಧ್ಯಮದವರಿಗೆ ಪ್ರವೇಶವಿಲ್ಲದ ಸ್ಟಾರ್ಸ್ ಪಾಟಿ...

ಮೊನ್ನೆ ಬೆಂಗಳೂರಿನ ಕನಕಪುರ ರಸ್ತೆಯಲ್ಲಿ ಇರುವ ರೆಸಾರ್ಟ್ ಒಂದರಲ್ಲಿ ಭಾರತೀಯ ಚಿತ್ರರಂಗದ ಸುಮಾರು 70-80 ನಟನಟಿಯರು ಒಂದು ಪಾರ್ಟಿ ಮಾಡಿ, ಮಜಾ ಉಡಾಯಿಸಿದರು. ಆದರೆ ಈ ಸಂತೋಷಕೂಟಕ್ಕೆ ಮಾಧ್ಯಮದವರಿಗೆ ಪ್ರವೇಶವೇ ಇರಲಿಲ್ಲ. ಅಷ್ಟೇ ಯಾಕೆ, ಆಹ್ವಾನಿತರಲ್ಲದ ಇತರೆ ಕನ್ನಡದ ನಟನಟಿಯರಿಗೂ ಪ್ರವೇಶವಿರಲಿಲ್ಲ. ಇಂತಹ ಅಪರೂಪದ ತಾರಾ ಸಂತೋಷಕೂಟದಲ್ಲಿ ಭಾಗವಹಿಸಿದವರು ಯಾರ್‍ಯಾರು ಗೊತ್ತೇ? ... ಚಿತ್ರರಂಗದ ಖ್ಯಾತ ನಟ ಶತ್ರುಘ್ನ ಸಿನ್ಹಾ, ತೆಲುಗು ಚಿತ್ರರಂಗದ ಬಾಲಕೃಷ್ಣ, ನಾಗಾರ್ಜುನ ಮತ್ತು ಮೋಹನ್‌ಬಾಬು, ... ಮಲಯಾಳಂನ ಮೋಹನ್‌ಲಾಲ್ ಮತ್ತು ಮುಮ್ಮುಟ್ಟಿ, ತಮಿಳಿನ ಅರ್ಜುನ್‌ಸರ್ಜಾ ಮತ್ತು ಸೂರ್ಯ, ... ಚಿತ್ರರಂಗದ ರವಿಚಂದ್ರನ್, ರಮೇಶ್ ಅರವಿಂದ್, ದೇವರಾಜ್ ಮೊದಲಾದವರು. ಹಾಗೆಯೇ ನಾಯಕನಟಿಯರಲ್ಲಿ ... ಭಾಗವಹಿಸಿದವರು ಮುಖ್ಯವಾಗಿ ಸುಹಾಸಿನಿ, ಸುಮಲತಾ ಮತ್ತು ತಮಿಳಿನ ರಾಧಿಕಾ. ಈ ಸಂತೋಷಕೂಟದಲ್ಲಿ ರಜನಿಕಾಂತ್ ಮತ್ತು ಚಿರಂಜೀವಿ ಕೂಡ ಭಾಗವಹಿಸಬೇಕಾಗಿತ್ತು, ಆದರೆ, ರಜನಿಕಾಂತ್ ಚಿತ್ರೀಕರಣವೊಂದರಲ್ಲಿ ಮಗ್ನರಾಗಿದ್ದರಿಂದ ಹಾಗೂ ಚಿರಂಜೀವಿ ಮರುದಿನ ಕೇಂದ್ರ ಸಂಪುಟದ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಬೇಕಾಗಿದ್ದರಿಂದ ಅವರಿಬ್ಬರು ಗೈರುಹಾಜರಾಗಿದ್ದರು.

ಅಂದಹಾಗೆ, ಈ ಪಾರ್ಟಿಗೆ ಹಾಜರಾಗಿದ್ದವರೆಲ್ಲ 80 ಮತ್ತು 90ರ ದಶಕದಲ್ಲಿ ಭಾರತದ ವಿವಿಧ ಭಾಷಾ ಚಿತ್ರರಂಗದಲ್ಲಿ ಮಿಂಚಿದ್ದ ನಟನಟಿಯರು. ಅವರೆಲ್ಲ ಜೊತೆಜೊತೆಯಾಗಿ ನಟಿಸಿದ್ದರಲ್ಲದೆ ಖಾಸಗಿಯಾಗಿ ಒಳ್ಳೆಯ ಸ್ನೇಹಿತರು ಕೂಡ. ಕೆಲವು ವರ್ಷಗಳ ಹಿಂದೆ ಈ ಎಲ್ಲಾ ಸ್ನೇಹಿತರು ವರ್ಷಕ್ಕೊಮ್ಮೆ ಹೀಗೆ ಸೇರಿಕೊಳ್ಳುವ ಪರಿಪಾಠವನ್ನು ಪ್ರಾರಂಭಿಸಿದರು. ಈ ಹಿಂದೆ ಚೆನ್ನೈನಲ್ಲಿ ಇಂತಹ ಸಂತೋಷಕೂಟದ ಜವಾಬ್ದಾರಿ ರಜನಿಕಾಂತ್ ವಹಿಸಿಕೊಂಡಿದ್ದರು, ಹಾಗೆಯೇ ಆಂಧ್ರದಲ್ಲಿ ಚಿರಂಜೀವಿ ಮತ್ತು ಮುಂಬೈಯಲ್ಲಿ ಶತ್ರುಘ್ನ ಸಿನ್ಹಾ ಇಂತಹದ್ದೇ ... ಪಾರ್ಟಿಯನ್ನು ಆಯೋಜಿಸಿದ್ದರು. ಈ ಬಾರಿಯ ಸಂತೋಷಕೂಟವನ್ನು ಏರ್ಪಡಿಸಿದ್ದು ಕನ್ನಡ ಚಿತ್ರರಂಗದ ದಾನಶೂರ ಕರ್ಣ ಅಂಬರೀಷ್! ಮೊನ್ನೆ ಕನಕಪುರ ರಸ್ತೆಯ ರೆಸಾರ್ಟಿನಲ್ಲಿ ಮೋಹನ್‌ಲಾಲ್ ಅವರು ... ಸ್ನೇಹಿತರಿಗೆ ಒಂದು ಮ್ಯಾಜಿಕ್ ಶೋ ನೀಡಿದರಂತೆ. ಹಾಗೆಯೇ ರಮೇಶ್ ಅರವಿಂದ್ ಒಂದು ... ನಾಟಕವನ್ನು ಆಡಿದರಂತೆ. ಇದೆಲ್ಲದರ ಜೊತೆಗೆ ಬೆಳಗಿನಜಾವದತನಕ ನಡೆದ ಈ ಪಾರ್ಟಿಯಲ್ಲಿ ಎಂದಿನಂತೆ ಕುಡಿತ, ಕುಣಿತ ಎಲ್ಲವೂ ಇದ್ದವಂತೆ. ಹೀಗೆ ಒಂದು ಜಮಾನದ ನಟನಟಿಯರು ಹೀಗೆ ಖಾಸಗಿಯಾಗಿ ಸೇರಿ ಎಂಜಾಯ್ ಮಾಡಿದ್ದು ಅವರೆಲ್ಲರ ನಡುವಿನ ಸ್ನೇಹಕ್ಕೆ, ಪ್ರೀತಿಗೆ, ಅಭಿಮಾನಕ್ಕೆ ಒಂದು ಉತ್ತಮ ಉದಾಹರಣೆ ಎನ್ನಬಹುದು.



ನಮಿತಾ–ದಿ ಇಂಡಿಯನ್ ಬ್ಯೂಟಿ

ಭರ್ಜರಿ ದೇಹಸಿರಿಯ ನಮಿತಾ ಭಾರತದ ಅತ್ಯಂತ ಸುಂದರಿ ಎಂದರೆ ಅಚ್ಚರಿಯಾಗಬಹುದಲ್ಲವೇ? ಆದರೆ ಇದು ತಮಾಷೆಯಲ್ಲ, ಜಪಾನಿನ ಟೋಕಿಯೋ ಟಿವಿ ಎಂಬ ಖಾಸಗಿ ಚಾನೆಲ್ ಪ್ರತಿ ದೇಶದ ಚೆಲುವೆಯರನ್ನು ಅವರು ಫೋಟೋದಲ್ಲಿ ಕಾಣುವ ರೀತಿ, ... ನಡವಳಿಕೆಯ ಅಂದಾಜನ್ನು ಆಧರಿಸಿ ಅತಿ ಸುಂದರಿಯನ್ನು ಆರಿಸುವ ಕಾರ್ಯಕ್ರಮ ನಡೆಸುತ್ತಿದೆ. ಭಾರತದ ಪರವಾಗಿ ... ಆಯ್ಕೆಯಾಗಿರೋದು ನಮಿತಾ!

ಖ್ಯಾತ ಫೋಟೋಗ್ರಾಫರ್ ಕಾರ್ತಿಕ್ ಶ್ರೀನಿವಾಸನ್ ಕ್ಲಿಕ್ಕಿಸಿದ ಫೋಟೋದಲ್ಲಿ ಕಂಡ ನಮಿತಾಗೆ ಮಾರುಹೋದ ಜಪಾನಿ ... ಆಕೆಯನ್ನು ಭಾರತದ ಮೋಸ್ಟ್ ಬ್ಯೂಟಿಫುಲ್ ವುಮನ್ ... ಸರ್ಟಿಫಿಕೇಟ್ ನೀಡಿದೆ. ಅಷ್ಟಕ್ಕೂ ಇಂತಹ ಕೀರ್ತಿಗೆ ಪಾತ್ರವಾಗಲು ನಮಿತಾಗೇನೂ ಕಮ್ಮಿ ಇಲ್ಲ, ಎಲ್ಲವೂ ಜಾಸ್ತಿಯೇ ಇದೆ!

ಪೂನಮ್ ನಶಾದಲ್ಲಿ ನಿಜವೆಷ್ಟು?

ಪೂನಮ್ ಪಾಂಡೆ ಎಂಬ ಈ ಮಾಡೆಲಿಂಗ್ ಬೆಡಗಿ ನಟನೆಗಿಂತ ಜಾಸ್ತಿ ಗಾಸಿಪ್‌ನಲ್ಲಿ ಸುದ್ದಿ ಮಾಡಿದವಳು. ಧೋನಿ ಪಡೆ ವಿಶ್ವಕಪ್ ಗೆದ್ದರೆ ಮೈದಾನದಲ್ಲಿ ಬೆತ್ತಲೆ ಓಡಾಡುವುದಾಗಿ ಹೇಳಿ ಪಡ್ಡೆ ಹುಡುಗರ ನಿದ್ದೆಗೆಡಿಸಿ ನೀರು ಬಿಟ್ಟಿದ್ದ ಪೂನಮ್ ಕೊನೆಗೂ ನಟಿಯಾಗುತ್ತಿದ್ದಾಳೆ. ಜಿಸ್ಮ್ ಸಿನಿಮಾ ಮೂಲಕ ಹಾಟ್‌ಬೇಬಿ ಬಿಪಾಶಳನ್ನು ಪರಿಚಯಿಸಿದ್ದ ಅಮಿತ್ ಸಕ್ಸೇನಾ ಈ ಚಿತ್ರದ ನಿರ್ದೇಶಕ. ಹಾಟ್ ಕಾಂಬಿನೇಷನ್ ಅಂದಮೇಲೆ ಚಿತ್ರದ ಹಾಟ್‌ನೆಸ್ಸನ್ನೂ ಅನುಮಾನಿಸುವಂತಿಲ್ಲ.

ಪೂನಮ್ ತನ್ನ ಈ ಚಿತ್ರದ ಹೆಸರನ್ನು ಸಹ ತನ್ನದೇ ಸ್ಟೈಲ್ ವೆರೈಟಿಯಲ್ಲಿ ಬಯಲು ಮಾಡಲು ಮುಂದಾಗಿದ್ದಾಳೆ. ಎಲ್ಲರೂ 'ಎ' (ಅಡಿಕ್ಷನ್)ಗೆ ರೆಡಿಯಾಗಿ. ಈ ಚಿತ್ರ ಪ್ರಪಂಚದಲ್ಲಿ ಬಿರುಗಾಳಿಯನ್ನೇ ಎಬ್ಬಿಸಲಿದೆ, ನಿಮ್ಮನ್ನು ತೇಲಾಡಿಸಲಿದೆ ಎಂಬುದಾಗಿ ಟ್ವೀಟ್ ಮಾಡುವ ಮೂಲಕ ಪುಂಡ್ ಹೈಕ್ಳು ಮನಸ್ಸಿನಲ್ಲಿ ಭಾರೀ ನಿರೀಕ್ಷೆ ಹುಟ್ಟುಹಾಕಿದ್ದಾಳೆ. ಪೂನಮ್‌ಳ ಈ ನಶಾ ಹೇಳಿಕೆ ಸಿಡಿದು ಸದ್ದು ಮಾಡಲಿದೆಯೋ ಅಥವಾ ಮತ್ತೊಮ್ಮೆ ಠುಸ್ ಪಟಾಕಿಯಾಗಿ ತಳಿಯ ಗಿಮಿಕ್‌ನ ಭಾಗವಾಗುತ್ತೋ ಎಂಬುದು ಚಿತ್ರ ತೆರೆಗೆ ಅಪ್ಪಳಿಸಿದ ನಂತರವಷ್ಟೆ ಬಯಲಾಗಲಿದೆ. ಮೈದಾನದಲ್ಲಿ ಮಿಸ್ಸಾದದ್ದು ಸ್ಕ್ರೀನ್ ಮೇಲಾದರೂ ನಿಜವಾದೀತೆ ಎಂದು ಕಾಯುವ ಪಡ್ಡೆ ಪಡೆಗೆ ಪೂನಮ್ ಸಂಪೂರ್ಣ ನಿರಾಸೆಯನ್ನಂತೂ ಮಾಡಳು.

ಮೋಜು, ಮಸ್ತಿಯ ಬಾಂಡ್...



ಮೊದಲ ಜೇಮ್ಸ್ ಬಾಂಡ್ ಚಿತ್ರ ತೆರೆಕಂಡು ಇಲ್ಲಿಗೆ 50 ವರ್ಷಗಳಾದವು. 1962ರಲ್ಲಿ ಬಿಡುಗಡೆಗೊಂಡ 'ಡಾ.ನೋ' ಎಂಬ ಪ್ರಥಮ ಬಾಂಡ್ ಚಿತ್ರದಲ್ಲಿ ಶಾನ್ ಕಾನರಿ ಎಷ್ಟು ಅದ್ಭುತವಾಗಿ ನಟಿಸಿದ್ದರೆಂದರೆ ಅವರನ್ನು ಅಭಿಮಾನಿಗಳು ಜೇಮ್ಸ್ ಬಾಂಡ್ ಎಂದೇ ಕರೆಯುತ್ತಿದ್ದರು. ಕಾನರಿ ನಂತರ ರಾಜರ್ ಮೂರ್, ಟಿಮೋಥಿ ಡಾಲ್ಟನ್, ಪಿಯರ್ಸ್ ಬ್ರಾಸ್ನನ್ ತರಹದ ವಿವಿಧ ನಟರು ಬಾಂಡ್ ಸಿನಿಮಾಗಳಲ್ಲಿ ನಟಿಸಿ ಸೈ ಎನಿಸಿಕೊಂಡಿದ್ದರೂ ಅವರ್‍ಯಾರೂ ಶಾನ್ ಕಾನರಿ ಪಡೆದ ಮನ್ನಣೆಯನ್ನು ಪಡೆಯಲಿಲ್ಲ.

ಈಗ ಡೇನಿಯಲ್ ಕ್ರೇಗ್ ಎಂಬ ಬ್ರಿಟಿಷ್ ನಟ ಬಾಂಡ್ ಸಿನಿಮಾಗಳಲ್ಲಿ ನಟಿಸಿ ಜನರ ಮೆಚ್ಚುಗೆಯನ್ನು ಪಡೆದಿದ್ದಾರೆ. ... ವಾರ ಕ್ರೇಗ್ ನಟಿಸಿರುವ ಮೂರನೆ ಮತ್ತು 23 ಬಾಂಡ್ ... ಬಿಡುಗಡೆಗೊಂಡಿದೆ. 'ಸ್ಕೈಫಾಲ್' ಈ ಚಿತ್ರದ ಹೆಸರು. ಈ ... ಎಲ್ಲಾ ಬಾಂಡ್ ಚಿತ್ರಗಳಲ್ಲಿ ಇದ್ದ ಸೂಪರ್ ಸ್ಪೀಡ್ ಕಾರು ... ಅಚ್ಚರಿ ಮೂಡಿಸುವಂತಹ ಆಯುಧಗಳು ಮತ್ತು ಮ... ಹೋಗಿಸುವಂತಹ ಅರೆ ಬೆತ್ತಲೆ ಸುಂದರ ಯುವತಿಯರೂ 'ಸ್ಕೈಫಾಲ್' ಚಿತ್ರದಲ್ಲೂ ಇದ್ದಾರೆ.

ಎಂದಿನಂತೆ ಈ ಬಾಂಡ್ ಚಿತ್ರವೂ ಸೂಪರ್‌ಹಿಟ್ ಆಗುತ್ತದೆ ಎಂದು ಚಿತ್ರಬ್ರಹ್ಮರು ಸುಲಭವಾಗಿ ಭವಿಷ್ಯ ನುಡಿದಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com